ಮಾನವಿಕ ಕರ್ಣಾಟಕ

ಸಂಪುಟ ೧೮ ; ಸಂಚಿಕೆ ೨, ೩ (ಸಂಯುಕ್ತ)

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೮

MANAVIKA KARNATAKA, Kannada Quarterly of the *University of Mysore*, Volume 18, Number 2-3 April-July 1988, Edited by Dr. M. V. Srinivas and M. N. Nanjundaraje Urs.

ಪ್ರಧಾನ ಸಂಪಾದಕರು

ಡಾ॥ ಜೀ. ಶಂ. ಪರಮಶಿವಯ್ಯ

ಸಂಪಾದಕರು

ಡಾ॥ ಎಂ. ವಿ. ಶ್ರೀನಿವಾಸ್

ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮುದ್ರಕರು

ಎನ್. ಹನುಮಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ

ಮೈಸೂರು–೫೭೦ ೦೦೬

ವಿಷಯ ಸೂಚಿ

ಲೇಖಕರ ಸೂಚಿ

೧	ಪುರುಷೋತ್ತಮ ಬಿಳಿಮಲೆ	ಕನ್ನಡ ಉಪನ್ಯಾಸಕರು, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು–೫೭೪೧೯೯
೨	ಬಿ. ನಾಗಪ್ಪ	ಪ್ರವಾಚಕರು, ಗ್ರಂಥಾಲಯ ಮತ್ತು ಮಾಹಿತಿ ಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೩	ಸಿದ್ಧಾಪುರ ವಾಸುದೇವ ಭಟ್ಟ	ಕನ್ನಡ ಉಪನ್ಯಾಸಕರು, ಎನ್.ಎಸ್.ಎ.ಎಂ. ಪದವಿ ಪೂರ್ವ ಕಾಲೇಜು, ನಿಟ್ಟೆ-೫೭೪೧೧೦ ಕಾರ್ಕಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ
೪	ಡಾ. ಅಂಬಳಿಕೆ ಹಿರಿಯಣ್ಣ	ಅಧ್ಯಾಪಕರು, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೫	ಎಂ. ಜಿ. ಮಹಾದೇವಪ್ಪ	ಪ್ರವಾಚಕರು, ತತ್ವಶಾಸ್ತ್ರ ವಿಭಾಗ
೬	ಪಿ. ಎನ್. ಹರೀಶ್	ಕ್ಷೇತ್ರ ಸಹಾಯಕ, ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೭	ಡಾ. ಕೆ. ಯಶೋಧರ	ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸಗಂಗೋತ್ರಿ, ಮೈಸೂರು
೮	ಡಾ. ಆರ್. ಆರ್. ಕುಲಕರ್ಣಿ	ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ಕಲಾ ಮಹಾವಿದ್ಯಾಲಯ ಶಿವಮೊಗ್ಗ–೫೭೭೨೦೩
೯	ಎ. ಎನ್. ಪ್ರಭಾಕರ್	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ತಿಪಟೂರು
೧೦	ಯಮುನಾಬಾಯಿ, ಆರ್. ರಾವ್	'ಶ್ರೀ', ೪೯, ೧೨ನೆಯ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು
೧೧	ಟಿ. ಬಿ. ಬಸವರಾಜ್	ಉಪನ್ಯಾಸಕರು, ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೧೨	ವೈ. ಸಿ. ಭಾನುಮತಿ	ಸಂಶೋಧನ ಸಹಾಯಕಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೧೩	ಡಿ. ಆರ್. ಸರ್ವಮಂಗಳ	ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸಗಂಗೋತ್ರಿ, ಮೈಸೂರು
೧೪	ಡಾ. ಎಂ. ಬಿ. ರಾಜಾಮಣಿ	ಪ್ರವಾಚಕರು, ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಡಾ. ಪುರುಷೋತ್ತಮ ಬಿಳಿಮಲೆ

ಜೋಗಿಗಳು

ಒಂದು ಪರಿಚಯ

ಜೋಗಿಗಳು ಕರ್ನಾಟಕ ರಾಜ್ಯದ ಒಳಗಡೆ ಮಾತ್ರವಲ್ಲದೆ ಹೊರಗಡೆಯೂ ವಾಸಿಸುತ್ತಿದ್ದಾರೆ. ಇವರ ಹರಹು ಅಖಿಲಭಾರತ ಮಟ್ಟದಲ್ಲಿದೆ. ಬ್ರಿಗ್ಸ್‌ನು ಅದನ್ನು ಬಹಳ ಹಿಂದೆಯೇ ಗುರುತಿಸಿದ್ದಾನೆ (BRIGGS 1973 ; 4). ವಾಸ್ತವವಾಗಿ ಜೋಗಿಗಳು ಕರ್ನಾಟಕಕ್ಕೆ ಉತ್ತರ ಭಾರತದಿಂದಲೇ ವಲಸೆ ಬಂದಿದ್ದಾರೆ. ಪ್ರಕೃತ ಪ್ರಬಂಧದಲ್ಲಿ ಕರ್ನಾಟಕದ ಜೋಗಿಗಳನ್ನು ಮಾತ್ರ ಗಮನದಲ್ಲಿರಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಕೆಲವು ಗುಂಪುಗಳನ್ನು, ದಕ್ಷಿಣ ಕರ್ನಾಟಕದ ಕೆಲವು ಗುಂಪುಗಳನ್ನು ಭೇಟಿ ಮಾಡಲಾಗಿದೆ. ಆದರೆ ಕರಾವಳಿ ಕರ್ನಾಟಕದ ಜೋಗಿಗಳನ್ನು ಹೆಚ್ಚು ವಿವರವಾಗಿ ಗಮನಿಸಲಾಗಿದೆ. ಇಷ್ಟಿದ್ದರೂ, ಜೋಗಿಗಳ ಒಂದು ಗುಂಪನ್ನು ಗಮನಿಸಿ ಹೇಳುವ ಮಾತುಗಳು, ಅಖಿಲ ಭಾರತ ಮಟ್ಟದ ಜೋಗಿಗಳನ್ನು ತುಂಬಾ ಸ್ಥೂಲವಾಗಿಯಾದರೂ ಪ್ರತಿನಿಧಿಸುತ್ತದೆ ಎಂದು ಈ ಲೇಖಕ ಭಾವಿಸುತ್ತಾನೆ. ಇದಕ್ಕೆ ಮುಖ್ಯ ಕಾರಣವೆಂದರೆ, ತುಂಬಾ ಸಂಪ್ರದಾಯಶೀಲರಾದ ಜೋಗಿಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಹಾಗೇ ಉಳಿಸಿಕೊಂಡು ಬಂದಿದ್ದಾರೆ.

ಕರ್ನಾಟಕದಲ್ಲಿ ವಾಸ ಮಾಡುತ್ತಿರುವ ಜೋಗಿಗಳಲ್ಲಿ ಅನೇಕ ಗುಂಪುಗಳಿವೆ. ಈ ಗುಂಪುಗಳೆಲ್ಲವನ್ನೂ ಗಮನದಲ್ಲಿ ಇರಿಸಿಕೊಂಡರೆ ಇವರ ಒಟ್ಟಾರೆ ಜನಸಂಖ್ಯೆ ಸುಮಾರು 45 ಸಾವಿರವನ್ನು ಮೀರಬಹುದು. ಕರ್ನಾಟಕ ರಾಜ್ಯದ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಧಾರವಾಡ, ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಜೋಗಿಗಳು ಅಲ್ಪ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಕರಾವಳಿ ಕರ್ನಾಟಕದಲ್ಲಿ ವಾಸಿಸುವ ಜೋಗಿಗಳು ತುಳು ಭಾಷೆಯನ್ನಾಡುತ್ತಾರೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಜೋಗಿಗಳು ಕನ್ನಡವನ್ನೇ ಬಳಸುತ್ತಾರೆ. ಜೋಗಿಯರ ಮಠಗಳಲ್ಲಿರುವ ಗುರುಗಳು ಮತ್ತು ಶಿಷ್ಯರು ಹಿಂದೂಸ್ತಾನಿಯನ್ನೇ ಆಡುತ್ತಾರೆ.

ಆಂಧ್ರಪ್ರದೇಶದ ಗಡಿಗೆ ಅಂಟಿಕೊಂಡಿರುವ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಜೋಗಿಗಳು ತೆಲುಗು ಭಾಷೆಯನ್ನಾಡುತ್ತಾರೆ. ಕೋಲಾರದ ದಕ್ಷಿಣ ದಿಕ್ಕಿನ ಜೋಗಿಗಳು ಕ್ವಚಿತ್ತಾಗಿ ತಮಿಳನ್ನು ಮಾತಾಡುತ್ತಾರೆ. ಕಾಸರಗೋಡಿಗೆ ತಾಗಿ ದಂತಿರುವ ಪ್ರದೇಶದಲ್ಲಿ ಮಲೆಯಾಳವನ್ನೂ ಮಾತಾಡುತ್ತಾರೆ. ಭಾಷಿಕವಾಗಿ ಇಷ್ಟು ವೈವಿಧ್ಯವಿದ್ದರೂ, ತುಳು ಮತ್ತು ಕನ್ನಡ ಮಾತಾಡುವ ಜೋಗಿಗಳ ಸಂಖ್ಯೆಯೇ ಹೆಚ್ಚು.

ಮಂಡ್ಯ ಜಿಲ್ಲೆಯ ಆದಿಚುಂಚನಗಿರಿಯ ಭೈರವನ ಭಕ್ತರು ತಮ್ಮನ್ನು 'ಜೋಗಿ'ಗಳೆಂದೇ ಕರೆಸಿಕೊಳ್ಳುತ್ತಾರೆ. ಅದೇ ಪ್ರದೇಶದಲ್ಲಿರುವ ಮತ್ತು ಇತರೆಡೆಗಳಲ್ಲಿರುವ ಹೆಳವರು, ಗೊರವರು, ಗೊಲ್ಲರು ತಮ್ಮನ್ನು 'ಜೋಗಿ'ಗಳೆಂದೇ ಪರಿಚಯಿಸಿಕೊಳ್ಳುತ್ತಾರೆ. ಆದರೆ ಇವರು ಆಚಾರ ವಿಚಾರಗಳಲ್ಲಿ ಇತರೆಡೆಯ ಜೋಗಿಗಳಿಂದ ತುಂಬಾ ಭಿನ್ನ. ಇವರ ಕುಲದೈವವೂ ಬೇರೆ. ಒಕ್ಕಲಿಗರು, ಬೆಸ್ತರು, ಹೊಲೆಯರು ಕೂಡಾ ಕೆಲವೆಡೆಗಳಲ್ಲಿ ತಮ್ಮನ್ನು ಜೋಗಿಗಳೆಂದೇ ಹೇಳಿಕೊಳ್ಳುತ್ತಾರೆ. ಇದನ್ನು ಗಮನಿಸಿದರೆ ಜೋಗಿಗಳ ಒಟ್ಟು ಇರವು ತುಂಬಾ ಸಂಕೀರ್ಣವಾಗಿ ತೋರುತ್ತದೆ. ನಾವಿಂದು ಜೋಗಿಗಳೆಂದು ಕರೆಯುವ ಒಂದು ದೊಡ್ಡ ಗುಂಪಿನಲ್ಲಿ ಅನೇಕ ಜಾತಿಗಳ ಜನರಿರುವುದು ಗೋಚರವಾಗುತ್ತದೆ. ಯಾವುದೋ ಒಂದು ಕಾಲಘಟ್ಟದಲ್ಲಿ ನಡೆದ ಮತ ಪರಿವರ್ತನಾ ಕಾಲದಲ್ಲಿ ಇತರರೆಲ್ಲ ಜೋಗಿಗಳೆಂದು ಕರೆಸಿಕೊಂಡು ಮತಾಂತರ ಹೊಂದಿರಬೇಕು. ಬಹುಶಃ ಈ ಮತಾಂತರವು 12ನೇ ಶತಮಾನದಲ್ಲಿ ನಡೆದಿರಬೇಕು. (ವಿವರಗಳಿಗೆ ನೋಡಿರಿ : ಚಿದಾನಂದ ಮೂರ್ತಿ, ಎಂ. 1979).

ಜೋಗಿಗಳಲ್ಲಿ ಅನೇಕ ಪ್ರಭೇಧಗಳಿವೆ. ಇವುಗಳ ಒಟ್ಟು ಸಂಖ್ಯೆಯನ್ನು ಲೆಕ್ಕ ಹಾಕುವುದು ತುಂಬಾ ಕಷ್ಟ. ಕ್ಷೇತ್ರ ಕಾರ್ಯದಲ್ಲಿ ನನಗೆ ಸಿಕ್ಕಿದ ಕೆಲವು ಹೆಸರುಗಳು ಈ ಕೆಳಗಿನಂತಿವೆ.

1. ಹಂದಿ ಜೋಗಿ
2. ಶಿವ ಜೋಗಿ
3. ದಬ್ಬಾ ಜೋಗಿ
4. ಮಣಿಗಾರ ಜೋಗಿ
5. ಬಳೆಗಾರ ಜೋಗಿ
6. ತಾವರ ಜೋಗಿ
7. ಸ್ಮಶಾನ ಜೋಗಿ
8. ಕುಂಬಾರ ಜೋಗಿ
9. ಟಗರು ಜೋಗಿ
10. ಎಣ್ಣೆ ಜೋಗಿ
11. ಬಾಲ ಜೋಗಿ
12. ಹಾಲಕ್ಕಿ ಜೋಗಿ
13. ಸಮಗಾರ ಜೋಗಿ
14. ಮೀನು ಜೋಗಿ
15. ತುಳು ಜೋಗಿ
16. ಮರಾಠಿ ಜೋಗಿ
17. ಚಿಪ್ಪಿಗ ಜೋಗಿ
18. ಕುಣಬೇರು ಜೋಗಿ
19. ಕಿನ್ನರಿ ಜೋಗಿ
20. ಪಂಡೂಲ ಜೋಗಿ

ಈ ಹೆಸರುಗಳು ಬಹುಮಟ್ಟಿಗೆ ಜೋಗಿಗಳು ಕೈಗೊಂಡ ವೃತ್ತಿ ಮತ್ತು ಮಾತಾಡುವ ಭಾಷೆಯಿಂದ ಬಂದಿದೆ. ಕೆಲವೆಡೆ ಪುರಾಣಗಳ ಪ್ರಭಾವದಿಂದಲೂ ಹೆಸರು ಬಂದಂತಿದೆ.

ಶಿವನ ವರದಿಂದ ಹುಟ್ಟಿದವರೆಂದು ಹೇಳಿಕೊಳ್ಳುವ ಒಂದು ಪಂಗಡವನ್ನು ಶಿವಜೋಗಿಗಳೆಂದು ಕರೆಯುತ್ತಾರೆ. ದಬ್ಬಸಾರಣೆ (ಮನೆಕಟ್ಟುವಾಗ ಮಾಡುವ ಕೆಲಸ) ಕಸುಬು ಮಾಡುವವರನ್ನು ದಬ್ಬಾ ಜೋಗಿಗಳೆಂದು ಕರೆಯುತ್ತಾರೆ. ಹೆಣ್ಣು ಮಕ್ಕಳ ಕೇಶಾಲಂಕಾರ ಸಾಮಗ್ರಿಗಳನ್ನು ಮಾರಾಟ ಮಾಡುವವರನ್ನು ಮಣಿಗಾರ ಜೋಗಿಗಳು ಎಂದರೆ, ಬಳೆ ವ್ಯಾಪಾರ ಮಾಡುವವರು ಬಳೆಗಾರ ಜೋಗಿಗಳು. ಲಂಬಾಣಿ ಜನಾಂಗಕ್ಕೆ ಅಲಂಕಾರ ಸಾಧನ ಮಾಡಿಕೊಡುವವರನ್ನು ತಾವರ ಜೋಗಿಗಳು ಎಂದು ಕರೆಯುತ್ತಾರೆ. ಸ್ಮಶಾನ ದೇವತೆಯನ್ನು ಒಲಿಸಿಕೊಳ್ಳುವವರು ಸ್ಮಶಾನ ಜೋಗಿಗಳು, ಮಡಕೆ ಮಾಡುವವರು ಕುಂಬಾರ ಜೋಗಿಗಳು, ಕುಟುಂಬ ಜನಾಂಗದ ವಂಶಾವಳಿಗಳನ್ನು ಹೇಳುವವರು ಟಗರು ಜೋಗಿಗಳು, ಕಾಲಜ್ಞಾನ ಹೇಳಿಕೊಂಡು ಬದುಕುವವರು ಎಣ್ಣೆ ಜೋಗಿಗಳು, ಬಾಲನಾಗಮ್ಮನ ಕತೆ ಮಾಡಿಕೊಂಡು ಜೀವಿಸುವವರು ಬಾಲಜೋಗಿಗಳು, ಹಂದಿ ಸಾಕಣೆಯಿಂದ ಜೀವನ ಸಾಗಿಸುವವರು ಹಂದಿ ಜೋಗಿಗಳು, ಭವಿಷ್ಯ ಹೇಳುವವರು ಹಾಲಕ್ಕಿ ಅಥವಾ ಬುಡುಬುಡಿಕೆ ಜೋಗಿಗಳು, ಚರ್ಮದ ಕೆಲಸ ಮಾಡುವವರು ಸಮಗಾರ ಜೋಗಿಗಳು. ಮೀನು ಹಿಡಿಯುವವರು ಮೀನು ಜೋಗಿಗಳು, ಹಸ್ತ ಸಾಮುದ್ರಿಕ—ಜಾತಕ ನೋಡುತ್ತಾ, ತುಳು ಮಾತಾಡುವವರು ತುಳು ಜೋಗಿಗಳು, ಬಟ್ಟೆ ಹೊಲಿಯುವವರು ಚಿಪ್ಪಿಗ ಜೋಗಿ, ಕೃಷಿ ಕೆಲಸ ಮಾಡುವವರು ಮರಾಠಿ ಜೋಗಿಗಳು, ಗದ್ದೆಯಲ್ಲಿ ದುಡಿಯುವವರು ಕುಣಬೀರು ಜೋಗಿಗಳು, ಕಿನ್ನರಿ ಎಂಬ ವಾದ್ಯ ಹಿಡಿದು ಹಾಡುತ್ತಾ ಬದುಕುವವರು ಕಿನ್ನರಿ ಜೋಗಿಗಳು. ರಾಯಚೂರು ಪ್ರದೇಶದಲ್ಲಿ ಆಂಧ್ರಕ್ಕೆ ತಾಗಿದಂತಿರುವ ಪ್ರದೇಶದಲ್ಲಿ ಹಂದಿ ಸಾಕಣೆ ಮಾಡಿ ಬದುಕುವವರು ಪಂಡೂಲ ಜೋಗಿಗಳು. (ವಿವರಣೆಗಳಿಗೆ ನೋಡಿರಿ: ಹಿರಿಯಣ್ಣ, ಎ. 1979) ಇವರೆಲ್ಲರೂ ಜೋಗಿ ಜನಾಂಗಕ್ಕೆ ಸೇರಿದವರಾದರೂ ಬೇರೆ ಬೇರೆಯಾಗಿಯೇ ವಾಸಿಸುತ್ತಾರೆ. ಅಲ್ಲದೆ ಈ ವರ್ಗಗಳ ನಡುವೆ ಯಾವುದೇ ರೀತಿಯ ಸಾಮಾಜಿಕ ಸಂಬಂಧ ಕಂಡುಬರುವುದಿಲ್ಲ.

ಇವರಲ್ಲಿ ಎಲ್ಲ ಪ್ರಬೇಧದ ಜೋಗಿಗಳೂ ಕನ್ನಡವನ್ನು ಮಾತಾಡಬಲ್ಲರು. ಕಿನ್ನರಿ ಹಿಡಿದು ಸಿದ್ಧಮತದ ಹಾಡುಗಳನ್ನು ಹಾಡುವ ಕಿನ್ನರಿ ಜೋಗಿಗಳು ಮರಾಠಿ ಮಾತಾಡುತ್ತಾರೆ. ಕೆಲವರು ತುಳು ಮತ್ತು ತೆಲುಗನ್ನು ಮಾತಾಡುತ್ತಾರೆ. ತುಳು ಮಾತಾಡುವವರು ತಾವು ಮಂಗಳೂರಿನ ಕದಿರಾ ಮಠದ ಭಕ್ತರೆಂದು ಹೇಳಿಕೊಂಡರೆ, ತೆಲುಗು ಮಾತಾಡುವವರು ತಾವು ಆರ್ಯರೆಂದೂ, ಆಂಧ್ರದಿಂದ ಕರ್ನಾಟಕಕ್ಕೆ ಬಂದೆವೆಂದೂ ಹೇಳಿಕೊಳ್ಳುತ್ತಾರೆ. ಮರಾಠಿ ಮಾತಾಡುವವರು ತಾವು ಮಹಾರಾಷ್ಟ್ರದವರೆಂದೂ, ಪಂಡರಾಪುರದ ಭಕ್ತರೆಂದೂ, ನಾಥಪಂಥಕ್ಕೆ ಸೇರಿದವರೆಂದೂ ಹೇಳಿಕೊಳ್ಳುತ್ತಾರೆ. ಹೆಚ್ಚಿನವರು 'ಹಿಂದೂಸ್ತಾನಿ'ಯನ್ನೇ ತಮ್ಮ ಪೂರ್ವದ ಭಾಷೆ

ಯಾಗಿ ಒಪ್ಪಿಕೊಳ್ಳುತ್ತಾರೆ. ಉತ್ತರ ಭಾರತದಿಂದ ಇವರು ದಕ್ಷಿಣಕ್ಕೆ ಬಂದಿರ ಬೇಕೆಂಬುದಕ್ಕೆ ಇದೊಂದು ಆಧಾರ.

'ಜೋಗಿ' ಎಂಬ ಪದಕ್ಕೆ ಸನ್ಯಾಸಿ, ಸಿದ್ಧ ಪುರುಷ, ಗುರು, ವಿಚಿತ್ರ ವೇಷ ಹಾಕಿದವ, ಭಿಕ್ಷುಕ ಎಂಬಿತ್ಯಾದಿ ಅರ್ಥಗಳಿವೆ. (ಇದರ ಬಗೆಗಣ ಹೆಚ್ಚಿನ ವಿವರಗಳಿಗೆ ನೋಡಿರಿ: ಬಿಳಿಮಲೆ 1987). ಇದು ಸಂಸ್ಕೃತದ 'ಯೋಗಿ' ಪದದ ತದ್ಭವರೂಪ. ಪ್ರಕೃತದಲ್ಲಿ 'ಜೋಗಿ' ಎಂದೇ ಬಳಕೆಯಲ್ಲಿದೆ. 'ಮೈಸೂರು ಟ್ರೈಬ್ಸ್ ಆ್ಯಂಡ್ ಕಾಸ್ಟ್ಸ' ಎಂಬ ಗ್ರಂಥದಲ್ಲಿ 'ಜೋಗಿ' ಪದಕ್ಕೆ ಹೀಗೆ ವಿವರಣೆ ನೀಡಲಾಗಿದೆ.

"The term 'Jogi' is a corrupt form of the Sanskrit word 'Yogi', that is a man who practices Yoga, and has renounced worldly desires. The word may have come to be applied to this caste on account of their begging habits, selling of medicines and the conjuring which they practice. They are in some places styled 'Jangalaru' and have given up pig breeding and live by selling medicinal drugs and conjuring.

The ordinary suffix which is tacked on to their names as an honorific term is Jogi (as Gurava Jogi), and other suffixes such as Appa and Gadu are also used........These Jogis were probably a single caste in the beginning, but difference of occupation gave rise to divisions" (Nanjundayya M.V. and Ananthakrishna Iyer L.K., 1936 : 490).

ಬ್ರಿಗ್ಸ್ ಕೂಡಾ ಇಂಥದ್ದೇ ಮಾತುಗಳನ್ನು ಆಡಿದ್ದಾನೆ (BRIGGS 1973 : 1–25). ಊರಿಂದ ಊರಿಗೆ ಸುತ್ತುತ್ತಾ ಇರುವ ಇವರನ್ನು ಸರಕಾರವು ಬ್ಯಾಕ್‌ವರ್ಡ್ ಕಾಸ್ಟ್ಸ ಟ್ರೈಬ್ ಎಂದು ಮಾನ್ಯ ಮಾಡಿದೆ.

ಕರ್ನಾಟಕದಲ್ಲಿ 'ಜೋಗಿ' ಪದದ ಹಾಗೇ 'ಜೋಗತಿ' ಎಂಬ ಪದವಿದೆ. ಮೇಲ್ನೋಟಕ್ಕೆ ಇದು ಸ್ತ್ರೀ ಜೋಗಿಗಳನ್ನು ಪ್ರತಿನಿಧಿಸುವಂತಿದೆ. ಆದರೆ ವಸ್ತು ಸ್ಥಿತಿ ಹಾಗಿಲ್ಲ. ಜನಪದ ಧಾರ್ಮಿಕ ವೃತ್ತಿ ಗಾಯಕರ ಸಾಲಿನಲ್ಲಿ ಬರುವ ಗೊಂದಲಿ ಗರು ಮತ್ತು ಚೌಡಿಕೆಯವರು ಸವದತ್ತಿಯ ಎಲ್ಲಮ್ಮನಿಗೆ ನಡೆದುಕೊಳ್ಳುವ ಒಂದು ವಿಚಿತ್ರ ಸಂಪ್ರದಾಯಕ್ಕೆ 'ಜೋಗತಿ ಸಂಪ್ರದಾಯ' ಎಂದು ಹೆಸರು. ಇವರಿಗೂ ಜೋಗಿಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ವಾಸ್ತವವಾಗಿ ಜೋಗಿಗಳಿಗೆ ಜೋಗತಿಯರ ಬಗ್ಗೆ ಏನೂ ತಿಳಿಯದು.

ಜೋಗಿಗಳ ಐತಿಹಾಸಿಕತೆಯ ಬಗೆಗೆ ನಮಗೆ ಸಿಗುವ ವಿವರಗಳು ಅತ್ಯಲ್ಪ ವಾದರೂ, ತುಂಬಾ ಸ್ವಾರಸ್ಯಕರವಾಗಿವೆ. ಜೋಗಿಗಳ ಪ್ರಕಾರ ಅವರ ಮೂಲ ಪುರುಷ ಅರ್ಜುನ ತೀರ್ಥಕ್ಷೇತ್ರ ಸಂಚಾರ ಮುಗಿಸಿ ತನ್ನ ತಾಯಿಯನ್ನು ನೋಡಲು ಬಂದಾಗ ಅರ್ಜುನನು ಜೋಗಿಯ ವೇಷದಲ್ಲಿದ್ದನಂತೆ. ತನ್ನ ನಿಜರೂಪ ಬಯಲಾದ

ಮೇಲೆ ತಾನು ಧರಿಸಿದ್ದ ವೇಷಭೂಷಣಗಳನ್ನು, ಬಿರುದು ಬಾವಲಿಗಳನ್ನು ತನ್ನ ಜೊತೆಯಲ್ಲಿ ಶಿಷ್ಯ ವೃತ್ತಿ ಮಾಡಿಕೊಂಡಿದ್ದವನಿಗೆ ನೀಡಿ, 'ಲೋಕದಲ್ಲಿ ಪಾಂಡವರ ಕತೆ ಹೇಳಿಕೊಂಡು ಜೀವಿಸು' ಎಂದು ಆಶೀರ್ವದಿಸಿದನಂತೆ. ಈ ಕತೆಯ ವಿವಿಧ ಪಾಠಗಳು ಲಭ್ಯವಿದೆ. (ನೋಡಿ : ಬೋರಲಿಂಗಯ್ಯ ಹಿ.ಚಿ. 1981 : 136) ಎಲ್ಲಾ ಪಾಠ ಗಳಲ್ಲಿಯೂ ಅರ್ಜುನನನ್ನೇ ಮೂಲಪುರುಷ ಎಂದೂ ಹೇಳಲಾಗಿದೆ. ಕಾಮುಕ ಹೆಂಗುಸೊಬ್ಬಳು ಅರ್ಜುನನನ್ನು ಬೆನ್ನು ಹತ್ತಿದ ಕತೆಯು ಜೋಗಿಗಳ ಮುಕ್ತಕಾಮದ (Free Sex) ಬಗೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ' ಜೋಗಿ ' ಎಂಬುದು ಶಿವ ಕೊಟ್ಟ ಬಿರುದು, ಶಿವನೇ ತನ್ನ ಮೈಬೆವರಿನಿಂದ ಜೋಗಿಗಳನ್ನು ಸೃಷ್ಟಿಸಿದ ಎಂದೂ ಕೆಲವರು ಹೇಳುತ್ತಾರೆ.

ಈ ತೆರನಾದ ಕತೆಗಳಿಂದ ಭಿನ್ನವಾದ ಚಿತ್ರ ಇತಿಹಾಸದಲ್ಲಿ ಲಭ್ಯವಾಗುತ್ತದೆ. ಜೋಗಿಗಳು ಶೈವ ಮತದ ಒಂದು ಪ್ರಬೇಧವಾಗಿರಬೇಕು. ಶೈವಮತ ಪ್ರಚಾರಕರಲ್ಲಿ ಕಾಪಾಲಿಕರು, ಕಾಳಾಮುಖರು, ಲಕುಲೀಶರು ಮತ್ತು ನಾಥ ಪಂಥೀಯರು ಬಹಳ ಪ್ರಮುಖರು. ಸುಮಾರು ಕ್ರಿ.ಶ. 10ನೇ ಶತಮಾನಕ್ಕಾಗುವಾಗ ಇವರಲ್ಲಿ ಕೆಲವ ರಾದರೂ ಉಗ್ರ ಮಾರ್ಗಿಗಳಾಗಿದ್ದರು. ಈ ಉಗ್ರಗಾಮಿಗಳು ಸಮಾಜದಿಂದ ದೂರ ಸರಿದು ಕಾಡು ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ನರಕಪಾಲದಲ್ಲಿ ಉಣ್ಣುತ್ತಿದ್ದರು. ಸ್ಮಶಾನದ ಬೂದಿಯನ್ನು ಮೈಗೆ ಲೇಪಿಸಿಕೊಳ್ಳುತ್ತಿದ್ದರು. ನರಬಲಿ, ಸುರಾಪಾನ, ಮಾಂಸಭಕ್ಷಣೆ, ಮೈಥುನ ಅವರ ಧಾರ್ಮಿಕತೆಯ ಒಂದಂಶವಾಗಿತ್ತು. ಇವರನ್ನು ಕಾಪಾಲಿಕರೆಂದು ಕರೆಯಲಾಗುತ್ತಿದ್ದು, ಅವರು ಚುಂಚನಗಿರಿ, ಕದ್ರಿಗಳಲ್ಲಿಯೂ ಮಠ ಕಟ್ಟಿಕೊಂಡು ವಾಸಿಸುತ್ತಿದ್ದರು. ಇವರು ಬರಬರುತ್ತಾ ತಮ್ಮ ಜನಪ್ರಿಯತೆ ಯನ್ನು ಕಳೆದುಕೊಂಡು, ಲಕುಲೀಶ ಮತ್ತು ಕಾಳಾಮುಖರೊಂದಿಗೆ ಸೇರಿ ಹೋಗಿರ ಬೇಕು (ಚಿದಾನಂದ ಮೂರ್ತಿ 1979 : 127–159), ಜೋಗಿಗಳಲ್ಲಿ ಈ ಮಧ್ಯ ಕಾಲೀನ ಕರ್ನಾಟಕದ ರಹಸ್ಯ ತಾಂತ್ರಿಕ ಪಂಥಗಳ ಕೆಲವು ಆಚರಣೆಗಳು ಈಗಲೂ ಇವೆ. ಈ ಕಾರಣದಿಂದ ಜೋಗಿಗಳು ಕನಿಷ್ಠ 10ನೇ ಶತಮಾನದಿಂದ ಕರ್ನಾಟಕದಲ್ಲಿ ವಾಸಮಾಡುತ್ತಿದ್ದರು ಎಂದು ಹೇಳಬಹುದು. ಸಮಾಜದ ಕೆಳಜಾತಿಯ ಜನರಿಗೆ ಅತ್ಯಂತ ಪ್ರಿಯವಾದ ವಿಚಾರಗಳೇ ಇವರ ಧಾರ್ಮಿಕತೆಯಾದ್ದರಿಂದ ಒಂದು ಕಾಲಕ್ಕೆ ಇವರು ಜನಪ್ರಿಯರಾಗಿದ್ದಿರಬಹುದು. ಭೈರವನ ಆರಾಧನೆಯ ಸಾರ್ವತ್ರಿಕತೆಯನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಆದರೆ ಕಾಪಾಲಿಕರಾಗಲೀ, ನಾಥಪಂಥೀಯರಾಗಲೀ ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದವರಲ್ಲ. ಅವರು ಕೇವಲ ತಮ್ಮ ಪಂಥಗಳ ಪ್ರಚಾರಕರಾಗಿ ಇಲ್ಲಿಗೆ ಉತ್ತರ ಭಾರತದಿಂದ ಬಂದಿದ್ದಾರೆ (BRIGGS 1973). ಇಂದಿಗೂ ಜೋಗಿ ಮಠದ ಗುರುಗಳು ಹಿಂದೂಸ್ತಾನಿಯನ್ನೇ ಆಡುತ್ತಾರೆ. ಕಾಶಿಯಲ್ಲಿರುವ ಕಾಲ ಭೈರವನನ್ನೇ ಮೂಲ ದೇವತೆಯನ್ನಾಗಿ ಒಪ್ಪಿಕೊಳ್ಳುತ್ತಾರೆ. ದೇವನಾಗರಿ ಲಿಪಿಯೇ ತಮ್ಮ

ಮೂಲ ಲಿಪಿಯೆಂದು ಜೋಗಿಗಳು ಹೇಳಿಕೊಳ್ಳುವುದರಲ್ಲಿಯೂ ಇದೇ ಅರ್ಥ ಹುದುಗಿದೆ.

ಐತಿಹಾಸಿಕವಾಗಿ ಜೋಗಿಗಳು ನಿರ್ವಹಿಸಿದ ಕೆಲಸವನ್ನು ಅವರು ಈಗ ನಿರ್ವಹಿಸುತ್ತಿಲ್ಲ. ಈಗ ಅವರು ಇತರ ಸಾಮಾನ್ಯರಂತೆ ದಿನಗೂಲಿ ಮತ್ತಿತರ ಕೆಲಸ ಗಳನ್ನು ಮಾಡುತ್ತಾರೆ. ಸಾಮಾನ್ಯರಂತೆ ಬಟ್ಟೆ ಉಡುತ್ತಾರೆ, ಅಂಗಿ ಹಾಕುತ್ತಾರೆ. ಹೆಂಗಸರುಸೀರೆ ಉಡುತ್ತಾರೆ ಮತ್ತು ರವಿಕೆ ಹಾಕುತ್ತಾರೆ. ಆದರೆ ಜೋಗಿಗಳ ಗುರುಗಳು ಮಾತ್ರ ಸಾಂಪ್ರದಾಯಿಕವಾದ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ಜೋಗಿ ಮಠಗಳಿಂದ ದೀಕ್ಷೆಪಡೆದ ಇವರನ್ನು ಕೇವಲ ಉಡುಗೆ-ತೊಡುಗೆಗಳಿಂದಲೇ ಜೋಗಿಗಳೆಂದು ಗುರುತಿಸಬಹುದು.

ಜೋಗಿಗಳ ಉಡುಗೆ-ತೊಡುಗೆಗಳು :

ಜೋಗಪ್ಪ ಅಥವಾ ಜೋಗಿಗಳ ವೇಷಭೂಷಣದ ಬಗೆಗೆ ಜನಪದ ಹಾಡೊಂದು ಸಿಗುತ್ತದೆ. ಅದು ಇಂತಿದೆ—

ಕಣ್ಣ ಉಬ್ಬಿನ ನಡುವೆ ಸಣ್ಣ ವಿಭೂತಿಯು
ಸಣ್ಣ ಸಿಂಗನಾಥ ಕೊರಳಿಗೇ ಸ್ವಾಮಿಗಳ
ಕರದಲ್ಲಿ ಅಕ್ಷಯದ ಪಾತ್ರೆಯು ||

ಹಾಲು ಅನ್ನವು ಚಂದ ಬಾಗಿಲು ಭೈರವ ಚಂದ
ರುದ್ರಾಕ್ಷಿ ಚಂದ ಕೊರಳಿಗೆ ಬುದ್ದೋರ
ಕಣ್ಣಕೆ ಚಂದ ಕಾಮಾಕ್ಷಿ

ಜೋಗಿಗಳಿಗೆ ಹಣೆಯಲ್ಲಿ, ತೋಳುಗಳಲ್ಲಿ ಮತ್ತು ಮುಂಗೈ ಮೇಲೆ ವಿಭೂತಿಯ ಪಟ್ಟೆಗಳು ಇರುತ್ತವೆ. ಭಸ್ಮವನ್ನು ಹೆರಳಲ್ಲಿ ಅದ್ದಿ ಅಲ್ಲಿಗೆ ಲೇಪಿಸಿಕೊಳ್ಳುವರು. ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲಗಳಿರುತ್ತವೆ. ಇವು 'ರಿಂಗ್'ನ ಆಕೃತಿಯಲ್ಲಿ ಇರುತ್ತವೆ. ಇದರ ಬಗ್ಗೆ ಬ್ರಿಗ್ಸ್ ದೀರ್ಘವಿವರಣೆಯನ್ನೇ ನೀಡಿದ್ದಾನೆ—

"Rings are of two general shapes, flat and cylindrical, the former called Darshan, the latter Kundal. The word 'Kundala' simply means 'Sound'. Darshan is a term of extreme respect. The use of the work is sometimes explained as a sign that the wearer has had a vision of Brahmana. The ring is sometimes called Pavitri, 'Holy', Sacred".

Rings are made of various substances. The rule seems to be that the initiate first wear rings of clay...some Jogis continue to wear earthen rings. But since these are easily broken, others of more durable substances are usually substituted. The element of value also enters into the use of more substantial rings.

Rhinoceros horn is a favorite substance for ear-rings. It is not easily broken. The practice goes back to an early period for such rings are dug up from time to time, in the oldest burial places of the sect, for example, at Tilla and in old Almora... Thin gold discs are sometimes seen. Other substances used are copper, stag's and atelope's horn, ivory, agate jade, glass wood and conch shell", (BRIGGS 1973: 7-8).

ಕೊರಳಿಗೆ ಒಂದು ಕರಿಯದಾರ ಕಟ್ಟಿರುತ್ತಾರೆ. ಆ ದಾರಕ್ಕೆ ಊದಿದರೆ ಶಬ್ದ ಬರುವಂಥ ಒಂದು ಚಿಕ್ಕ ಪೀಪಿಯಾಕಾರದ 'ಸಿಂಗನಾದ'ವನ್ನು ಸೇರಿಸಿರುತ್ತಾರೆ. ಸಿಂಗನಾದವು ಸುಮಾರು 2 ರಿಂದ 3 ಇಂಚಿನಷ್ಟು ಉದ್ದವಾಗಿದ್ದು ಬೆರಳುಗಾತ್ರದ ಆಕಾರದಲ್ಲಿರುವ ಬೆಳ್ಳಿಯಿಂದ ಮಾಡಿದ ಕೊಳವೆ. ಇದನ್ನು ಊದಿದರೆ 'ಪೀ' ಎಂಬ ಶಬ್ದ ಬರುತ್ತದೆ. ಮೈಗೆ ಕಾವಿ ಬಣ್ಣದ ನಿಲುವಂಗಿ ಹಾಕುತ್ತಾರೆ, ಸೊಂಟಕ್ಕೂ ಕಾವಿಬಣ್ಣದ ಪಂಚೆಯನ್ನೇ ತೊಡುತ್ತಾರೆ. ಅಂಗಿಯ ಮೇಲಕ್ಕೆ ಕಾವಿ ಶಾಲನ್ನು ಹೊದೆಯುವುದುಂಟು. ತಲೆಗೆ ಕೂಡಾ ಕಾವಿ ಪೇಟವೇ ಮುಂಡಾಸು. ಕೈಯಲ್ಲಿ ಒಂದು 'ಬೆತ್ತದ ಕೋಲು' (ದೊಣ್ಣೆ-ಇದನ್ನು 'ಲಗುಡ' ಎನ್ನುತ್ತಾರೆ. ಲಕುಲೀಶ ಪಾಶುಪತರು ಕೈಯಲ್ಲಿ ದೊಣ್ಣೆ ಹಿಡಿಯುತ್ತಿದ್ದರಾದ್ದರಿಂದ ಅವರ ಪ್ರಭಾವ ಜೋಗಿಗಳ ಮೇಲಾದ್ದಕ್ಕೆ ಇದೊಂದು ಸಾಕ್ಷಿಯಾದೀತು) ಇರುತ್ತದೆ. ಕಂಕುಳಿನಲ್ಲಿ ಚರ್ಮದಿಂದ ಮಾಡಿದ ಒಂದು ಚೀಲವಿದ್ದು ಅದಕ್ಕೆ 'ಜೋಳಿಗೆ' ಎಂದು ಹೆಸರು. Mysore Archaeological Report (1927 p. 2) ನಲ್ಲಿ ಪ್ರಕಟವಾಗಿರುವ ಭೈರವ ದೇವಸ್ಥಾನದ ಗೋಡೆಯ ಮೇಲಿನ ಸನ್ಯಾಸಿ ಚಿತ್ರವೂ ಮೇಲೆ ಹೇಳಿದ ವಿವರಣೆಗೆ ಅನುಗುಣವಾಗಿಯೇ ಇದೆ. ಇದರಿಂದ ಜೋಗಿಗಳ ಉಡುಪು ಬದಲಾವಣೆಯಿಲ್ಲದೆ ಬಹುಕಾಲದಿಂದ ನಡೆದು ಬಂದಿದೆ ಎಂದು ಹೇಳಲು ಸಾಧ್ಯವಾಗುತ್ತದೆ.

ಜೋಗಿಗಳು ಹೆಗಲಿಗೆ ನೇತು ಹಾಕಿಕೊಳ್ಳುವ ಜೋಳಿಗೆಯಲ್ಲಿ ಅವರ ಪೂಜಾ ವಸ್ತುಗಳಿರುತ್ತವೆ. ಅವುಗಳಲ್ಲಿ ಮುಖ್ಯವಾದುವು ಕೆಲವು ಈ ಕೆಳಗಿನಂತಿರುತ್ತವೆ.

ತ್ರಿಶೂಲಗಳು :

ಸುಮಾರು 5 ರಿಂದ 20ರ ವರೆಗೆ ತ್ರಿಶೂಲಗಳಿರುತ್ತವೆ. ಇವನ್ನು ಭೈರವನ ಪ್ರತೀಕಗಳೆಂದೂ ಭಾವಿಸುತ್ತಾರೆ. ಇದನ್ನು ಸಾಮಾನ್ಯವಾಗಿ ಬೆಳ್ಳಿಯಿಂದ ಮಾಡಿರುತ್ತಾರೆ.

ಪಾತ್ರೆ :

ಇದನ್ನು ಸೋರೆ ಕಾಯಿಂದ ಮಾಡಿರುತ್ತಾರೆ. ಇದರ ತಳಭಾಗ ವಿಶಾಲವಾಗಿದ್ದು ಬಾಯಿ ಕಿರಿದಾಗಿರುತ್ತದೆ. ಇದನ್ನು 'ಭಿಕ್ಷಾ ಪಾತ್ರೆ' ಎಂದೂ ಕರೆಯುತ್ತಾರೆ. ಭಿಕ್ಷೆಗೆ ಹೋದಾಗ ಭಕ್ತರು ಕೊಡುವ ಭಿಕ್ಷೆಯನ್ನು ಜೋಗಿಗಳು ಇದಕ್ಕೆ ಹಾಕಿಸಿಕೊಳ್ಳುತ್ತಾರೆ.

ಸಿಂಗನಾದ :

ಇದು ಜೋಗಿಗಳ ವಾದ್ಯ. ಭಿಕ್ಷೆಗೆ ಹೋದಾಗ ಮನೆಯ ಮುಂದೆ ನಿಂತು ಇದನ್ನು ಊದುತ್ತಾರೆ. ದೇವರ ಪೂಜೆ ಮಾಡುವಾಗಲೂ ಇದನ್ನು ಊದುತ್ತಾರೆ. ಇದನ್ನು ಜಿಂಕೆಯ ಕೊಂಬಿನಿಂದ ಮಾಡುತ್ತಾರೆ. ಜೋಗಿಗಳ ಕಿವಿಯ 'ರಿಂಗ್' ಕಳೆದು ಹೋದರೆ, ಅಲ್ಲಿಗೆ ಸಿಂಗನಾದವನ್ನು ತಾತ್ಕಾಲಿಕವಾಗಿ ಕಟ್ಟುತ್ತಾರೆ.

ಪಂಚಪಾತ್ರೆ:

ಇದು ತೀರ್ಥವನ್ನು ತುಂಬಿಟ್ಟುಕೊಳ್ಳುವ ಪಾತ್ರೆ. ಗುರುಮಠಗಳಿಂದ ಸಾಮಾನ್ಯವಾಗಿ ತೀರ್ಥವನ್ನು ತೆಗೆದುಕೊಂಡು ಬರುವರು ತಳ ಮತ್ತು ಮೇಲ್ಭಾಗ ವಿಸ್ತಾರವಾಗಿದ್ದು, ನಡುಕಿರಿದಾಗಿರುವ ಒಂದು ಬಗೆಯ ಪಾತ್ರೆಯಿದು. ಇಂಗ್ಲೀಷಿನ 'X' ಆಕಾರವನ್ನು ಹೋಲುತ್ತದೆ.

ತೀರ್ಥದ ಬಟ್ಟಲು :

ಇದು ಬಟ್ಟಲಿನಾಕಾರದಲ್ಲಿದೆ. ಪೂಜೆಯ ಸಮಯ.ದಲ್ಲಿ ತೆಂಗಿನಕಾಯಿ ಒಡೆದಾಗ ಬೀಳುವ ನೀರನ್ನು ಇದರಲ್ಲಿ ಸಂಗ್ರಹಿಸಿ, ಅನಂತರ ಭಕ್ತರಿಗೆ ತೀರ್ಥ ರೂಪದಲ್ಲಿ ಅದನ್ನು ನೀಡುತ್ತಾರೆ.

ವಿಭೂತಿ ಉಂಡೆಗಳು :

ಇದು ಜೋಳಿಗೆಯಲ್ಲಿ ಸದಾ ಇರುತ್ತದೆ. ಮೈಗೆ ಹಚ್ಚಿಕೊಳ್ಳಲು ಇದನ್ನು ಉಪಯೋಗಿಸುತ್ತಾರೆ. ದನದ ಸೆಗಣಿಯನ್ನು ಒಣಗಿಸಿ, ಸುಟ್ಟು ಅದರಿಂದ ವಿಭೂತಿ ಯನ್ನು ತಯಾರಿಸಿ, ಉಂಡೆಗಳಾಗಿ ಮಾಡಿಡುತ್ತಾರೆ.

ಇದಲ್ಲದೆ ಜೋಳಿಗೆಯಲ್ಲಿ ಧೂಪ, ಆರತಿ ತಟ್ಟೆ, ಗಂಟೆ ಮೊದಲಾದುವು ಇದ್ದು ಜೋಗಿಗೆ ಪೂಜಾ ಸಮಯದಲ್ಲಿ ಸಹಾಯಕ್ಕೆ ಬರುತ್ತದೆ.

ಕಿನ್ನರಿ ಜೋಗಿಗಳ ಕೈಯಲ್ಲಿ 'ಕಿನ್ನರಿ' ಎಂಬ ವಾದ್ಯವಿರುತ್ತದೆ. ಕಿನ್ನರಿಯಲ್ಲಿ ಒಂದು, ಎರಡು, ಮೂರು ಬುರುಡೆಗಳಿರುವ ಕಿನ್ನರಿಗಳಿವೆ. ಒಂದೇ ಬುರುಡೆ ಇರುವ ಕಿನ್ನರಿ ನುಡಿಸುವವರು ಸ್ಮಶಾನ ಜೋಗಿಗಳು; ಎರಡು ಬುರುಡೆ ಇರುವವರು ಕಿನ್ನರಿ ಜೋಗಿಗಳು ಮತ್ತು ಮೂರು ಬುರುಡೆ ಇರುವವರು ಮಣಿ ಜೋಗಿಗಳು.

ಜೋಗಿಗಳ ಕಾರ್ಯಗಳು (Functions of Jogi)

ಜೋಗಿಗಳು ಹಳ್ಳಿಯಲ್ಲಿ ಅನೇಕ ವಿಧದ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಬೇಕಾಗುತ್ತದೆ. ತನಗೆ ಸ್ವತಃ ಕೆಲವು ವಿಧದ ಕೆಲಸಗಳನ್ನು ಮಾಡಿಕೊಳ್ಳ ಬೇಕಾಗುತ್ತದೆ. ಇದರಲ್ಲಿ ಮುಖ್ಯವಾದುವು ಕೆಲವು ಈ ಕೆಳಗಿನಂತಿವೆ.

ಪ್ರತಿದಿನ ಆಚರಣೆ:

ಬೆಳಿಗ್ಗೆ ಏಳುವಾಗ ಶಿವಧ್ಯಾನ ಮಾಡುವುದು. ಭೈರವನ ಸ್ಮರಣೆ ಮಾಡುವುದು, ಅನಂತರ ಮುಖತೊಳೆದು ವಿಭೂತಿ ಧಾರಣೆ ಮಾಡುವುದು, ಅನಂತರ ದೈನಂದಿನ ಕೆಲಸದಲ್ಲಿ ಮಗ್ನ. ಊಟಕ್ಕೆ ಮುನ್ನ ಭೈರವನನ್ನು ಧ್ಯಾನಿಸಿ, ಒನ್ಮೆ ಸಿಂಗನಾದ ವನ್ನು ಊದುವುದು

ಪ್ರತಿ ಭಾನುವಾರ:

ಮನೆಯನ್ನು ಶುದ್ಧಗೊಳಿಸಿ, ಭೈರವನ ಪೂಜೆ ಮಾಡುವುದು. ತ್ರಿಶೂಲ, ಗಂಟೆ, ಪಂಚಪಾತ್ರೆಗಳನ್ನು ಶುದ್ಧಮಾಡುವುದು, ಕೆಲವು ಮನೆಗೆ ಭಿಕ್ಷೆಗೆ ಹೋಗಿ, ಸಿಕ್ಕಿ ದ್ದನ್ನು ತಂದು, ಭೈರವನಿಗೆ ಅರ್ಪಿಸಿ ತಾನು ಉಣ್ಣುವುದು. ಜೋಗಿಗಳಿಗೆ ಭಾನುವಾರ ಅತೀ ಪವಿತ್ರವಾದ ದಿನವಾಗಿದೆ.

ಮೀಸಲು ಮಾಡುವುದು:

ಹಬ್ಬಹರಿದಿನಗಳಲ್ಲಿ ಜೋಗಿಗಳು ಊರಿನ ಮನೆ ಮನೆಗಳಿಗೆ ಭೇಟಿ ನೀಡಬೇಕು. ಜೋಗಿಗಳು ಬಾರದೆ ಮಾಡಿದ ಅಡುಗೆಯನ್ನು ಮುಟ್ಟಬಾರದೆಂದು ಜನರೂ ಭಾವಿಸು ತ್ತಾರೆ. ಜೋಗಿ ಬಂದು ಊಟಮಾಡಿ ಹೋಗಬೇಕು. ಜೋಗಿ ಮನೆಯ ಒಳಗಡೆ ಕುಳಿತು ಭೈರವನ ಪೂಜೆ ಮಾಡಿ, ಮನೆಯವರಿಗೆ ಪ್ರಸಾದ ಕೊಟ್ಟು, ಊಟ ಮಾಡಿ ಹಿಂದಿರುಗುತ್ತಾನೆ. ಇದನ್ನು 'ಮೀಸಲು ಮಾಡುವುದು' ಎನ್ನುತ್ತಾರೆ.

ಸೂತಕ ಕಳೆಯುವುದು:

ಹೆಣ್ಣು ಮಕ್ಕಳು ಮೈ ನೆರೆದಾಗ ಸಾಮಾನ್ಯವಾಗಿ ಒಂಬತ್ತು ದಿನ 'ಮೈಲಿಗೆ' ಆಚರಿಸುತ್ತಾರೆ. ಒಂಬತ್ತನೇ ದಿನ ಜೋಗಿ ಬಂದು ದೇವರ ಪೂಜೆ ಮಾಡಿ, ತೀರ್ಥ ಹಾಕಿ ಸೂತಕ ಕಳೆಯುತ್ತಾನೆ. ಇದಕ್ಕೆ ಅವನು ದಕ್ಷಿಣೆಯನ್ನು ಪಡೆಯುತ್ತಾನೆ. ಅದೇದಿನ ಅವನು ಮಗುವಿಗೆ ಹೆಸರಿಡುತ್ತಾನೆ. ಅವನಿಡುವ ಹೆಸರಿನ ಕೆಲವು ಮಾದರಿಗಳು ಈ ಕೆಳಗಿನಂತಿದೆ.

ಗಂಡು	ಹೆಣ್ಣು
1. ಜೋಗಪ್ಪ	1. ಬೋರಿ
2. ಭೈರ	2. ಕಾಳಿ
3. ಕಾಳಪ್ಪ	3. ಸಿದ್ದಿ
4. ಚುಂಚ	4. ಚುಂಚಕ್ಕ
5. ಸಿದ್ದ	5. ಬೆಟ್ಟಮ್ಮ
6. ಬೋರ	ಇತ್ಯಾದಿ
7. ಜವರಯ್ಯ	
ಇತ್ಯಾದಿ	

ಸತ್ತ 11 ದಿನ ಮೈಲಿಗೆ ಇರುತ್ತದೆ. ಸಾಮಾನ್ಯವಾಗಿ 11 ನೇ ದಿನದ ಆಚರಣೆಗಳಲ್ಲಿ ಜೋಗಿ ಹಾಜರಿದ್ದು, ಭೈರವನ ಪೂಜೆ ಮಾಡಿ, ಸಿಂಗನಾದ ಊದಿ, ಊಟ ಮಾಡಿ, ಕಳ್ಳು ಕಡಿದು, ಹಿಂದಿರುಗುತ್ತಾನೆ. ಸಾವಿನ ಸೂತಕ ಕಳೆಯುವ ಕಾರ್ಯವನ್ನು ಜೋಗಿಗಳು ಮಾಡುತ್ತಾರೆ.

ಸಮಾಚಾರ ದೂತ : (News Agent)

ಜೋಗಿ ಮಠದಲ್ಲಿ ನಡೆಯುವ ಕೆಲಸ ಕಾರ್ಯಗಳ ಬಗೆಗೆ, ಜಾತ್ರೆ-ಉತ್ಸವ-ಸಮಾರಂಭಗಳ ಬಗೆಗೆ ಜನರಿಗೆ ಸುದ್ದಿ ಕೊಡುವ ಕೆಲಸವನ್ನೂ ಜೋಗಿಗಳು ಮಾಡುತ್ತಾರೆ. ಊರಿಂದ ಊರಿಗೆ ತಿರುಗುವ ಅವರಲ್ಲಿ ಜನರು ತಮ್ಮ ಕೌಟುಂಬಿಕ ಸಮಾಚಾರಗಳನ್ನು ಕೂಡಾ ತಿಳಿಸಿ ಹೇಳುತ್ತಿದ್ದರು. ಕನ್ನಡದ ಸುಪ್ರಸಿದ್ಧ ಜನಪದ ಗೀತೆ—"ಭಾಗ್ಯದ ಬಳೆಗಾರ ಹೋಗಿ ಬಾ ತವರೀಗೆ" ಎಂಬ ಹಾಡು ಬಳೆಗಾರ ಜೋಗಿಯ ಕುರಿತಾಗಿದೆ.

ಜೋಗಿ ದೀಕ್ಷೆ ಕೊಡುವುದು :

ಒಬ್ಬಾತ ಜೋಗಿ ದೀಕ್ಷೆ ಪಡೆಯಬೇಕಾದರೆ ಅಥವಾ ಜೋಗಿ ಆಗಬೇಕಾದರೆ ಅನೇಕ ವಿಧದ ಶಾಸ್ತ್ರ ಆಚರಣೆಗಳಿವೆ. ಈ ಶಾಸ್ತ್ರವನ್ನು ಜೋಗಿ ಮಠದ ಸದಸ್ಯರು ನೆರವೇರಿಸಿಕೊಡುತ್ತಾರೆ.

ದೀಕ್ಷೆ ಕೊಡುವ ದಿನ ಮನೆ ಮುಂದೆ ಚಪ್ಪರ ಹಾಕುತ್ತಾರೆ. ದೀಕ್ಷೆ ಪಡೆಯುಲಿರುವ ಹುಡುಗನನ್ನು ಸ್ನಾನ ಮಾಡಿಸಿ, ಅದರ ಕೆಳಗೆ ಕುಳ್ಳಿರಿಸುತ್ತಾರೆ. ಅವನಿಗೆ ಅರಸಿನ ಮತ್ತು ಸೀಗೆಕಾಯನ್ನು ತಿನ್ನಲು ಕೊಡುತ್ತಾರೆ. ದನದ ಸಗಣಿ ನೀರನ್ನು ಅವನ ಮೇಲೆ ಸಿಂಪಡಿಸಿ ಅವನನ್ನು ಶುದ್ಧಮಾಡುತ್ತಾರೆ. ಅನಂತರ ಸ್ನಾನ ಮಾಡಿಸಿ, ಅವನ ಮೈಮೇಲಿದ್ದ ಎಲ್ಲ ಹಳೆ ಬಟ್ಟೆಗಳನ್ನು ತೆಗೆಸುತ್ತಾರೆ. ಸೊಂಟಕ್ಕೆ ಕಟ್ಟಿದ್ದ ಉಡುದಾರವನ್ನು ಕಿತ್ತೆಸೆಯಬೇಕು. ಕಿವಿಯ ಆಭರಣ ತೆಗೆಯಬೇಕು. ಈ ಕೆಲಸ ನಡೆಯುವಾಗ ಬಗೆಬಗೆಯ ಹಾಡುಗಳನ್ನು ಹಾಡುವರು. ಹೀಗೆ ದೀಕ್ಷೆ ತಗೊಂಡವನನ್ನು ಹೊಸದಾಗಿ ಮಾಡುವರು. ಅನಂತರ ಅವನ ಕಾಲಿಗೆ ಕರಿದಾರ ಕಟ್ಟುವರು. ಒಳಮನೆಗೆ ಕರೆದೊಯ್ದು, ಅಲ್ಲಿ ರಂಗೋಲಿಯಲ್ಲಿ ಹಸೆಬರೆದು, ಅದರ ಮೇಲೆ ಹಸೆಮಣೆ ಇಟ್ಟು ಅದರಲ್ಲಿ ಅವನನ್ನು ಕುಳ್ಳಿರಿಸುವರು. ಸೋದರಮಾವ ಅಲ್ಲಿ ಹುಡುಗನಿಗೆ ಕಂಕಣ ಕಟ್ಟುತ್ತಾನೆ. ಅಂದರೆ ಒಂದು ಚಿಕ್ಕದಾದ ಚಿನ್ನದ ನಾಣ್ಯವನ್ನು ವೀಳ್ಯದ ಎಲೆ ಮೇಲೆ ಇಟ್ಟು, ಅದಕ್ಕೆ ಗರಿಕೆ ಹುಲ್ಲಿನಿಂದ ಹಾಲು, ಬೆಣ್ಣೆ, ತುಪ್ಪ ಸವರಿ ಇಡುವುದು. ಹುಡುಗನ ಬಲಗೈಯನ್ನು ಹಿಡಿದುಕೊಂಡು, ಆ ಚಿನ್ನದ ನಾಣ್ಯಕ್ಕೆ ಕೈಯನ್ನು ಒತ್ತುವುದು. ಆಗ ಆ ನಾಣ್ಯ ಅವನ ಕೈಗೆ ಅಂಟಿಕೊಳ್ಳುತ್ತದೆ. ಅದನ್ನು ಹಣೆಗೆ ಒತ್ತಿಕೊಂಡು ಕೆಳಗೆ ಇಡುವುದು. ಹೀಗೆ ಮೂರುಸಲ ಆದ ಮೇಲೆ ಒಂದು

ಅರಿಸಿನದ ಬಟ್ಟೆಗೆ ಆ ವೀಳ್ಯದ ಎಲೆ ಸಹಿತವಾದ ನಾಣ್ಯವನ್ನು ಸೇರಿಸಿ ಹುಡುಗನ ಬಲ ಮುಂಗೈಗೆ ಕಟ್ಟುವುದು. ಇದಕ್ಕೆ 'ಕಂಕಳಿ ಕಟ್ಟುವುದು' ಎನ್ನುತ್ತಾರೆ.

ಇದಾದ ಅನಂತರ ಅವನ ಎದುರಿಗೆ ಕರಿಯ ಕಂಬಳಿ ಹಾಸುತ್ತಾರೆ. ಅದರ ಮೇಲೆ 'ಪಂಚಕಳಸ' ಇಡುತ್ತಾರೆ. ಅಂದರೆ, ಕಂಬಳಿಯ ನಾಲ್ಕು ಮೂಲೆಗೂ ನಾಲ್ಕು ಕಳಸ ಇಟ್ಟು ಮಧ್ಯೆ ಇನ್ನೊಂದನ್ನು ಇಡುವುದು. ಒಂದು ಕಳಸ ಎಂದರೆ ಅರತಿ ತಟ್ಟೆಯೊಳಕ್ಕೆ ಇಟ್ಟ ಒಂದು ಚೊಂಬು ಮತ್ತು ಆ ಚೊಂಬಿನಲ್ಲಿ ನೀರು ಹಾಕಿ ಹೂ ಇಡುವುದು. ತಟ್ಟೆಗೆ ಸ್ವಲ್ಪ ಅಕ್ಕಿ, ಒಂದು ತೆಂಗಿನ ಕಾಯಿ ಮತ್ತು ಒಂದು ವಿಭೂತಿಉಂಡೆ ಇಡುವರು. ಇಂಥ 5 ಕಳಸದ ಜೊತೆಗೆ 21 ಜೊತೆ ವೀಳ್ಯದೆಲೆ ಅಡಕೆಗಳನ್ನು ಇಡುತ್ತಾರೆ. ಅನಂತರ ಒಬ್ಬ ಮುದುಕನಾದ ಅನುಭವಿ ಜೋಗಪ್ಪನು ಹುಡುಗನಿಗೆ ಬಾಸಿಂಗ ಕಟ್ಟುತ್ತಾನೆ. ಒಂದು ಚಿಕ್ಕದಾದ ಬೆಳ್ಳಿಯ ತ್ರಿಶೂಲಕ್ಕೆ ಪೂಜೆಮಾಡಿ ಅದಕ್ಕೆ ಬಿಳಿಯ ದಾರವನ್ನು ಕಟ್ಟಿ ಹುಡುಗನ ಹಣೆಗೆ ಕಟ್ಟುತ್ತಾರೆ. ಅನಂತರ ಹುಡುಗನಿಗೆ ದೀಕ್ಷೆ ವಚನ ಬೋಧಿಸುವರು. 'ಸತ್ಯದಲ್ಲಿ ನಡೆದುಕೊಳ್ಳುತ್ತೇನೆ' ಎಂದು ಹುಡುಗ ಹೇಳಬೇಕು. ಅನಂತರ ಬೆಳ್ಳಿ ತ್ರಿಶೂಲದಿಂದ ಹುಡುಗನ ಕಿವಿಯ ತಳಭಾಗಕ್ಕೆ ಚುಚ್ಚಿ, ತೂತು ಮಾಡಿ ಅಲ್ಲಿಗೆ ಕುಂಡಲಗಳನ್ನು ಇಡುವರು. ಈ ಕುಂಡಲಗಳು ಅವನು ಸಾಯುವ ವರೆಗೆ ಕಿವಿಯಲ್ಲೇ ಇರುತ್ತದೆ. ಕೊನೆಗೆ ಎಲ್ಲರೂ ವಿಶೇಷವಾದ ಮಾಂಸದೂಟ ಮಾಡುವರು. ಹಿರಿಯ ಜೋಗಿಯೊಬ್ಬ ಉಂಡು ಉಳಿದ ಎಂಜಲನ್ನು ದೀಕ್ಷೆ ಪಡೆದ ಕಿರಿಯನು ಊಟ ಮಾಡಬೇಕು. ಊಟವಾದ ಅನಂತರ ಸಿಂಗಿನಾದವನ್ನು ಹುಡುಗನ ಕೊರಳಿಗೆ ಕಟ್ಟುವರು. ಇಷ್ಟಾದರೆ ಆತ ಜೋಗಿಯಾದನೆಂದೇ ಅರ್ಥ. ಅನಂತರ ಎಲ್ಲರೂ ಮೆರವಣಿಗೆಯಲ್ಲಿ ಭಿಕ್ಷೆಗೆ ಹೋಗುವರು. ಭಿಕ್ಷೆಯಲ್ಲಿ ಸಿಕ್ಕಿದ್ದನ್ನು ತಂದು ಊಟ ಮಾಡಿದಲ್ಲಿಗೆ ಶಾಸ್ತ್ರ ಮುಗಿಯುತ್ತದೆ.

ಜೋಗಿಯಾದ ಮೇಲೆ ಆತ ಅನೇಕ ವಿಧದ ನಿಯಮಾವಳಿಗಳಿಗೆ ಬದ್ಧನಾಗಿರ ಬೇಕಾಗುತ್ತದೆ. ಆತ ಬೇರೆಯವರ ಎಂಜಲನ್ನು ತಿನ್ನಬಾರದು. ಎಲೆಯಲ್ಲಿ ಮಾತ್ರ ಉಣ್ಣಬೇಕು. ಜಾತಿ ಪದ್ಧತಿಯನ್ನು ಆಚರಿಸಬಾರದು, ಕಿವಿಗೆ ಹಾಕಿದ ಕುಂಡಲ ಗಳನ್ನು ಎಂದೂ ತೆಗೆಯಬಾರದು. ಊಟಕ್ಕೆ ಮುನ್ನ ಸಿಂಗನಾದವನ್ನು ಊದಬೇಕು, ಖಾಸಗಿಯಾಗಿ ಆಸ್ತಿ ಮಾಡಿಕೊಳ್ಳಬಾರದು ಇತ್ಯಾದಿ. ಅವರುಗಳು ನಿಯಮಕ್ಕೆ ತಪ್ಪದಂತೆ ನೋಡಿಕೊಳ್ಳಲು ಮಠದಿಂದ ಕೆಲವರನ್ನು ನೇಮಿಸಲಾಗುತ್ತದೆ. ಅವರನ್ನು 'ಚೂರುದಾರ' ಎಂದು ಕರೆಯುತ್ತಾರೆ. ಈ ಚೂರುದಾರನಿಗೆ ಒಬ್ಬ ಸಹಾಯಕ ನಿರುತ್ತಿದ್ದ. ಅವನನ್ನು 'ಕೊಟವಾಳಿ' ಎಂದು ಕರೆಯುತ್ತಾರೆ.

ಈಗೀಗ ಈ ಆಚರಣೆಗಳೆಲ್ಲ ಮಾಯವಾಗುತ್ತಿದೆ. ಜೋಗಿಗಳು ಇತರರಂತೆ ಸಾಮಾನ್ಯವಾಗಿ ಬದುಕುತ್ತಿದ್ದಾರೆ.

ಆಹಾರ ಪದ್ಧತಿ:

ಜೋಗಿಗಳು ಮಾಂಸಾಹಾರಿಗಳು. ತಮ್ಮ ಕುಲದೇವರಾದ ಭೈರವನಿಗೂ ಅವರು ಕೋಳಿ, ಕುರಿ, ಮೊದಲಾದ ಪ್ರಾಣಿಗಳನ್ನು ಮೊದಲು ಬಲಿಕೊಟ್ಟು ಅನಂತರ ಮಾಂಸವನ್ನು ಬೇಯಿಸಿ ತಿನ್ನುತ್ತಾರೆ. ಹಂದಿ ಮತ್ತು ಮೀನನ್ನು ತಿನ್ನುತ್ತಾರೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿ ಮಾಂಸದೂಟಕ್ಕೆ ಪ್ರಾಶಸ್ತ್ಯವಿದೆ. ಈ ಸೇವನೆಯಲ್ಲಿ ಗಂಡು-ಹೆಣ್ಣು ವ್ಯತ್ಯಾಸ ಇಲ್ಲ. ಮಾಂಸದೊಂದಿಗೆ ಅಕ್ಕಿಯಿಂದ ಮಾಡಿದ ಬಗೆಬಗೆಯ ತಿಂಡಿಗಳನ್ನು ಬಳಸುತ್ತಾರೆ. ಜೋಗಿಗಳು ಪ್ರಧಾನವಾಗಿ ಮದ್ಯ ಪಾನಿಗಳು. ಕಳ್ಳು ಮತ್ತು ಶರಾಬನ್ನು ಅವರು ಯಥೇಚ್ಛವಾಗಿ ಕುಡಿಯುತ್ತಾರೆ. ಭಂಗಿ ಸೇವನೆ ಜೋಗಿಗಳಿಗೆ ಅತ್ಯಗತ್ಯ. ಭಂಗಿ ಸೊಪ್ಪಿನ ಗಿಡದಿಂದ ಎಲೆಗಳನ್ನು ತಂದು ಒಣಗಿಸಿ. ಅದನ್ನು ಒಂದು ಮಣ್ಣಿನ ಕೊಳವೆಗೆ ಹಾಕಿ ಬೆಂಕಿ ಹಚ್ಚಿ ಸೇದುತ್ತಾರೆ. ನಾಲಪ್ಪರು ದಮ್ಮುಗಳನ್ನು ಸೇದಿ ಮೈ ಮರೆತು ಒರಗುತ್ತಾರೆ. ಜೋಗಿ ಮಠಗಳಲ್ಲಿ ಸಾಯಂಕಾಲದ ಹೊತ್ತು ಭಂಗಿ ಕುಡಿದು ಒರಗಿದವರನ್ನು ನಾವು ಕಾಣಬಹುದು. ಭಂಗಿ ಸೇವಿಸಿದಾಗ ಹೆಂಗಸರು ಸಿಕ್ಕಿದರೆ ಅವರನ್ನು ಭೋಗಿಸುತ್ತಾರೆ. ಜೋಗಿಗಳಿಗೆ ಹೆಂಗಸರನ್ನು ಅರ್ಪಿಸುವುದು ಒಂದು ಹೆಮ್ಮೆಯ ವಿಷಯವೆಂದು ಮಠಕ್ಕೆ ಸೇರಿದವರು ಭಾವಿಸುತ್ತಾರೆ.

ಆಧುನಿಕ ವಿದ್ಯಾಭ್ಯಾಸ ಪಡೆದ ಜೋಗಿ ಯುವಕರು ಭಂಗಿ ಸೇವನೆಯನ್ನು ಖಂಡಿಸುತ್ತಾರೆ. ಮದ್ಯ-ಮಾಂಸ-ಮೈಥುನವನ್ನು ತ್ಯಜಿಸುವುದೇ ಒಳ್ಳೆಯದೆಂಬ ತೀರ್ಮಾನ ಅವರದು ಆದರೆ ಅಂಥವರು ಬೀಡಿ, ಸಿಗರೇಟ್, ಚಹಾ, ಕಾಫಿಗಳ ಅಭ್ಯಾಸಮಾಡುತ್ತಿದ್ದಾರೆ.

ಒಳ ವಿಭಜನೆಗಳು:

ಜೋಗಿಗಳಲ್ಲಿರುವ ಅನೇಕ ಪ್ರಬೇಧಗಳಲ್ಲಿ ಮತ್ತೆ ಒಳ ವಿಭಜನೆಗಳಿವೆ. ಜೋಗಿಗಳು ಅದನ್ನು 'ವಲ್ಲು' ಎಂದು ಕರೆಯುತ್ತಾರೆ. ಈ 'ವಲ್ಲು' ಎಂಬುದು ಇತರ ಜನಾಂಗಗಳಲ್ಲಿರುವ 'ಬಳಿ' ಅಥವಾ 'ಕ್ಲ್ಯಾನ್' ಪದ್ಧತಿಗೆ ಸಂವಾದಿಯಾದುದು. ಜೋಗಿಗಳಲ್ಲಿ ಒಟ್ಟು ಎಷ್ಟು 'ವಲ್ಲು'ಗಳಿವೆ ಎಂದು ಹೇಳುವುದು ತುಂಬಾ ಕಷ್ಟ. ಕಿನ್ನರಿ ಮತ್ತು ಹಂದಿ ಜೋಗಿಗಳಲ್ಲಿ ಈ ಕೆಳಗಿನ ವಲ್ಲುಗಳು ಪ್ರಚಲಿತದಲ್ಲಿವೆ.

1. ಗೊಲ್ಲರಿ ವಲ್ಲು
2. ಗುಡಿಲ ವಲ್ಲು
3. ಜಲ್ಲಿ ವಲ್ಲು
4. ಸಪ್ಪದಿ ವಲ್ಲು
5. ಸುಮತ ವಲ್ಲು
6. ಪಿಂಡಿರ ವಲ್ಲು
7. ವಗಿತ ವಲ್ಲು
8. ವಡಪಿಲ್ಲ ವಲ್ಲು
9. ಒರಿಗಂಟ ವಲ್ಲು
10. ಮೋಪುರಿ ವಲ್ಲು
11. ಇಂದುಕುರಿ ವಲ್ಲು
12. ದಾಸರಿಪುರಿ ವಲ್ಲು

13. ತರ ವಲ್ಲು
14. ಸಿರರಪು ವಲ್ಲು
15. ಉಳವಲ ವಲ್ಲು
16. ಸಿವರಲ ವಲ್ಲು
17. ಬಿನಟ ವಲ್ಲು
18. ಚಿರುಕುರಿ ವಲ್ಲು

ಈ ವಲ್ಲುಗಳು ಶ್ರೇಣೀಕರಣಕ್ಕೆ ಒಳಗಾಗಿವೆ. ಆದರೆ ಅವು ಯಾವ ರೀತಿಯಲ್ಲಿ ಶ್ರೇಣೀಕರಣಕ್ಕೆ ಒಳಗಾಗಿದೆ ಎಂದು ವಿವರಿಸುವುದು ಸಾಧ್ಯವಿಲ್ಲ. ಯಾಕೆಂದರೆ ಪ್ರತಿಯೊಂದು 'ವಲ್ಲು'ವಿನ ಜನರು ಕೂಡಾ ತಮ್ಮ 'ವಲ್ಲು' ಇತರರ ವಲ್ಲುವಿಗಿಂತ ಶ್ರೇಷ್ಠವಾದದ್ದು ಎಂದು ಹೇಳುತ್ತಾರೆ. ಆದರೆ ಆಹಾರ ಸೇವನೆ, ನೀರು ಸ್ವೀಕರಣೆ ಮುಂತಾದ ವಿಷಯಗಳಲ್ಲಿ ಈ 'ವಲ್ಲು' ಯಾವ ಪರಿಣಾಮವನ್ನು ಕೂಡಾ ಉಂಟು ಮಾಡುವುದಿಲ್ಲ. ಮದುವೆಯಲ್ಲಿ ಮಾತ್ರ ವಲ್ಲುವೇ ನಿರ್ಣಾಯಕ ಸ್ಥಾನ ವಹಿಸುತ್ತದೆ. ಒಂದೇ ವಲ್ಲುವಿನಲ್ಲಿ ಮದುವೆಯಾಗುವಂತಿಲ್ಲ. ಅಲ್ಲದೆ ಕೆಲವು ವಲ್ಲುವಿನ ಹುಡುಗರಿಗೆ, ಕೆಲವು ವಲ್ಲುವಿನ ಹುಡುಗಿಯರೇ ಆಗಬೇಕೆಂಬ ನಂಬಿಕೆಯೂ ಇದೆ. ಏನಿದ್ದರೂ ಮದುವೆಯು ವಿಷಯುಬಿಟ್ಟರೆ ಉಳಿದಂತೆ ಎಲ್ಲಿಯೂ ವಲ್ಲುಗಳು ಕಾರ್ಯನಿರ್ವಹಿಸುವುದಿಲ್ಲ.

ಮದುವೆ:

ಜೋಗಿಗಳ ಮದುವೆ ಕ್ರಮಗಳು ಆಕರ್ಷಕವಾಗಿದೆ. ಅವರಲ್ಲಿ ಹಿಂದೆ ಬಾಲ್ಯ ವಿವಾಹ ಪದ್ಧತಿ ಬಳಕೆಯಲ್ಲಿ ಇತ್ತೆಂದು ಜೋಗಿಗಳು ಹೇಳಿದರೂ, ಈಗ ಅಂಥ ಪದ್ಧತಿ ಇಲ್ಲ. ಸಾಮಾನ್ಯವಾಗಿ ಹುಡುಗನ ವಯಸ್ಸು ಹುಡುಗಿಯ ವಯಸ್ಸಿಗಿಂತ ಹೆಚ್ಚಿಗೆ ಇರಬೇಕೆಂದು ಭಾವಿಸಲಾಗಿದ್ದರೂ, ಜೋಗಿಗಳು ಆದಕ್ಕೆ ವಿಶೇಷ ಮಹತ್ವಕೊಡುವುದಿಲ್ಲ. ಅವರಲ್ಲಿ ಹುಡುಗನ ವಯಸ್ಸು ಹುಡುಗಿಯರಿಗಿಂತ ಕಡಿಮೆ ಇದ್ದರೂ ಆಗುತ್ತದೆ. ಮೊದಲು ಹುಡುಗನ ಕಡೆಯ ಹಿರಿಯರು 'ವಲ್ಲು'ವು ಸಮರ್ಪಕವಾಗಿರುವುದನ್ನು ಗಮನಿಸಿ, ಹೆಣ್ಣು ನೋಡಲು ಹೋಗುತ್ತಾರೆ. ಒಪ್ಪಿಗೆಯಾದರೆ ಹುಡುಗಿಯ ತಂದೆಗೆ ರೂ. 50-00ಕೊಟ್ಟು ಮದುವೆಗೆ ದಿನ ನಿಶ್ಚಯಿಸುತ್ತಾರೆ. ವಿವಾಹದ ಮುನ್ನಾದಿನ ವಧುವಿಗೆ ಮತ್ತು ವರನಿಗೆ ಅರಶಿನ ತಿಕ್ಕಿ ಸ್ನಾನ ಮಾಡಿಸುತ್ತಾರೆ. ಮದುವೆಯ ದಿನ ವರನ ಕಡೆಯವರು ವಧುವಿನ ಮನೆಗೆ ದಿಬ್ಬಣ ಹೋಗುವರು. ಧಾರಾ ಮುಹೂರ್ತಕ್ಕೆ ಮುನ್ನ ಕುಲದೇವತೆಯಾದ ಭೈರವನಿಗೆ ಪೂಜೆ ಸಲ್ಲಿಸುವರು. 12 ಜನ ನಾಥ ಗುರುಗಳಿಗೆ ವಿಶೇಷವಾಗಿ 'ಗುಂಭ ಪೂಜೆ' ಮಾಡುವರು. ಆನಂತರ ಹಾಲಿನಲ್ಲಿ ಧಾರೆ ಎರೆಯುವರು. ಸಾಮಾನ್ಯವಾಗಿ ಹುಡುಗಿಯ ತಂದೆ ಅಥವಾ ಹುಡುಗಿಯ ತಾಯಿಯ ಸಹೋದರನೇ ಧಾರೆಹೊಯ್ಯುತ್ತಾನೆ. ಮದುವೆಯ ಸಂಕೇತವಾಗಿ ತಾಳಿಯನ್ನು ಕಟ್ಟುತ್ತಾರೆ. ಗುರುಮಠಕ್ಕೆ ಕಾಣಿಕೆಯಾಗಿ ನಾಲ್ಕಾಣೆಯನ್ನು ತೆಗೆದಿಡುತ್ತಾರೆ. ಗುರುಮಠದ ಪ್ರತಿನಿಧಿಯಾಗಿ ಯಾರಾದರೂ ಬಂದರೆ ಅವರ ಕೈಯಲ್ಲಿ ಅದನ್ನು ಕೊಡುತ್ತಾರೆ.

ಮದುವೆಯ ಅಂಗವಾಗಿ ಮಾಂಸದೂಟ ಮತ್ತು ಮಧ್ಯಪಾನ ನಡೆಯುತ್ತದೆ. ಭಂಗಿ ಸೇವನೆಯೂ ನಡೆಯುತ್ತದೆ. ಇದಾದ ನಂತರ ವಧೂವರರು ಗೊಬ್ಬರವನ್ನು ತಲೆಯಲ್ಲಿ ಹೊತ್ತುಕೊಂಡು ಹೋಗಿ ಗದ್ದೆಯಲ್ಲಿ ಹರಡಿ, ಭೈರವನಿಗೆ ಕೈ ಮುಗಿದು ಬರಬೇಕು. ಸಾಮಾನ್ಯವಾಗಿ ಇಲ್ಲಿಗೆ ಆಚರಣೆಗಳು ಮುಗಿಯುತ್ತವೆ. ಈ ಎಲ್ಲ ಆಚರಣೆಗಳಲ್ಲಿಯೂ ಹಿರಿಯ ಜೋಗಿಯೊಬ್ಬ ಇರಬೇಕಾಗುತ್ತದೆ.

ವಿವಾಹಕ್ಕೆ ಸಂಬಂಧಿಸಿದ ಹಾಗೆ ಅನೇಕ ವಿಧದ ವಿಧಿನಿಷೇಧಗಳು ಇವರಲ್ಲಿ ಬಳಕೆಯಲ್ಲಿದೆ. ಒಂದೇ 'ವಲ್ಲು'ವಿನಲ್ಲಿ ಮದುವೆಕೂಡದು. ತಂದೆಯ ತಂಗಿ ಅಥವಾ ಅಕ್ಕನ ಮಗಳನ್ನು ಸಾಮಾನ್ಯವಾಗಿ ಮದುವೆಯಾಗುತ್ತಾರೆ. ಅದೇ ರೀತಿ ತಾಯಿಯ ಸಹೋದರನ ಮಗಳನ್ನು ಮದುವೆಯಾಗುತ್ತಾರೆ. ಸೋದರ ಸಂಬಂಧದಲ್ಲಿ ಜೋಗಿಗಳಿಗೆ ವಿಶ್ವಾಸ ಹೆಚ್ಚು. ಈಚೆಗೆ ಇದು ಕೂಡಾ ಕಡಿಮೆಯಾಗಿದೆ. ಜಾತಿಯೊಳಗೆ ಮದುವೆಯಾಗುತ್ತದೆ. ಅಂತರ್ಜಾತಿ ವಿವಾಹಕ್ಕೆ ಇವರಲ್ಲಿ ಒಲವು ಇಲ್ಲ. ವಧುದಕ್ಷಿಣೆ ಸಾಂಕೇತಿಕವಾಗಿ ಉಳಿದು, ವರದಕ್ಷಿಣೆಯೂ ಹೆಚ್ಚಾಗಿದೆ.

ಜೋಗಿಗಳಲ್ಲಿ ವಿಧವೆಗೆ ಪುನರ್ವಿವಾಹಕ್ಕೆ ಅವಕಾಶವಿದೆ. ವಿಧುರನಿಗೂ ಮರು ಮದುವೆಗೆ ಅವಕಾಶವಿದೆ. ಆದರೆ ಈ ವಿಧದ ಮರು ಮದುವೆಗಳು ಧಾರಾಕಾರ್ಯದ ಮೂಲಕ ಆಗುವುದಿಲ್ಲ. ಬದಲಾಗಿ ಎರಡೂ ಕಡೆಯ ಹಿರಿಯರು ಒಟ್ಟು ಸೇರಿ, ವಧುವಿನ ಕೈಯನ್ನು ವರನ ಕೈಗೆ ತಾಗಿಸಿ ಬಿಟ್ಟು ಬಿಡುವರು. ಇದನ್ನು 'ಕೂಡಾವಳಿ' ಎನ್ನುವರು. ಹೆಂಡತಿ ಸತ್ತರೆ, ಆಕೆಯ ತಂಗಿಯನ್ನು ಜೋಗಿಗಳು ಮದುವೆ ಮಾಡಿ ಕೊಳ್ಳಬಹುದು. ಅಕ್ಕ ಮತ್ತು ತಂಗಿಯನ್ನು ಆದರೆ ಒಬ್ಬನೇ ಮದುವೆ ಆಗಬಹುದು. ಗಂಡ ಸತ್ತರೆ, ಅವನ ಅಣ್ಣನನ್ನು ಮಾತ್ರ ಮದುವೆ ಮಾಡಿ ಕೊಳ್ಳಬಹುದು. ತಮ್ಮನನ್ನು ಮದುವೆ ಮಾಡಿಕೊಳ್ಳಕೂಡದು. ಮದುವೆಯಾಗದೇ ಇರುವವರು ನೇರವಾಗಿಯೇ ವಿಧವೆ ಅಥವಾ ವಿಧುರನನ್ನು ಮದುವೆ ಆಗಬಹುದು. ಗಂಡಿನ ಕಡೆಯವರು ಊಟ ಹಾಕಿಸಬೇಕು.

ವಿವಾಹ ವಿಚ್ಛೇದನಕ್ಕೆ ಜೋಗಿಗಳಲ್ಲಿ ಅವಕಾಶವಿದೆ. ಈ ಬಗ್ಗೆ ಮೈಸೂರು ಕಾಸ್ಟ್ಸ ಆ್ಯಂಡ್ ಟ್ರೈಬ್ಸ್ ಎಂಬ ಗ್ರಂಥದಲ್ಲಿ ಕೊಟ್ಟ ವಿವರಗಳು ಸರಿಯಾಗಿವೆ.

"Divorce is very easilly obtained. The mere expression of a desire by either party to be freed from the union is enough. But as a matter of fact, such divorces are not so common as may be supposed. The outward symbol of a divorce is the return of the tali tied by the husband and the tearing of the loose end of the garment by him. The divorced woman may marry another man in Kudike form or may remain a prostitute, If without a divorce, a man elopes with a married woman, he has to pay marriage expenses and a fine of eighteen rupees to the caste.

Adultery is punished with a fine, and an adulterous woman may be claimed back by her husband with any children she may have. If unmarried girl becomes pregnant by a man of the same caste she is married to him in Kudike. If he refuses to marry her, he is fined 24 varahas, and she is purified by applying to her forehead holy ashes obtained from the guru. Sexual morality is generally lose and prostitution is common" (Nanjundayya M. V. and Anantha Krishna Iyer L.K. 1930 : 494).

ಮದುವೆಯಾದ ಅನಂತರ ವಧುವರರು ಸಾಮಾನ್ಯವಾಗಿ ವರನ ತಂದೆಯೊಂದಿಗೆ ಬದುಕುತ್ತಾರೆ. ವರನ ಕಡೆಯವರು ವಧುವಿಗೆ 'ತೆರ' ಕೊಡದಿದ್ದರೆ ಒಂದು ಮಗು ವಾಗುವ ತನಕ ವಧೂವರರು, ವಧುವಿನ ಮನೆಯಲ್ಲಿಯೇ ಬದುಕಬೇಕು. ಮಗು ಆದ ಅನಂತರ ತಂದೆಮನೆಗೆ ವರನು ಹಿಂದಿರುಗುವನು. ವೈಯಕ್ತಿಕ ಭಿನ್ನಾಭಿ ಪ್ರಾಯಗಳು ಹೆಚ್ಚಾದಾಗ ಆತನು ತಂದೆಯ ಮನೆಯಿಂದ ಹೊರಬಂದು ಪ್ರತ್ಯೇಕ ಮನೆಕಟ್ಟಿ ವಾಸಿಸುತ್ತಾನೆ. ಮದುವೆಯ ನಂತರ ಹೀಗೆ ಮನೆಗಳು ವಿಭಜನೆ ಹೊಂದುತ್ತವೆ. ಹೀಗೆ ವಿಭಜನೆ ಹೊಂದುವಾಗ ಆಸ್ತಿ ಕೂಡಾ ವಿಭಜನೆಯಾಗುತ್ತದೆ. ಅವಿಭಕ್ತ ಕುಟುಂಬದಲ್ಲಾದರೆ, ಒಂದೇ ಮನೆಯಲ್ಲಿದ್ದು ಪ್ರತ್ಯೇಕ ಕೋಣೆಯಲ್ಲಿ ವಾಸ ವಾಗುತ್ತಾರೆ. ಈ ಪ್ರತ್ಯೇಕ ಕೋಣೆಯಲ್ಲಿ ಇವರು ಅನ್ನವನ್ನು ಮಾತ್ರ ಮಾಡಲೇ ಬಾರದು. ಉಳಿದಂತೆ ತರಕಾರಿ ಅಥವಾ ಮಾಂಸದ ಪದಾರ್ಥಗಳನ್ನು (ಕರಿ) ಮಾಡ ಬಹುದು. ಅನ್ನವನ್ನು ಎಲ್ಲ ಕೋಣೆಯ ಜನರಿಗಾಗಿ ಪ್ರತ್ಯೇಕವಾದ ಕೋಣೆಯೊಂದ ರಲ್ಲಿ ಮಾಡುವರು. ಆ ಕೋಣೆಯಿಂದ ಅನ್ನವನ್ನು ತಂದು ಇವರು ತಮ್ಮ ತಮ್ಮ ಕೋಣೆಯಲ್ಲಿ ಊಟಮಾಡುತ್ತಾರೆ. ಹೀಗಾಗಿ ಅನ್ನದ ಮನೆ ಮತ್ತು ಅನ್ನವು ಇಡೀ ಕುಟುಂಬದ ಒಗ್ಗಟ್ಟು ಮತ್ತು ಒಮ್ಮತದ ಸಂಕೇತವಾಗುತ್ತದೆ. ಈಚೆಗೆ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚುತ್ತಿದೆ.

ಜೋಗಿಗಳು ಮೂಲತಃ ಭಿಕ್ಷೆಮಾಡಿಯೇ ಜೀವನ ಸಾಗಿಸುವವರು. ಆದರೆ ಈಗ ಅವರದನ್ನು ಬಹುಮಟ್ಟಿಗೆ ತ್ಯಜಿಸಿದ್ದಾರೆ. ಕಿನ್ನರಿ ಜೋಗಿಗಳು ಮಾತ್ರ ಹಾಡು ಹೇಳುತ್ತ ಮನೆಮನೆಗೆ ಸುತ್ತಾಡುತ್ತಾರೆ. ಉಳಿದವರೆಲ್ಲ ಅಲ್ಪ ಸ್ವಲ್ಪ ಖಾಸಗೀ ಜಮೀನನ್ನು ಮಾಡಿಕೊಂಡಿದ್ದಾರೆ. ಭತ್ತ ಮತ್ತು ಅಡಕೆಯನ್ನು ಬೆಳೆಸುತ್ತಾರೆ. ಆಸ್ತಿ ಇಲ್ಲದವರು ದಿನಕೂಲಿಗೆ ಕೆಲಸಮಾಡುತ್ತಾರೆ. ವ್ಯಾಪಾರಿಗಳನ್ನೂ ಈ ಜನಾಂಗದಲ್ಲಿ ನಾವು ಕಾಣಬಹುದು. ಸಣ್ಣ ಕೈಗಾರಿಕೆಗಳನ್ನು (Small Scale Industries) ಆರಂಭಿಸಿದವರೂ ಇದ್ದಾರೆ. ದೊಡ್ಡ ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿವವರಿದ್ದಾರೆ. ಇತ್ತೀಚೆಗೆ ಸರಕಾರೀ ಉದ್ಯೋಗದಲ್ಲಿ ದುಡಿವವರಿದ್ದಾರೆ. ಅಂಚೆ ಕಚೇರಿ, ತಾಲೂಕು ಕಚೇರಿಗಳಲ್ಲಿ ಗುಮಾಸ್ತರಾಗಿದ್ದಾರೆ.

ಜೋಗಿಗಳ ಬಂಧುತ್ವದ ಸ್ವರೂಪವು ದ್ರಾವಿಡ ಪದ್ಧತಿಗೆ ಅನುಗುಣವಾಗಿದೆ. ಅಲ್ಲಿ ಮೂರು ತಲೆಮಾರುಗಳನ್ನು ಗುರುತಿಸಲು ಪದಗಳಿವೆ. ಅತ್ತಿಗೆ–ಭಾವ–ಮೈದುನ–ನಾದಿನಿ ಇವರ ಮಧ್ಯೆ ವಿನೋದ ಸಂಬಂಧವಿದೆ. ಅಜ್ಜ ಮತ್ತು ಮೊಮ್ಮಗಳ ಮಧ್ಯೆ ಸರಸ ಸಂಬಂಧವಿದೆ. ಅಜ್ಜಿ ಮತ್ತು ಮೊಮ್ಮಗನ ಮಧ್ಯೆ ಗಾಢ ಪ್ರೀತಿಯಿರುತ್ತದೆ. ಮಾವ ಮತ್ತು ಸೊಸೆಯರಲ್ಲಿ ಲೈಂಗಿಕ ಸಂಬಂಧ ಇರುವುದನ್ನು ಇಡೀ ಜನಾಂಗ ಅನೈತಿಕ ಎಂದು ಕರೆದರೂ ಕೆಲವೆಡೆ ಅಂಥ ಸಂಬಂಧಗಳಿವೆ. ಮೊಮ್ಮಗನ ಮಗನನ್ನು ಅಜ್ಜ ನೋಡುವುದಾದರೆ (ಅಂದರೆ 4 ತಲೆಮಾರುಗಳು) ಚಿನ್ನದ ದೀಪ ಉರಿಸಿ, ಆ ಬೆಳಕಲ್ಲಿ ನೋಡಬೇಕೆಂಬ ನಂಬುಗೆಯಿದೆ. ಇದನ್ನು 'ಗೋಳಿಗೊಟ್ಟಿ' ಎಂದು ಅವರು ಕರೆಯುತ್ತಾರೆ.

ಜೋಗಿ ಮಹಿಳೆಯರಿಗೆ, ಜೋಗಿಗಳೊಂದಿಗೆ ಬಹುಮಟ್ಟಿಗೆ ಸರಿಸಮನಾದ ಸ್ಥಾನಮಾನವಿದೆ. ಅಲ್ಲಿ ವಿಧವೆಯರಿಗೆ ಮರುಮದುವೆಗೆ ಅವಕಾಶವಿದೆ. ವಿವಾಹ ಪೂರ್ವದಲ್ಲಿ ಒಬ್ಬಳು ಗರ್ಭಿಣಿಯಾದರೆ, ಅದಕ್ಕೆ ಉಗ್ರ ಶಿಕ್ಷೆಯೇನೂ ಇಲ್ಲ. ಗಂಡಸರೊಂದಿಗೆ ಆಕೆ ದುಡಿಯುವುದರಿಂದ ಮನೆಯ ಆರ್ಥಿಕ ಉತ್ಪಾದನೆಯಲ್ಲಿ ಆಕೆ ಸಮಪಾಲುದಾರಳಾಗುತ್ತಾಳೆ. ಸರಕಾರೀ ಉದ್ಯೋಗಗಳಲ್ಲಿ ಆಕೆ ಕಾಣಸಿಗುವುದಿಲ್ಲ. ಆದರೆ ಮನೆಯ ಎಲ್ಲ ಕೆಲಸಗಳನ್ನೂ ಆಕೆಯೇ ಮಾಡುತ್ತಾಳೆ. ಒಲೆ ಉರಿಸಲು ಬೇಕಾದ ಕಟ್ಟಿಗೆ ಮತ್ತು ದನಗಳ ಹಟ್ಟಿಗೆ ಬೇಕಾದ ಸೊಪ್ಪನ್ನು ಆಕೆಯೇ ಕಾಡಿನಿಂದ ಸಂಗ್ರಹಿಸಿ ಕೊಡುತ್ತಾಳೆ. ಕೆಲವು ವಿಧದ ಕಾಡುತ್ಪತ್ತಿಗಳನ್ನು (ಉದಾ: ಜೇನು, ಬತ್ತ ಇತ್ಯಾದಿಗಳು) ಸಂಗ್ರಹಿಸಲು ಆಕೆ ನೆರವಾಗುತ್ತಾಳೆ.

ಜೀವನಾವರ್ತನದ ಅನೇಕ ಆಚರಣೆಗಳಲ್ಲಿ ಆಕೆಗೆ ಮುಖ್ಯವಾದ ಸ್ಥಾನವಿದೆ. ಜನನ, ಹೆಣ್ಣು ಮೊದಲ ಬಾರಿಗೆ ಮುಟ್ಟಾಗುವುದು, ಸೀಮಂತ, ಮದುವೆ ಮತ್ತು ಸಾವಿನ ಆಚರಣೆಗಳಲ್ಲಿ ಆಕೆಯೇ ನಿರ್ವಹಿಸಬೇಕಾದ ಹಲವು ಬಗೆಯ ಕೆಲಸಗಳಿವೆ. ಆಕೆಯೇ ಹಾಡಬೇಕಾದ, ದೀಪ ಉರಿಸಬೇಕಾದ, ಸ್ನಾನ ಮಾಡಿಸಬೇಕಾದ ಸಂದರ್ಭಗಳಿವೆ. ಮನೆ ದೈವಗಳಿಗೆ ಹರಿಕೆ ಸಲ್ಲಿಸುವಾಗ, ಕಾಲಭೈರವನಿಗೆ ಕೋಳಿ ಅಥವಾ ಹಂದಿ ಕೊಯ್ಯುವಾಗ ಆಕೆ ಗಂಡಸರೊಂದಿಗೇ ಪಾಲುಗೊಳ್ಳುತ್ತಾಳೆ. ಆಕೆಗೆ ಯಾವ ಆಚರಣೆಯಲ್ಲೂ ಪೂರ್ಣ ಮಟ್ಟದ ನಿಷೇಧ ಎಂಬುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಜೋಗಿಗಳಲ್ಲಿ ಮಹಿಳೆ ಮೂಲತಃ ಶೋಷಿತೆಯಲ್ಲ. ಜೋಗಿಗಳು ಲೈಂಗಿಕ ಪಾವಿತ್ರ್ಯವನ್ನು ಮಾನ್ಯ ಮಾಡುವುದಿಲ್ಲ. ಸಂಭೋಗವು ಅವರ ಧಾರ್ಮಿಕ ಆಚರಣೆಯಲ್ಲಿ ಒಂದಾಗಿದೆ. ಅಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನ ಪ್ರಾಪ್ತವಾಗಲು ಇದು ಮುಖ್ಯವಾದ ಕಾರಣವಾಗಿರಬೇಕು ಎನ್ನಿಸುತ್ತದೆ.

ಜೋಗಿಗಳಲ್ಲಿ ಜೀವಮಾನಕ್ಕೆ ಸಂಬಂಧಿಸಿದ ಅನೇಕ ಆಚರಣೆಗಳಿವೆ. ಹೆಣ್ಣು ಏಳು ತಿಂಗಳ ಗರ್ಭಿಣಿಯಾಗುವಾಗ ಆಕೆಯನ್ನು ಗಂಡನ ಮನೆಯಿಂದ ಮನೆಗೆ ಅಂದರೆ ತವರು ಮನೆಗೆ ಕರೆದುಕೊಂಡು ಬರುತ್ತಾರೆ. ಮದುವೆಯ ಸಂದರ್ಭದಲ್ಲಿ

ವರನ ಕಡೆಯವರು ತೆರ ನೀಡಿರದಿದ್ದರೆ ಆಕೆ ತನ್ನ ತಂದೆಯ ಮನೆಯಲ್ಲಿಯೇ ಇರುತ್ತಾಳಾದ್ದರಿಂದ ಕರೆದುಕೊಂಡು ಬರುವ ಪ್ರಶ್ನೆಯೇ ಇಲ್ಲ. ಆಕೆ ಏಳು ತಿಂಗಳ ಗರ್ಭಿಣಿಯಾಗಿರುವಾಗ ಸೀಮಂತವನ್ನು ವೈಭವದಿಂದ ಆಚರಿಸುತ್ತಾರೆ. ನಿಶ್ಚಿತ ದಿನದಂದು ಗರ್ಭಿಣಿಯು ಬೆಳಿಗ್ಗೆ ಎದ್ದು ಸ್ನಾನ ಮಾಡಿ, ಅಂಗಳದಲ್ಲಿ ಭೈರವನ ಪೂಜೆ ಮಾಡಬೇಕು. ಈ ಬಗ್ಗೆ ನಂಜುಂಡಯ್ಯ ಮತ್ತು ಅನಂತ ಕೃಷ್ಣ ಅಯ್ಯರ್ ಅವರ ವರದಿಯು ಸರಿಯಾದುದು.

"On a Tuesday or a Friday, selected for this worship, the pregnant woman bathes in the morning and fasts till evening, in front of her hut, four stakes are driven in to the ground at the corners of a rectangle. A cloth is stretched on them so as to form a cradle. A pot of toddy with a coloured thread tied to its rim is placed near it and worshipped with flowers and Kunkuma powder and a pig is sacrificed. An egg is rocked in the cradle and the goddess is invoked to bring about a safe delivery.

A dinner is given for which a sum of three rupees is spent in providing toddy. The ommission of this ceremony is not only believed to cause risk to danger to the woman at the time of delivery but also subjects the family to fine of ten rupees to the caste (Nanjundayya M.V. and Anantha Krishna Iyer L.K. 1930 : 495).

ಈ ಬಗೆಯ ವಿವರಣೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಮಗು ಹುಟ್ಟಿದ ಮೇಲೆ 5 ದಿನಗಳವರೆಗೆ ಹೊಲೆಯನ್ನು ಆಚರಿಸುತ್ತಾರೆ. ಆಕೆಯನ್ನು ಮತ್ತು ಮಗುವನ್ನು ಮನೆಯಲ್ಲಿ ಪ್ರತ್ಯೇಕ ಕೋಣೆಯೊಂದರಲ್ಲಿ ಇರಿಸುವರು. ಸೂಲಗಿತ್ತಿ ಮಾತ್ರ ಅಲ್ಲಿಗೆ ಹೋಗಬಹುದು. ಬೇರಾರಿಗೂ ಅಲ್ಲಿ ಪ್ರವೇಶವಿಲ್ಲ. ಗಂಡು ಮಗು ಹುಟ್ಟಿದರೆ ಎಂಟಾಣೆ ಹಣವನ್ನು ಗುರುಮಠಕ್ಕೆ ಕಳಿಸುತ್ತಾರೆ. ಹೆಣ್ಣು ಮಗು ಹುಟ್ಟಿದ್ದರೆ ನಾಲ್ಕಾಣೆಯನ್ನು ಕಳಿಸುತ್ತಾರೆ. 5ನೇ ದಿನ ಊರಿನ ಮಹಿಳೆಯರು, ಮತ್ತು ಜಾತಿಯ ಹಿರಿಯರು ಆ ಮನೆಯಲ್ಲಿ ಒಟ್ಟು ಸೇರುವರು. ಆ ದಿನ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸುವರು. ಬಂದವರೆಲ್ಲ ದೇವರಿಗೆ ಕೈಮುಗಿದು ಮಗುವಿಗೆ ಒಳಿತಾಗಲೆಂದು ಹಾರೈಸಿ, ಆ ಮಗುವಿಗೆ ಏನಾದರೂ ಕಾಣಿಕೆಯನ್ನು ಕೊಡುವರು. ಗುರು ಮಠದಿಂದ ತರಲಾದ ಪವಿತ್ರ ನೀರನ್ನು (ತೀರ್ಥ) ಮನೆಯ ಎಲ್ಲೆಡೆಗೆ ಚಿಮುಕಿಸುವರು. ಅನಂತರ ಕಳ್ಳು ಸೇವಿಸಿ, ಮಾಂಸಾಹಾರದ ಊಟ ಮಾಡುವರು. ಸೂಲಗಿತ್ತಿಗೆ ಸೀರೆಯೊಂದನ್ನು ಉಡುಗೊರೆಯಾಗಿ ನೀಡುವರು. ಹುಟ್ಟಿದ ಮಗು ಸತ್ತುಹೋಗಿ, ಅನಂತರ ಪುನಃ ಮಗು ಹುಟ್ಟಿದರೆ, ಆ ಮಗು ಸಾಯಬಾರದೆಂದು ಹುಟ್ಟಿದ ತಕ್ಷಣ ಮಗುವಿನ ಮೂಗಿನ ಒಂದು ಬದಿಯನ್ನು ಸ್ವಲ್ಪ

ಸೀಳಿ ಬೀಡುತ್ತಾರೆ. ಅಲ್ಲಿಗೆ ಅನಂತರ ಚಿನ್ನದ ರಿಂಗನ್ನು ಇಡುವರು. ಮಗು ಹುಟ್ಟಿದ ಐದನೇ ದಿನದಂದು ಮಗುವಿಗೆ ಹೆಸರಿಡುವರು. ಮಗು ಹುಟ್ಟಿದ 11ನೇ ಅಥವಾ 16ನೇ ದಿನ ಮಗುವಿಗೆ ಅನ್ನ ಕೊಡುತ್ತಾರೆ ಮತ್ತು ತೊಟ್ಟಿಲಿಗೆ ಹಾಕುತ್ತಾರೆ. ಆ ದಿನ ಮಗುವಿನ ರಕ್ಷಣೆಗೆಂದು ಮಂತ್ರಿಸಿದ ತಾಯತಗಳನ್ನು ಮಗುವಿಗೆ, ತೊಟ್ಟಿಲಿಗೆ ಕಟ್ಟುವರು. ಮುಂದೆ 40 ದಿನಗಳ ಕಾಲ ಹೆತ್ತಾಕೆಯನ್ನು ಅತ್ಯಂತ ಮುತುವರ್ಜಿಯಿಂದ ನೋಡಿಕೊಳ್ಳುತ್ತಾರೆ. ಆಕೆಯನ್ನು ದಿನಕ್ಕೆರಡುಬಾರಿ ಬಿಸಿ ನೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ಆಕೆಗೆ ಬಗೆಬಗೆಯ ನಾರು-ಬೇರುಗಳನ್ನು ತಂದು ಕಷಾಯ ಮಾಡಿ ಕುಡಿಯಲು ಕೊಡುತ್ತಾರೆ. ನೀರನ್ನು ಮಾತ್ರ ಕುಡಿಯಲು ಕೊಡುವುದೇಇಲ್ಲ. ನಲ್ವತ್ತು ದಿನಗಳ ಅನಂತರ ಮನೆಕೆಲಸಗಳನ್ನು ಮಾಡುತ್ತಾಳೆ.

ಹುಡುಗಿ ಮೊದಲಬಾರಿಗೆ ಮುಟ್ಟಾದಾಗ, ಜೋಗಿಗಳು ಐದು ದಿನದ ಹೊಲೆಯನ್ನು ಆಚರಿಸುತ್ತಾರೆ ಮುಟ್ಟಾದ ತಕ್ಷಣ ಆಕೆ ಫಲ ಬಿಡುವ ಯಾವುದಾದರೂ ಒಂದು ಮರದ ಕೆಳಗೆ (ಉದಾ: ಹಲಸಿನ ಮರ) ಕುಳಿತುಕೊಳ್ಳುತ್ತಾಳೆ. ಅದನ್ನು ಕಂಡ ಮನೆಯ ಹೆಂಗಸರು ನೆರಕರೆಯ ಮುತ್ತೈದೆಯರಿಗೆ ಸುದ್ದಿ ಕೊಡುತ್ತಾರೆ. ಅವರೆಲ್ಲರೂ ಬರುತ್ತಾರೆ ಜೋಗಿಗಳ ಯಜಮಾನನಿಗೆ, ಬುದ್ಧಿವಂತನಿಗೆ, ಕೋಲ್ಕಾರರಿಗೆ ಸುದ್ದಿ ಮುಟ್ಟಿಸುತ್ತಾರೆ. ಅವರಲ್ಲಿ ಕೆಲವರು ಬರುತ್ತಾರೆ. ಆ ದಿವಸ ಹುಡುಗಿಗೆ ಸ್ನಾನ ಮಾಡಿಸಿ, ಮನೆಯ ಹೊರಗಡೆ ಆಕೆ ಇರಲು ವ್ಯವಸ್ಥೆ ಮಾಡುತ್ತಾರೆ. ಮುಂದಿನ ದಿನಗಳಲ್ಲಿ ಊರವರೆಲ್ಲ ಆಕೆಗೆ ಬಗೆಬಗೆಯ ತಿಂಡಿಗಳನ್ನು ತಿನ್ನಲು ತಂದುಕೊಡುತ್ತಾರೆ. ಇದರಲ್ಲಿ 'ಸೆನ್ನಕ್ಕಿ' ಎಂಬ ತಿಂಡಿಯನ್ನು ಬಹುತೇಕ ಜನ ತಂದುಕೊಡುತ್ತಾರೆ. ಅಕ್ಕಿಯನ್ನು ಚೆನ್ನಾಗಿ ಹುರಿದು, ಪುಡಿಮಾಡಿ, ಬೆಲ್ಲ ಮತ್ತು ತೆಂಗಿನಕಾಯಿಯನ್ನು ಸೇರಿಸಿ, ಸೆನ್ನಕ್ಕಿಯನ್ನು ಮಾಡುತ್ತಾರೆ. ಐದನೇ ದಿನ ಮತ್ತೆ ಊರವರೆಲ್ಲ ಒಟ್ಟು ಸೇರುತ್ತಾರೆ. ವಿಶೇಷವಾಗಿ ಹೆಂಗಸರು ಸೇರುತ್ತಾರೆ. ಆ ದಿವಸ ಮಡಿವಾಳ್ತಿ (Washer Woman)ಯೂ ಅಲ್ಲಿಗೆ ಬರುತ್ತಾಳೆ. ಅಂಗಳದ ಒಂದು ಮೂಲೆಯಲ್ಲಿ ಹುಡುಗಿಯನ್ನು ನಿಲ್ಲಿಸುತ್ತಾರೆ. ಆಕೆಯ ತಲೆಯಿಂದ ಕಾಲಿನವರೆಗೆ ಉದ್ದಕ್ಕೆ ಒಂದು ನೂಲು ಕಟ್ಟುತ್ತಾರೆ. ಅನಂತರ ಅಡ್ಡವಾಗಿ ಇಟ್ಟ ಒಂದು ಒನಕೆಯನ್ನು ದಾಟಲು ಹೇಳುತ್ತಾರೆ. ವೀಳ್ಯ ತಿನ್ನಲು ಕೊಟ್ಟು, ಅನ್ನವನ್ನು ಕಾಗೆಗಳಿಗೆ ಕೊಡಲು ಹೇಳುತ್ತಾರೆ. ಅಲ್ಲಿಂದ ನೇರವಾಗಿ ನೀರಿರುವ ಸ್ಥಳಕ್ಕೆ (ಉದಾ: ಬಾವಿ ಕಟ್ಟೆ ಅಥವಾ ನದಿಯ ಬದಿಗೆ) ಬರುತ್ತಾರೆ. ಅಲ್ಲಿ 5 ಮಡಕೆಗಳನ್ನು ಇಟ್ಟು, ಅದಕ್ಕೆ ಹಾಲು ಹೊಯ್ದು, ಮಾವಿನ ಎಲೆ ಕಟ್ಟಿ, ಕೈ ಮುಗಿಯಲು ಹೇಳುತ್ತಾರೆ. ಈ ಮಡಕೆಗೆ 'ಪೇರಸಾಲೆ' ಎಂದು ಹೆಸರು. ಈ ಕ್ರಿಯೆಗೆ 'ಗುಂಭ ಪೂಜೆ' ಎಂದು ಹೆಸರು. ಅನಂತರ ಹುಡುಗಿಯನ್ನು ಮನೆಯ ಒಳಕ್ಕೆ ಕರೆದುಕೊಂಡು ಹೋಗಿ, ಅಡುಗೆ ಮನೆಯಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸುತ್ತಾರೆ. ಸೇರಿದವರೆಲ್ಲ ಆಕೆಯ ನೈಮೇಲೆ ಅಕ್ಕಿಯನ್ನು ಹಾಕಿ (ತಳಿದು) ಹಣ ಮತ್ತು ವಸ್ತುವಿನ ರೂಪದಲ್ಲಿ ಉಡು

ಗೊರೆ ನೀಡುತ್ತಾರೆ. ಎಲ್ಲ ಉಡುಗೊರೆ ಆದ ಮೇಲೆ ಹುಡುಗಿಯನ್ನು ಮನೆಯೊಳಗೆ ಮತ್ತು ಹೊರಗೆ ಕರೆದುಕೊಂಡು ಹೋಗಿ, ಎಲ್ಲ ವಸ್ತ್ರಗಳನ್ನು ಮುಟ್ಟಲು ಹೇಳುತ್ತಾರೆ. ಅನಂತರ ಸೇರಿದವರೆಲ್ಲ ಕಳ್ಳುಕುಡಿದು, ಮಾಂಸದೂಟ ಮಾಡುತ್ತಾರೆ. ಅದೇ ದಿನ ಸಂಜೆ ಹುಡುಗಿಯು ಸೋದರಮಾವ (ತಾಯಿಯ ಸಹೋದರ) ಆಕೆಯನ್ನು ತನ್ನೊಂದಿಗೆ ಕರೆದುಕೊಂಡು ಹೋಗುತ್ತಾನೆ. ಆತ ತನ್ನ ಮನೆಯಲ್ಲಿ ಬಗೆ ಬಗೆಯ ತಿಂಡಿಗಳನ್ನು ಮಾಡಿಸಿ, ಆಕೆಗೆ ತಿನ್ನಿಸಿ, ಕೆಲವು ದಿನಗಳಲ್ಲಿ ಆಕೆಯನ್ನು ಹಿಂದೆ ಕಳಿಸುತ್ತಾನೆ. ಸಾಮಾನ್ಯವಾಗಿ ಸೋದರ ಮಾವನಿಗೂ ಈಕೆಗೂ ವಿನೋದ ಸಂಬಂಧ ಇರುತ್ತದೆ.

ತಿಂಗಳ ಮುಟ್ಟುವಿನಲ್ಲಿ ಜೋಗಿ ಹೆಂಗಸರು ಮೂರು ದಿನಗಳ ಹೊಲೆಯನ್ನು ಆಚರಿಸುತ್ತಾರೆ. ನಾಲ್ಕನೇ ದಿನ ಸ್ನಾನ ಮಾಡಿ ಪ್ರವೇಶಿಸುತ್ತಾರೆ.

ಜೋಗಿಗಳು ಸತ್ತವರನ್ನು ಮಣ್ಣಲ್ಲಿ ಹೂಳುತ್ತಾರೆ. ಸತ್ತ ತಕ್ಷಣ ಊರವರಿಗೆಲ್ಲ ಸುದ್ದಿ ಕಳುಹಿಸುತ್ತಾರೆ. ಊರವರು ಸಂಬಂಧಿಕರೆಲ್ಲ ಬಂದು ಸೇರಿದ ನಂತರ ಹೆಣಕ್ಕೆ ಸ್ನಾನ ಮಾಡಿಸುತ್ತಾರೆ. ಹಳೆ ಬಟ್ಟೆಯನ್ನು ತೆಗೆದು, ಹೆಣಕ್ಕೆ ಹೊಸ ಬಟ್ಟೆ ಹಾಕುತ್ತಾರೆ. ಬಿಳಿ ಬಟ್ಟೆ ಹೊದಿಸುತ್ತಾರೆ. ಹಣೆಗೆ ವಿಭೂತಿ ಹಾಕುತ್ತಾರೆ. ಬಿದಿರಿನ ಚಟ್ಟದಲ್ಲಿ ಒಂದು ಮಂಟಪವನ್ನು ಸಿದ್ಧಪಡಿಸಿ, ಅದರಲ್ಲಿ ಹೆಣವನ್ನು ಕುಳ್ಳಿರಿಸುತ್ತಾರೆ. ಅನಂತರ ಬಂದವರೆಲ್ಲರೂ ಹೆಣಕ್ಕೆ ಸುತ್ತು ಬರುತ್ತಾ, ಹೆಣಕ್ಕೆ ಅಕ್ಕಿಯನ್ನು ತಳಿಯುತ್ತಾರೆ. ಇವರಲ್ಲಿ ಒಬ್ಬನು ಬೇಯಿಸಿದ ಅನ್ನವನ್ನು ಒಂದು ಮಡಕೆಗೆ ಹಾಕಿ ಸಿದ್ಧಪಡಿಸುತ್ತಾನೆ. ಅದು ಸಾಲಿನ ಮುಂದುಗಡೆ ಇರುವಂತೆ ಯಾರಾದರೊಬ್ಬರು ಹಿಡಿದುಕೊಳ್ಳುತ್ತಾರೆ. ಉಳಿದವರು ಹೆಣವನ್ನು ಹೆಗಲಲ್ಲಿ ಹೊತ್ತುಕೊಳ್ಳುತ್ತಾರೆ. ವಾದ್ಯ ಸಮೇತ ಮೆರವಣಿಗೆಯನ್ನು ಹೆಣ ಹೂಳುವ ಓನಕ್ಕೆ ಕೊಂಡೊಯ್ಯುತ್ತಾರೆ. ಅಲ್ಲಿ ಗುಂಡಿ ತೆಗೆದು, ಹೆಣವನ್ನು ಆ ಹೊಂಡಕ್ಕೆ ಮೂರು ಸುತ್ತು ತಂದು ದಕ್ಷಿಣಾಭಿಮುಖವಾಗಿ ಕುಳ್ಳಿರಿಸುತ್ತಾರೆ. ಹೆಣದ ಮೈಮೇಲಿರುವ ಆಭರಣವನ್ನೆಲ್ಲ ತೆಗೆಯುವರು, ವಿಶೇಷವಾಗಿ ಕಿವಿಯಲ್ಲಿರುವ ಕುಂಡಲವನ್ನು ತೆಗೆಯಲಾಗುವುದು. ಅನಂತರ ಜೀವ ಇರುವ ಒಂದು ಚಿಕ್ಕ ಕೋಳಿಮರಿ ಮತ್ತು ಉಪ್ಪನ್ನು ಹೆಣದ ಭುಜದ ಭಾಗದಲ್ಲಿ ಇರಿಸುತ್ತಾರೆ, ಬಾಳೆ ಎಲೆಯೊಂದನ್ನು ಕುಳ್ಳಿರಿಸಿದ ಹೆಣದ ತಲೆಯ ಮೇಲೆ ಕವುಚಿ ಹಾಕಿ, ಹೊಂಡವನ್ನು ನಿಧಾನವಾಗಿ ಮುಚ್ಚುತ್ತಾ ಬರುವರು. ಪೂರ್ತಿ ಮುಚ್ಚಿದ ಮೇಲೆ, ನೆಲಕ್ಕೆ ಮೇಲೆ ಕಾಣುವಂತೆ ಒಂದು 'ಗುಪ್ಪೆ'ಯನ್ನು ಮಾಡುವರು. ಆ ಗುಪ್ಪೆಯ ಎದುರಿನಲ್ಲಿ ಸ್ವಲ್ಪ ವಿಭೂತಿ, ವೀಳ್ಯದೆಲೆ ಅಡಿಕೆ ಮತ್ತು ಕಳ್ಳನ್ನು ಇಟ್ಟು, ಚಿಕ್ಕ ದೀಪ ಉರಿಸಿಟ್ಟು, ಕೈಮುಗಿದು ಎಲ್ಲರೂ ಹಿಂದಿರುಗುತ್ತಾರೆ. ಸ್ನಾನ ಮಾಡಿ, ಮನೆಯೊಳಗೆ ಹೆಣ ಇದ್ದ ಜಾಗದಲ್ಲಿ ಚಿಕ್ಕ ದೀಪವೊಂದನ್ನು ಉರಿಸಿಟ್ಟು ಕಳ್ಳು ಕುಡಿದು, ಊಟ ಮಾಡುವರು.

ಸತ್ತ ಮೂರನೇ ದಿವಸ ಅನ್ನ, ಪೊಟ್ಟು, ರೊಟ್ಟಿ, ಮೀನು, ಕೋಳಿ ಮಾಂಸ, ಮತ್ತಿತರವುಗಳನ್ನು ಬಾಳೆ ಎಲೆಯಲ್ಲಿ ಹಾಕಿಟ್ಟು, ಹೆಣವನ್ನು ಹೂಳಿದ್ದ ಜಾಗಕ್ಕೆ

ತರುವರು. ಅಲ್ಲಿರುವ ಗುಪ್ಪೆಗೆ ಮೂರು ಸುತ್ತು ಬಂದು, ತಂದಿದ್ದನ್ನು ಅದರ ಎದುರಿಗೆ ಇರಿಸಿ, ಕೈಮುಗಿದು 'ಬಂದು ತಿಂದು ಹೋಗು' ಎಂದು ಪ್ರಾರ್ಥಿಸಿ, ಅಲ್ಲಿಂದ ಸ್ವಲ್ಪ ದೂರ ಹೋಗಿ, ಗುಪ್ಪೆಗೆ ಬೆನ್ನು ಹಾಕಿ ನಿಲ್ಲುವರು. ಸ್ವಲ್ಪ ಹೊತ್ತಿನ ಅನಂತರ ಹಿಂದಿರುಗಿ ಬಂದು, ತಂದಿರುವ ತಿಂಡಿಗಳನ್ನೆಲ್ಲ ಮತ್ತೆ ಎತ್ತಿಕೊಂಡು ಬಂದು ಹೊಳೆಗೆ ಎಸೆಯುವರು. ಸ್ನಾನ ಮಾಡಿ ತಮ್ಮ ತಮ್ಮ ಮನೆಗೆ ಹೋಗುವರು.

ಸತ್ತ 11ನೇ ದಿನದಂದು ತಿಥಿ ಆಚರಣೆ ಮಾಡುತ್ತಾರೆ. ಇದಕ್ಕೆ 'ದಿವಸ ಮಾಡುವುದು' ಎಂದು ಹೆಸರು. ಆ ದಿನ ಇಡೀ ಮನೆಯನ್ನು ಸಗಣಿಸಾರಿಸಿ ಶುದ್ಧ ಮಾಡುವರು. ಹಳೆ ಮಡಕೆಗಳನ್ನೆಲ್ಲ ಎಸೆದು ಹೊಸ ಮಡಿಕೆಗಳನ್ನು ತರುವರು. ಸತ್ತವನ ಹಿರಿಯ ಮಗನು ತಲೆಯನ್ನು ನುಣ್ಣಗೆ ಬೋಳಿಸಿ ಸಾವಿಗೆ ಸಂಬಂಧಿಸಿದ ಕ್ರಿಯೆಗಳನ್ನು ನೆರವೇರಿಸಿಕೊಂಡು ಹೋಗಲು ಬದ್ಧನಾಗುತ್ತಾನೆ. ಆತ ಕೊರಳಿಗೆ ಬಿಳಿಯ ಬಟ್ಟೆಯ ಚೂರೊಂದನ್ನು ಕಟ್ಟಿಕೊಳ್ಳುತ್ತಾನೆ. ಮೊದಲು ಬಗೆಬಗೆಯ ಮಾಂಸದ ಪದಾರ್ಥಗಳನ್ನು ಮಾಡಿ ಹೆಣ ಹೂಳಿದ ಜಾಗಕ್ಕೆ ಹೋಗುವರು. ಹೆಣ ಹೂತಲ್ಲಿಗೆ ಬಿಳಿ ಬಟ್ಟೆ ಹೊದಿಸುವರು. ತಂದ ತಿಂಡಿಗಳನ್ನು ಎದುರಿಗೆ ಇಡುವರು. ಸತ್ತವನ ಹೆಂಡತಿ ಇದ್ದರೆ ಆಕೆಯ ಕೈಯಲ್ಲಿರುವ ಬಳೆಗಳನ್ನು ಈ ದಿನ ಒಡೆಯುವರು. ತಾಳಿಯನ್ನು ಬಿಚ್ಚುವರು, ಕಿವಿ ಮತ್ತು ಮೂಗಲ್ಲಿ ಆಭರಣ ಇದ್ದರೆ ಅದನ್ನು ತೆಗೆಯಲಾಗುವುದು. ವಿಧವೆಯು ಒಂದು ಬಿಳಿ ಬಟ್ಟೆಯನ್ನು ಸಮಾಧಿಗೆ ಹೊದಿಸಬೇಕು.

ಅನಂತರ ತಾವು ತಂದ ತಿಂಡಿಯನ್ನು ಅಲ್ಲಿಯೇ ಇಟ್ಟು, ಈಗಾಗಲೇ ಸತ್ತು ಹೋದ ಹಲವು ಹಿರಿಯರು ಅದನ್ನು ಸ್ವೀಕರಿಸುವಂತೆ ಪ್ರಾರ್ಥಿಸುವರು. ಹಲವರ ಹೆಸರು ಹೇಳಿ ಕರೆಯುತ್ತಾರೆ. ಸ್ವಲ್ಪ ಹೊತ್ತಿನ ಅನಂತರ ಬಂದವರೆಲ್ಲ ಒಟ್ಟು ಸೇರಿ ತಂದ ತಿಂಡಿಯನ್ನು ಅಲ್ಲಿಯೇ ಕುಳಿತು ತಿನ್ನುವರು (ಕೆಲವು ಕಡೆಗಳಲ್ಲಿ ಅದನ್ನು ಹೊಳೆಗೆ ಬೀಸಾಡುವ ಕ್ರಮವೂ ಇದೆ). ಸ್ನಾನ ಮಾಡಿ ಮನೆಗೆ ಬರುವರು. ದಾರಿಯಲ್ಲಿ ಸಗಣಿಯನ್ನು ಮೆಟ್ಟಿ ತಮ್ಮನ್ನು ತಾವೇ ಶುದ್ಧಗೊಳಿಸಿಕೊಳ್ಳುವರು. ಸತ್ತವನ ಮನೆಯವರೆಲ್ಲ ವೀಳ್ಯ ತಿನ್ನುವಂತೆ ಹೇಳಲಾಗುವುದು. ಊರವರು ವೀಳ್ಯವನ್ನು ತಂದು ಕೊಡುತ್ತಾರೆ. ಅದನ್ನು ತಿಂದು ಉಗಿಯಬೇಕು. ಹೀಗೆ ಮಾಡಿದರೆ ಸಾವಿನ ಮೈಲಿಗೆ ಕಳೆದು ಹೋಗುತ್ತದೆ.

ಆ ದಿವಸ ರಾತ್ರಿ ಹಂದಿ, ಕೋಳಿ, ಆಡು ಅಥವಾ ಕುರಿಯನ್ನು ಕೊಂದು, ಮಾಂಸ ಮಾಡಿ, ಬೇಯಿಸಿ, ಕಳ್ಳು ಸೇರಿಸಿ ಭೈರವನಿಗೆ ಅರ್ಪಿಸುತ್ತಾರೆ; ಕೈ ಮುಗಿಯುತ್ತಾರೆ. ಅನಂತರ ಅದನ್ನು ತಿಂದು, ಕುಡಿದು, ಭಂಗಿ ಸೇದಿ ಜೋಗಿಗಳೆಲ್ಲ ಮೈಮರೆಯುತ್ತಾರೆ. ಇಲ್ಲಿ ಗಂಡಸರು ಹೆಂಗಸರು ವ್ಯತ್ಯಾಸ ಇಲ್ಲ. ಸತ್ತು ಒಂದು ತಿಂಗಳಾಗುವಾಗ ಇನ್ನೊಮ್ಮೆ ಎಲ್ಲರೂ ಸೇರಿ ಊಟ ಮಾಡುತ್ತಾರೆ. ಇಲ್ಲಿಗೆ ಸಾವಿನ ಕ್ರಿಯೆಗಳೆಲ್ಲ ಮುಗಿಯುತ್ತದೆ. ಒಂದು ತಿಂಗಳಾದ ಅನಂತರ ಸತ್ತವರಿಗೆ ಯಾವ ಕ್ರಿಯೆಯೂ ಇಲ್ಲ. ಶ್ರಾದ್ಧದಂಥ ಆಚರಣೆಗಳು ಜೋಗಿಗಳಲ್ಲಿ ಇಲ್ಲ. ಜೀವದಲ್ಲಿದ್ದಾಗ ತುಂಬ

ಉಪದ್ರವ ಕೊಡುತ್ತಿದ್ದವನು ಸತ್ತ ಮೇಲೂ ಪೀಡೆ ನೀಡುತ್ತಾನೆ ಎಂದು ಅವರು ಭಾವಿಸುತ್ತಾರೆ. ಅನೇಕ ಆಶೆಗಳನ್ನು ಇಟ್ಟುಕೊಂಡು ಸತ್ತವರೂ ಆಗಾಗ ಮನೆಗೆ ಬಂದು ಉಪದ್ರವ ನೀಡುತ್ತಾರೆಂದೂ ಅವರು ಭಾವಿಸುತ್ತಾರೆ.

ಸಾವಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲು ಅವರು ಸಿದ್ಧರಿಲ್ಲ.

ಜೋಗಿಗಳ ಒಳಾಡಳಿತ :

ಜೋಗಿಗಳಿಗೆ ತಮ್ಮದೇ ಆದ ಆಡಳಿತ ವ್ಯವಸ್ಥೆಯಿದೆ. ಸ್ವಾತಂತ್ರ್ಯೋತ್ತರ ಭಾರತದ ಆಡಳಿತ ವಿಧಾನವನ್ನು ಅವರು ಒಪ್ಪಿಕೊಂಡಿದ್ದರೂ, ತಮ್ಮ ಒಳಾಡಳಿತದ ವಿಧಿವಿಧಾನಗಳನ್ನು ಅವರು ಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ.

ಇವರ ಒಳಾಡಳಿತದ ಮೇಲ್ತುದಿಯಲ್ಲಿ ಅನೇಕ ಮಠಗಳಿವೆ. ಕದ್ರಿಮಠ, ಆದಿ ಚುಂಚನಗಿರಿ ಮಠಗಳಲ್ಲದೆ ಕೆಲವು ಲಿಂಗಾಯುತ ಮಠಗಳಿಗೂ ಇವರು ನಡೆದುಕೊಳ್ಳುತ್ತಾರೆ. ಈ ಮಠದ ಪ್ರತಿನಿಧಿಗಳು ಪ್ರತಿ ಮೂರು ವರ್ಷಕ್ಕೊಮ್ಮೆ ಜೋಗಿಗಳಿಂದ ಹಣ ವಸೂಲಿ ಮಾಡುತ್ತಾರೆ. ಇದಲ್ಲದೆ ಮದುವೆಯ ಸಂದರ್ಭದಲ್ಲಿಯೂ ನಿಗದಿತ ಶುಲ್ಕವನ್ನು ಗುರುಮಠಕ್ಕೆ ಸಂದಾಯ ಮಾಡಬೇಕಾಗುತ್ತದೆ. ಮಠದ ಪ್ರತಿನಿಧಿಗಳಲ್ಲದೆ, ಕೆಲವು ಊರುಗಳನ್ನು ಗಮನದಲ್ಲಿರಿಸಿಕೊಂಡು, ಅವರ ಯೋಗಕ್ಷೇಮ ವಿಚಾರಿಸಿಕೊಳ್ಳಲು ಅಲ್ಲಿ ಒಬ್ಬ 'ಯಜಮಾನ' ಇರುತ್ತಾನೆ. ಈತ ಜೋಗಿಗಳ ಮಟ್ಟಿಗೆ ನ್ಯಾಯಾಧೀಶನ ಕೆಲಸವನ್ನು ನಿರ್ವಹಿಸುತ್ತಾನೆ. ಜೋಗಿಗಳನ್ನು ಜಾತಿಯಿಂದ ಹೊರಗೆ ಹಾಕಲೂ ಆವನಿಗೆ ಹಕ್ಕಿದೆ. ಹಾಗೆ ಬೇರೆಯಾರಾದರೂ ಜಾತಿಗೆ ಸೇರುವುದಿದ್ದರೆ, ಗುರುಮಠಕ್ಕೆ ಹಣ ವಸೂಲಿ ಮಾಡಿ, ಅವರನ್ನು ಜಾತಿಗೆ ಸೇರಿಸಿಕೊಳ್ಳುವ ಕೆಲಸವನ್ನೂ ಇವನೇ ಮಾಡುತ್ತಾನೆ. ಗುರುಮಠಗಳಿಂದ ಹೊರಡುವ ಯಾವುದೇ ನಿರೂಪವನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು 'ಯಜಮಾನ' ಮಾಡಬೇಕಾಗುತ್ತದೆ.

ಯಜಮಾನನ ಕೈಕೆಳಗೆ ಅನೇಕ ಜನ 'ಬುದ್ಧಿವಂತರು' ಇರುತ್ತಾರೆ. ಇವರನ್ನು ಯಜಮಾನರೇ ನೇಮಕ ಮಾಡುತ್ತಾರೆ. ಇವರು ಯಜಮಾನನ ಅನುಪಸ್ಥಿತಿಯಲ್ಲಿ ಯಜಮಾನನಂತೇ ಕಾರ್ಯನಿರ್ವಹಿಸುತ್ತಾರೆ. ಅಲ್ಲದೆ ಯಜಮಾನ ಹೇಳಿದ ಕೆಲಸಗಳನ್ನು ಮಾಡುತ್ತಾರೆ. ಗುರುಮಠಕ್ಕೆ ಹಣ ಸಂಗ್ರಹಿಸುವ ಕೆಲಸವೇ ಇವರಿಗೆ ಪ್ರಧಾನವಾದುದು. ಹಾಗೇ ಜೋಗಿಗಳ ಒಳಜಗಳವನ್ನು ತೀರ್ಮಾನಿಸುವುದು, ತನ್ನಿಂದ ಅಸಾಧ್ಯವಾದ ಕೆಲಸವನ್ನು ಆತ ಯಜಮಾನನಿಗೆ ತಿಳಿಸುತ್ತಾನೆ. ಯಜಮಾನನ ಒಪ್ಪಿಗೆಯ ಮೇರೆಗೆ ಬುದ್ಧಿವಂತರು ತಮ್ಮ ಸಹಾಯಕರಾಗಿ ಕೆಲವು ಜನ 'ಕೊಲ್ಕಾರ'ರನ್ನು ನೇಮಿಸಿಕೊಳ್ಳಬಹುದು. ಇವರು ಬುದ್ಧಿವಂತರಿಗೆ ಸಹಾಯಕರು.

ಇವರಲ್ಲದೆ ನೇರವಾಗಿ ಮಠದಿಂದಲೇ ನೇಮಿಸಲ್ಪಟ್ಟ ಕೆಲವು 'ಭಂಡಾರಿ' ಗಳೂ ಇರುತ್ತಾರೆ. ಭಂಡಾರಿಗಳು ಜನರಿಗೆ 'ವಿಭೂತಿ'ಯನ್ನು ತಲುಪಿಸಬೇಕು. ಯಾರಾದರೂ ಜೋಗಿ ತಪ್ಪುಮಾಡಿ, ಅನಂತರ ಅವರನ್ನು ಶುದ್ಧಗೊಳಿಸಬೇಕಾದರೆ ಅಲ್ಲಿ ಭಂಡಾರಿ ಇರಬೇಕಾಗುತ್ತದೆ. ತಪ್ಪಿತಸ್ಥನ ಹಣೆಗೆ ಭಂಡಾರಿ ಸ್ವತಃ ವಿಭೂತಿ ಹಚ್ಚುತ್ತಾನೆ.

ಮೇಲಿನ ಎಲ್ಲ ಅಧಿಕಾರಗವೂ ವಂಶ ಪಾರಂಪರ್ಯವಾಗಿ ಬರುತ್ತದೆ. ಆದರೆ ಜನ ಇಚ್ಛಿಸಿದಲ್ಲಿ ಅವರನ್ನು ಬದಲಾಯಿಸಲು ಸಾಧ್ಯವಿದೆ. ಹಾಗೇ ಮಠಗಳೂ ಇಚ್ಛಿಸಿದಲ್ಲಿ ಅವರನ್ನು ಬದಲಾಯಿಸಬಹುದು.

ಜೋಗಿಗಳ ಒಳಾಡಳಿತವನ್ನು ಸಂಕ್ಷೇಪವಾಗಿ ಹೀಗೆ ಸೂಚಿಸಬಹುದು.

ಗುರು ಮಠಗಳು

↓

ಯಜಮಾನರುಗಳು

↓

ಬುದ್ಧಿವಂತರು

↓

ಕೋಲ್ಕಾರರು

↓

ಜನರು.

ಈ ಒಳಾಡಳಿತ ಕ್ರಮ ಈಗಲೂ ಎಷ್ಟು ಬಲಿಷ್ಠವಾಗಿದೆಯೆಂದರೆ, ಸಾಮಾನ್ಯವಾಗಿ ಜೋಗಿಗಳು ಕೋರ್ಟಿಗೆ ಹೋಗುವುದೇ ಇಲ್ಲ. ಅವರಲ್ಲಿರುವ ದಂಡನೆಗಳ ಕೆಲವು ಮಾದರಿಗಳು ಈ ಕೆಳಗಿನಂತಿವೆ.

1. ಜೋಗಿ ಇನ್ನೊಬ್ಬ ಜೋಗಿಯನ್ನು ಬೈದರೆ, ಅಥವಾ ಹೊಡೆದರೆ ಗುರುಮಠಕ್ಕೆ 15 ರಿಂದ 25 ರೂ. ದಂಡ ತೆರಬೇಕು.
2. ಮದುವೆಯಾದ ಹೆಂಗಸು ಒಂದು ರಾತ್ರಿ ಮನೆಯ ಹೊರಗಡೆ ಎಲ್ಲಿಯೋ ಉಳಿದಿದ್ದರೆ—5 ರೂ. ದಂಡ ತೆರಬೇಕು.
3. ವಿವಾಹಿತ ಸ್ತ್ರೀಯ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡ ಗಂಡಸು ತಪ್ಪು ಕಾಣಿಕೆ ರೂ. 35ನ್ನು ತೆರಬೇಕು.
4. ಮದುವೆಯಾಗದೆ, ಹುಡುಗಿಯೊಬ್ಬಳನ್ನು ಲೈಂಗಿಕ ಸುಖಕ್ಕಾಗಿ ಇಟ್ಟುಕೊಂಡಿದ್ದರೆ ರೂ. 100–00 ದಂಡ ತೆರಬೇಕು.
5. ಜಾತಿಯಿಂದ ಹೊರಗೆ ದಬ್ಬಲ್ಪಟ್ಟವನು ಮತ್ತೆ ಜಾತಿಗೆ ಹಿಂದಿರುಗಬೇಕಾದರೆ ರೂ. 5–00 ದಂಡ ತೆರಬೇಕು, ಇತ್ಯಾದಿ.

ಇದು ಸುಮಾರು 50 ವರ್ಷಗಳ ಹಿಂದಿನ ವಿಷಯ ಈಗ ಇಂಥವಕ್ಕೆ ಜೋಗಿಗಳಲ್ಲೇ ಮಹತ್ತ್ವ ಇಲ್ಲ. ಏನಿದ್ದರೂ ಜೋಗಿಗಳ ಒಳಾಡಳಿತ ವ್ಯವಸ್ಥೆ ನಿಯಮಬದ್ಧವಾಗಿದೆ.

ಜೋಗಿಗಳ ಧಾರ್ಮಿಕ ವ್ಯವಸ್ಥೆ

ಜೋಗಿಗಳ ಧಾರ್ಮಿಕ ವ್ಯವಸ್ಥೆ ತುಂಬಾ ಸಂಕೀರ್ಣವಾಗಿದೆ. ಅವರಲ್ಲಿ ಬಹಳ ಜನ ಶೈವರಾಗಿದ್ದು ಲಿಂಗಾಯಿತ ಮಠಗಳಿಗೆ ನಡೆದುಕೊಳ್ಳುತ್ತಾರೆ. ಕೆಲವರು ತಿರುಪತಿಯ ವೆಂಕಟ್ರಮಣದೇವರ ಭಕ್ತರಾಗಿದ್ದುಕೊಂಡು 'ಹಂಸೇವೆ'ಯನ್ನು ಶ್ರದ್ಧೆಯಿಂದ ಮಾಡುತ್ತಾರೆ. ಇನ್ನು ಕೆಲವರು ಕುಲದೈವವಾಗಿ ಕಾಲಭೈರವನನ್ನು ಮಾತ್ರ ಆರಾಧಿಸಿಕೊಂಡಿದ್ದಾರೆ. ಕಾಮನ ಹುಣ್ಣಿಮೆಯಲ್ಲಿ ಆದಿಚುಂಚನಗಿರಿ ಜಾತ್ರೆ ನಡೆಯುತ್ತದೆ. ಅಲ್ಲಿ ಜೋಗಿಗಳು ಸಂಭ್ರಮದಿಂದ ಪಾಲ್ಗೊಳ್ಳುತ್ತಾರೆ.

ತಮಗೇನಾದರೂ ಕಷ್ಟ ಬಂದರೆ, ಆಗ ಜೋಗಿಗಳು ಭೈರವನಿಗೆ ಕೈಮುಗಿದು, ಕುರಿ-ಕೋಳಿ ಕೊಯ್ದು ರಕ್ಷಣೆಗಾಗಿ ಪ್ರಾರ್ಥಿಸುತ್ತಾರೆ. ಇದನ್ನು 'ಭುಕ್ತಿ' ಮಾಡುವುದು ಎನ್ನುತ್ತಾರೆ. ಊರಿಗೇ ಕಷ್ಟ ಬಂದಾಗ ಊರವರೆಲ್ಲ ಸೇರಿ ಭೈರವನಿಗೆ ಹಂದಿ ಕೊಯ್ಯುತ್ತಾರೆ. ಇವನ್ನು "ಭಂಟರ ಸೇವೆ' ಎನ್ನುವರು. ಭಂಟರ ಸೇವೆಯ ದಿನ ಊರವರಿಗೆಲ್ಲ ಕಳ್ಳು ಮತ್ತು ಮಾಂಸದ ಊಟ ನೀಡುತ್ತಾರೆ. ಇದಕ್ಕೆ 'ಪರ್ವಮಾಡುವುದು' ಎಂದು ಹೆಸರು. ಮಾರಮ್ಮ, ಅಕ್ಕಮ್ಮ, ಗಂಗಮ್ಮ ಮೊದಲಾದ ಸ್ತ್ರೀ ದೇವತೆಗಳನ್ನು ಪೂಜಿಸುವವರೂ ಇದ್ದಾರೆ.

ಜೋಗಿಗಳಲ್ಲಿ ಅಪಾರವಾದ ಜನಪದ ಹಾಡು, ಕತೆ, ಒಗಟು ಮತ್ತು ಗಾದೆಗಳಿವೆ. 'ಸಿದ್ಧವೇಶ' ಎಂಬ ಕುಣಿತದ ಪ್ರಕಾರವೂ ಇದೆ. ಕರಪಾಲ ಸಂಪ್ರದಾಯದಂತೆ ಜೋಗಿಗಳಲ್ಲಿಯೂ ಮೇಳವನ್ನು ನಡೆಸುತ್ತಾರೆ. ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ತಾಳ, ಚಿಟಗಿ, ಗಗ್ಗರ ಇಂಥ ವಾದ್ಯಗಳನ್ನು ಬಳಸುತ್ತಾರೆ. ಸಂಗೀತ-ಸಾಹಿತ್ಯ ಮತ್ತು ನೃತ್ಯವನ್ನು ಒಟ್ಟು ಸೇರಿಸುತ್ತಾರೆ. ಮಹಾಭಾರತದ ಕತೆಗಳನ್ನು ರಾತ್ರಿಯಿಡೀ ಆಕರ್ಷಕವಾಗಿ ನಿರೂಪಿಸುತ್ತಾರೆ. ಇದಲ್ಲದೆ ಅರುಣ್ಯಕೊಮಾರ, ರುದ್ರಸೇನ ರಾಜ, ಜಗತ್ಕರ್ತ ರಾಜ, ಸಂಕಿನ ಕುಮಾರ, ಅಸಾವತಿ ಇಂಥ ಕತೆಗಳನ್ನು ಹೇಳುತ್ತಾರೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ವಸ್ತುವುಳ್ಳ ಕತೆಗಳು ಇವರಲ್ಲಿವೆ.

ಈಚೆಗೆ ಎಲ್ಲ ಜನಾಂಗಗಳಂತೆ ಜೋಗಿಗಳೂ ಕೂಡಾ ಆಧುನೀಕರಣಕ್ಕೆ ಒಳಗಾಗುತ್ತಿದ್ದಾರೆ. ಅವರು ಪೇಟೆ, ಪಟ್ಟಣಗಳಲ್ಲಿ ವ್ಯವಹಾರ ನಡೆಸುತ್ತಿದ್ದಾರೆ. ವಸ್ತುಗಳ ಖರೀದಿಗೆ ಮಾರುಕಟ್ಟೆಗೆ ಹೋಗುತ್ತಿದ್ದಾರೆ. ಇತರ ಜನಾಂಗದವರೊಡನೆ ಹೊಂದಿಕೊಂಡು ಹೋಗುತ್ತಿದ್ದಾರೆ. ತಮ್ಮ ಮಕ್ಕಳನ್ನು ಓದಿಸಬೇಕೆಂಬ ಆಶೆಯನ್ನು ಹೊಂದುತ್ತಿದ್ದಾರೆ. ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದಾರೆ. ಸಾಂಪ್ರದಾಯಿಕ ಮಡಿ-ಮೈಲಿಗೆಯ ಬಗೆಗೆ ವಿಶ್ವಾಸ ಇಟ್ಟುಕೊಂಡು ಹೊಸತನಕ್ಕೆ ಒಗ್ಗಿಕೊಳ್ಳುತ್ತಿದ್ದಾರೆ. ಮೂರು ಮಕ್ಕಳು ಸಾಕೆಂಬ ಅಭಿಪ್ರಾಯ ಹೊಂದಿದ್ದಾರೆ. ಸಂತಾನ ನಿರೋಧ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದ್ದಾರೆ. ಸಾಮಾಜಿಕವಾಗಿ ತಾವು ಕೆಳಗಿರುವುದನ್ನು ಗಮನಿಸಿ ಮೇಲೆ ಬರಲು ಯತ್ನಿಸುತ್ತಿದ್ದಾರೆ.

ಒಟ್ಟಿನಿಂದ ಜೋಗಿಗಳದ್ದು ಐತಿಹಾಸಿಕವಾಗಿ ಅತ್ಯಂತ ಮಹತ್ವದ ಜನಾಂಗ. ಭಾರತೀಯ ಸಂಸ್ಕೃತಿಗೆ ಇವರ ಕೊಡುಗೆ ತೀರ ವಿಶಿಷ್ಟವಾದದ್ದು, ಅಪಾರವಾದದ್ದು.

ಮುಖ್ಯ ವ್ಯಕ್ತಿಗಳು

	ಹೆಸರು	ಪ್ರಾಯ	ಗಂಡು/ಹೆಣ್ಣು	ಸ್ಥಳ
1.	ಪುರುಷೋತ್ತಮ	52	ಗಂಡು	ಮರ್ಕಂಜ
2.	ಅಣ್ಣು ಪುರುಷ	68	ಗಂಡು	ಮರ್ಕಂಜ
3.	ರಾಮ ಪುರುಷ	44	ಗಂಡು	ಕಾಸರಗೋಡು
4.	ಚುಂಚ ಜೋಗಿ	68	ಗಂಡು	ಮರ್ಕಂಜ
5.	ಬೋರಿ	52	ಹೆಣ್ಣು	ಮರ್ಕಂಜ
6.	ಕಾಳ ಪುರುಷ	51	ಗಂಡು	ಮರ್ಕಂಜ

ಆಧಾರ ಗ್ರಂಥಗಳು—ಲೇಖನಗಳು

1. ಪುರುಷೋತ್ತಮ ಬಿಳಿಮಲೆ. "ಸಿನ್ಮವೇಶ–ಒಂದು ಅಧ್ಯಯನ : ಮಾನವಿಕ ಕರ್ನಾಟಕ ಸಂಪುಟ, 17, ಸಂಚಿಕೆ 1, 2 (ಸಂ : ಬಿ. ಕೆ. ಗುರುರಾಜರಾವ್) ಮೈಸೂರು ; ಮೈಸೂರು ವಿಶ್ವವಿದ್ಯಾನಿಲಯ, 1986–87.

2. ಬೋರಲಿಂಗಯ್ಯ, ಹಿ. ಚಿ. 'ದಾಸಪ್ಪ–ಜೋಗಪ್ಪ'. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು. 1981.

3. ಚಿದಾನಂದಮೂರ್ತಿ, ಎಂ., 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ, 1979

4. ಹಿರಿಯಣ್ಣ, ಎ., "ಕಿನ್ನರಿ ಜೋಗಿಗಳ ಸಂಪ್ರದಾಯ". ಜಾನಪದ ಸಮಾವೇಶ (ಸಂ : ಪರಮಶಿವಯ್ಯ, ಜೆ. ಎಸ್.) ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ, 1979.

5. BRIGGS GEORGE WESTON. 'Gorakhanatha and the Kanaphta Jogis'. Delhi : Motilal Banarasidas ; 1973.

6. Nanjundayya, H. V. and Anantha Krishna Iyyer. L.K., The Mysore Tribes and Castes ", Mysore : Mysore University, 1930.

ಬಿ. ನಾಗಪ್ಪ

ಸಮಾಜವಿಜ್ಞಾನ ಸಾಹಿತ್ಯದ ಇತ್ತೀಚಿನ ಪ್ರವೃತ್ತಿಗಳು

ಸಮಾಜ ವಿಜ್ಞಾನಗಳ ಹರಿವಿಡಿ ವಿಸ್ತಾರವಾದದ್ದು. ಇವು ಬಹಳ ವೇಗವಾಗಿಯೂ ಬೆಳೆಯುತ್ತಿವೆ. ಶುದ್ಧ ವಿಜ್ಞಾನಗಳನ್ನು ಬಿಟ್ಟರೆ ಬಹುತೇಕ ಸ್ಪಷ್ಟ ಹಾಗೂ ತರ್ಕಬದ್ಧ ಚಿಂತನೆಗಳು ಸಮಾಜ ವಿಜ್ಞಾನಗಳ ಶಾಖೋಪಶಾಖೆಗಳೆಲ್ಲದರಲ್ಲಿಯೂ ನಡೆಯುತ್ತಿವೆ. ನಮ್ಮ ಪುಸ್ತಕ ಮಾರುಕಟ್ಟೆಗಳಿಗೆ ಇವುಗಳಿಂದ ಹರಿದು ಬರುತ್ತಿರುವ ಪುಸ್ತಕಗಳ ಸಂಖ್ಯೆ ಪ್ರತಿವರ್ಷ ಹೆಚ್ಚುತ್ತಿದೆ. ಈವರೆಗೆ ಉತ್ಪತ್ತಿಯಾಗಿರುವ ಸಾಹಿತ್ಯ ರಾಶಿ ಎಂಥವರನ್ನೂ ದಿಗ್ಭ್ರಮೆಗೊಳಿಸುವಂತಿದೆ. ಆದರೆ, ಸಂವೇದನಾಶೀಲ ಓದುಗರು ಮತ್ತು ವಿವೇಚನಾಶೀಲ ವಿಮರ್ಶಕರು ಮಾತ್ರ ಈ ರಾಶಿಯಲ್ಲಿ ಕಾಳುಗಳಿಗಿಂತ ಜೊಳ್ಳುಗಳ ಪ್ರಮಾಣವೇ ಜಾಸ್ತಿಯಾಗಿದೆ ಎಂಬುದನ್ನು ಮನಗಾಣಬಲ್ಲರು. ಇಂತಹ ವಿಷಮತೆಯನ್ನು ತಡೆಗಟ್ಟುವ ವಿಧಾನವನ್ನು ಅವರು ಆಗಾಗ್ಗೆ ಒತ್ತಿ ಹೇಳುತ್ತಿದ್ದಾರೆ. ಪ್ರತಿಯೊಂದು ದೊಡ್ಡ ಪ್ರಕಾಶನ ಸಂಸ್ಥೆಯಲ್ಲಿ ನುರಿತ ವಿಮರ್ಶಕ ಅಥವಾ ಸಂಪಾದಕ ಮಂಡಳಿಯಿದ್ದು ಉತ್ತಮವಾದ ಪುಸ್ತಕಗಳನ್ನು ಮಾತ್ರ ಪ್ರಕಾಶಿಸಲು ಸಲಹೆಗಳನ್ನು ನೀಡುವಂತಾದರೆ ಕಳಪೆ ಸಾಹಿತ್ಯವನ್ನು ಕಡಮೆ ಮಾಡಬಹುದು ಎಂಬುದು ಅವರ ಇಂಗಿತ. ದುರಂತವೆಂದರೆ, ಈ ಬಗೆಯ ವ್ಯವಸ್ಥೆ ನಮ್ಮ ಯಾವ ಪ್ರಕಾಶಕರ ಬಳಿಯೂ ಇಲ್ಲ. ನಮ್ಮ ಈಗಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಮತ್ತು ಆಡಳಿತ ವ್ಯವಸ್ಥೆಗಳಲ್ಲಿ ಇಂಥದೊಂದು ಬೆಳವಣಿಗೆ ದುಸ್ಸಾಧ್ಯವೆಂದೇ ಹೇಳಬೇಕು. ಗ್ರಂಥಗಳ ರಚನೆ ಮತ್ತು ಪ್ರಕಾಶನ ಮಟ್ಟಗಳಲ್ಲಿ ಆ ಮೌಲ್ಯಮಾಪನ ಆಗದೇ ಹೋದರೆ–ಮುಂದೇನು? ನಮಗೆ ಇರುವ ದಾರಿ ಒಂದೇ–ಪ್ರಕಾಶನೋತ್ತರ ಅಥವಾ ಮರಣೋತ್ತರ ವಿಮರ್ಶೆ ಇಲ್ಲವೆ, ವಿಶ್ಲೇಷಣೆ. ಈಗ ನಾವು ಮಾಡುತ್ತಿರುವುದು ಅದನ್ನೇ.

ಇತ್ತೀಚೆಗೆ ಹೊರಬಂದಿರುವ ಸಮಾಜ ವಿಜ್ಞಾನಗಳ ಪುಸ್ತಕ ರಾಶಿಯನ್ನು ಕೆದಕಿ ನೋಡಿದಾಗ ಮಹಿಳೆಯರಿಗೆ ಸಂಬಂಧಿಸಿದ ಪುಸ್ತಕಗಳ ಗುಂಪು ನಮ್ಮ ಗಮನ

ಸೆಳೆಯುತ್ತದೆ. ನಮ್ಮ ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಇವರು ನಮ್ಮ ಸಮಾಜದ ದುರ್ಬಲ ವರ್ಗಕ್ಕೆ ಸೇರಿರುವುದು ಒಂದು ದೊಡ್ಡ ವಿಪರ್ಯಾಸವೇ ಸರಿ. ಆದರೂ ಅವರ ಸಮಸ್ಯೆಗಳನ್ನು ಕುರಿತು ವಿಪುಲ ಸಾಹಿತ್ಯ ಸೃಷ್ಟಿಯಾಗಿದೆ. ಅದರಲ್ಲಿ ಕುಮಾರಿ ಜಯವರ್ಧನೆಯವರ 'ಫೆಮಿನಿಸಂ ಆ್ಯಂಡ್ ನ್ಯಾಷನ್ಯಾಲಿಸಂ ಇನ್ ದಿ ಥರ್ಡ್ ವರ್ಲ್ಡ್ ಇನ್ ದಿ ನೈಂಟೀಂತ್ ಆ್ಯಂಡ್ ಅರ್ಲಿ ಟ್ವೆಂಟಿಯತ್ ಸೆಂಚುರೀಸ್' ಎಂಬ ಕೃತಿ ನಮ್ಮ ಆಸಕ್ತಿಯನ್ನು ಕೆರಳಿಸುತ್ತದೆ. ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಗಳಲ್ಲಿ ಚೀಣಾ ದೇಶವನ್ನು ಹೊರತುಪಡಿಸಿ, ಉಳಿದೆಲ್ಲಾ ತೃತೀಯ ಜಗತ್ತಿನ ದೇಶಗಳಲ್ಲಿ ಸ್ತ್ರೀ ಸ್ವಾತಂತ್ರ್ಯವಾದಕ್ಕೆ ಗೌಣ ಸ್ಥಾನವೇ ಲಭಿಸಿದೆ ಎಂಬುದು ಜಯವರ್ಧನೆಯವರ ಪ್ರತಿಪಾದನೆ. ಈ ದೇಶಗಳಲ್ಲಿನ ಪುರುಷ ಬೂರ್ಜ್ವಾ ನೇತಾರರು ತಮ್ಮ ಹೋರಾಟದ ಬಲಸಂವರ್ಧನೆಗೆ ಸ್ತ್ರೀಯರನ್ನು ಉಪಯೋಗಿಸಿಕೊಂಡು, ತಮ್ಮ ಗುರಿ ಸಾಧನೆಯಾದನಂತರ ಅವರನ್ನು ಅಡಿಗೆ ಮನೆಗೋಗೆ ತಳ್ಳಿದರೆಂದು ಅವರು ಆಪಾದಿಸುತ್ತಾರೆ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವು ಮಹಿಳೆಯರ ಸಕ್ರಿಯ ರಾಜಕೀಯ ಪ್ರವೇಶ ಹಾಗೂ ಸಾಮಾಜಿಕ ಜಾಗೃತಿಗೆ ಅನುವು ಮಾಡಿಕೊಟ್ಟಿತು ಎಂಬುದು ಜಯವರ್ಧನೆಯವರ ಅರಿವಿಗೆ ಬರುವುದಿಲ್ಲ. ತಮ್ಮ ಹೋರಾಟಕ್ಕೆ ತಕ್ಕ ಪ್ರತಿಫಲ ಸಿಕ್ಕದೆ, ತಮ್ಮ ವಿದ್ಯಮಾನಗಳ ಬಗ್ಗೆ ಯಥಾಸ್ಥಿತಿಯು ಮುಂದುವರಿದಾಗ ಸ್ತ್ರೀಯರು ತಮ್ಮ ವಿಮೋಚನೆಗಾಗಿ ಇನ್ನೂ ತೀವ್ರ ಹೋರಾಟಕ್ಕಿಳಿಯಬೇಕಾಯಿತೆಂಬುದು ನಿಜಸಂಗತಿ. ಭಾರತದಲ್ಲಿ ಆದದ್ದು ಮತ್ತು ಆಗುತ್ತಿರುವದು ಇದೇ. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಮತ್ತು ಅನಂತರದ ಆಂದೋಳನಗಳಲ್ಲಿ ಆದದ್ದು ಎಲ್ಲರಿಗೂ ಗೊತ್ತು. ಮಹಿಳೆಯರು ಪ್ರಧಾನಿ, ರಾಯಭಾರಿ, ರಾಜ್ಯಪಾಲ, ಮುಖ್ಯಮಂತ್ರಿ, ಕುಲಪತಿ, ಮುಂತಾದ ಸ್ಥಾನಗಳಿಗೇರಲು ತಕ್ಕ ಅವಕಾಶ ಮತ್ತು ಪರಿಸರವನ್ನು ಕಲ್ಪಿಸಿದ ಕೆಲವೇ ದೇಶಗಳಲ್ಲಿ ಭಾರತವೂ ಒಂದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಮಹಿಳೆಯರ ಸ್ಥಿತಿಗತಿಗಳನ್ನು ಕಡೆಗಣಿಸುವುದಾಗಲೀ ಅಥವಾ ವೈಭವೀಕರಿಸುವುದಾಗಲೀ ನಮ್ಮ ಈ ವ್ಯಾಖ್ಯಾನದ ಉದ್ದೇಶವಲ್ಲ. ನಾವು ಹೇಳಬೇಕೆಂದಿರುವುದು ಇಷ್ಟೇ—ಈ ಪುಸ್ತಕದ ಲೇಖಕರು ಸಾಕಷ್ಟು ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿಲ್ಲ. ಭಾರತದ ಬಗ್ಗೆಯಂತೂ ಅದು ಬಹಳ ಸ್ಪಷ್ಟ. 268 ಪುಟಗಳ ಈ ಪುಸ್ತಕದ ಬೆಲೆ 160 ರೂಪಾಯಿಗಳು. ಬಹಳ ಜಾಸ್ತಿ !

'ಸ್ಪೀಕಿಂಗ್ ಆಫ್ ಫೈತ್' ಎಂಬುದು ಬೇರೊಂದು ಬಗೆಯ ಪುಸ್ತಕ. ಇದನ್ನು ಡಯಾನಾ ಎಕ್ ಮತ್ತು ದೇವಕಿ ಜೈನ್ ಎಂಬುವರು ಸಂಕಲಿಸಿದ್ದಾರೆ. ಅನೇಕ ಮಹಿಳೆಯರ ದೊಡ್ಡತನ ಮತ್ತು ಕ್ರಿಯಾಶೀಲತೆಯ ಬಗ್ಗೆ ಇಲ್ಲಿ ಮಾಹಿತಿಗಳಿವೆ. ಇವರಲ್ಲಿ ಕೆಲವರು ಧರ್ಮಾಧರ್ಮಗಳ ಸಂಘರ್ಷಣೆಯಲ್ಲಿ ಜಯಶೀಲರಾಗಬೇಕಾಗಿದೆ. ಮೂಕರಾಗಿರಲು ಮಾತ್ರ ಇವರಿಂದ ಸಾಧ್ಯವಿಲ್ಲ.

ಮಾರ್ಕಸ್ ಫುಲ್ಲರ್ ಅವರ 'ದಿ ರಾಂಗ್ಸ್ ಆಫ್ ಇಂಡಿಯನ್ ವುಮನ್‌ಹುಡ್'

ನಮ್ಮ ಹಿಂದಿನ ಪೀಳಿಗೆಗಳಿಗೆ ಸಂಬಂಧಿಸಿದ್ದು. 1900ರಲ್ಲಿ ಪ್ರಕಟಗೊಂಡ ಈ ಪುಸ್ತಕವನ್ನು 1984ರಲ್ಲಿ ಇಂಟರ್ ಇಂಡಿಯಾ ಪಬ್ಲಿಕೇಷನ್ಸ್‌ನವರು ಪುನರ್ ಮುದ್ರಿಸಿದ್ದಾರೆ. ಬಾಲ್ಯವಿವಾಹದ ಅಮಾನುಷತನವನ್ನೂ ವೈಧವ್ಯದ ಕ್ರೂರ ಆಚರಣೆಗಳನ್ನೂ ಫುಲ್ಲರ್ ಚಿತ್ರಿಸಿದ್ದಾರೆ. ದಕ್ಷಿಣ ಭಾರತದ ಹಲವೆಡೆಗಳಲ್ಲಿ, ಅದೂ ಗ್ರಾಮಾಂತರ ಪ್ರದೇಶಗಳಲ್ಲಿ ವಿಧವೆಯರು ತಲೆ ಬೋಳಿಸಿಕೊಳ್ಳಲು ಒತ್ತಾಯ ವಿರುವ ಬಗ್ಗೆ ಉಲ್ಲೇಖಗಳಿವೆ. ವಿದ್ಯಾವಂತ ಮಹಿಳೆಯರು ಕೂಡಾ ತಮಗೆ ತಾವೇ ಇಂತಹ ಉಗ್ರ ಬಂಧನಗಳನ್ನು ವಿಧಿಸಿಕೊಂಡು ಒಂದು ಬಗೆಯ ಬಹಿಷ್ಕಾರಕ್ಕೊಳ ಗಾಗುತ್ತಿದ್ದಾರೆಂದು ಹೇಳಿದ್ದಾರೆ. ವಿದೇಶಗಳಲ್ಲಿ ಶಿಕ್ಷಣ ಪಡೆದು ಬಂದ ಯುವಕರು ಕೂಡಾ ಈ ಕ್ರೂರ ಪದ್ಧತಿಗಳನ್ನು ಎದುರಿಸದೆ ತಮ್ಮ ತಂದೆ, ತಾಯಿ ಮತ್ತು ಇತರ ಬಂಧುಗಳನ್ನು ಸಂಪ್ರೀತಿಗೊಳಿಸಲು ಅಪ್ರಾಪ್ತ ವಯಸ್ಕ ವಧುಗಳನ್ನು ಸ್ವೀಕರಿಸಿದ ಉದಾಹರಣೆಗಳನ್ನು ಈ ಲೇಖಕರು ಕೊಡುತ್ತಾರೆ ಈ ಬಗೆಯ ಪುಸ್ತಕಗಳು ಗತಕಾಲಕ್ಕೆ ಸೇರಿದವುಗಳೆಂದು ನಾವು ಬಗೆದರೂ ಅಂತಹ ದುಷ್ಟ ಪದ್ಧತಿ ಗಳು ಅಲ್ಲಲ್ಲಿ ಜೀವಂತವಿರುವುದನ್ನು ಕಾಣುತ್ತಿದ್ದೇವೆ. ಮಹಿಳೆಯರನ್ನು ಕುರಿತ ಈ ಬಗೆಯ ಪುಸ್ತಕಗಳಲ್ಲಿ ಇಂದಿನ ಮಹಿಳೆಯರ ಪ್ರಚಲಿತ ಸಮಸ್ಯೆ ಮತ್ತು ವಿದ್ಯಾಮಾನ ಗಳ ಬಗ್ಗೆ ವಿಶ್ಲೇಷಣೆಗಳಿಲ್ಲ. ಅವುಗಳ ಪರಿವಿಡಿಗಳು ನಮ್ಮ ಸಮಕಾಲೀನ ಸಮಸ್ಯೆ ಗಳನ್ನು ಒಳಗೊಂಡಿದ್ದರೆ ಚೆನ್ನಾಗಿತ್ತು.

1983ರ ಪ್ರೊ. ಎಂ. ಎನ್. ಶ್ರೀನಿವಾಸ್ ಅವರ 'ಜೆ. ಪಿ. ನಾಯಕ್ ಸ್ಮಾರಕ ಉಪನ್ಯಾಸ'—ಸಮ್ ರಿಫ್ಲೆಕ್ಷನ್ಸ್ ಆನ್ ಡೌರಿ ಎಂಬುದನ್ನು ಅವಲೋಕಿಸೋಣ. ಈ ಚಿಂತನಶೀಲ ಉಪನ್ಯಾಸದಲ್ಲಿ ಪ್ರೊ. ಶ್ರೀನಿವಾಸ್ ಅವರು ವರದಕ್ಷಿಣೆ ಪದ್ಧತಿಯು ಬೆಳೆದುಬಂದ ಬಗೆಯನ್ನು ವಿವರಿಸುತ್ತಾ ಮದುವೆ ಸಮಯದಲ್ಲಿ ಕನ್ಯಾದಾನ ಮಾಡು ವಾಗ ವರನಿಗೆ ನೀಡುವ ನಗ, ನಾಣ್ಯ ಮೊದಲಾದವುಗಳ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಕಾಲಕ್ರಮದಲ್ಲಿ ಅದು ಎಂಥ ಸಮಾಜಬಾಹಿರ ಕ್ರೂರಪದ್ಧತಿಯೆನಿಸಿದರೂ ಸಂಪ್ರ ದಾಯವಾಗಿ ಪರಿವರ್ತನೆಗೊಂಡು ಕನ್ಯಾ ಮಾತಾ-ಪಿತರ ಆರ್ಥಿಕ ಸ್ಥಿತಿಗತಿಗಳ ಮೇಲೆ ಎಂಥ ದುಷ್ಪರಿಣಾಮಗಳನ್ನು ಬೀರಿ ಅವರನ್ನು ಹಿಂಸೆಗೊಳಿಸುತ್ತದೆ ಎಂಬುದನ್ನು ವಿಶ್ಲೇಷಿಸುತ್ತಾರೆ. ಈ ದುಷ್ಟಪದ್ಧತಿಯ ನಿವಾರಣೆಯ ಬಗ್ಗೆ ಅವರು ಕೆಲವು ಪರಿಹಾರಗಳನ್ನು ಸೂಚಿಸಿರುತ್ತಾರೆ ವರದಕ್ಷಿಣೆ ಪದ್ಧತಿ ಕೆಟ್ಟದ್ದು, ಆ ಬಗ್ಗೆ ವ್ಯಾಪಕ ಅರಿವು ಜನರಲ್ಲಿ ಮೂಡಬೇಕು, ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಸಮಾನರೆಂದು ಪರಿಗಣಿಸಬೇಕು, ಇವೇ ಮೊದಲಾದ ಸಲಹೆಗಳನ್ನಿತ್ತರೂ ಇಂದಿನ ದಿನಗಳಲ್ಲಿ ಹಲವಾರು ಕಡೆ ನಡೆಯುತ್ತಿರುವ ವಧುಹಿಂಸೆ, ಪರಿತ್ಯಾಗ, ಸಜೀವ ದಹನಗಳ ಬಗ್ಗೆ ಅವರು ಮೌನ ವಹಿಸಿದ್ದಾರೆ. ಈ ಬಗ್ಗೆ ವ್ಯಾಪಕ ಮತ್ತು ಆಳವಾದ ಸಂಶೋಧನೆ ಗಳಾಗಬೇಕು. ಸಮಾಜವಿಜ್ಞಾನ ಸಾಹಿತ್ಯವು ಈ ದುಷ್ಟ ಪದ್ಧತಿಯ ಮೇಲೆ ಬೆಳಕು ಚೆಲ್ಲಿ ಅವುಗಳ ಮೂಲಕಾರಣ ಮತ್ತು ಪರಿಹಾರವನ್ನು ಸೂಚಿಸುವಂತಿರಬೇಕು. ದುರಂತ

ವೆಂದರೆ, ಅದು ಅಪೇಕ್ಷಿತ ಗತಿಯಲ್ಲಿ ಸಾಗುತ್ತಿಲ್ಲ, ತಕ್ಕ ಸಾಹಿತ್ಯ ಸೃಷ್ಟಿಯಾಗುತ್ತಿಲ್ಲ, ಮತ್ತು ಸೃಷ್ಟಿಯಾದ ಸಾಹಿತ್ಯ ಜನಸಾಮಾನ್ಯರಿಗೆ ಲಭ್ಯವಾಗುತ್ತಿಲ್ಲ.

ಸತಿ–ಸಹಗಮನವೆಂಬ ಪದ್ಧತಿಯನ್ನೇ ನೋಡಿ. ಎಂತಹ ಕರಾಳ ಕೃತ್ಯ; ಇಪ್ಪತ್ತನೇ ಶತಮಾನದ ಅಂತ್ಯದಲ್ಲಿಯೂ ಈ ಜ್ವಲಂತ ಸಮಸ್ಯೆ ಇನ್ನೂ ಆಚರಣೆಯಲ್ಲಿದೆ ಎಂದರೆ ನಾವೆಂತಹ ನಾಗರಿಕ ಜನಾಂಗ? ಇದನ್ನು ಸಮರ್ಥಿಸುವ ಮತ್ತು ಆಚರಿಸುವ ಜನ ಈಗಲೂ ನಮ್ಮ ದೇಶದಲ್ಲಿದ್ದಾರೆಂದು ಹೇಳಿಕೊಳ್ಳಲು ನಾವೆಲ್ಲಾ ನಾಚಿಕೆಯಿಂದ ತಲೆ ತಗ್ಗಿಸಬೇಕು. ಗಂಡನ ಪಾರ್ಥಿವ ದೇಹದೊಂದಿಗೆ ಹೆಂಡತಿಯನ್ನು ಜೀವಂತ ಸುಡುವುದೆಂದರೇನು? ಅಂತಹ ಹೇಯಕೃತ್ಯ ನಡೆಯುವಾಗ ಅವಳ ಬಂಧು ಬಳಗ ಮತ್ತು ಊರಿನ ಜನ ಅದನ್ನು ನೋಡಿ ಅವಳಿಗೆ ಜೈ–ಜೈಕಾರ ಹಾಕುವುದೆಂದರೇನು? ಅವಳನ್ನು ವೈಭವೀಕರಿಸಿ ಅವಳಿಗೆ 'ದೇವಿ' ಪಟ್ಟವನ್ನು ನೀಡುವುದೆಂದರೇನು? ರಾಜಸ್ಥಾನದ ದೇವರಾಲ ಗ್ರಾಮದಲ್ಲಿ ನಡೆದದ್ದು ಇದೇ. ರೂಪ ಕನ್ವರ್ ಎಂಬ ಯುವ ವಿಧವೆಯು ಸತ್ತ ಗಂಡನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಕುಳಿತುಕೊಳ್ಳುವಂತೆ ಮಾಡಿ, ಅವಳ ಮೇಲೆ ಸೌದೆಯ ಬಣವೆಯನ್ನೊಟ್ಟಿ ಬೆಂಕಿ ಇಟ್ಟ ಘಟನೆಯ ಬಗ್ಗೆ ದೇಶವಿದೇಶದ ಪತ್ರಿಕೆಗಳೆಲ್ಲಾ ವರದಿ ಮಾಡಿದವು.

ಈ ದುರ್ಘಟನೆ ನಡೆದ ಅನೇಕ ದಿನಗಳನಂತರ ಪೋಲೀಸರು ಮತ್ತು ಇತರ ಅಧಿಕಾರಿಗಳು ಎಚ್ಚೆತ್ತು ದೇವರಾಲಾಕ್ಕೆ ಭೇಟಿಯಿತ್ತು ರೂಪಕನ್ವರಳ ಅತ್ತೆ, ಮಾವ ಮತ್ತು ಮೈದುನರ ವಿಚಾರಣೆ ಜರುಗಿಸಿದರಂತೆ. ಆದರೆ ಯಾರನ್ನೂ ದಸ್ತಗಿರಿ ಮಾಡಲಿಲ್ಲ. ಆ ವೇಳೆಗಾಗಲೇ ಅಲ್ಲಿ ಜನಜಾತ್ರೆ ಪ್ರಾರಂಭವಾಗಿತ್ತು. ಆ ಸ್ಮಶಾನವು ಪವಿತ್ರ ಯಾತ್ರಾ ಸ್ಥಳವಾಗಿ ಪರಿಗಣಿಸಲ್ಪಟ್ಟಿತು. ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ, ಸಮಾಜಶಾಸ್ತ್ರಜ್ಞರು ಇಂತಹ ಘಟನೆಗಳ ಬಗ್ಗೆ ತಕ್ಷಣ ಸಂಶೋಧನೆ ನಡೆಸಿ, ವಿವರಗಳನ್ನು ಸಂಗ್ರಹಿಸಿ, ಜನಜಾಗೃತಿಯನ್ನುಂಟು ಮಾಡಬೇಕೋ? ಅಥವಾ ಹಲವಾರು ವರ್ಷಗಳವರೆಗೆ ಸುಮ್ಮನಿದ್ದು, ನಂತರ ಅದನ್ನು ಕುರಿತ ಪ್ರಬಂಧಗಳನ್ನು ಬರೆಯುವ —ಒಂದು ಬಗೆಯ ಮರಣೋತ್ತರ ವಿಶ್ಲೇಷಣೆಗಳಲ್ಲಿ ತೊಡಗಬೇಕೋ?

ರೂಪಕನ್ವರ್‌ಳ ದುರಂತವೇ ಕೊನೆಯದೆಂದು ನಾವು ನಂಬುವಂತಿಲ್ಲ. ಉತ್ತರ ಪ್ರದೇಶದ ಲಲಿತಪುರ ಜಿಲ್ಲೆಯ ಖೇಡಾಮಿಶ್ರ ಗ್ರಾಮದಲ್ಲಿ ನಡೆದ ದುರ್ಘಟನೆಯು ದೇವರಾಲಾ ರೀತಿಯ ದುರಂತಗಳು ಈ ದೇಶದಲ್ಲಿ ಆಗಾಗ್ಗೆ ಮರುಕಳಿಸುತ್ತವೆ ಎಂಬುದನ್ನು ಸಾಬೀತುಪಡಿಸುತ್ತದೆ. ಹೆಂಡತಿಯ ಅರೆಬೆಂದ ದೇಹವನ್ನು ಅವಳ ಪತಿಯ ಚಿತೆಯಿಂದ ಹೊರಗೆಳೆದು ರಕ್ಷಿಸಿದ ವಾರ್ತೆ ಖೇಡಾಮಿಶ್ರ ಗ್ರಾಮದಿಂದ ವರದಿಯಾಗಿದೆ. ಇವು ಪತ್ರಿಕೆಗಳಲ್ಲಿ ವರದಿಗೊಂಡು ವ್ಯಾಪಕ ಪ್ರಚಾರವನ್ನು ಪಡೆದ ದುರ್ಘಟನೆಗಳಷ್ಟೆ. ಯಾರ ಗಮನಕ್ಕೂ ಬಾರದ, ಎಲ್ಲಾ ಸಮೂಹ ಮಾಧ್ಯಮಗಳ ಕಣ್ಣು ತಪ್ಪಿಸಿದ್ದ ಸದ್ದುಗದ್ದಲಗಳಿಲ್ಲದೆ ಮುಚ್ಚುಮರೆಯಲ್ಲಿ ನಡೆದ ದುರಂತಗಳೆಷ್ಟೊ?

ಈ ದುಷ್ಟ ಪದ್ಧತಿಗಳ ಬಗ್ಗೆ ಮತ್ತು ಮೂಢನಂಬಿಕೆಗಳನ್ನು ಹೊಂದಿರುವ ಹೃದಯಶೂನ್ಯ ಜನರ ನಡವಳಿಕೆಗಳ ಬಗ್ಗೆ ವ್ಯಾಪಕವಾದ ಸಂಶೋಧನೆಗಳು ಆಗಬೇಕಾಗಿದೆ. ನಮ್ಮ ಸಮಾಜವಿಜ್ಞಾನಿಗಳು ವ್ಯಾಪಕವಾದ ಮತ್ತು ಆಳವಾದ ಕ್ಷೇತ್ರ ಪರಿಶೀಲನೆ ನಡೆಸಬೇಕಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಜನಜಾಗೃತಿಯನ್ನುಂಟು ಮಾಡಲು ಮಹಿಳಾಮಂಡಳಿ ಮತ್ತು ಸಂಘಟನೆಗಳಿಗೆ ಮಾರ್ಗದರ್ಶನ ಮಾಡಬೇಕಾಗಿದೆ. ಇಂತಹ ಯಾವ ಕಾರ್ಯಕ್ರಮಗಳೂ ನಮ್ಮ ಸಮಾಜ ಕಲ್ಯಾಣ ಮತ್ತು ಮಹಿಳಾ ಮಂಡಳಿಗಳ ಕಾರ್ಯಕರ್ತರಿಗೆ ಇರಲಿಲ್ಲವೆಂಬುದನ್ನು ದೇವರಾಲಾ ಮತ್ತು ಖೇಡಾಮಿಶ್ರ ದುರ್ಘಟನೆಗಳು ಎತ್ತಿ ತೋರಿಸುತ್ತವೆ. ರೂಪಕನ್ವರಳನ್ನು ಜೀವಂತ ಸುಟ್ಟು ಹಾಕಿದ ಬಗ್ಗೆ ಪತ್ರಿಕೆಗಳು ವರದಿ ಮಾಡಿದ ತಕ್ಷಣವೇ ದೇವರಾಲಾಕ್ಕೆ ಧಾವಿಸಬೇಕು ಎಂಬ ಕಲ್ಪನೆಯು ದೆಹಲಿಯ ಎಚ್ಚತ್ತ ಮಹಿಳಾ ವೃಂದಕ್ಕೆ ಹೊಳೆಯಲೇ ಇಲ್ಲ. ದೇವರಾಲಾಕ್ಕೆ ಹೋಗುವ ಬದಲು ಅವರೆಲ್ಲಾ ಲೋಕಸಭಾಧ್ಯಕ್ಷ ಬಲರಾಮ್ ಜಾಖಡ್, ಗೃಹಸಚಿವ ಬೂಟಾಸಿಂಗ್, ಮೊದಲಾದವರ ಕಛೇರಿ ಮತ್ತು ಮನೆಗಳಿಗೆ ಭೇಟಿ ಕೊಡುವುದು ಮತ್ತು ಅದರಿಂದುಂಟಾದ ದಣಿವನ್ನು ಆರಿಸಿಕೊಳ್ಳಲು ಹವಾನಿಯಂತ್ರಿತ ಬಂಗಲೆಗಳಲ್ಲಿ ವಿಶ್ರಾಂತಿ ಪಡೆಯುವುದು ಅವರೆಲ್ಲರ ದಿನಚರಿಯಾಗಬೇಕೇ?

ಪರಿವರ್ತನಾಶೀಲ ಸಮಾಜವು ಈ ಬರಹಗಾರರಿಂದ ಮೌಲ್ಯಾಧಾರಿತ ಬರಹವನ್ನು ನಿರೀಕ್ಷಿಸುತ್ತದೆ. ಶುದ್ಧ ವಿಜ್ಞಾನ ಸಾಹಿತ್ಯದಂತೆ ಸಮಾಜ ವಿಜ್ಞಾನ ಸಾಹಿತ್ಯವು ಕೇವಲ ವಸ್ತುನಿಷ್ಠ ವಿವರಣೆ ಮತ್ತು ವಿಶ್ಲೇಷಣೆಯಾಗಿರಲು ಸಾಧ್ಯವಿಲ್ಲ. ಸಮಾಜದ ಪಿಡುಗುಗಳನ್ನು ತಡೆಗಟ್ಟುವ ಮತ್ತು ನಿವಾರಿಸುವ ವಿಧಾನಗಳನ್ನೂ ಈ ಸಾಹಿತ್ಯ ಒಳಗೊಂಡಿರಬೇಕಾಗುತ್ತದೆ. ಸಮಾಜ ವಿಜ್ಞಾನಗಳು ಬದಲಾಗುತ್ತಿರುವ ಸಮಾಜದ ಸವಾಲುಗಳಿಗೆ ಸೂಕ್ತ ಉತ್ತರಗಳನ್ನು ಕೊಡಬೇಕಾಗುತ್ತದೆ. ಈ ದಿಶೆಯಲ್ಲಿ ಅಲ್ವಾರ್ಂಡೊ ಬೊರ್ಡಾರ್ ಅವರು ಸಂಕಲಿಸಿರುವ ಛ್ಯಾಲೆಂಜ್ ಆಫ್ ಸೋಷಿಯಲ್ ಛೇಂಜ್ ಎಂಬ ಪುಸ್ತಕವು ಉಲ್ಲೇಖನಾ ಯೋಗ್ಯವೆನಿಸುತ್ತದೆ. ಪರಿವರ್ತನೆಯ ಬಗ್ಗೆ ಜನರಿಗೆ ಇರುವ ಆಶೋತ್ತರಗಳು, ಅಡ್ಡಿ–ಆತಂಕಗಳು, ಅವರಲ್ಲಿರಬಹುದಾದ ಸಂಘಟನಾಸಕ್ತಿಗಳು, ನಿರ್ಣಾಯಕ ಘಟ್ಟದಲ್ಲಿ ಅವರ ಸಕ್ರಿಯ ಪಾತ್ರ, ಇವೇ ಮುಂತಾದ ವಿಷಯಗಳನ್ನು ಕುರಿತ ಲೇಖನಗಳು ಈ ಸಂಗ್ರಹದಲ್ಲಿವೆ. ಸಮಾಜದಲ್ಲಿ ಯಾವುದೇ ಬದಲಾವಣೆಯನ್ನು ತರುವ ಮುನ್ನ ಜನರಲ್ಲಿ ಆ ಬಗ್ಗೆ ಸ್ಪಷ್ಟ ಅರಿವು ಮತ್ತು ವೈಚಾರಿಕತೆಯನ್ನು ಬೆಳೆಸಬೇಕು. ಬದಲಾವಣೆಯ ಪ್ರಕ್ರಿಯೆಗಳಲ್ಲಿ ಅವರು ಸ್ವಯಿಚ್ಛೆಯಿಂದ ಭಾಗವಹಿಸುವಂತಾಗಬೇಕು. ಸಮಾಜದ ಒಂದೊಂದು ಸಮುದಾಯವೂ ತನ್ನದೇ ಆದ ಪರಂಪರೆ, ವೈವಿಧ್ಯತೆ ಮತ್ತು ಪರಿಚಲನಾ ಗತಿಯನ್ನು ಹೊಂದಿರುತ್ತದೆ. ಸಾಮಾಜಿಕ ಪ್ರಗತಿಯು ಎಲ್ಲಾ ಸಮುದಾಯಗಳಲ್ಲಿ ಒಂದೇ ತೆರನಾಗಿರುವುದಿಲ್ಲ. ಆರ್ಥಿಕ, ರಾಜಕೀಯ, ಶೈಕ್ಷಣಿಕ ಮೊದಲಾದ ಬದಲಾವಣೆಗಳ

ಗತಿಗಳು ಬೇರೆ-ಬೇರೆಯಾಗಿರುತ್ತವೆ. ಕೆಲವು ತೀವ್ರಗತಿಯಲ್ಲಿ ಆಧುನಿಕತೆಯತ್ತ ಸಾಗಿದರೆ ಮತ್ತೆ ಕೆಲವು ಬಹಳ ನಿಧಾನವಾಗಿ ಮಾರ್ಪಾಡಾಗುತ್ತವೆ. ಎಲ್ಲಾ ಸಮುದಾಯಗಳಿಗೆ ಏಕರೂಪ ಸೂತ್ರವನ್ನು ಅನ್ವಯಿಸಬಾರದು ಬದಲಾವಣೆಗಳನ್ನು ತರಬಯಸುವ ಸರಕಾರೀ ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ಅಂಶಗಳನ್ನು ತೀವ್ರವಾಗಿ ಪರಿಗಣಿಸಬೇಕು. ಸಮಾಜಶಾಸ್ತ್ರಜ್ಞರು ಆಯಾಯ ಸಮುದಾಯಗಳ ರಚನೆ, ಕ್ರಿಯೆ, ಮತ್ತು ಪರಂಪರೆಗಳ ಬಗ್ಗೆ ಆಳವಾದ ಸಂಶೋಧನೆಗಳನ್ನು ನಡೆಸಿ ಆ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡಬೇಕು. ಅನೇಕ ಉಪಯುಕ್ತ ಮಾಹಿತಿಯನ್ನೊಳಗೊಂಡಿರುವ ಬೋರ್ಡ್ಸ್ ಅವರ ಈ ಸಂಗ್ರಹದಲ್ಲಿ ಈ ಕೆಲವು ಅಂಶಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಈ ಬಗೆಯ ಪುಸ್ತಕಗಳು ನಮಗೆ ಹೆಚ್ಚು ಹೆಚ್ಚಾಗಿ ಬೇಕಾಗಿವೆ. ಲೇಖಕರು ಮತ್ತು ಪ್ರಕಾಶಕರು ಇಂತಹ ಪುಸ್ತಕಗಳನ್ನು ಉತ್ಪಾದಿಸಬೇಕು. ಈಗ ಹೊರಬರುತ್ತಿರುವ ಚರ್ವಿತ-ಚರ್ವಣ, ಇಲ್ಲವೆ, ಸುಲಭೀಕರಿಸಿದ ಪುಸ್ತಕಗಳನ್ನಲ್ಲ.

ಭಾರತದ ಸರ್ವಾಂಗೀಣ ಬೆಳವಣಿಗೆ ಅಥವಾ ಸಮಗ್ರ ಅಭಿವೃದ್ಧಿಯನ್ನು ಕುರಿತ ವಿಚಾರಪೂರ್ಣ ಸಾಹಿತ್ಯವು ಸಾಕಷ್ಟು ಪ್ರಮಾಣದಲ್ಲಿ ಸೃಷ್ಟಿಯಾಗಿಲ್ಲವೆಂಬ ಅಭಿಪ್ರಾಯ ಬಹಳ ಕಾಲದಿಂದ ಉಳಿದುಕೊಂಡು ಬಂದಿದೆ. ಯೋಜನೆಗೆ ಸಂಬಂಧಿಸಿದ ಆಲೋಚನೆ ಮತ್ತು ಕಾರ್ಯಕ್ರಮಗಳು ನಮ್ಮ ದೇಶದಲ್ಲಿ ಐವತ್ತು ವರ್ಷಗಳ ಹಿಂದೆಯೇ ಪ್ರಾರಂಭವಾದವು. ಸುಭಾಸ್ ಚಂದ್ರ ಬೋಸ್ ಅವರ ನೇತೃತ್ವದಲ್ಲಿ ಉಪಸಮಿತಿಯೊಂದನ್ನು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು ರಚಿಸಿ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ನಿಯೋಜಿಸಿತ್ತು. ಅವರು ತಯಾರಿಸಿದ ಆ ಅಭಿವೃದ್ಧಿ ಯೋಜನೆಯ ಕರಡನ್ನು ಭಾರತದ ಪ್ರಪ್ರಥಮ ಪಂಚ-ವಾರ್ಷಿಕ ಯೋಜನೆಯೆಂದು ಕರೆಯಲಾಗುತ್ತಿದೆ. ಮಹಾತ್ಮಾ ಗಾಂಧಿಜೀಯವರ ನೇತೃತ್ವದಲ್ಲಿ ಹೋರಾಡಿದ ಭಾರತದ ಸ್ವಾತಂತ್ರ್ಯ ಪ್ರೇಮಿಗಳ ಆಶೋತ್ತರ ಮತ್ತು ಧ್ಯೇಯ-ಧೋರಣೆಗಳ ಪ್ರತೀಕವಾಗಿದ್ದ ಆ ವರದಿಯು ಕಾಗದದ ಮೇಲೆ ಮಾತ್ರ ಉಳಿದುಕೊಂಡು ಬಂದಿದೆ. ನಮ್ಮ ದೇಶವನ್ನಾಳುತ್ತಿದ್ದ ಆಗಿನ ಆಂಗ್ಲ ಪ್ರಭುತ್ವವು ಅದಕ್ಕೆ ಕಿಂಚಿತ್ತೂ ಮನ್ನಣೆಯನ್ನೀಯಲಿಲ್ಲ.

ಇತ್ತೀಚಿನ 25 30 ವರ್ಷಗಳಲ್ಲಿ ಯೋಜಿತ ಅಭಿವೃದ್ಧಿಯನ್ನು ಕುರಿತ ಗ್ರಂಥಗಳಲ್ಲಿ ನಮ್ಮ ಗಮನ ಸೆಳೆಯಬಲ್ಲ ಗ್ರಂಥವೆಂದರೆ ಸುಖಮೊಯ್ ಚಕ್ರವರ್ತಿ ಅವರ 'ಡೆವಲಪ್‌ಮೆಂಟ್ ಪ್ಲಾನ್ನಿಂಗ್—ದಿ ಇಂಡಿಯನ್ ಎಕ್ಸ್‌ಪೀರಿಯನ್ಸ್' ಎಂಬುದು. ಕಳೆದ 35 ವರ್ಷಗಳಲ್ಲಿ ಅಭಿವೃದ್ಧಿ ಯೋಜನೆಯನ್ನು ಕುರಿತ ಭಾರತದ ಅನುಭವಗಳನ್ನು ಇದು ನಿರೂಪಿಸುತ್ತದೆ. ನೆಹರು ಮತ್ತು ಮಹಲನೋಬಿಸರ ಕಲ್ಪನೆಯಿಂದ ರೂಪುಗೊಂಡು, ರಾಷ್ಟ್ರವ್ಯಾಪ್ತಿಯಾಗಿ ವಿಸ್ತರಿಸಿ, ಯೋಜನಾ ಆಯೋಗಗಳಿಂದ ಪಂಚವಾರ್ಷಿಕ ಯೋಜನೆಗಳಾಗಿ ಅನುಷ್ಠಾನಗೊಂಡಿರುವುದರ ಬಗ್ಗೆ ವಿಶ್ಲೇಷಣೆ

ಮತ್ತು ವಿಮರ್ಶೆಗಳು ಈ ಗ್ರಂಥದಲ್ಲಿವೆ ಪಂಚವಾರ್ಷಿಕ ಯೋಜನೆಗಳ ಸಂಯೋಜನೆ, ಸಿದ್ಧಾಂತ, ಅನುಷ್ಠಾನ ಮತ್ತು ಸಮಸ್ಯೆಗಳ ಬಗ್ಗೆ ತಜ್ಞರ ಅಭಿಪ್ರಾಯ, ಚರ್ಚೆ, ಮತ್ತು ವಿಶ್ಲೇಷಣೆಗಳನ್ನು ವಿದ್ವತ್‌ಪೂರ್ಣವಾಗಿ ನಿರೂಪಿಸುವ ಪ್ರಯತ್ನಗಳನ್ನು ಚಕ್ರವರ್ತಿಯವರು ಸಮರ್ಥವಾಗಿ ಮಾಡಿದ್ದಾರೆ. ಈ ಗ್ರಂಥವು 1985ರಲ್ಲಿ ಆಕ್ಸ್‌ಫರ್ಡ್‌ನ ಆಲ್ ಸೋಲ್ಸ್ ಕಾಲೇಜಿನಲ್ಲಿ ಅವರು ನೀಡಿದ 'ರಾಧಾಕೃಷ್ಣನ್ ಸ್ಮಾರಕ ಉಪನ್ಯಾಸ'ಗಳ ವಿಸ್ತೃತ ಅವತರಣಿಕೆ. ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಚಕ್ರವರ್ತಿಯವರು ಈ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ: "ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ನಮೂದಿಸಿರುವ ರೀತಿಯಲ್ಲಿ ಭಾರತೀಯ ಸಮಾಜವು ಸಮಾನತೆ ಮತ್ತು ಅಭಿವೃದ್ಧಿಯನ್ನು ಸಾಧಿಸುವ ದಿಶೆಯಲ್ಲಿ ಇನ್ನೂ ಬಹಳ ದೂರ ಕ್ರಮಿಸಬೇಕಾಗಿದೆ. ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ಮತ್ತು ಇತರ ಸಂಸ್ಥೆಗಳು ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಸಮಾಜದ ಅನೇಕಾನೇಕ ಸಮುದಾಯಗಳು ಐತಿಹಾಸಿಕವಾಗಿ ಹಿಂದಕ್ಕೆ ಹೋಗಲಾರದ ಬಗೆಯಲ್ಲಿ ಬದಲಾಗುತ್ತವೆ ಆದ್ದರಿಂದ ನಿವಾರಣೀಯ ವೆಚ್ಚಗಳನ್ನು ಕಡಿಮೆ ಮಾಡುವ ಮತ್ತು ಅಗತ್ಯಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಬಹುದಾದ ಇಲ್ಲವೆ ಪರಿವರ್ತಿಸಿಕೊಳ್ಳಬಹುದಾದ ಯೋಜನೆಗಳನ್ನು ರೂಪಿಸುವ ಹೊಣೆಗಾರಿಕೆಯು ಯೋಜನಾ ಆಯೋಗದ ಮೇಲಿದೆ. ಯೋಜನೆಗಳ ರೂಪುರೇಷೆ ಮತ್ತು ಅವುಗಳ ಅನುಷ್ಠಾನ ವಿಧಾನಗಳಿಗೆ ರಾಜಕೀಯ ಒಟ್ಟಭಿಪ್ರಾಯದ ಆವಶ್ಯಕತೆಯಿದೆ. ಈ ಯೋಜಿತ ಕಾರ್ಯಕ್ರಮಗಳಿಂದ ಈವರೆಗೆ ಭಾರತಕ್ಕೆ ಒಳಿತಾಗಿದೆ. ಮುಂಬರುವ ವರ್ಷಗಳಲ್ಲಿಯೂ ಈ ತೆರನ ಯೋಜನೆಗಳು ನಮ್ಮ ದೇಶಕ್ಕೆ ಬೇಕಾಗಿವೆ. ಇವುಗಳ ಬಗ್ಗೆ ಅವಸರದ ತೀರ್ಮಾನ ಅಸಂಗತ." ನೈಜ ದೃಷ್ಟಿಯ ಅವಲೋಕನಗಳನ್ನನುಸರಿಸಿದ ಈ ಬಗೆಯ ವಿಮರ್ಶಾತ್ಮಕ ಗ್ರಂಥಗಳು ವಿಪುಲವಾಗಿ ಬರಬೇಕು. ಅಂತಹ ಗ್ರಂಥಗಳು ನಮ್ಮ ಅಧಿಕಾರಿಗಳಿಗೆ ಮತ್ತು ಯೋಜನಾ ಆಯೋಗಗಳಿಗೆ ಉಪಯುಕ್ತ ಮಾಹಿತಿ ಮತ್ತು ಮಾರ್ಗದರ್ಶನ ನೀಡುವಂತಾಗಬೇಕು.

ಅಭಿವೃದ್ಧಿ ಕಾರ್ಯನೀತಿ ಮತ್ತು ಆಡಳಿತಾತ್ಮಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ 'ಡೆವಲಪ್‌ಮೆಂಟ್ ಪಾಲಿಸಿ ಆ್ಯಂಡ್ ಅಡ್ಮಿನಿಸ್ಟ್ರೇಷನ್ ಇನ್ ಇಂಡಿಯಾ' ಎಂಬ ಗ್ರಂಥವನ್ನು ರಮೇಶ್ ಅರೋರಾ ಮತ್ತು ಪಿ. ಸಿ. ಮಾಥುರ್' ಸಂಪಾದಿಸಿದ್ದಾರೆ. ಹೆಸರಾಂತ ಸಮಾಜ ವಿಜ್ಞಾನಿಗಳ ಲೇಖನಗಳು ಇದರಲ್ಲಿವೆ. ಸಮಾಜ ಶಾಸ್ತ್ರಗಳ ಅಧ್ಯಯನ, ಸಂಶೋಧನೆ, ಆವಶ್ಯಕತೆ, ಮೊದಲಾದ ವಿಷಯಗಳ ಬಗ್ಗೆ ಲೇಖನಗಳಿವೆ. ಕೃಷಿ, ಹೈನುಗಾರಿಕೆ, ಉನ್ನತ ಶಿಕ್ಷಣ, ಸಾರ್ವಜನಿಕ ಉದ್ದಿಮೆ, ಮುಂತಾದ ಅನೇಕ ಗಹನ ವಿಷಯಗಳನ್ನು ಕುರಿತ ವಿದ್ವತ್ಪೂರ್ಣ ಲೇಖನಗಳ ಸಂಗ್ರಹ ಈ ಪುಸ್ತಕದಲ್ಲಿದೆ. ಲೇಖಕರು ಮತ್ತು ಪ್ರಕಾಶಕರು ಈ ಬಗೆಯ ವೈಚಾರಿಕ ಸಾಹಿತ್ಯವನ್ನು ಹೆಚ್ಚು ಹೆಚ್ಚಾಗಿ ಸೃಷ್ಟಿಸಬೇಕಾಗಿದೆ.

ಭಾರತವು ಒಂದು ಜಾತ್ಯಾತೀತ ರಾಷ್ಟ್ರ. ಇಲ್ಲಿ ಸಂಕುಚಿತ ಮತೀಯ ಭಾವನೆಗಳಿಗೆ ಮತ್ತು ಸಂಘರ್ಷಗಳಿಗೆ ಅವಕಾಶವಿರಬಾರದು. ಆಗಾಗ್ಗೆ ಉದ್ಭವಿಸುವ ಮತೀಯ ಕಲಹಗಳನ್ನು ಮತ್ತು ವಿನಾಶಕಾರೀ ಪ್ರವೃತ್ತಿಗಳನ್ನು ಹೇಗೆ ನಿವಾರಿಸಬಹುದು ಎಂಬುದರ ಬಗ್ಗೆ ವೈಚಾರಿಕ ಸಾಹಿತ್ಯವನ್ನು ನಮ್ಮ ಜನರು ಅಪೇಕ್ಷಿಸುತ್ತಾರೆ. ಬಿಪಿನ್‌ಚಂದ್ರ ಅವರ 'ಕಮ್ಯೂನಾಲಿಜಂ ಇನ್ ಮಾಡರ್ನ್ ಇಂಡಿಯಾ' ಎಂಬ ಪುಸ್ತಕವು ಓದುಗರ ಈ ಆಶೋತ್ತರಗಳನ್ನು ಈಡೇರಿಸುವ ಕೆಲಸ ಮಾಡಬಲ್ಲದು. ಎಲ್ಲಾ ಗ್ರಂಥಾಲಯಗಳಲ್ಲಿ ಅತ್ಯಾವಶ್ಯಕವಾಗಿ ಇರಲೇಬೇಕಾದ ಪುಸ್ತಕ ಇದು. ಜಾತೀಯತೆ ಮತ್ತು ಪ್ರತ್ಯೇಕತೆಗಳಿಗೆ ಇರುವ ಸೂಕ್ಷ್ಮ ಸಂಬಂಧ ಮತ್ತು ವ್ಯತ್ಯಾಸಗಳನ್ನು ಬಿಪಿನ್‌ಚಂದ್ರರು ಈ ಗ್ರಂಥದಲ್ಲಿ ವಿಶ್ಲೇಷಿಸಿ ಚರ್ಚಿಸಿದ್ದಾರೆ. ಮುಸ್ಲಿಮ್ ಜಾತೀಯತೆಯು ಭಾರತ–ಪಾಕಿಸ್ತಾನ ವಿಭಜನೆಯಲ್ಲೇ ಅಂತ್ಯಗೊಳ್ಳಲಿಲ್ಲ. ಆ ಬಗೆಯ ಪ್ರತ್ಯೇಕತಾ ಭಾವನೆ ಮತ್ತು ಚಟುವಟಿಕೆಗಳು ದೇಶದ ಅನೇಕ ಕಡೆಗಳಲ್ಲಿ ಇನ್ನೂ ಜೀವಂತವಾಗಿವೆ. ಅನೇಕರು ತಿಳಿದುಕೊಂಡಿರುವಂತೆ ಘರ್ಷಣೆ ಇರುವುದು ಹಿಂದೂ–ಮುಸ್ಲಿಮ್ ನಡುವೆ ಅಲ್ಲ. ನಿಜವಾದ ಸಂಘರ್ಷ ಇರುವದು ಜಾತೀಯತೆ ಮತ್ತು ಜಾತ್ಯಾತೀತತೆಗಳ ನಡುವೆ. ರಾಜನೀತಿ ಶಾಸ್ತ್ರಜ್ಞರು ಈ ಅಂಶವನ್ನು ಗಮನಿಸಬಾರದೇಕೆ? ಬಿಪಿನ್‌ಚಂದ್ರರ ಪ್ರಕಾರ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಹಿಂದೂ ಮತ್ತು ಮುಸ್ಲಿಮ್ ಮತೀಯವಾದಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಂದಿದೆ. ಆದ್ದರಿಂದಲೇ ಈ ಮತೀಯತೆಯ ವಿರುದ್ಧ ಕಠೋರ ನಿರ್ಣಯ ತೆಗೆದುಕೊಳ್ಳಲು ಮತ್ತು ಹೋರಾಟ ನಡೆಸಲು ಅದಕ್ಕೆ ಸಾಧ್ಯವಾಗಿಲ್ಲ. ಜಾತೀಯತೆಯ ದುಷ್ಪರಿಣಾಮಗಳ ವಿರುದ್ಧ ಜನರಿಗೆ ಸರಿಯಾದ ತಿಳುವಳಿಕೆಯನ್ನು ನೀಡುವ ಧೃಢ ಪ್ರಯತ್ನವಾಗಲೀ ವ್ಯಾಪಕ ಪ್ರಚಾರವಾಗಲೀ ಅದರಿಂದ ನಡೆದಿಲ್ಲ. ನಮ್ಮ ದೇಶದ ರಾಜಕೀಯ ಪಕ್ಷಗಳ ಈ ದೌರ್ಬಲ್ಯವು ಮತೀಯ ಶಕ್ತಿಯ ಬೆಳವಣಿಗೆ ಮತ್ತು ದುಷ್ಕೃತ್ಯಗಳ ಉಳಿವಿಗೆ ಕಾರಣವಾಗಿದೆ. ಮತೀಯತೆಯ ಅಧ್ಯಯನಕ್ಕೆ ಬಿಪಿನ್‌ಚಂದ್ರರ ಪುಸ್ತಕವು ಒಂದು ಉತ್ತಮ ಕೊಡುಗೆಯಾಗಿದೆ.

ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ಇತ್ತೀಚಿನ ಪ್ರಕಟಣೆಗಳನ್ನು ಸಮೀಕ್ಷಿಸಿದಾಗ ದೊರಕುವ ಇನ್ನೊಂದು ಉತ್ತಮ ಪುಸ್ತಕ—ಜಿ. ಡಿ. ಕಬ್ರಾ ಅವರ 'ಡೆವಲಪ್‌ಮೆಂಟ್ ಆಫ್ ವೀಕರ್ ಸೆಕ್ಷನ್ಸ್' ಎಂಬುದು. ಮೂರು ದಶಕಗಳಿಗಿಂತಲೂ ಹೆಚ್ಚಿನ ಯೋಜನೆಗಳ ಅವಧಿಯಲ್ಲಿ ನಮ್ಮ ಸಮಾಜದ ದುರ್ಬಲ ವರ್ಗಗಳ ಸ್ಥಿತಿ–ಗತಿಗಳು ನಿರೀಕ್ಷಿತ ಮಟ್ಟದಲ್ಲಿ ಏಕೆ ಸುಧಾರಿಸಲಿಲ್ಲ ಎಂಬುದರ ಬಗ್ಗೆ ಕಾರಣಗಳನ್ನು ಹುಡುಕಲು ಕಬ್ರಾ ಅವರು ಪ್ರಯತ್ನಿಸಿದ್ದಾರೆ. ಸರಕಾರದ ಅನೇಕಾನೇಕ ಆಡಳಿತಾಂಗಗಳ ಕಾರ್ಯತಂತ್ರ, ಯೋಜನೆಗಳ ಉದ್ದೇಶಿತ ಗುರಿ ಮತ್ತು ಅವುಗಳ ಫಲಾನುಭವಿಗಳ ನಡುವೆ ಇರಬಹುದಾದ ಸಂಬಂಧಗಳನ್ನು ವಿಶ್ಲೇಷಿಸುವ ಕೆಲಸ ಈ ಗ್ರಂಥದಲ್ಲಿ ಆಗಿದೆ. ಕೃಷಿ ಕ್ಷೇತ್ರದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಈ

ಯೋಜನೆಗಳಿಂದ ಗಣನೀಯ ಸಹಾಯವೇನೂ ಆಗಿಲ್ಲವೆಂಬುದು ಈ ವಿಶ್ಲೇಷಣೆಯಿಂದ ವ್ಯಕ್ತವಾಗುತ್ತದೆ. ಚಿಕ್ಕ-ಚಿಕ್ಕ ಹಿಡುವಳಿಗಳು, ಅನಾವೃಷ್ಟಿ, ನೀರಾವರಿ ಸೌಲಭ್ಯ ಗಳಿಲ್ಲದಿರುವುದು, ಎತ್ತು ಮತ್ತು ಇತರ ಪ್ರಾಣಿಗಳ ಸಮಸ್ಯೆ, ಇವೇ ಮೊದಲಾದವು ಈ ದುರ್ಬಲ ವರ್ಗಗಳನ್ನು ಬ್ಯಾಂಕ್ ಮತ್ತು ಸಹಕಾರ ಸಂಘಗಳ ಸಾಲ—ಸೌಲಭ್ಯ ಗಳಿಂದ ಹೇಗೆ ವಂಚಿತರನ್ನಾಗಿ ಮಾಡಿವೆ ಎಂಬುದರ ಮೇಲೆ ಕಬ್ರಾ ಬೆಳಕು ಚೆಲ್ಲು ತ್ತಾರೆ. ಯೋಜನೆಗಳಿಂದ ನಿರೀಕ್ಷಿತ ಫಲಗಳು ದೊರಕಬೇಕಾದರೆ ಆಡಳಿತಾಧಿಕಾರಿ ಗಳು ಮತ್ತು ಫಲಾನುಭವಿಗಳ ಮಧ್ಯೆ ನೇರ ಹಾಗೂ ಧೃಡ ಸಂಪರ್ಕವಿರಬೇಕು ಮತ್ತು ಬದಲಾವಣೆಗಳ ಬಗ್ಗೆ ಈ ಎರಡೂ ವರ್ಗಗಳಿಗೆ ಸ್ಪಷ್ಟ ತಿಳುವಳಿಕೆ ಇರಬೇಕು ಎಂಬುದು ಈ ಲೇಖಕರ ಅಭಿಪ್ರಾಯ.

ಗ್ರಾಮೀಣ ಬಡತನವನ್ನು ಕುರಿತ ಪ್ರಭು ಘಾಟೆ ಅವರ 'ಡೈರೆಕ್ಟ್ ಅಟ್ಯಾಕ್ಸ್ ಆನ್ ರೂರಲ್ ಪಾವರ್ಟಿ' ಎಂಬ ಪುಸ್ತಕವು ಮೇಲೆ ಉಲ್ಲೇಖಿಸಿದ ಕಬ್ರಾ ಅವರ 'ಡೆವೆಲಪ್‌ಮೆಂಟ್ ಆಫ್ ವೀಕರ್ ಸೆಕ್ಷನ್ಸ್'ಗೆ ಪೂರಕವಾಗಿ ಬಂದಿದೆ. ಅಧಿಕಾರ ಶಾಹಿಯ ನಿರಾಸಕ್ತಿ, ಬಡವರ ಸಾಮಾಜಿಕ-ಆರ್ಥಿಕ ದೌರ್ಬಲ್ಯ ಮತ್ತು ಪಟ್ಟಭದ್ರ ಗುಂಪುಗಳ ಸ್ವಾರ್ಥ, ಇವೇ ಮುಂತಾದವು ದುರ್ಬಲ ವರ್ಗಗಳ ಏಳಿಗೆಯ ಬಗ್ಗೆ ಸರಕಾರಗಳು ನಡೆಸಿರುವ ಹೋರಾಟಗಳನ್ನು ಹೇಗೆ ನಿಷ್ಕ್ರಿಯಗೊಳಿಸಿ ದಾರಿ ತಪ್ಪಿಸು ತ್ತಿವೆ ಎಂಬುದರ ವಿಶ್ಲೇಷಣೆಗಳು ಈ ಎರಡೂ ಪುಸ್ತಕಗಳಲ್ಲಿವೆ. ಒಟ್ಟಿನಲ್ಲಿ ಹೇಳುವು ದಾದರೆ, ಸಾಮಾಜಿಕ ವಿಷಯಗಳಲ್ಲಿನ ಪುಸ್ತಕಗಳು ಓದಿಸಿಕೊಳ್ಳುವಂತಿರಬೇಕು. ಆಸಕ್ತಿಯನ್ನುಂಟು ಮಾಡುವಂತಿರಬೇಕು ಮತ್ತು ಸಮಾಜಕ್ಕೆ ಅವುಗಳಿಂದ ಒಳಿತಾಗ ಬೇಕು. ಅವು ಕೇವಲ ವಸ್ತುನಿಷ್ಠ ವಿವರಣೆ ಮತ್ತು ವರದಿಗಳನ್ನೊಳಗೊಂಡಿದ್ದರೆ ಸಾಲದು.

ಈ ಲೇಖನದಲ್ಲಿ ಉಲ್ಲೇಖಗೊಂಡ ಹನ್ನೊಂದು ಪುಸ್ತಕಗಳ ಪೂರ್ಣ ಮಾಹಿತಿ ಯನ್ನು ಈ ಕೆಳಗೆ* ಪಟ್ಟಿಮಾಡಿದ್ದೇವೆ. ಅವು ಸಾರ್ವಜನಿಕ, ಶೈಕ್ಷಣಿಕ ಮತ್ತು ವಿಶಿಷ್ಟ ಗ್ರಂಥಾಲಯಗಳಲ್ಲಿ ಲಭ್ಯವಿರಲು ತಕ್ಕ ಪುಸ್ತಕಗಳು. ಆಸಕ್ತ ಓದುಗರು ಕೂಡಾ ತಮ್ಮ ಖಾಸಗಿ ಗ್ರಂಥಾಲಯಗಳಿಗೆ ಕೆಲವನ್ನಾದರೂ ಸಂಗ್ರಹಿಸಿಕೊಳ್ಳಲು ಈ ಪಟ್ಟಿ ನೆರವಾಗಬಹುದೆಂದು ಆಶಿಸುತ್ತೇವೆ.

---

1. * **Arora (Ramesh K) & Mathur (PC)**, Ed : Development Policy and Administration in India (Essays in Honour of Prof. M. V. Mathur).
New Delhi, Associated Publishing House, 1986, 530p., Rs. 350

2. **Bipin Chandra** : Communalism in Modern India. New Delhi, Vikas Publishing House, 1985, 363p., Rs. 150

3. **Borda (Orlando Fals),** Ed : Challenge of Social Change. New York, Sage Publications, 1985, 142p, $ 15.95

4. **Chakravarthy (Sukhamoy)** : Development Planning—The Indian Experience (Radhakrishnan Memorial Lecturers at All Souls College, Oxford, 1985).
New Delhi, Oxford University Press, 1987, 137p., Rs. 50

5. **ECK (Diana) L & Jain (Devaki)** : Speaking of Faith : Cross-Cultural Perspectives on Women, Religion and Social Change.

6. **Fuller (Marcus B)** : The Wrongs of Indian Womanhood. New Delhi. Inter–India Publishers, 1984, 290p. Rs. 170

7. **Ghate (Prabhu)** : Direct Attacks on Rural Poverty (Policy, Programmes and Implementation).
New Delhi. Concept Publishing Company, 1984, 597p. Rs. 200

8. **Iqbal (Narain) & Lutze (Lothar)**, Ed : Literature, Social Consciousness and Polity.
New Delhi. Manohar Publications, 1988. 131p. Rs. 100

9. **Jayawardhana (Kumari)** : Feminism in the Third World in the Nineteenth and Early Twentieth Centuries.
New Delhi, Kali for Women. 1986, 268p. Rs. 160

10. **Kabra (GD)** : Development of Weaker Sections.
New Delhi, Inter–India Publishers. 1984, 182p. Rs. 160

11. **Srinivas (MN)** : Some Reflections on Dowry (J. P. Naik Memorial Lecture for 1983).
New Delhi, Oxford University Press, 1984, Rs. 15

[ಆಧಾರ :—ಎಸ್. ಪಿ. ಅಗ್ರವಾಲ್ (ನಿರ್ದೇಶಕರು, ಪ್ರಲೇಖನ ಕೇಂದ್ರ, ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ, ನವದೆಹಲಿ) ಅವರ ಲೇಖನ "ರೀಸೆಂಟ್ ಟ್ರೆಂಡ್ಸ್ ಇನ್ ಸೋಷಿಯಲ್ ಸೈನ್ಸ್ ಲಿಟರೇಚರ್."
ಯೂನಿವರ್ಸಿಟಿ ನ್ಯೂಸ್, ಸಂ. 16(6), ವಿಶೇಷ ಸಂಚಿಕೆ, 8 ಫೆಬ್ರುವರಿ, 1988, ಪು. 21–23.]

ಸಿದ್ದಾಪುರ ವಾಸುದೇವ ಭಟ್ಟ

'ನಾಗ' ಸಂಬಂಧಿ ನಂಬಿಕೆಗಳು

ನಂಬಿಕೆ ಮಾನಸಿಕ ಪರಿಕಲ್ಪನೆಗೆ ಸಂಬಂಧಿಸಿದುದು. ಹಲವು ಬಾರಿ ನಂಬಿಕೆಗಳು ಸಾಂಪ್ರದಾಯಿಕವಾಗಿ ಸ್ವೀಕೃತವಾಗಿ ಮುಂದುವರಿಯುತ್ತವೆ. 'ನಾಗ' ಅಥವಾ 'ಸರ್ಪ'ವನ್ನು ಜನಪದರು ದೇವತಾರೂಪದಲ್ಲಿ ಗೌರವ ಭಾವದಿಂದ ಕಾಣುವುದರಿಂದ 'ನಾಗ' ಸಂಬಂಧಿ ನಂಬಿಕೆಗಳು ಪ್ರಾಣಿ ಸಂಬಂಧಿ ನಂಬಿಕೆಗಳಿಗಿಂತ ಭಿನ್ನವಾಗಿ ಧಾರ್ಮಿಕ ನಂಬಿಕೆಗಳಾಗುತ್ತವೆ. ನಂಬಿಕೆಗಳ ಬಗ್ಗೆ ಡಾ. ಬಿ.ಎ. ವಿವೇಕ ರೈಯವರು, "ನಂಬಿಕೆಗಳು ವಸ್ತು ಸ್ಥಿತಿಯೊಡನೆ ಅಸಂಬದ್ಧ, ಅವೈಜ್ಞಾನಿಕ ಸಂಬಂಧವನ್ನು ಕಲ್ಪಿಸಿದಾಗ ಹುಟ್ಟಿಕೊಳ್ಳುತ್ತವೆ. ತಪ್ಪು ತಿಳುವಳಿಕೆ ಮತ್ತು ಅಜ್ಞಾನದಿಂದ ಹೆಚ್ಚಿನ ನಂಬಿಕೆಗಳು ಜನ್ಮತಾಳುತ್ತವೆ".[1] ಜನಪದರು ತಮ್ಮ ದಿನದಿನದ ಸಮಸ್ಯೆಗಳನ್ನು ಎದುರಿಸಲು ನೇರವಾಗಿ ವಿಫಲರಾದಾಗ, ತಮ್ಮ ಜೀವನದ ನ್ಯೂನತೆಗಳನ್ನು ನೀಗಿಸಿಕೊಂಡು ಸಮಾಧಾನ ಹೊಂದಲು ನಂಬಿಕೆಗಳನ್ನು ಸೃಷ್ಟಿಸಿ, ಅವುಗಳನ್ನು ತಮ್ಮ ಜೀವನದಲ್ಲಿ ಸ್ವೀಕರಿಸಿಕೊಂಡು ತೃಪ್ತರಾಗಲು ಯತ್ನಿಸುತ್ತಾರೆ. ನಾಗ ಸಂಬಂಧಿ ನಂಬಿಕೆಗಳು ಇತರ ಕತೆ, ಐತಿಹ್ಯ, ಪುರಾಣ ಮೊದಲಾದುವುಗಳ ಆಧಾರದಲ್ಲೂ ಹುಟ್ಟಿಕೊಂಡಿವೆ. ಕೆಲವೊಮ್ಮೆ ಒಂದು ನಂಬಿಕೆಗೆ ಇನ್ನೊಂದು ನಂಬಿಕೆ ಕಾರಣವಾಗುತ್ತದೆ. ಈ ನಂಬಿಕೆಗಳನ್ನು ಕುಂದಾಪುರ, ಉಡುಪಿ, ಮತ್ತು ಕಾರ್ಕಳ ತಾಲ್ಲೂಕುಗಳನ್ನು ಸ್ಥೂಲವಾಗಿ ಗಮನಿಸಿ ಸಂಗ್ರಹಿಸಲಾಗಿದೆ.

ಅನುಕೂಲಕ್ಕಾಗಿ ನಾಗಸಂಬಂಧಿ ನಂಬಿಕೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

1. ಕಾಲ ಸಂಬಂಧಿ ನಂಬಿಕೆಗಳು
2. ನಾಗವೈರ ಮತ್ತು ನಾಗಶಾಪಸಂಬಂಧಿ ನಂಬಿಕೆಗಳು
3. ಅತಿಮಾನುಷ ನಂಬಿಕೆಗಳು
4. ನಿಷೇಧಾತ್ಮಕ ನಂಬಿಕೆಗಳು
5. ಶಕುನ ಸೂಚಕ ನಂಬಿಕೆಗಳು
6. ನಾಗರ ಹಾವಿನ ಅಸ್ತಿತ್ವಸೂಚಿ ನಂಬಿಕೆಗಳು

7. ನಾಗರ ಹಾವು ಮನೆಗೆ ಬರುವ ಸಂದರ್ಭಗಳ ಬಗೆಗಿನ ನಂಬಿಕೆಗಳು
8. ಅಪಾಯ ಮತ್ತು ಕೇಡುಗಳ ಕುರಿತಾದ ನಂಬಿಕೆಗಳು

1. ಕಾಲ ಸಂಬಂಧಿ ನಂಬಿಕೆಗಳು

ನಿರ್ದಿಷ್ಟವಾದ ಕಾಲಕ್ಕೆ ಸಂಬಂಧಿಸಿದ ನಾಗನ ಕುರಿತಾದ ನಂಬಿಕೆಗಳಿವೆ. ಇವು ಕಾಲ ಪರಿವರ್ತನೆಯ ಮತ್ತು ಪರ್ವ ದಿನಗಳ ವ್ಯವಸ್ಥೆಯ ಹಿನ್ನೆಲೆಯಲ್ಲಿ ಹುಟ್ಟಿವೆ.

1. ನಾಗ ಪಂಚಮಿಯ ದಿನ ಮಳೆ ಬರಬೇಕು.

2. ನಾಗ ಪಂಚಮಿಯ ದಿನ ನಾಗನಿಗೆ ಮಾಡಿದ ಅಭಿಷೇಕ ಸಮುದ್ರಕ್ಕೆ ಸೇರಬೇಕು.

3. ನಾಗ ಪಂಚಮಿಯದಿನ ಬಿತ್ತನೆಯ ಕೆಲಸ, ಕಾಯಿಪಲ್ಯೆ ಕತ್ತರಿಸುವುದು ದೋಸೆ ಮಾಡುವುದು, ... ಇತ್ಯಾದಿಗಳನ್ನು ಮಾಡಕೂಡದು.

ಇವು ನಾಗಪಂಚಮಿ ಪರ್ವದ ಕುರಿತಾದ ನಂಬಿಕೆಗಳು. ಮಳೆ ಮತ್ತು ಅಭಿಷೇಕಗಳು ದ್ರವರೂಪದ ಸಮಾನ ಅಂಶಗಳು. ಮಳೆಯ ನೀರು ಸಮುದ್ರಕ್ಕೆ ಸೇರುವುದು ಸಾಮಾನ್ಯ ಅಂಶ. ನಾಗನಿಗೆ ಮಾಡಿದ ಅಭಿಷೇಕ ಸಮುದ್ರಕ್ಕೆ ಸೇರಬೇಕೆಂದರೆ ತಂಪು ಬಯಸುವ ನಾಗನಿಗೆ ನಾಗಪಂಚಮಿಯ ದಿನ ವಿಶೇಷವಾಗಿ ಅಧಿಕ ಅಭಿಷೇಕ ಮಾಡಬೇಕು. ಮಳೆ ಬಂದಾಗ ಆ ಅಭಿಷೇಕ ಸಮುದ್ರಕ್ಕೆ ಸೇರುವುದು, ನಾಗನ ಅಭಿಷೇಕದ ಮಹತ್ತನ್ನು ತಿಳಿಸುತ್ತದೆ. ನಾಗ ಪಂಚಮಿಯ ದಿನ ಬೇಸಾಯಗಾರನೊಬ್ಬ ನೆಲ ಉಳುವಾಗ ನಾಗರಹಾವಿನ ಮರಿಯೊಂದು ಅವನ ನೇಗಿಲಿಗೆ ಸಿಕ್ಕಿ ಸಾಯುತ್ತದೆ. ಆ ಮರಿಯ ತಾಯಿ ಸಿಟ್ಟಿನಿಂದ ಆ ಬೇಸಾಯಗಾರನ ಕುಟುಂಬವನ್ನೇ ನಾಶಗೊಳಿಸಿ, ಆ ಕುಟುಂಬದ ಹೆಣ್ಣೊಬ್ಬಳು ಮದುವೆಯಾಗಿ ಪರವೂರಿನ ಗಂಡನ ಮನೆಯಲ್ಲಿರುವುದನ್ನು ತಿಳಿದು ಅವಳನ್ನು ಕೊಲ್ಲಲು ಹೋಗುತ್ತದೆ. ಆ ದಿನ ನಾಗ ಪಂಚಮಿ, ಬೇಸಾಯಗಾರನ ಆ ಮಗಳು ನಾಗ ಕಟ್ಟೆಯಲ್ಲಿ ಹಾಲನ್ನೆರೆದು, ನಾಗನನ್ನು ಪೂಜಿಸುತ್ತಿರುತ್ತಾಳೆ. ಅವಳನ್ನು ಕೊಲ್ಲಲು ಹೋದ ತಾಯಿ ನಾಗ ಅವಳ ಪೂಜೆ ನೋಡಿ ಸಂತುಷ್ಟವಾಗುತ್ತದೆ, ಮತ್ತು ವರ ಕೇಳಲು ನಾಗನಿಂದ ತನ್ನ ಮನೆಯವರೆಲ್ಲ ಬದುಕಬೇಕೆಂದು ಕೇಳಿಕೊಳ್ಳುತ್ತಾಳೆ. ಅದರಂತೆ ಎಲ್ಲರೂ ಬದುಕುತ್ತಾರೆ.[2] ಈ ಕತೆಯ ಹಿನ್ನೆಲೆಯಲ್ಲಿ ನಾಗಪಂಚಮಿ ದಿನ ನೆಲ ಉಳಬಾರದು, ಕಾಯಿಪಲ್ಲೆ ಕತ್ತರಿಸಬಾರದು .... ಈ ನಂಬಿಕೆ ಹುಟ್ಟಿಕೊಂಡಿದೆ.

4. ಹುಣ್ಣಿಮೆ ದಿನಗಳಲ್ಲಿ ಕೇರೆಹಾವು ಮತ್ತು ನಾಗರಹಾವುಗಳು ಎಣೆಯಾಡುತ್ತವೆ.

5. ಅಮಾವಾಸ್ಯೆಯ ದಿನ ನಾಗರಹಾವಿನ ವಿಷದ ಚೀಲ ತುಂಬುತ್ತದೆ.

ಜನಪದರಿಗೆ ಹುಣ್ಣಿಮೆ ಶುಭಸೂಚಕ. ಬೆಳದಿಂಗಳು ರಮ್ಯ, ರಸಿಕ ಮನೋಭಾವಗಳನ್ನು ಪ್ರಚೋದಿಸುವುದೆಂಬ ಭಾವನೆಯಿಂದ ಕೇರೆ ಮತ್ತು ನಾಗರಹಾವುಗಳ

ಎಣೆಯಾಟ ಹುಣ್ಣಿಮೆಯಲ್ಲಿ ನಡೆಯುತ್ತದೆಯೆಂದು ನಂಬಿಕೆ ತಾಳಿರಬೇಕು. ಅಮಾವಾಸ್ಯೆ ಕತ್ತಲೆಯ ಕಾರಣದಿಂದ ಅಶುಭವೆಂಬ ಭಾವನೆಯಿರುವುದರಿಂದ ನಾಗರಹಾವಿನ ವಿನಾಶಕಾರಿಯಾದ ವಿಷದ ಚೀಲ ಆ ದಿನ ತುಂಬುವುದೆಂಬ ನಂಬಿಕೆ ಹುಟ್ಟಿಕೊಂಡಿದೆ.

2. ನಾಗ ವೈರ ಮತ್ತು ನಾಗಶಾಪ ಸಂಬಂಧಿ ನಂಬಿಕೆಗಳು

ಈ ವರ್ಗಕ್ಕೆ ಸೇರಿದ ನಂಬಿಕೆಗಳು ನಾಗರಹಾವಿನ ಮೇಲಿನ ಭಯದಿಂದ ಹುಟ್ಟಿದವುಗಳಾಗಿವೆ. ಮನೆ ಅಥವಾ ಮನೆಯ ಪರಿಸರದಲ್ಲಿ ನಾಗರಹಾವು ಕಾಣಿಸಿಕೊಂಡಾಗ ಭಯತಾಳುವ ಜನಪದರು ತಮ್ಮ ಯಾವುದೋ ಹರಕೆ ಬಾಕಿಯಿರುವುದರಿಂದ ಅದನ್ನು ನೆನಪಿಸಲು ನಾಗರಹಾವು ಬಂದಿರುವುದಾಗಿಯೂ, ಆ ಹರಕೆಗಳನ್ನು ತೀರಿಸದಿದ್ದರೆ ನಾಗಶಾಪಕ್ಕೆ ಗುರಿಯಾಗಬೇಕಾಗುವುದೆಂದೂ ಭಯಪಡುತ್ತಾರೆ.

1. ನಾಗದ್ವೇಷ ಹನ್ನೆರಡು ವರುಷ.

2. ನಾಗರಹಾವನ್ನು ದಾಟಬಾರದು, ದಾಟಿದರೆ ಏಳು ಜನ್ಮಗಳಲ್ಲೂ ಅದು ವೈರ ಸಾಧಿಸುತ್ತದೆ.

ಇವು ಭಯ ಮತ್ತು ಅಪಾಯದ ಹಿನ್ನೆಲೆಯಲ್ಲಿ ಹುಟ್ಟಿದವುಗಳು. ನಾಗರಹಾವು ಆಗಾಗ ಕಾಣಿಸುವುದು ಭಯಕ್ಕೆ ಕಾರಣವಾಗುವುದರಿಂದ ಅದು ಕಾಣಿಸಿಕೊಳ್ಳುವುದು ಸರಿಯಲ್ಲ. ಆಗಾಗ ಕಾಣಿಸಿಕೊಳ್ಳುವುದು ಅಥವಾ ಆಗಾಗ ಭೇಟಿಕೊಡುವ ಸೂಚನೆಗಳು ಪ್ರೀತಿ ಅಥವಾ ದ್ವೇಷವನ್ನು ಸೂಚಿಸುತ್ತವೆ. ಭಯವನ್ನು ಹುಟ್ಟಿಸುವ ನಾಗರಹಾವು ಆಗಾಗ ಕಾಣಿಸಿಕೊಳ್ಳುವುದೆಂದರೆ ಏನೋ ದ್ವೇಷವನ್ನು ಸಾಧಿಸುತ್ತದೆ ಎಂಬ ನಂಬಿಕೆ ಅವರದ್ದು. 'ಹನ್ನೆರಡು' ಈ ಸಂಖ್ಯೆ ಜನಪದರಲ್ಲಿ ವಿಶೇಷ[3].

'ನಾಗರಹಾವನ್ನು ದಾಟಬಾರದು'. ಇಲ್ಲಿ ಲೌಕಿಕ ದೃಷ್ಟಿಯ ಅಪಾಯದ ಸೂಚನೆಯಿದೆ. 'ದಾಟುವುದು' ನಿರ್ಲಕ್ಷ್ಯವನ್ನು ಸೂಚಿಸುತ್ತದೆ. ಗೌರವಯುತವಾದ ನಾಗರಹಾವನ್ನು ದಾಟಬಾರದು ಎಂಬ ಸೂಚನೆಯೊಂದಿಗೆ ಅದನ್ನು ದಾಟುವಲ್ಲಿ ಇರುವ ಅಪಾಯವನ್ನು ಸೂಚಿಸಿ ನೀತಿಯನ್ನಿಲ್ಲಿ ತಿಳಿಸಲಾಗಿದೆ. ಜನ್ಮಾಂತರದ ಲೆಕ್ಕಾಚಾರದಲ್ಲಿ '7' ಸಂಖ್ಯೆ ಜನಪದರಲ್ಲಿ ಹೆಚ್ಚು ಬಳಕೆಯಾಗುತ್ತದೆ.[4]

3. ಸರ್ಪಸುತ್ತು ತುದಿಗೂಡಿದರೆ ರೋಗಿ ಸಾಯುತ್ತಾನೆ.

'ಸರ್ಪಸುತ್ತು' ಒಂದು ಬಗೆಯ ಚರ್ಮರೋಗ. ಸಣ್ಣ ಸಣ್ಣ ಕಜ್ಜಿಯಂತೆ ಸಪೂರವಾಗಿ ಸಾಲಾಗಿ ಬೆನ್ನು, ಕತ್ತು, ತೊಡೆ ಮೊದಲಾದ ಭಾಗಗಳಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಇದು ಸರ್ಪಾಕಾರದಲ್ಲಿರುವ ಕಾರಣ ಇದರ ತುದಿ ಕೂಡಿದರೆ 'ಸರ್ಪಬಂಧನ'ದಲ್ಲಿ ಸಿಲುಕಿ ರೋಗಿ ಮೃತನಾಗುವನೆಂಬ ಸಂಕೇತಾರ್ಥದೊಂದಿಗೆ ರೋಗದ ಉಲ್ಬಣ ಲಕ್ಷಣವು ಇಲ್ಲಿ ಗಮನೀಯ. ಚರ್ಮರೋಗಕ್ಕೆ ನಾಗನನ್ನು ಆರಾಧಿಸುವ ಕಾರಣವೂ ಇದಕ್ಕೆ ಪೂರಕವಾಗಿದೆ.

4. ನಾಗಶಾಪದಿಂದ ದೃಷ್ಟಿದೋಷ ಬರುತ್ತದೆ—ನಾಗರಹಾವಿನ ತಲೆಯಲ್ಲಿ ಮಣಿಯಿದೆ—ಎಂಬ ಕಲ್ಪನೆಯೇ ಈ ನಂಬಿಕೆಗೆ ಕಾರಣ. ನಾಗರಹಾವಿನ ತಲೆಯ ಮಣಿ ಪ್ರಕಾಶಮಾನವಾದ ಬೆಳಕನ್ನು ಚೆಲ್ಲುತ್ತದೆ, ಎಂಬ ಭಾವನೆಯಿರುವುದರಿಂದ ಮತ್ತು ದೃಷ್ಟಿಗೆ ಬೆಳಕು ಅತೀ ಅಗತ್ಯವಾದುದರಿಂದ ದೃಷ್ಟಿದೋಷಕ್ಕೆ ನಾಗಶಾಪ ಕಾರಣವೆಂಬ ನಂಬಿಕೆ ಹುಟ್ಟಿಕೊಂಡಿದೆ.

5. ನಾಗಶಾಪವಿದ್ದರೆ ಮಕ್ಕಳಾಗುವುದಿಲ್ಲ.

6. ಗರ್ಭಿಣಿ ಹೆಂಗಸಿನ ಗಂಡ ನಾಗರಹಾವನ್ನು ಕೊಲ್ಲಬಾರದು.

7. ನಾಗರಹಾವನ್ನು ಕೊಂದರೆ ಇಡೀ ಸಂತಾನ ನಾಶವಾಗುತ್ತದೆ.

ಈ ನಂಬಿಕೆಗಳಲ್ಲಿ ಸಂತಾನದ ಅಂಶ ಪ್ರಮುಖವಾಗಿದೆ. ಒಂದು ಕಾಲದಲ್ಲಿ ಅತಿಯಾದ ಸಂತಾನವನ್ನು ಪಡೆಯುವುದು ಒಂದು ಮೌಲ್ಯವಾಗಿತ್ತು. ನಾಗನನ್ನು ಸಂತಾನಕ್ಕಾಗಿ ಆರಾಧಿಸುವುದು ಜನಪದರಲ್ಲಿ ವಿಶೇಷ. ಮಕ್ಕಳಾಗದ ಕಾರಣವನ್ನು ನಾಗಶಾಪವೆಂದು ಭಾವಿಸಿ ಮಕ್ಕಳನ್ನು ಪಡೆಯಲು ನಾಗನ ಒಲುಮೆಯನ್ನು ಸಂಪಾದಿಸಲು ಪ್ರಯತ್ನಿಸುತ್ತಾರೆ. ಇದಕ್ಕೆ ಕಾರಣವೆಂದರೆ ಜನಪದರ ಭಾವನೆಯಲ್ಲಿ ನಾಗರಹಾವು ಭೂಮಿ ಪುತ್ರ. ಭೂಮಿಯ ಒಂದಂಶವಾದ ಹುತ್ತದಲ್ಲಿ ಇದು ವಾಸಿಸುವುದು. ಮನುಷ್ಯ ಈ ಭೂಮಿಯನ್ನು ತನಗಾಗಿ ಉಪಯೋಗಿಸಿಕೊಳ್ಳುವುದರಿಂದ ನಾಗರಹಾವಿಗೆ ಪರೋಕ್ಷವಾಗಿ ತೊಂದರೆ ಮಾಡುತ್ತಾನೆ. ಈ ತೊಂದರೆಗಳ ಫಲವೇ ನಾಗರಶಾಪದಿಂದ ಸಂತಾನ ವಿಹೀನತೆ. ಗರ್ಭಿಣಿಯ ಗಂಡ ಮುಂದೆ ಸಂತಾನವನ್ನು ಪಡೆಯುವವನಾದ ಕಾರಣ ಸಂತಾನ ದೇವತೆ ನಾಗನಿಗೆ ತೊಂದರೆಕೊಡಬಾರದು. ಹಾಗೆ ತೊಂದರೆ ಕೊಟ್ಟರೆ ಅವನಿಗೆ ದೊರೆಯುವ ಸಂತಾನಕ್ಕೆ ಧಕ್ಕೆಯಾಗಬಹುದು ಎಂಬ ಪರೋಕ್ಷ ಭಯದಿಂದ ಈ ನಂಬಿಕೆ ಹುಟ್ಟಿದೆ.

8. ಬಾವಿಯ ನೀರು ಹಳದಿಯಾಗುವುದು ನಾಗರಹಾವಿನ ಶಾಪದಿಂದ.

ಹೆಚ್ಚಾಗಿ ನಾಗನ ಬನಗಳು ಹಿಂಭಾಗದ ಹಿತ್ತಲಿನಲ್ಲಿರುವುದರಿಂದ ಮನೆಯ ಬಾವಿಯೂ ಹೆಚ್ಚಾಗಿ ಹಿಂಬದಿಯಿರುವ ಕಾರಣ ಬಾವಿಯ ನೀರು ಹಳದಿಯಾದರೆ ನಾಗನ ಶಾಪವೇ ಕಾರಣವೆಂದು ಭಾವಿಸುತ್ತಾರೆ. ನೀರು ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ವಾಸ್ತವಿಕವಾಗಿ ಬಾವಿಯಲ್ಲಿ ಕ್ರಿಮಿ, ಕೀಟಗಳು, ಮರದ ತರಗೆಲೆಗಳು ಬಿದ್ದು ಸೂರ್ಯನ ಬೆಳಕು ಚೆನ್ನಾಗಿ ಬೀಳದಿದ್ದರೆ, ಬಾವಿಯ ನೀರು ಅಲ್ಲೇ ಹಾಳಾಗಿ ಹಳದಿಯಾಗಬಹುದು. ಇಲ್ಲಿ ‘ಹಳದಿ’ ನಾಗರಹಾವಿನ ಬಣ್ಣವೂ ಆಗಿರುವುದರಿಂದ ‘ವರ್ಣಸಾಮ್ಯ’ವೂ ಇಂತಹ ನಂಬಿಕೆಗೆ ಕಾರಣ.

3. ಅತಿಮಾನುಷ ನಂಬಿಕೆಗಳು

ನಾಗರಹಾವಿನ ಬಗೆಗಿರುವ ರಹಸ್ಯವಾದ ಕಲ್ಪನೆಗಳಲ್ಲಿ ಮತ್ತು ನಾಗರಹಾವಿನ ಮೇಲಿರುವ ದೈವತ್ವದ ಆರೋಪ—ಇವು ಅತಿಮಾನುಷ ನಂಬಿಕೆಗಳಿಗೆ ಹಿನ್ನೆಲೆಯಾಗಿವೆ.

1. ನಾಗರಹಾವಿನ ತಲೆಯಲ್ಲಿ ಮಾಣಿಕ್ಯವಿರುತ್ತದೆ. ನಾಗರಹಾವು ಅದನ್ನು ರಾತ್ರಿಕಾಲದಲ್ಲಿ ಕೆಳಗಿಟ್ಟು ಅದರ ಬೆಳಕಿನಲ್ಲಿ ಆಹಾರವನ್ನು ಹುಡುಕುತ್ತದೆ. ಆಗ ಮಾಣಿಕ್ಯದ ಮೇಲೆ ಸೆಗಣಿಯನ್ನು ಒಗೆದರೆ ಸುತ್ತಲೂ ಕತ್ತಲಾಗಿ ಹಾವು ಸಾಯುತ್ತದೆ, ಮಾಣಿಕ್ಯ ನಮ್ಮದಾಗುತ್ತದೆ.

ತಲೆಯಲ್ಲಿ ರತ್ನ, ರತ್ನದ ಕಿರೀಟ....ಇತ್ಯಾದಿ ಹೊಂದುವುದು ಶ್ರೇಷ್ಠತೆಯ ಸೂಚನೆ. ನಾಗರಹಾವನ್ನು ದೇವರಸ್ಥಾನದಲ್ಲಿಟ್ಟು ಗೌರವದಿಂದ ಕಾಣುವುದರಿಂದ ಮತ್ತು ಅದರ ಹೆಡೆಯ ಮಧ್ಯಭಾಗದಲ್ಲಿ ದುಂಡಾದ ಸಣ್ಣ ಎತ್ತರದ ಭಾಗವಿರುವುದರಿಂದ 'ನಾಗಮಣಿ'ಯೆಂದು ಅದನ್ನು ಭಾವಿಸಿ ನಾಗರಹಾವಿಗೆ ಶ್ರೇಷ್ಠತ್ವವನ್ನು ಆರೋಪಿಸಲಾಗಿದೆ. ಅದನ್ನು ಪಡೆಯುವುದೆಂದರೆ ಅಗೋಚರ ಶ್ರೀಮಂತಿಕೆಯನ್ನು ಪಡೆಯುವ ಲಾಲಸೆ ಈ ನಂಬಿಕೆಯಲ್ಲಿದೆ.

2. ನಾಗರಹಾವು ನಿಧಿಯನ್ನು ಕಾಯುತ್ತದೆ.

ನಾಗರಹಾವು ಬಿಲವಾಸಿ. ಪ್ರಾಚೀನ ಕಾಲದಲ್ಲಿ ನಾಣ್ಯ, ಬಂಗಾರದ ಒಡವೆಗಳನ್ನು ಕಳ್ಳಕಾಕರ ಭಯದಿಂದ ಭೂಮಿಯಲ್ಲಿ ಹೂತಿಡುತ್ತಿದ್ದರು. ಭೂಮಿಯಲ್ಲಿ ಹೂತಿಡುವ ನಿಧಿಯಿಂದ ಮತ್ತು ಬಿಲವಾಸಿಯಾದ ನಾಗರಹಾವಿನ ಅಗೋಚರ ಗುಣದಿಂದ ವಾಸ್ತವಿಕವಾದ ಈ ನಂಬಿಕೆ ಹುಟ್ಟಿಕೊಂಡಿದೆ. ನಿಧಿಯನ್ನು ಘಟಸರ್ಪವೊಂದು ಕಾಯುತ್ತಿದೆ ಎಂಬ ಅಪಾಯದ ಹೆದರಿಕೆಯನ್ನು ಹುಟ್ಟಿಸಿ ನಿಧಿಯನ್ನು ರಕ್ಷಿಸಲು ಈ ಬಗೆಯ ವದಂತಿಯನ್ನು ಹುಟ್ಟಿಸಿರಬೇಕು. ಹಿಂದಿನಕಾಲದ ಮನೆಗಳಲ್ಲಿ ಸಾಕಷ್ಟು ಬೆಳಕಿಲ್ಲದ ಕತ್ತಲೆ ಕೋಣೆಗಳಲ್ಲಿ ಬೆಲೆಬಾಳುವ ವಸ್ತುಗಳನ್ನು ಧಾನ್ಯಗಳನ್ನು ಇಡುತ್ತಿದ್ದರು ಧಾನ್ಯ ತಿನ್ನಲು ಇಲಿಗಳು ಬರುತ್ತವೆ. ಇಲಿಗಳ ಬೇಟೆಗೆ ನಾಗರಹಾವು ಬರುತ್ತದೆ. ಅಲ್ಲಿ ಸಿಕ್ಕಿದ ಇಲಿಗಳನ್ನು ತಿಂದು ಯಾವುದೇ ತೊಂದರೆಗಳಿಲ್ಲದ ಅದು ಹಲವು ದಿನಗಳವರೆಗೆ ಇಲಿಗಳನ್ನು ಹೊಂಚು ಹಾಕುತ್ತಾ ಅಲ್ಲೇ ಇರುತ್ತಿದ್ದಿರಬೇಕು. ಮನೆಯವರು ಆ ಕತ್ತಲಿನ ಕೋಣೆಯನ್ನು ಪ್ರವೇಶಿಸಿದಾಕ್ಷಣ ಅವರ ಗಮನ ಮೊದಲು ತಾವಿಟ್ಟ ಒಡವೆಗಳ ಮೇಲಿರುವುದರಿಂದ ಅದನ್ನು ಗಮನಿಸುವಾಗ ತನ್ನ ಸಂಪಾದನೆಗಾಗಿ ಬಂದ ಹಾವನ್ನು ಕಂಡು 'ಸಂಪತ್ತನ್ನು ನಾಗರಹಾವು ರಕ್ಷಿಸುತ್ತದೆ' ಎಂಬ ನಂಬಿಕೆಯನ್ನು ತಾಳಿರಬೇಕು.

3. ಗರುಡರೇಖೆ ಇದ್ದವರಿಗೆ ನಾಗರಹಾವಿನ ಅಪಾಯವಿಲ್ಲ. ಈ ನಂಬಿಕೆ ನಾಗರಹಾವಿನ ಭಯದಿಂದಾಗಿ ಅದರ ಪ್ರತಿರೋಧದ ಹಿನ್ನೆಲೆಯಲ್ಲಿ ಹುಟ್ಟಿದುದು. ಗರುಡನಿಗೂ ನಾಗರಹಾವಿಗೂ ಇರುವ ವೈರತ್ವದ ಹಿನ್ನೆಲೆ ಇದಕ್ಕಿದೆ. ನಾಗರಹಾವು ಕೈಯಲ್ಲಿಯ ರೇಖೆಗಳನ್ನು ಓದಿ ಗರುಡರೇಖೆಯನ್ನು ಗಮನಿಸುವಷ್ಟು ಹಸ್ತ ಸಾಮುದ್ರಿಕಜ್ಞವಾಗುವುದು ಅಸಂಭವ. ಆದರೆ ಇಂದಿಗೂ ಹಳ್ಳಿಗಳಲ್ಲಿ ನಾಗರಹಾವು ಕಾಣಿಸಿಕೊಂಡಾಗ ಗರುಡರೇಖೆ ಇದ್ದವರೆಂದು ನಂಬಲಾದ ಜನರಿಂದ ನಾಗರಹಾವನ್ನು

ಹಿಡಿದು ಮಡಕೆ, ಡಬ್ಬಗಳಲ್ಲಿ ತುಂಬಿಸಿ, ದೂರಕ್ಕೆ ಸಾಗಿಸುವುದಿದೆ. ಇದರ ಹಿನ್ನೆಲೆಯಲ್ಲಿ ಇನ್ನೂ ಸಂಶೋಧನೆ ನಡೆಯಬೇಕಷ್ಟೆ.

4. ಸತ್ತ ನಾಗರಹಾವು ಕಾಣಿಸಿಕೊಂಡರೆ ಅದಕ್ಕೆ ಅಂತ್ಯಸಂಸ್ಕಾರ ಮಾಡಬೇಕು.

ವಾಸ್ತವಿಕವಾಗಿ ಸಂಸ್ಕಾರ ನಡೆಸುವುದು ವ್ಯಕ್ತಿ ಸತ್ತಾಗ ಮಾತ್ರ. ಸತ್ತ ನಾಗರಹಾವು ಕಾಣಸಿಕ್ಕಿದರೆ ವ್ಯಕ್ತಿಯೊಬ್ಬ ಸತ್ತಾಗ ನಡೆಸುವಂತೆ ಸತ್ತ ಹಾವಿಗೂ ಅಂತ್ಯಕ್ರಿಯೆ ನಡೆಸುವ ಸಂಪ್ರದಾಯವಿದೆ. ಇಂತಹ ಕಲ್ಪನೆಗೆ ಕಾರಣ ಬಹುಶಃ 'ನಾಗರಹಾವು ಬ್ರಾಹ್ಮಣ' ಎನ್ನುವ ಕಲ್ಪನೆ ಇರಬಹುದೆ? ಎಂದು ಊಹಿಸಬಹುದು. ವಾಸ್ತವಿಕವಾಗಿ ವಿಷಯುಕ್ತವಾದ ನಾಗರಹಾವು ಸತ್ತಾಗ ಅದರ ವಿಷಗಾಳಿಯ ಮೂಲಕ ವಾತಾವರಣದಲ್ಲಿ ಹರಡಿ ರೋಗರುಜಿನಗಳು ತಲೆದೋರಬಹುದು. ವಿಷವಿರುವ ಯಾವುದೇ ಪ್ರಾಣಿಗಳು ಸತ್ತಾಗ ಅವನ್ನು ಸುಟ್ಟು ಹಾಕುವ ಪದ್ಧತಿ ಇದೆ. ನಾಗನ ಬಗೆಗಿರುವ ಅತಿಮಾನುಷ ಕಲ್ಪನೆಯೇ ಇಂತಹ ಧಾರ್ಮಿಕವಾದ ಆಚರಣೆಯ ರೂಪವನ್ನು ಪಡೆದಂತೆ ಕಾಣುತ್ತದೆ.

4. ನಿಷೇಧಾತ್ಮಕ ನಂಬಿಕೆಗಳು

ಭಯ ಮತ್ತು ಗೌರವದಿಂದ ಅತಿಮಾನುಷ ಕಲ್ಪನೆಗಳ ಬಗ್ಗೆ ಜನಪದರಲ್ಲಿ ನಿಷೇಧವೂ ಇರುತ್ತದೆ.

1. ಸರ್ಪ ವಿಷಕ್ಕೆ ಉಪಯೋಗಿಸುವ ಗಿಡಮೂಲಿಕೆಗಳ ಹೆಸರನ್ನು ಹೇಳಬಾರದು, ಅವು ಯಾವುದೆಂದು ತೋರಿಸಬಾರದು.

2. ನಾಗರಹಾವು ಕಾಣಿಸಿಕೊಂಡರೆ ಅದರ ಹೆಸರು ಹಿಡಿದು ಕೂಗಬಾರದು.

ಈ ಎರಡು ನಂಬಿಕೆಗಳಲ್ಲಿ ಹೆಸರನ್ನೆತ್ತಿ ಹೇಳುವುದರ ಬಗ್ಗೆ ನಿಷೇಧವಿದೆ. ಹೆಸರನ್ನೆತ್ತುವುದರಿಂದ ಅವುಗಳ ಮಹತ್ತ್ವವನ್ನು ನಿರ್ಲಕ್ಷಿಸಿದಂತಾಗುವುದೆಂಬ ಹಿನ್ನೆಲೆ ಇಲ್ಲಿ ಮುಖ್ಯವಾದುದು. ಗಿಡಮೂಲಿಕೆಗಳ ಹೆಸರನ್ನು ಹೇಳಿದರೆ, ಎಲ್ಲರೂ ಅದನ್ನು ಉಪಯೋಗಿಸಲು ಪ್ರಾರಂಭಿಸಬಹುದು. ಕೆಲವರು ಅದನ್ನು ಕಡೆಗಣಿಸಬಹುದು. ಮುಖ್ಯವಾಗಿ ಹಳ್ಳಿಯ ವೈದ್ಯರು ಅದನ್ನೇ ಅವಲಂಬಿಸಿ ಬದುಕುವುದರಿಂದ ಬೇರೆಯವರಿಗೆ ಅವುಗಳ ಪರಿಚಯವಾದರೆ ಹಳ್ಳಿವೈದ್ಯರ ಬೇಡಿಕೆ ಕಡಮೆಯಾಗಿ ಅವರ ಸಂಪಾದನೆಗೆ ತೊಂದರೆಯಾಗಬಹುದು.

ಅಪಾಯ ಮತ್ತು ಕೇಡುಕಿನ ಪ್ರಾಣಿಯಾದ ನಾಗರಹಾವಿನ ಮೇಲೆ ಭಯ ಮತ್ತು ಗೌರವವಿದ್ದ ಕಾರಣದಿಂದಾಗಿ ಅದನ್ನು ಹೆಸರನ್ನೆತ್ತಿ ಕರೆಯದೆ, ಗೌರವದಿಂದ ದೇವರಹಾವು, ಹಾವು .... ಇತ್ಯಾದಿ ಗೌರವ ಸೂಚಕ ಸಂಬೋಧನೆಯಿಂದ ಕರೆಯುತ್ತಾರೆ. (ಧರ್ಮಸ್ಥಳ ಎಂದು ಸಾಯಂಕಾಲದ ನಂತರ ಹೇಳುವ ಕ್ರಮವಿಲ್ಲ 'ತೆಂಕು' ಎಂದೆನ್ನುತ್ತಾರೆ).

3. ನಾಗರಹಾವಿನತ್ತ ಬೆರಳು ತೋರಿಸಬಾರದು, ತೋರಿಸಿದರೆ ಅದನ್ನು ಒಮ್ಮೆಲೆ ಕಚ್ಚಬೇಕು.

'ಬೆರಳು ತೋರಿಸುವಿಕೆ' ಸೂಚಿಸುವ ಸಂಕೇತ. ನಾಗರಹಾವನ್ನು ಸೂಚಿಸುವ ಮೂಲಕ ಅದರ ವಿಷಯವಾಗಿ ಮಾತನಾಡುವುದು ನಾಗರಹಾವಿನ ಅತಿಮಾನುಷ ಕಲ್ಪನೆಯನ್ನು ಕಡೆಗಣಿಸಿದಂತೆ ಆಗಬಹುದೆಂಬ ಭಾವನೆಯಿರಬಹುದು. ನಾಗರಹಾವು ಅದರ ಕಚ್ಚುವಿಕೆಯ ಮೂಲಕ ಪ್ರಾಣಾಂತಿಕವಾದ ವಿಷದಿಂದ ಪ್ರಸಿದ್ಧ. ನಾಗರಹಾವನ್ನು ಸೂಚಿಸಿದ ಬೆರಳನ್ನು ನಾಗ ಬಂದು ಕಚ್ಚುವುದರ ಬದಲಾಗಿ ತಾನೇ ಕಚ್ಚಿಕೊಳ್ಳುವುದರ ಮೂಲಕ ನಾಗರಹಾವಿನಿಂದ ಒದಗಬಹುದಾದ ಅಪಾಯದ ಪರಿಹಾರವನ್ನು ತಾವೇ ಮಾಡಿಕೊಳ್ಳುವುದು ನಂಬಿಕೆಗೆ ಪೂರಕವಾದ ಆಚರಣೆಯನ್ನು ಸೂಚಿಸುತ್ತದೆ.

4. ನಾಗರಹಾವು-ಕೇರೆಹಾವುಗಳು ಸರಸವಾಡುವುದನ್ನು ನೋಡಬಾರದು.

ಇಲ್ಲಿ ನಾಗರಹಾವಿನ ಬಗೆಗಿರುವ ಅತಿಮಾನುಷವಾದ ನಂಬಿಕೆ ಮತ್ತು ಅಪಾಯದ ಅರಿವನ್ನು ಗಮನಿಸಬಹುದು. ವಿಭಿನ್ನ ಲಿಂಗಿಗಳು ಸರಸವಾಡುವುದು ತೀರಾ ವೈಯಕ್ತಿಕವಾದ ಅಂಶ. ನಾಗರಹಾವು ಮತ್ತು ಕೇರೆಹಾವುಗಳ ನಿರಂತರವಾದ ಎಣೆಯಾಟ ಜನಪದರಿಗೆ ಸಾಮಾನ್ಯವಾದ ನೋಟ. ತೀರಾ ವೈಯಕ್ತಿಕವಾದ ಕೂಡುವ ಅಥವಾ ಸರಸವಾಡುವ ಕ್ರಿಯೆಯನ್ನು ಬೇರೆಯವರು ನೋಡುವುದು, ಸರಸವಾಡುವವರಿಗೆ ಅಥವಾ ಕೂಡುವವರಿಗೆ ಸಹಿಸದು. ಭಯಹುಟ್ಟಿಸುವ ದೇವತೆ ನಾಗರಹಾವಿನ ಸರಸವನ್ನು ನೋಡುವುದು ಅಪಾಯಕ್ಕೆ ಎಡೆಯಾದಂತಾಗುವುದೆಂಬ ಭಾವನೆಯ ಜೊತೆಗೆ ಇಂತಹ ಸರಸಕ್ಕೆ ತೊಂದರೆಯುಂಟಾದರೆ ಅವುಗಳ ಸ್ಥಿತಿ ತಮಗೂ ಬರಬಹುದೆಂಬ ಸ್ವಂತ ಪಾಪದ ಕಲ್ಪನೆಯೂ ಈ ರೀತಿಯ ನಿಷೇಧಾತ್ಮಕ ನಂಬಿಕೆಗೆ ಕಾರಣವಾಗಿದೆ.

5. ಶಕುನ ಸೂಚಕ ನಂಬಿಕೆಗಳು

1. ಕೋಳಿ ಅಂಕಕ್ಕೆ ಹೋಗುವಾಗ ನಾಗ ಎದುರು ಬಂದರೆ ಅಪಶಕುನ.

2. ಲಿಂಬೆಹಣ್ಣಿನ ಮರದಡಿ ನಾಗರಹಾವು ಬಂದರೆ ಆ ಮರವು ಸಾಯುತ್ತದೆ.

ನಾಗರ ಹಾವು ಕೋಳಿಯನ್ನು, ಕೆಲವೊಮ್ಮೆ ಅದರ ಮೊಟ್ಟೆಯನ್ನು ತಿನ್ನುತ್ತದೆ. ಕೋಳಿ ಅಂಕಕ್ಕೆ ಕೋಳಿಯನ್ನು ಹಿಡಿದುಕೊಂಡು ಹೊರಟಾಗ ನಾಗರ ಹಾವು ಎದುರಿಗೆ ಬರುವುದೆಂದರೆ, ಮಧ್ಯದಾರಿಯಲ್ಲೇ ಕೋಳಿಗೆ ಸೋಲಿನ ಶಕುನವಾಗುವುದು, ಎಂಬ ಭಾವನೆಯಿಂದ ಕೋಳಿಯನ್ನು ಅಂಕಕ್ಕೆ ಕೊಂಡು ಹೋದರೂ ನಾಗರ ಹಾವು ಸಿಕ್ಕ ಕಾರಣದಿಂದ ಕೋಳಿ ಅಂಕದಲ್ಲಿ ಸೋಲುತ್ತದೆ ಎಂಬುದು ಈ ನಂಬಿಕೆಯ ಹಿನ್ನೆಲೆಯಾಗಿರಬೇಕು.

ಲಿಂಬೆ ಹಣ್ಣು ಮಾಂತ್ರಿಕ ಕ್ರಿಯೆಗಳಲ್ಲಿ ಉಪಯೋಗಿಸುವ ವಸ್ತು. ನಾಗರ

ಹಾವಿನ ಅಪಾಯದಿಂದ ದೂರವಿರಲು ಅದನ್ನು 'ತಡೆ ಹಾಕುವ ಕ್ರಮ' ವಿದೆಯೆಂದು ಹಳ್ಳಿಗಳಲ್ಲಿ ಹೇಳುತ್ತಾರೆ. ತಡೆ ಹಾಕಲು ಲಿಂಬೆಹಣ್ಣನ್ನು ಉಪಯೋಗಿಸುತ್ತಾರೆ. ಆದುದರಿಂದ ಲಿಂಬೆಹಣ್ಣಿಗೂ ವೈರವೆಂಬ ಕಲ್ಪನೆ ಜನಪದರಲ್ಲಿ ಹುಟ್ಟಿರಬೇಕು. ಆದ್ದರಿಂದ ಲಿಂಬೆಹಣ್ಣಿನ ಮರದಡಿ ನಾಗ ಬಂದರೆ ಆ ಮರ ಸಾಯುತ್ತದೆ ಎಂಬ ನಂಬಿಕೆಯನ್ನು ತಾಳಿರಬೇಕು. ಅದಕ್ಕೆ ಪ್ರತಿಯಾಗಿ ಲಿಂಬೆ ಮರದಡಿ ನಾಗರಹಾವು ಬಾರದಿರಲೆಂದು ಅದರ ಬುಡಕ್ಕೆ ಮಡಕೆ ಚೂರುಗಳನ್ನು ಹಾಕಿ, ಕಸಗುಡಿಸುವ ಪೊರಕೆ, ಚರ್ಮದ ಚಪ್ಪಲಿಗಳನ್ನು ಲಿಂಬೆಗಿಡದ ಗೆಲ್ಲಿಗೆ ನೇತು ಹಾಕುತ್ತಾರೆ. ಶತ್ರುಗಳ ಮುಖಭಂಗಕ್ಕೆ ಪೊರಕೆ, ಮೆಟ್ಟು-ಮೊದಲಾದುವನ್ನು ಉಪಯೋಗಿಸುವ ಹಿನ್ನೆಲೆಯಲ್ಲಿ ಇಂತಹ ಆಚರಣೆ ಬಂದಿರಬೇಕು.

6. ನಾಗರ ಹಾವಿನ ಅಸ್ತಿತ್ವ ಸೂಚಿ ನಂಬಿಕೆಗಳು.

1. ಪರಿಮಳ ಬೀರುವ ಕೇದಗೆ, ಸಂಪಿಗೆ, ಚಂದನ, ಗಂಧ ಮೊದಲಾದ ಮರಗಳಡಿ ನಾಗರ ಹಾವಿರುತ್ತದೆ.

ನಾಗರ ಹಾವಿನ ಬುಸುಗುಟ್ಟುವಿಕೆ ಮನುಷ್ಯನ ಪರಿಮಳ ಆಸ್ವಾದನೆಯ ದೀರ್ಘಶ್ವಾಸವನ್ನು ಹೋಲುತ್ತದೆ. ಈ ಮರಗಳು ಪರಿಮಳವನ್ನು ಹರಡುವ ಅಂಶಗಳನ್ನು ಒಳಗೊಂಡಿರುವ ಕಾರಣ ಸರ್ಪದ ಬುಸುಗುಟ್ಟುವಿಕೆಯ ಗುಣಕ್ಕೆ ಹೋಲಿಸಿ ಈ ನಂಬಿಕೆ ಹುಟ್ಟಿಕೊಂಡಿದೆ. ಆದರೆ ಈ ಮರಗಳಡಿಯಲ್ಲಿ ಅಧಿಕವಾದ ತಂಪಿರುವುದೇ ನಾಗರಹಾವು ಈ ಮರಗಳಡಿ ಇರುವುದಕ್ಕೆ ಮುಖ್ಯ ಕಾರಣ. ಕೇದಗೆ ಹೂವಿನ ಗೊಂಚಲಿನ ಮಧ್ಯದಲ್ಲಿರುವ ಪರಾಗದ ಧೂಳಿನ ಕಣಗಳನ್ನು ನಾಗರ ಹಾವು ತಿನ್ನುತ್ತದೆ. ಈ ಕಾರಣದಿಂದಲೂ ನಾಗರ ಹಾವು ಕೇದಗೆ ಮರದಲ್ಲಿ ಇರಬಹುದು. ಕೇದಗೆ ಮತ್ತು ಸಂಪಿಗೆ ಹೂವುಗಳ ವರ್ಣ ಮತ್ತು ನಾಗರ ಹಾವಿನ ವರ್ಣ 'ಹಳದಿ' ಯಾಗಿರುವ ಕಾರಣ ವರ್ಣಸಾಮ್ಯವೂ ಇಂತಹ ನಂಬಿಕೆಗೆ ಕಾರಣವಾಗಿರಬಹುದು.

2. ಗರುಡ ಪಾತಾಳ ಗಿಡ ನೆಟ್ಟರೆ ನಾಗರ ಹಾವು ಬರುವುದಿಲ್ಲ

'ಗರುಡ ಪಾತಾಳ' ಎಂಬ ಸಸ್ಯಕ್ಕೆ ನಾಗರ ಹಾವಿನ ವಿಷವನ್ನು ಪರಿಹರಿಸುವ ಶಕ್ತಿಯಿದೆ. ಈ ಗುಣದಿಂದಾಗಿ ನಾಗರ ಹಾವಿನ ವಿರೋಧಿಯಾದ 'ಗರುಡ'ನ ಹೆಸರಿನಿಂದಲೂ, ನಾಗರಹಾವಿನ ವಿಷ ಪರಿಹಾರಕ್ಕೆ ಸಂವಾದಿಯಾಗಿ 'ಪಾತಾಳ' ಎಂಬ ಆಳದ ಸ್ಥಳ ವಾಚಕವನ್ನು ಜೊತೆಗೂಡಿಸಿ 'ಗರುಡ ಪಾತಾಳ' ಎಂಬ ಹೆಸರಿನಿಂದ ಇದನ್ನು ಕರೆಯುಲಾರಂಭಿಸಿರಬೇಕು.

7. ನಾಗರ ಹಾವು ಮನೆಗೆ ಬರುವ ಸಂದರ್ಭಗಳ ಬಗೆಗಿನ ನಂಬಿಕೆಗಳು

1. ನಾಗರ ಹಾವಿನ ಮೇಲೆ ಮನುಷ್ಯರ ನೆರಳು ಬಿದ್ದರೆ ನಾಗರ ಹಾವು ಮನೆಗೆ ಬರುತ್ತದೆ.

2. ದೇವಾಲಯಗಳಲ್ಲಿ ಶುಚಿತ್ವವಿಲ್ಲದಿದ್ದರೆ, ಪೂಜೆಯಲ್ಲಿ ದೋಷವಾದರೆ ನಾಗರ ಹಾವು ಬರುತ್ತದೆ.

3. ಮನೆಯಲ್ಲಿ ಬಹಿಷ್ಠೆಯರಾದ ಹೆಂಗಸರು ಅಶುದ್ಧವಾದ ರೀತಿಯಲ್ಲಿ ತಿರುಗಾಡಿದರೆ ನಾಗರ ಹಾವು ಬರುತ್ತದೆ.

ಈ ನಂಬಿಕೆಗಳಲ್ಲಿ ಶುಚಿತ್ವದ ಅಂಶಗಳು ಸಾಮಾನ್ಯವಾಗಿವೆ. ತಪ್ಪು ಮಾಡುವುದನ್ನು ತಪ್ಪಿಸಲು ಭಯದ ಕಾರಣವನ್ನು ಒಡ್ಡುವುದು ಇಲ್ಲಿ ಗಮನೀಯ. ನಾಗರ ಹಾವಿನ ಹತ್ತಿರ ಹೋಗದಿರುವುದರಿಂದ ಅದರ ಮೇಲೆ ಬೀಳುವ ನೆರಳನ್ನು ತಪ್ಪಿಸಬಹುದು, ದೇವಾಲಯವನ್ನು ಶುಚಿಯಾಗಿಟ್ಟು ಕ್ರಮಬದ್ಧ ಪೂಜೆ ನಡೆಸುವುದರಿಂದ, ಬಹಿಷ್ಠೆಯರು ಆರಾಮವಾಗಿ ಒಂದು ಕಡೆ ಇರುವುದರಿಂದ ಅವರಿಗೇ ಒಳ್ಳೆಯದು. ಲೌಕಿಕವಾದ ವ್ಯವಹಾರಗಳಿಗೆ ಭಯದ ನೀತಿಯ ರೂಪವನ್ನು ಇಲ್ಲಿ ಕೊಡಲಾಗಿದೆ.

4. ರಾತ್ರಿ ಹೊತ್ತು ಸಿಳ್ಳು, ಸೀಟಿ ಹಾಕಿದಾಗ, ಕೊಳಲು ಮೊದಲಾದ ವಾದ್ಯಗಳನ್ನು ಬಾರಿಸಿದಾಗ ನಾಗರ ಹಾವು ಬರುತ್ತದೆ.

ಈ ನಂಬಿಕೆ ನಾಗರ ಹಾವು ಮತ್ತು ಸಂಗೀತಕ್ಕೆ ಸಂಬಂಧಿಸಿದುದು. ನಾಗರ ಹಾವಿಗೆ ಸಂಗೀತವೆಂದರೆ ಪ್ರಿಯವೆಂಬ ಕಲ್ಪನೆ ಜನಪದರದ್ದು. ಹಾವಾಡಿಗರು ಪುಂಗಿಯನ್ನೂದಿ ನಾಗರ ಹಾವನ್ನು ಆಡಿಸುತ್ತಾರೆ. ಹಾವಾಡಿಗನು ಪುಂಗಿಯನ್ನು ಊದಿ ಅದನ್ನು ಎಚ್ಚರಿಸಿದಾಗ ಹಾವಾಡಿಗನ ಪುಂಗಿಯ ಚಲನಗತಿಗನುಗುಣವಾಗಿ ಹಾವು ಹೆಡೆ ಎತ್ತಿ ತೊನೆದಾಡುತ್ತದೆ. ಅದು ಹಾಗೆ ತೊನೆದಾಡುವುದು ತನ್ನ ಸಮತೋಲನವನ್ನು ಕಾಯ್ದುಕೊಳ್ಳುವುದಕ್ಕಾಗಿ ವಿನಾ ಪುಂಗಿಯ ನಾದಕ್ಕಲ್ಲ. ಆದರೆ ಭಾವುಕ ಜನಪದರ ದೃಷ್ಟಿಯಲ್ಲಿ ನಾಗರ ಹಾವಿಗೆ ಸಂಗೀತ ಪ್ರಿಯವಾದುದರಿಂದ ಅದು ಸಂಗೀತವನ್ನು ಆಲಿಸಿ ತನ್ನ ತಲೆಯನ್ನು ತೂಗುತ್ತದೆ. ಇದೆ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನಾಗಸಂಬಂಧಿ ಧಾರ್ಮಿಕ ಕ್ರಿಯೆಗಳಲ್ಲಿ 'ನಾಗಸ್ವರ' ಎಂಬ ವಾದ್ಯ ವಿಶೇಷವನ್ನು ಊದುತ್ತಾರೆ. ನಾಗನ ಆವೇಶ ಬರುವ ಪಾತ್ರಿಗಳು ಈ ನಾಗಸ್ವರವನ್ನು ಆಲಿಸಿ ಹಾವಿನಂತೆ ತೊನೆದಾಡುವುದಿದೆ ರಾತ್ರಿ ಕಾಲದಲ್ಲಿ ಭಯದ ಕಲ್ಪನೆ ಅಧಿಕವಾಗಿರುವುದರಿಂದ, ನಾಗರಹಾವಿನ ಬಗ್ಗೆ ಇರುವ ಅಪಾಯದ ಭಾವನೆಗಳು ಇಂತಹ ನಂಬಿಕೆಗೆ ಕಾರಣವಾಗಿವೆಯೆನ್ನಬಹುದು.

8. ಇತರ ನಂಬಿಕೆಗಳು

1. ಹುತ್ತಕ್ಕೆ ಸುತ್ತು ಹಾಕಬಾರದು–ನಾಗರ ಹಾವು ಹುತ್ತದಲ್ಲಿ ವಾಸಿಸುತ್ತದೆ, ಎಂಬ ಕಾರಣದಿಂದ ಹುತ್ತದ ಕುರಿತಾದ ಈ ನಿಷೇಧವನ್ನು ಹೇಳುತ್ತದೆ. ನಾಗರ ಹಾವು ಗಾಳಿ, ಧೂಳು ಸೇವನೆಗಾಗಿ ಹುತ್ತದಿಂದ ಹೊರಗಡೆ ಬಂದು ತಿರುಗಾಡುತ್ತಿರುತ್ತದೆ. ದಾರಿಯಲ್ಲಿ ಒಂದೇ ಬದಿಯಲ್ಲಿ ಜನರು ಸಾಗುತ್ತಿದ್ದರೆ ಜನ ಸಾಗುವ ಸಪ್ಪಳ ಕೇಳಿ ಅದು ಇನ್ನೊಂದು ಬದಿಗೆ ಹೋಗಬಹುದು. ಆದರೆ ಜನರು

ಹುತ್ತಕ್ಕೆ ಸುತ್ತು ಹಾಕುವುದರಿಂದ ಹೊರ ಬಂದಿರುವ ನಾಗರ ಹಾವಿಗೆ ಸುತ್ತಲೂ ಸಪ್ಪಳ ಕೇಳಿ ಏಕಕಾಲಕ್ಕೆ ಎಲ್ಲಿಗೆ ಹೋಗುವುದೆಂದು ತೋಚದೆ ಗಲಿಬಿಲಿಗೊಂಡು ಆತ್ಮ ರಕ್ಷಣೆಗಾಗಿ ಯಾರನ್ನಾದರೂ ಹೆದರಿಸಿ ಕಚ್ಚಬಹುದು. ಇಂತಹ ಅಪಾಯ ದಿಂದ ಪಾರಾಗಲು ಈ ನಂಬಿಕೆ ಹುಟ್ಟಿದೆ.

2. ಶುಭ ಕೆಲಸಕ್ಕೆ ಹೊರಟಾಗ ನಾಗರಹಾವು ಎದುರು ಸಿಕ್ಕಿದರೆ ಅಪಶಕುನ.

ನಾಗರ ಹಾವೆಂದರೆ 'ಬ್ರಾಹ್ಮಣ'ನೆಂಬ ಕಲ್ಪನೆಯೇ ಈ ನಂಬಿಕೆಗೆ ಕಾರಣ ವಾಗಿರಬೇಕು. ಒಳ್ಳೆಯ ಕೆಲಸಕ್ಕೆ ಹೊರಟಾಗ ಒಂಟಿ ಬ್ರಾಹ್ಮಣ ಎದುರು ಸಿಗಬಾರದು. ಅದು ಆ ಕೆಲಸ ನಿಷ್ಫಲವಾಗುವುದೆಂಬ ನಂಬಿಕೆಯಿದೆ.

3. ಹುತ್ತದ ಅಡಿಯಲ್ಲಿ ಬಾವಿ ತೋಡಿದರೆ ನೀರು ಸಿಗುತ್ತದೆ.

ಗೆದ್ದಲುಗಳು ಹುತ್ತ ಕಟ್ಟುವ ಸ್ಥಳಗಳು ತಂಪಾಗಿರುತ್ತವೆ. ಹೆಚ್ಚಾಗಿ ಹುತ್ತ ವಿರುವ ನೆಲದ ಅಡಿಭಾಗ ನೀರಿನ ಆಸರೆಯಿರುವ ಸ್ಥಳಗಳೇ ಆಗಿರುತ್ತವೆ.

4. ನಾಗ ಬನದ ಹುತ್ತದ ಮಣ್ಣನ್ನು ಹಚ್ಚಿದರೆ ತುರಿಕಜ್ಜಿ ವಾಸಿಯಾಗುತ್ತದೆ.

ಈ ನಂಬಿಕೆಯಲ್ಲಿ ಆರೋಗ್ಯದ ಅಂಶವಿದೆ. ಪ್ರಕೃತಿ ಚಿಕಿತ್ಸೆಯಲ್ಲಿ ಮಣ್ಣಿನ (ಮೃತ್ತಿಕೆ) ಚಿಕಿತ್ಸೆಯೂ ಒಂದು. ನಾಗರಹಾವನ್ನು ಚರ್ಮರೋಗ ಪರಿಹಾರಕ್ಕಾಗಿ ಆರಾಧಿಸುವ ಕ್ರಮವಿದೆ. ಹುತ್ತದ ಮಣ್ಣಿನಲ್ಲಿ ಗೆದ್ದಲಿನ ನಾಲಗೆಯ ದ್ರವವಿರುತ್ತದೆ. ಈ ಬಗ್ಗೆ ಸುಧಾಕರ–ಇವರ ಹೇಳಿಕೆಯಂತೆ ಗೆದ್ದಲಿನ ಜೊಲ್ಲು ರಸದಲ್ಲಿ ಗಾಯವನ್ನು ಮಾಯಿಸುವ ಮದ್ದಿನ ಗುಣವಿರುತ್ತದೆ.[5] ಜನಪದರಿಗೆ ಹುತ್ತದ ಮಣ್ಣನ್ನು ತುರಿ ಕಜ್ಜಿಗೆ ಹಚ್ಚಬೇಕೆನ್ನುವುದಕ್ಕಿಂತ ನಾಗಬನದ ಹುತ್ತದ ಮಣ್ಣನ್ನು ತುರಿಕಜ್ಜಿಗೆ ಹಚ್ಚಬೇಕೆಂದರೆ ಹೆಚ್ಚು ಪರಿಣಾಮಕಾರಿ. ಆದುದರಿಂದ ವಾಸ್ತವಿಕ ಅಂಶಕ್ಕೆ ಧಾರ್ಮಿಕ ಚೌಕಟ್ಟನ್ನು ಇಲ್ಲಿ ಕೊಡಲಾಗಿದೆ.

5. ನಾಗರ ಹಾವಿಗೆ ಹಾಲನ್ನು ಸಮರ್ಪಿಸಿದರೆ ಅದಕ್ಕೆ ತೃಪ್ತಿ ಜಾಸ್ತಿ.

ಹಾಲು ಪುಷ್ಟಿಕರ ಮತ್ತು ಸರ್ವತೋಮುಖವಾದ ಆಹಾರ. ಮನುಷ್ಯನು ಹಾಲನ್ನು ಉಪಯೋಗಿಸುವುದು ಈ ದೃಷ್ಟಿಯಿಂದ. ಗೋವು ಪವಿತ್ರ ಎಂಬ ನಂಬಿಕೆ ಯಿಂದಾಗಿ ಮತ್ತು ಹಾಲಿನ ಸತ್ತ್ವಭರಿತ ಅಂಶದಿಂದಾಗಿ ಅದೂ 'ಪವಿತ್ರ'ವೆಂಬ ನಂಬಿಕೆಗೆ ಕಾರಣವಾಗಿದೆ. ಆದುದರಿಂದಲೇ ಪವಿತ್ರ ಕಾರ್ಯಗಳಿಗೆ ದನದ ಹಾಲನ್ನೇ ಉಪಯೋಗಿಸುವ ಕ್ರಮವಿದೆ. ನಾಗರಹಾವು ಸದಾ ಭಯ ಮತ್ತು ಅಪಾಯವನ್ನು ಹುಟ್ಟಿಸುವ ಜೀವಿಯಾದ ಕಾರಣ ಅದನ್ನು ಒಲಿಸಿಕೊಳ್ಳಲು ಪವಿತ್ರವಾದ ಹಾಲನ್ನು ಕೊಟ್ಟರೆ ಅದು ಎಂದೂ ತಮಗೆ ಕೇಡನ್ನು ಬಗೆಯದು ಎಂಬ ಹಿನ್ನೆಲೆಯಲ್ಲಿ ಈ ನಂಬಿಕೆ ಹುಟ್ಟಿದೆ.

ಹೀಗೆ ನಾಗಸಂಬಂಧಿ ನಂಬಿಕೆಗಳ ಅಧ್ಯಯನ ವೈವಿಧ್ಯಮಯವಾದ ಸಾಂಸ್ಕೃತಿಕ ಅಂಶಗಳನ್ನು ಹೊರಚೆಲ್ಲುತ್ತದೆ.

ಅಡಿಟಿಪ್ಪಣಿಗಳು :

1. ಡಾ.ಬಿ.ಎ. ವಿವೇಕರೈ., 'ಅನ್ವಯಿಕ ಜಾನಪದ' ಮಂಗಳಗಂಗೋತ್ರಿ; 1985 ಪುಟ 13.
2. ಈ ಕತೆಗೆ ನೋಡಿ–ಶ್ರೀ ಎನ್.ಎಸ್. ಕಿಲ್ಲೆ ಮತ್ತು ಶ್ರೀ ಎಸ್. ಎ. ಶೀನಪ್ಪ ಹೆಗ್ಡೆ 'ಪ್ರಾಚೀನ ತುಳುನಾಡು' "ನಾಗ ಪಂಚಮಿ ಕತೆ" ಶ್ರೀಮತಿ ಇಂದಿರಾಕಿಲ್ಲೆ ಮಂಗಳೂರು. 1954, ಪುಟ 140-142.
3. ವ್ಯಕ್ತಿಯೊಬ್ಬ 12 ವರ್ಷ ಮನೆ ಬಿಟ್ಟರೆ ಆತ ಮನೆಯ ಸಂಬಂಧವನ್ನು ಕಳೆದು ಕೊಳ್ಳುತ್ತಾನೆ ಎಂಬ ನಂಬಿಕೆ ಜನಪದರಲ್ಲಿದೆ. ಪಾಂಡವರು 12 ವರ್ಷವನವಾಸಕ್ಕೆ ಹೋದರು ಎಂಬ ಪೌರಾಣಿಕ ನಿದರ್ಶನವನ್ನೂ ಇದಕ್ಕೆ ಪೋಷಕವಾಗಿ ಬಳಸಿ ಕೊಳ್ಳುತ್ತಾರೆ.
4. ಜನಪದರಲ್ಲಿ 'ಏಳು' ಅಂಕೆಯೂ ಒಂದು ಪ್ರಮುಖ ಅಂಶ. ವಕ್ತಿಗಳೊಳಗೆ ತಂಬಾ ಪ್ರೀತಿ ಅಥವಾ ದ್ವೇಷವಿದ್ದರೆ ಅವರ ಸಹವಾಸ ಏಳು ಜನ್ಮಗಳವರೆಗೆ 'ಇರಲಿ' ಅಥವಾ 'ಬೇಡ' ಎಂದು ಹೇಳುವುದಿದೆ. ಆದರ್ಶ ಸತಿಪತಿಗಳಾಗಿ 'ಏಳು' ಜನ್ಮಗಳವರೆಗೆ ಜೊತೆಯಾಗಿ ಬಾಳಬೇಕೆಂಬ ಆದರ್ಶದ ಕಲ್ಪನೆ ಹಿಂದುಗಳಲ್ಲಿ ಸಾಮಾನ್ಯ.
5. ಸುಧಾಕರ., 'ನಮ್ಮ ಸುತ್ತಿನ ಗಾದೆಗಳು' ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ : ಮೈಸೂರು–1973.

ಧರ್ಮ ಮತ್ತು ರಾಜಕಾರಣದ ದಿನಗಳು ಮುಗಿದುಹೋದವು. ಇದು ಆಧ್ಯಾತ್ಮ ಮತ್ತು ವಿಜ್ಞಾನದ ಯುಗ

—ವಿನೋಬಾ

ಹಳೆ ಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ ಬರಲಿ ವಿಜ್ಞಾನಬುದ್ಧಿ

—ಕುವೆಂಪು

ಧರ್ಮ ವಿಚಾರವನ್ನು ವಿರೋಧಿಸುವುದಿಲ್ಲ. ಅದು ವಿಜ್ಞಾನವನ್ನು ಮೀರಿದ್ದು

—ಮಹಾತ್ಮಗಾಂಧಿ

ವೈಚಾರಿಕತೆ ಸರ್ವಜ್ಞತೆಯ ಹಕ್ಕನ್ನು ಪಡೆಯಲು ಮುಂದಾದರೆ ಅದು, ಕ್ರೂರ ಪರಾಜಯವಾಗುತ್ತದೆ

—ಮಹಾತ್ಮಗಾಂಧಿ

ಡಾ. ಅಂಬಳಿಕೆ ಹಿರಿಯಣ್ಣ

ಕರ್ನಾಟಕ ಜಾನಪದ ಸಂಶೋಧನೆ: ಮುಂದೇನು ?

ಇತ್ತೀಚೆಗೆ ಮತ್ತು ತಡವಾಗಿ ಬೆಳೆದ ಸಾಮಾಜಿಕ ವಿಶ್ಲೇಷಣೆಯ ಕ್ಷೇತ್ರಗಳಲ್ಲಿ ಜಾನಪದ ಅಧ್ಯಯನ ಮಹತ್ವದ ಸ್ಥಾನ ಪಡೆದಿದೆ. ಜಾನಪದ ಅಧ್ಯಯನದ ಹೆಸರಿನಲ್ಲಿ ಬೇರೆ ಬೇರೆ ದೇಶಗಳ ಬೇರೆ ಬೇರೆ ಭಾಷೆಗಳ ವಿದ್ವಾಂಸರು ಜಾನಪದದ ಅನೇಕ ರೂಪಗಳನ್ನು ಬಿಡಿ ಬಿಡಿಯಾಗಿ ಅಸ್ಪಷ್ಟ ಹಾಗೂ ಅವೈಜ್ಞಾನಿಕ ರೀತಿಯಲ್ಲಿ ಸಂಗ್ರಹಿಸಿ ಸಂಪಾದಿಸಿದ್ದರೂ ವೈಜ್ಞಾನಿಕ ಕ್ರಮದ ದೃಷ್ಟಿಯಿಂದ ಅದು ಒಂದು ಸಮರ್ಪಕ ಸಾಮಾಜಿಕ ಶಿಸ್ತಾಗಿ ಇನ್ನೂ ಶೈಶವಾವಸ್ಥೆಯಲ್ಲೇ ಇದೆ.

ಸಮರ್ಪಕ ಹಾಗೂ ಸ್ಪಷ್ಟತೀರ್ಮಾನಗಳನ್ನು ಕೈಗೊಳ್ಳಲು, ಸರಿಯಾದ ದೃಷ್ಟಿಯಿಂದ ಜಾನಪದ ಕ್ಷೇತ್ರ ಅಧ್ಯಯನ ನಡೆಸಲು ಮೊದನೆಯದಾಗಿ ಅವ್ಯಾಪ್ತಿ ಮತ್ತು ಅತಿವ್ಯಾಪ್ತಿಯಿಂದ ಮುಕ್ತವಾದ ಜಾನಪದ ಪರಿಕಲ್ಪನೆಯನ್ನು ಹೊಂದ ಬೇಕಾಗಿದೆ. ಜಾನಪದ, ಮೌಖಿಕ ಅಥವಾ ಸಾಂಪ್ರದಾಯಿಕ ನಿದರ್ಶನಗಳ ಮೂಲಕ ವಿಭಿನ್ನ ರೂಪಗಳಲ್ಲಿ ಯಾವುದೇ ಗುಂಪಿನ ಜನರಲ್ಲಿ ಪರಂಪರಾಗತವಾಗಿ ಪರಿಚಲನೆಗೊಳ್ಳುವ ಸಂಸ್ಕೃತಿ ವಿಷಯಗಳನ್ನು ಒಳಗೊಳ್ಳುತ್ತದೆ ಎಂಬುದು ಸ್ಪಷ್ಟವಾಗಬೇಕು. ಸಾಮಾನ್ಯವಾಗಿ ಎದುರಾಗುವ ಗೊಂದಲಗಳನ್ನೂ ಅಸ್ಪಷ್ಟತೆಗಳನ್ನೂ ನಿವಾರಿಸಿಕೊಳ್ಳಲು ಜನಪದ ಸ್ತರಗಳನ್ನು ಶುದ್ಧ ಜನಪದ (Pure folk), ಮಧ್ಯಸ್ತ ಜನಪದ (Intermediate folk) ಮತ್ತು ಶಿಷ್ಟ ಜನಪದ (Learned folk) ಎಂದು ವಿಂಗಡಿಸಿ ವಿಶ್ಲೇಷಿಸುವ ಅಗತ್ಯವಿದೆ.

ಎರಡನೆಯದಾಗಿ, ಸಂಗತ ಜಾನಪದ ಸಾಮಗ್ರಿಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸುವ ಅಗತ್ಯವನ್ನು ಮನಗಾಣಬೇಕಾಗಿದೆ. ಅದು ತನಗೆ ತಾನೇ ಒಂದು ತ್ರಾಸದಾಯಕ ಕೆಲಸ. ಆಗ ಜಾನಪದದ ವಿವಿಧ ಬಗೆಗಳಿಗೆ ಅನ್ವಯವಾಗುವ ತಂತ್ರ ವಿಧಾನಗಳ ಸಮಸ್ಯೆ ಉದ್ಭವವಾಗುವುದು. ಪ್ರಶ್ನಾವಳಿ ವಿಧಾನ ಮತ್ತು ಕಾರ್ಯ ಯೋಜನೆಗಳನ್ನು ಎಲ್ಲ ಸಂದರ್ಭಗಳಲ್ಲೂ ಎಲ್ಲ ಕಾಲದಲ್ಲೂ ಯಶಸ್ವಿಯಾಗಿ ಅನ್ವಯಿಸುವುದು ಕಷ್ಟ. ಏಕೆಂದರೆ ಅನೇಕ ಸನ್ನಿವೇಶಗಳಲ್ಲಿ ಅನಕ್ಷರಸ್ಥರು ಒದಗಿಸುವ ಮಾಹಿತಿ ಅಥೆಂಟಿಕ್ ಆಗಿರುವುದಿಲ್ಲ. ಸಂದರ್ಶನ ನಡೆಸುವಾಗ, ವ್ಯಕ್ತಿಗತ

ವಾದ ನೇರ ಅಧ್ಯಯನದಲ್ಲಿ ತೊಡಗಿದಾಗ ಬೇರೆ ಬೇರೆ ಗುಂಪುಗಳಲ್ಲಿ ಘಟಿಸುವ ಜನಪದ ಘಟನೆಗಳನ್ನು ಅವಲೋಕಿಸುವ ತಂತ್ರಗಳನ್ನು ಬಹು ಎಚ್ಚರಿಕೆ ಮತ್ತು ಜಾಗ್ರತೆಯಿಂದ ಅನ್ವಯಿಸಬೇಕಾಗುತ್ತದೆ.

ಮೂರನೆಯದಾಗಿ, ಕೆಲವು ಯುಕ್ತ ಹಾಗೂ ಸಂಗತ ಜಾನಪದ ಸಾಮಗ್ರಿಗಳನ್ನು ಸಂಗ್ರಹಿಸಿದ ಅನಂತರ ಖಚಿತ ತೀರ್ಮಾನಗಳಿಗೆ ಬರಲು ಮತ್ತು ಅಧ್ಯಯನವನ್ನು ಹೆಚ್ಚು ಕ್ರಮಬದ್ಧಗೊಳಿಸಿಕೊಳ್ಳಲು ಸಂಗ್ರಹಿತ ಸಾಮಗ್ರಿಯನ್ನು ಯುಕ್ತ ವಿಶ್ಲೇಷಣೆ ಮತ್ತು ವ್ಯಾಖ್ಯಾನಕ್ಕೆ ಗುರಿಮಾಡಬೇಕಾಗುತ್ತದೆ. ಭಾಷೆ ಮತ್ತು ಸಾಹಿತ್ಯದ ಅಧ್ಯಯನ ಮಾದರಿಗಳಿಂದ ಭಿನ್ನವಾದ ಚೌಕಟ್ಟಿನಲ್ಲಿ ವಿಶ್ಲೇಷಣಾಕಾರ್ಯ ನಡೆಸಿ ಅಂತರ ಶಿಸ್ತೀಯ ಹಿನ್ನೆಲೆಯಲ್ಲಿ, ಅಖಂಡ ನೆಲೆಯಲ್ಲಿ ಪರಿಭಾವಿಸುವ ಯತ್ನಗಳನ್ನು ಪ್ರೋತ್ಸಾಹಿಸಬೇಕಾಗಿದೆ.

—ಸಾಮಗ್ರಿಯ ಸಂಗ್ರಹಣೆ ಮತ್ತು ಅಧ್ಯಯನದಲ್ಲಿ ಎದುರಾಗುವ ಮೂರು ಪ್ರಮುಖ ತೊಡಕುಗಳು ಇವು. ಈ ತೊಡಕುಗಳ ನಿವಾರಣೆಯ ಹಾದಿಯಲ್ಲಿ ಒಂದು ಸಮಾಲೋಚನೆ ನಡೆಸುವ ಯತ್ನ ಇಲ್ಲಿಯದು.

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹ ಕಳೆದ ಒಂದು ಶತಮಾನದಿಂದ ನಡೆಯುತ್ತಿರುವ ಚಟುವಟಿಕೆಯಾಗಿದೆ. ಇಷ್ಟಾದರೂ ಈ ಸಂಗ್ರಹಗಳು ವಿದ್ವತ್ ಪ್ರಪಂಚಕ್ಕೆ ಹೆಚ್ಚು ಉಪಯೋಗಕರವಾಗಿಲ್ಲ.

ಇದು ಸಾಮಗ್ರಿಯ ಗುಣಲೋಪ ಕಾರಣಕ್ಕಲ್ಲ. ಕರ್ನಾಟಕ ಜಾನಪದ ಪರಂಪರೆಯ ಬಗೆಗೆ ಹೆಚ್ಚು ಹೆಚ್ಚು ಆಲೋಚಿಸಿದಂತೆಲ್ಲಾ ನನಗೆ ಎದುರಾಗುವ ಪ್ರಶ್ನೆ ಎಂದರೆ ಹೀಗೆ ಸಂಗ್ರಹಗೊಂಡಿರುವ ಸಾಮಗ್ರಿ ಕನ್ನಡ ಜನರ ಸಂಸ್ಕೃತಿಯ ಸ್ವರೂಪ ಮತ್ತು ಬೆಳವಣಿಗೆಯನ್ನು ಅರಿತುಕೊಳ್ಳಲು ಎಷ್ಟರಮಟ್ಟಿಗೆ ಮಹತ್ವದ ಆಕರವಾಗಿ ಉಳಿದಿದೆ ಎಂಬುದು.

ಸಂಗ್ರಹಣೆಯ ಕೊರತೆಯೂ ಅದಕ್ಕೆ ಕಾರಣ ಇರಲಾರದು. ವಾಸ್ತವವಾಗಿ, ಜಾನಪದದ ಬಹು ಮುಖ್ಯಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದಲ್ಲೇ ಸಂಗ್ರಹಣೆಗಳು ನಡೆದಿವೆ. ಕೆಲವೊಮ್ಮೆ ಕೆಲವು ಜಾನಪದ ರೂಪಗಳು (genres) ಕಣ್ಮರೆಯಾಗುತ್ತಿದ್ದು ಅವನ್ನು ತುರ್ತಾಗಿ ಸಂಗ್ರಹಿಸಬೇಕಾಗಿದೆ ಎಂಬ ಜರೂರು ಕರೆಗಳನ್ನು ಕೇಳಿದಾಗಲಂತೂ ಈ ದಿಢೀರ್ ಮರೆಯಾಗುವ, ಗಂಭೀರ ಅಪಾಯಕ್ಕೆ ಸಿಲುಕಿರುವ ಮಹತ್ವದ ಮೌಖಿಕ ರೂಪಾಗಳಾವುವು ಎಂಬುದು ನನಗಿನ್ನೂ ಮನವರಿಕೆಯಾಗಿಲ್ಲ. ನಿಜ, ಬಹು ಪಾಲು ಜಾನಪದ ರೂಪಗಳು ಸಮೂಹ ಮಾಧ್ಯಮ ಮತ್ತು ಅದಕ್ಕೆ ಹೊಂದಿಕೊಂಡಂತೆ ಸಂಭವಿಸಿರುವ ಸಾಂಸ್ಕೃತಿಕ ಘಟನೆಗಳು ಜೊತೆಗೂಡಿ ಹೇರುವ ಒತ್ತಡದಿಂದ ಹಿಂದೆಂದೂ ಘಟಿಸಿರದ ತೀವ್ರತರ ಬದಲಾವಣೆಗೆ ಗುರಿಯಾಗಿವೆ. ಆದರೂ ಬದುಕು ಚೇತೋಹಾರಿಯಾಗಿರಲು ಮತ್ತು ಜನಸಮುದಾಯದ ಸಂಸ್ಕೃತಿಗೆ ಕೈಗನ್ನಡಿಯಾಗಲು ಮೌಖಿಕ ಪರಂಪರೆಯಲ್ಲಿ ಆ ಪ್ರಕ್ರಿಯೆ ನಡೆಯುತ್ತಲೇ ಇರಬೇಕು.

ಆದರೆ ಈ ಬೆಳವಣಿಗೆಯನ್ನು ಅಂಕೆಯಲ್ಲಿಡಲು ಸಂಶೋಧನೆಯನ್ನು ನಿರಂತರ ಮುಂದು ವರಿಸುವ ಅಗತ್ಯವಿದೆ. ಏನೇ ಇರಲಿ, ಈಗಿನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಸಂಘಸಂಸ್ಥೆಗಳು, ಅಕಾಡೆಮಿಗಳು ಈಗಾಗಲೇ ದಾಖಲಾಗಿರದ ಸಾಮಗ್ರಿಯನ್ನು ಬೃಹತ್ ಪ್ರಮಾಣದಲ್ಲಿ ಆದಷ್ಟು ಶೀಘ್ರವಾಗಿ ಕಲೆ ಹಾಕಲು ದೊಡ್ಡ ದೊಡ್ಡ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡಿವೆ. ಜಾನಪದ ಸಾಮಗ್ರಿ ಸಂಗ್ರಹಣೆಯಲ್ಲಿ ವಿಶೇಷ ವಾಗಿ ತರಪೇತು ಹೊಂದಿರುವ ತಜ್ಞರಿಂದ ಸಂಗ್ರಹಕಾರ್ಯ ನಡೆಯುತ್ತಿರುವುದರಿಂದ ಹಿಂದಿನ ಸಂಗ್ರಹಗಳಿಗಿಂತ ಈಗಿನ ಸಂಗ್ರಹಗಳ ಗುಣಮಟ್ಟ ಉತ್ತಮದ್ದಾಗಿರುತ್ತದೆ ಎಂದು ಆಶಿಸಬಹುದು.

ಆದರೆ ಈಗಾಗಲೇ ಸಂಗ್ರಹಗೊಂಡಿರುವ ಸಾಮಗ್ರಿಯನ್ನು ಬಳಸಿಕೊಳ್ಳುವ ಬಗೆ ಹೇಗೆ ಎಂದು ನಾವು ಆಲೋಚಿಸಬೇಕಾಗಿದೆ. ಇತ್ತೀಚಿನ ಕೆಲವು ಪ್ರಯತ್ನಗಳಲ್ಲಿ ವಿದ್ವಾಂಸರು ಈ ಸಾಮಗ್ರಿಯನ್ನು ತುಂಡು ತುಂಡಾಗಿ, ಬಿಡಿ ಬಿಡಿಯಾಗಿ ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿರುವುದು ಕಂಡು ಬರುತ್ತದೆ. ಗದ್ದಗೀಮಠ, ಜೀಶಂಪ, ಹಾಮಾನಾ, ದೇಜಗೌ, ಎಚ್. ಎಲ್. ನಾಗೇಗೌಡ, ಎಂ. ಎಸ್. ಸುಂಕಾಪುರ, ಬಿ. ಬಿ. ಹೆಂಡಿ, ಸಿಪಿಕೆ, ಚಂದ್ರಶೇಖರ ಕಂಬಾರ, ಸುಧಾಕರ, ರಾಗೌ, ವಿವೇಕರೈ, ಎಂ ಎಸ್. ಲಠ್ಠೆ, ಎಂ.ಎಂ. ಕಲಬುರ್ಗಿ, ಎಂ. ಚಿದಾನಂದಮೂರ್ತಿ, ಡಿ ಲಿಂಗಯ್ಯ, ದೇವೇಂದ್ರಕುಮಾರ ಹಕಾರಿ, ಸೋಮಶೇಖರ ಇಮ್ರಾಪುರ, ತೀ. ನಂ. ಶಂಕರ ನಾರಾಯಣ, ಎಚ್. ಜೆ. ಲಕ್ಕಪ್ಪಗೌಡ, ಶ್ರೀಕಂಠಕೂಡಿಗೆ, ಡಿ. ಕೆ. ರಾಜೇಂದ್ರ, ಅಂಬಳಿಕೆ ಹಿರಿಯಣ್ಣ, ಸಂಧ್ಯಾರೆಡ್ಡಿ, ಕ್ಯಾತನಹಳ್ಳಿ ರಾಮಣ್ಣ, ರಾಮಚಂದ್ರೇಗೌಡ, ವೀರಣ್ಣದಂಡೆ, ಟಿ. ಎಸ್. ರಾಜಪ್ಪ, ಹಾ. ತಿ. ಕೃಷ್ಣೇಗೌಡ, ಪಿ. ಕೆ. ರಾಜಶೇಖರ, ಪುರುಷೋತ್ತಮ ಬಿಳಿಮಲೆ, ಟಿ. ಎಸ್. ಸತ್ಯನಾಥ್, ಬಿ. ಮಲಶೆಟ್ಟಿ, ಕೃಷ್ಣಮೂರ್ತಿ ಹನೂರು, ಸಿದ್ದಲಿಂಗಯ್ಯ, ಕಾಳೇಗೌಡ ನಾಗವಾರ, ಮರುಳಸಿದ್ದಪ್ಪ, ಸಿ. ವೀರಣ್ಣ, ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಕೃಷ್ಣಯ್ಯ, ಶಿವರಾಮು ಇವರೇ ಮುಂತಾದವರ ಯತ್ನಗಳನ್ನು ಇಲ್ಲಿ ನೆನೆಯಬಹುದು. ಆದರೆ ಇಲ್ಲಿಯೂ ಸೈದ್ಧಾಂತಿಕ ಚೌಕಟ್ಟಿನಲ್ಲಿ ನಡೆದ ಕೆಲಸಗಳು ಬೆರಳೆಣಿಕೆಯಲ್ಲಿವೆ. ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಒಂದು ವಿಷಯವನ್ನು ಪ್ರತಿಪಾದಿಸಿದಾಗ ಆ ವಿಷಯಕ್ಕೆ ಒಂದು ಮಹತ್ವ ಪ್ರಾಪ್ತ ವಾಗುತ್ತದೆ. ಇದಕ್ಕೆಲ್ಲ ಪ್ರಮುಖ ಅಡ್ಡಿಯೆಂದರೆ, ಜಾನಪದ ಸಾಮಗ್ರಿಯನ್ನು ಉನ್ನತ ನೆಲೆಯಲ್ಲಿ ಕಲ್ಪಿಸಿಕೊಂಡು ಭವ್ಯಪರಂಪರೆಯ ಹಿನ್ನೆಲೆಯಲ್ಲಿ ಪರಿಶೀಲಿಸು ಸುತ್ತಿರುವುದು. ಅನೇಕ ವರ್ಷಗಳ ಸತತ ಜಿಜ್ಞಾಸೆ ಮತ್ತು ಬೇರೆ ಬೇರೆ ರೂಪಾ ವಳಿಗಳ (Paradigms) ರಚನೆಯಿಂದಲೂ ನಾವು ಪರಂಪರೆಯ ಭಿನ್ನಸ್ತರಗಳ ನಡುವಿನ ವ್ಯತ್ಯಾಸಗಳನ್ನು ಅರಿಯುವಲ್ಲಿ ಒಂದು ನಿಶ್ಚಿತ ನಿಲುವಿಗೆ ಬಂದಂತೆ ಕಾಣು ವುದಿಲ್ಲ. ಯಾರೊಬ್ಬರೂ ಮೌಖಿಕ ಪರಂಪರೆಯ ವಿಭಿನ್ನ ಮಹತ್ವದತ್ತ ಬೊಟ್ಟು ಮಾಡಿ ತೋರಿಸುವ ಯತ್ನವನ್ನೂ ಮಾಡಿಲ್ಲ. ನಮ್ಮ ಭಾರತೀಯ ಸಂಸ್ಕೃತಿ

ಪರಿಕಲ್ಪನೆ ಬಹುಮುಖ್ಯವಾಗಿ ಇಂಡೊ-ಯುರೊಪಿಯನ್ ತತ್ವಾದರ್ಶಗಳನ್ನು ಆದರಿಸಿರುವಂಥದು. ಮತ್ತು ನಮ್ಮ ಸಂಶೋಧನೆಯನ್ನು ಲಿಖಿತ ಪಠ್ಯಗಳಿಗಷ್ಟೇ ಸೀಮಿತಗೊಳಿಸಿಕೊಂಡು ಅದನ್ನು ನಾವು ತೆಪ್ಪಗೆ ಒಪ್ಪಿಕೊಂಡಿದ್ದೇವೆ. ಎಲ್ಲೆಲ್ಲಿ ಈ ಪರಿಕಲ್ಪನೆ ಮೌಖಿಕ ಪರಂಪರೆಗೆ ಹೊಂದಿಕೊಳ್ಳುವುದಿಲ್ಲವೊ—ಬಹಳಷ್ಟು ಕಡೆಗಳಲ್ಲಿ ಹೊಂದಿಕೊಳ್ಳುವುದಿಲ್ಲ—ಅಂಥಲ್ಲೆಲ್ಲಾ ಮೌಖಿಕ ಪರಂಪರೆಯನ್ನು ನಿರ್ಲಕ್ಷಿಸಲಾಗಿದೆ.

ಬಹುತೇಕ ಮೌಖಿಕ ಪರಂಪರೆಗಳ ಮಹತ್ವ ಘಟನೆಯ ಸಂದರ್ಭದಲ್ಲೇ ಹುದುಗಿರುವುದರಿಂದ ಸಂಶೋಧಕನು ಮಹಾನ್ ಸಂಸ್ಕೃತಿ ಮತ್ತು ಅದರ ಪ್ರಕ್ರಿಯೆಗಳಿಗೂ ಹಾಗೂ ಅದರೊಂದಿಗೆ ಮೌಖಿಕ ಪರಂಪರೆಗಿರುವ ಸಂಬಂಧವನ್ನು ಸಾದರಪಡಿಸಬೇಕಾಗುತ್ತದೆ. ಉದಾಹರಣೆಗೆ, ದಕ್ಷಿಣ ಕನ್ನಡದ ಜನಪದ ಸಾಹಿತ್ಯದ ಅನೇಕ ಭಾಗಗಳು ಭೂತಾರಾಧನ ಪದ್ಧತಿಯೊಂದಿಗೆ ಹೆಣೆದುಕೊಂಡಿರುವುದನ್ನು ನೋಡಬಹುದು. ಅಲ್ಲಿಯ ಮೌಖಿಕ ಸಾಹಿತ್ಯದಲ್ಲಿ ಸ್ಥಾಪಿತವಾಗಿರುವ ಆರಾಧನಾ ಪದ್ಧತಿಯ ಸಂಬಂಧವನ್ನು ಕೈಬಿಟ್ಟು ಕೇವಲ ಮೌಖಿಕ ಸಾಹಿತ್ಯವನ್ನು ಪರಿಗಣನೆಗೆ ತೆಗೆದುಕೊಂಡರೆ ಪರಂಪರೆಯ ಮಹತ್ವವನ್ನೇ ತಿರುಚಿದಂತಾಗುವುದಷ್ಟೇ ಅಲ್ಲ, ಅಲ್ಲಿಯ ಸಾಹಿತ್ಯದ ಒಳಪದರಗಳಲ್ಲಿ ಹುದುಗಿರುವ ಭಾವಪ್ರಪಂಚದ ವಿಸ್ತಾರವನ್ನೂ ಕಿರಿದುಗೊಳಿಸಿದಂತಾಗುತ್ತದೆ. ಅಲ್ಲಿಯ ಆರಾಧನಾ ಪದ್ಧತಿ ಮತ್ತು ಮೌಖಿಕ ಪರಂಪರೆ—ಎರಡೂ ನಿಯತವಾಗಿ ಬದಲಾವಣೆಗೆ ಪಕ್ಕಾಗುವುದರಿಂದ ಎರಡನ್ನೂ ಆ ಸುತ್ತಿನ ಸಾಮಾಜಿಕ ಸಾಂಸ್ಕೃತಿಕ ಬದಲಾವಣೆಗಳ ಸಂದರ್ಭದಲ್ಲಿ ಪರಿಶೀಲನೆಗೆ ಗುರಿಮಾಡುವುದು ಯುಕ್ತ. ಈವರೆಗಿನ ಪ್ರಕಟಣೆಗಳನ್ನು ಗಮನಿಸಿದರೆ ಜಾನಪದ ಮತ್ತು ಮಾನವಶಾಸ್ತ್ರದ ಕ್ಷೇತ್ರಗಳ ವಿದ್ವಾಂಸರು ಹೆಚ್ಚು ಯಶ ಸಾಧಿಸದಿರುವುದು ಕಂಡುಬರುತ್ತದೆ. ಜಾನಪದ ಅಧ್ಯಯನಕಾರರು ಉತ್ತಮ ಮಾನವಕುಲಶಾಸ್ತ್ರೀಯ ವಿವರಣೆಗಳನ್ನು ಒದಗಿಸಲು ಶಕ್ತವಾದ ಮಾದರಿಗಳನ್ನು ಕೊಡಲು ವಿಫಲರಾಗಿದ್ದರೆ, ಮಾನವಶಾಸ್ತ್ರಜ್ಞರು ಮೌಖಿಕ ಪರಂಪರೆಯ ಸಾಹಿತ್ಯಿಕ ಹಾಗೂ ಸಾಂಕೇತಿಕ ಮೌಲ್ಯಗಳ ಒಳಸೂಕ್ಷ್ಮಗಳನ್ನು ಗ್ರಹಿಸಲು ವಿಫಲರಾಗಿರುವುದು ಕಂಡುಬರುತ್ತದೆ. ಅದಕ್ಕಾಗಿ ಜರೂರಾಗಿ ಆಗಬೇಕಾಗಿರುವ ಮೂಲಭೂತ ಕ್ರಮ ಎಂದರೆ ಅಂತರ ಶಿಸ್ತೀಯ ಜಾನಪದ ಅಧ್ಯಯನಕ್ಕೆ ವೇದಿಕೆ ನಿರ್ಮಿಸಿ ಎಲ್ಲ ಅಗತ್ಯಗಳನ್ನೂ ಪೂರೈಸುವ ಒಂದು ನಿಯತಕಾಲಿಕೆ ಬರುವಂತೆ ಮಾಡುವುದು.

ಜಾನಪದ ಪರಂಪರೆಯನ್ನು ಯುಕ್ತ ರೀತಿಯಲ್ಲಿ ಬಳಸಿಕೊಳ್ಳದ ನಮ್ಮ ಅಸಾಮರ್ಥ್ಯದಿಂದಾಗಿ ತೌಲನಿಕ ಅಧ್ಯಯನಗಳಲ್ಲಿ ನಿರಾಸಕ್ತಿ ಮತ್ತು ಉದಾಸೀನತೆ ಕಾಣಿಸಿಕೊಂಡಿದೆ. ಜನಪದ ಧರ್ಮ ಮತ್ತು ಸಾಹಿತ್ಯಿಕ ಪರಂಪರೆಗಳ ತೌಲನಿಕ ಅಧ್ಯಯನ, ಉನ್ನತ ಸಾಂಸ್ಕೃತಿಕ ಪರಂಪರೆಗಿಂತ ಭಿನ್ನವಾದ ಒಂದು ಸ್ಥಿರವಾದ ಸಾಂಸ್ಕೃತಿಕ ತತ್ವಾದರ್ಶ ರೀತಿಯನ್ನು ಆಶ್ಚರ್ಯಕರ ರೀತಿಯಲ್ಲಿ ಹೊರಗೆಡಹುತ್ತದೆ ಎಂಬುದರಲ್ಲಿ ಅನುಮಾನವಿಲ್ಲ (ಉನ್ನತ ಸಾಂಸ್ಕೃತಿಕ ಪರಂಪರೆ ತನಗೆ ತಾನೇ ಸ್ಥಳೀಯ

ವಾದುದು ; ಪರಿವರ್ತನಶೀಲವಾದುದು). ಪ್ರಕೃತ, ಕರ್ನಾಟಕ ಜಾನಪದ ಮಾದರಿಗಳು ನಿಜವಾಗಿಯೂ ಜಾನಪದ ಪರಂಪರೆಯ ವಿಶಿಷ್ಟ ಮತ್ತು ಸ್ಥಳೀಯ ಸಂಗತಗಳನ್ನು ಬಿಂಬಿಸುವುವಾದರೂ ಅವು ವೈದಿಕ ಪರಂಪರೆಯಿಂದ ಎರವಲು ಪಡೆದ ಅಂಶಗಳನ್ನು ಕಳಚಿಕೊಂಡು ತಮ್ಮ ವಿಸ್ತಾರ ರಾಚನಿಕ ಏಕರೂಪತೆಯನ್ನು ಸಾಬೀತುಪಡಿಸಲು ಅವಕಾಶವೇ ಇಲ್ಲವಾಗಿದೆ. ಅತ್ಯಂತ ಸಮೃದ್ಧ ಸಾಂಸ್ಕೃತಿಕ ವಿವರಗಳಿರುವ ಜನಪದ ಆಚರಣೆಗಳ ಕ್ಷೇತ್ರದಲ್ಲೂ ತೌಲನಿಕ ಅಧ್ಯಯನದ ಪ್ರಯತ್ನಗಳನ್ನು ನಾವು ಕಾಣುತ್ತಿಲ್ಲ. ಜಾನಪದ ಕ್ಷೇತ್ರದಲ್ಲಿ ಕಂಠಸ್ಥವಾಗಿರುವ ಭಾಷೆಯಿಂದ ಇತರ ಭಾಷೆಗಳಿಗೆ ಅನುವಾದಗೊಂಡಿರುವ ಸಾಹಿತ್ಯ ಬಹಳ ಕಡಿಮೆ. ಹೀಗಾಗಿ ಇಲ್ಲಿ ತೌಲನಿಕ ಅಧ್ಯಯನಕ್ಕೆ ತೊಡಗುವುದು ಕಷ್ಟ ಎಂಬುದನ್ನು ಒಪ್ಪಿಕೊಳ್ಳಬೇಕು. ಭಾರತದ ಇತರೆಡೆಗಳಲ್ಲಿನಂತೆ ಕರ್ನಾಟಕದಲ್ಲೂ ಜಾನಪದ ಸಂಗ್ರಹ ಪ್ರಾಂತೀಯವಾದದಿಂದಲೇ ಪ್ರೇರೇಪಿತವಾಯಿತು. ಆದರೆ ಉನ್ನತ ವಿದ್ವದುದ್ದೇಶಕ್ಕಾಗಿ ಇಲ್ಲಿಯ ಮೌಖಿಕ ಪರಂಪರೆಯ ಸಾಹಿತ್ಯವನ್ನು ಅದು ಸಾಗಿಬರುತ್ತಿರುವ ಸಾಂಸ್ಕೃತಿಕ, ಸಾಮಾಜಿಕ ಸಂದರ್ಭಗಳ ವಿಸ್ತಾರ ಟಿಪ್ಪಣಿಗಳೊಡನೆ ನಿರೂಪಿತವಾದ ಭಾಷಾಂತರಿತ ಇಂಗ್ಲಿಷ್ ಪಠ್ಯಗಳು ಅಗತ್ಯವಾಗಿ ಬೇಕಾಗಿವೆ.

ಮಲೆನಾಡು ಜಾನಪದ ಕುರಿತ ನನ್ನ ಸಂಶೋಧನೆ ಮತ್ತು ಕರ್ನಾಟಕದ ಇತರ ಭಾಗಗಳ ತೌಲನಿಕ ಸಾಮಗ್ರಿಯೊಡನೆ ನನ್ನ ಸೀಮಿತ ಬಳಕೆಯ ಅನುಭವ, ಮೌಖಿಕ ಪರಂಪರೆಯೊಂದಿಗೆ ಬೆರೆತಿರುವ ಹಾಗೂ ನಮ್ಮೆಲ್ಲರಿಗೂ ಸುಲಭವಾಗಿ ಎಟುಕುವ ಒಂದು ವಿಶಿಷ್ಟವೂ ಮಹತ್ವಪೂರ್ಣವೂ ಆದ ಸಾಮಾಜಿಕ ತತ್ವಾದರ್ಶವಿದೆಯೇನೋ ಎಂಬ ಸಂದೇಹಕ್ಕೆ ಗುರಿಮಾಡಿದೆ. ಈ ಮೌಖಿಕ ಸಾಹಿತ್ಯದ ವಸ್ತು ಸ್ಥಳೀಯವಾದುದೂ ಪರಿವರ್ತನೆಗೆ ಪಕ್ಕಾಗುವಂಥದೂ ಆಗಿದ್ದರೂ ಅದು ಸಾಮಾಜಿಕ ಶ್ರೇಣಿಯ ಕೆಳಸ್ತರದ ಜನರಿಂದ ಶಾಶ್ವತವಾಗಿರುವುದರಿಂದ ಈ ಪರಂಪರೆ ಬ್ರಾಹ್ಮಣರ ಸ್ಥಿರ ಸಾಂಸ್ಕೃತಿಕ ಪರಂಪರೆಗಳನ್ನು ಬಿಂಬಿಸುವುದಕ್ಕಿಂತ ಜನಸಾಮಾನ್ಯರ ಧಾರ್ಮಿಕ ಹಾಗೂ ಸಾಮಾಜಿಕ ತತ್ವಾದರ್ಶಗಳ ಮೇಲೆ ಪ್ರಭುತ್ವ ಸಾಧಿಸಿರುವ ಸಂಗತಿಗಳನ್ನು ಜೆಚ್ಚು ಬಿಂಬಿಸುತ್ತಿರುವುದು ನಿಜ. ಈ ಅರ್ಥದಲ್ಲಿ ಮೌಖಿಕ ಸಾಹಿತ್ಯ ಯಾವಾಗಲೂ ಮಹಾಸಂಕೀರ್ಣದ ಭಾಗವಾಗಿಯೇ ತೋರಿಬರುವುದು—ನಾಯಕತ್ವದ ಆರಾಧನೆ, ಶಕ್ತಿಯಾರಾಧನೆ, ಕುಣಿತ, ದೈಹಿಕ ಹಿಂಸೆ, ಪ್ರಾಣಿ ಬಲಿ ಮುಂತಾದವುಗಳೊಡನೆ ಕಾಣಿಸಿಕೊಳ್ಳುತ್ತದೆ.

ಈ ಎಲ್ಲ ಅಂಶಗಳು ಒಟ್ಟಿಗೆ ಹೇಗೆ ಹೊಂದಿಕೊಳ್ಳುತ್ತವೆ ಎಂಬುದಕ್ಕೆ ಇಲ್ಲಿ ಸ್ಪಷ್ಟ ಉತ್ತರವಿಲ್ಲ. ನನ್ನ ಅನುಭವವನ್ನೇ ಆಧರಿಸಿ ಹೇಳುವುದಾದರೆ, ಈ ವಿಷಯಗಳಲ್ಲಿ ಮಹತ್ತಾದ ಹೊಳಹುಗಳನ್ನು ಹೊಂದಲಾದರೂ ನಾವು ಮೊದಲು ಮೌಖಿಕ ಸಾಹಿತ್ಯ ಏನನ್ನು ಹೇಳುತ್ತದೆ ಎಂಬುದನ್ನು ನೋಡುವ ಪ್ರಯತ್ನ ಮಾಡಬೇಕಾಗಿದೆ. ಏನೇ ಇರಲಿ, ಇಲ್ಲಿ ಪಟ್ಟಿಮಾಡಿರುವ ಅಂಶಗಳು–ಆಕಸ್ಮಿಕವಾಗಿ ಸೇರಿಕೊಂಡವೇ ಆಗಿರ

ಬಹುದು-ಅವುಗಳ ಪರಿಶೀಲನೆ ಇಲ್ಲಿ ಪ್ರಸ್ತಾಪಿಸಿದ ಸಂಕೀರ್ಣದ ಅಸ್ತಿತ್ವವನ್ನು ವಿಚಾರ ಮಾಡುವುದೇ ಆಗಿದೆ. ವಾಸ್ತವವಾಗಿ ಈ ಸಂಕೀರ್ಣದ ಸ್ಥಳೀಯ ಭಿನ್ನರೂಪದ ಮಹತ್ವವನ್ನು ಮನಗಾಣಲು ದೊರಕಿಸಿಕೊಳ್ಳುವ ತೌಲನಿಕ ಸಾಮಗ್ರಿಯನ್ನು ನಮ್ಮ ಸಾಮಗ್ರಿಗೆ ಒಗ್ಗಿಸಿಕೊಳ್ಳುವುದೇ ಪ್ರಯಾಸದ ಕೆಲಸ. ಈ ಸಂಕೀರ್ಣದ ಅಸ್ತಿತ್ವದ ಬಗೆಗೆ ವಾದಿಸುವುದು ಕೇವಲ ಔಪಚಾರಿಕವಾಗಿ ತೋರಬಹುದು-ಜ್ಞಾನದ ಹೊಸ ತುದಿಯನ್ನು ಮುಟ್ಟುವ ಕಾತರ ಇರುವ ಯಾರಿಗಾದರೂ ಈ ಅನುಭವವಾಗುತ್ತದೆ-ಅದರ ಶಕ್ತ ಮೌಲ್ಯವನ್ನು ಗುರುತಿಸಲು ಕಾಲ ಇನ್ನು ಪಕ್ವವಾಗಿಲ್ಲ ಎಂದಷ್ಟೇ ಹೇಳಬಹುದು

ಎಂ. ಜಿ. ಮಹಾದೇವಪ್ಪ

ಧರ್ಮ ಮತ್ತು ವಿಜ್ಞಾನ

1. ಸಮಸ್ಯೆ:

ಒಂದಾನೊಂದು ಕಾಲದಲ್ಲಿ ಧರ್ಮಕ್ಕೂ ವಿಜ್ಞಾನಕ್ಕೂ ಮಧುರ ಬಾಂಧವ್ಯ ವಿದ್ದಿತು. ಕಲೆ, ನೀತಿಗಳಂತೆ ವಿಜ್ಞಾನವೂ ಧರ್ಮದ ಒಂದು ಅವಿಭಾಜ್ಯ ಅಂಗವಾಗಿದ್ದ ಕಾಲವದು. ಒಂದು ವಿಶಿಷ್ಟ ಮಟ್ಟದ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದ ವ್ಯಕ್ತಿಯೇ ದೈಹಿಕ ಹಾಗೂ ಮಾನಸಿಕ ರೋಗಿಗಳಿಗೆ ಔಷಧಿ ಕೊಡುತ್ತಿದ್ದ. ರೋಗಿಯಾದರೂ ಔಷಧದ ದೇವತೆಯ ಹೆಸರನ್ನೊ ತನ್ನ ಕುಲದೇವತೆಯ ಹೆಸರನ್ನೊ ಹೇಳಿದನಂತರವೇ ಔಷಧಿಯನ್ನು ಸೇವಿಸುತ್ತಿದ್ದ. ಅದೇ ರೀತಿ ಒಬ್ಬ ಹೊಸ ನೇಗಿಲನ್ನೊ, ಬಂಡಿಯನ್ನೊ, ದೋಣಿಯನ್ನೊ ರಚಿಸಿದಾಗ, ಆತನು ಧಾರ್ಮಿಕ ವಿಧಿಗಳನ್ನು ಆಚರಿಸಿದನಂತರವೇ ಉಪಯೋಗಿಸುತ್ತಿದ್ದ. (ಈ ವಿಚಾರದಲ್ಲಿ ನಾವು ಇನ್ನೂ ಬದಲಾಗಿಲ್ಲವೆಂದೇ ಹೇಳಬೇಕು. ರೈತನು ತನ್ನ ಹೊಸ ಬಂಡಿಯನ್ನು ಪೂಜಿಸಿದನಂತರವೇ ಹೇಗೆ ಉಪಯೋಗಿಸುತ್ತಾನೋ ಹಾಗೆಯೇ ಇಂದಿನ ಅನೇಕರು ತಮ್ಮ ಅತ್ಯಾಧುನಿಕ ವಾಹನ ಹಾಗೂ ಕಂಪ್ಯೂಟರುಗಳನ್ನು ಪೂಜಿಸಿದನಂತರವೇ ಉಪಯೋಗಿಸುತ್ತಾರೆ.)

ಆದರೆ ಧರ್ಮ ಹಾಗೂ ವಿಜ್ಞಾನಗಳೊಡನೆ ಇದ್ದ ಈ ರೀತಿಯ ಹೊಂದಾಣಿಕೆ ಕೇವಲ ಅನಾಗರಿಕರಿಗಷ್ಟೇ ಸೀಮಿತವಾಗಿತ್ತು ಎನ್ನುವುದು ತಪ್ಪಾಗುತ್ತದೆ. ಗ್ರೀಕರ ವಿಚಾರವಾದಿ ಪಂಥದಿಂದ ಪ್ರಭಾವಿತರಾದ ಯುರೋಪಿನ ಹನ್ನೆರಡನೇ ಶತಮಾನದ ಜನರೂ ಸಹ ಧರ್ಮಕ್ಕೆ ಪ್ರಾಶಸ್ತ್ಯ ಕೊಟ್ಟಂತೆ ವಿಜ್ಞಾನಕ್ಕೂ ಕೊಡುತ್ತಿದ್ದರು. ಹದಿಮೂರನೇ ಶತಮಾನದ ಆದಿಯಲ್ಲಿ ಆಕ್ಸ್‌ಫರ್ಡಿನಲ್ಲಿ ವಿಜ್ಞಾನ ವಿಭಾಗವನ್ನು ಸ್ಥಾಪಿಸಿದವನು ಕೊಂಪೆಂಡಿಯುಂ ಸೈನ್ಸಿಯೇರುಂ ಎಂಬ ವಿಜ್ಞಾನ ಗ್ರಂಥದ ಕರ್ತೃವಾದ ಹಾಗೂ ಲಿಂಕನ್ನಿನ ಧರ್ಮಾಧಿಕಾರಿ (ಬಿಷಪ್) ಆಗಿದ್ದ ರಾಬರ್ಟ್ ಗ್ರೋಸೆಟೆಸ್ಟ್. ಅವನೇ "ಪ್ರಯೋಗದ ಸಹಾಯವಿಲ್ಲದೆ ಪ್ರಕೃತಿಯನ್ನು ಅರಿತು ಕೊಳ್ಳಲಾಗಲೀ ರೇಖಾಗಣಿತದ ಸಹಾಯವಿಲ್ಲದೆ ಪ್ರಕೃತಿಯನ್ನು ವಿವರಿಸುವುದಾಗಲಿ ಸಾಧ್ಯವಿಲ್ಲ"[1] ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ವಿಜ್ಞಾನಿ ರೋಜರ್ ಬೇಕನ್

1. ಸಿ.ಎ. ಕೌಲ್ಸನ್, "ಸೈಯನ್ಸ್ ಅಂಡ್ ಕ್ರಿಶ್ಚಿಯನ್ ಬಿಲೀಫ್" (ಕೊಲಿನ್ಸ್ ಫೋಂಟಾನ ಬುಕ್ಸ್, 1961) ಪು. 22–23.

ಸಹಾ ಒಬ್ಬ ಕ್ರೈಸ್ತ ಸನ್ಯಾಸಿಯೇ. ನಾಲ್ಕನೆಯ ಪೋಪ್ ಕ್ಲೆಮೆಂಟನ ಬೇಡಿಕೆಯ ಮೇರೆಗೆ ಬೇಕನ್ ಓಪುಸ್ ಮೇಯುಸ್ ಎಂಬ ಪುಸ್ತಕವನ್ನು ಬರೆದನು. ವಿಜ್ಞಾನವು ಕ್ರೈಸ್ತ ಧರ್ಮಕ್ಕೆ ವಿರುದ್ಧವಾಗಿಲ್ಲವೆಂದೂ ಅದರ ಮೂಲಕ ಧರ್ಮವನ್ನು ಪ್ರಚಾರ ಮಾಡಲು ಸಾಧ್ಯವೆಂದು ತೋರಿಸುವುದೇ ಆ ಪುಸ್ತಕದ ಉದ್ದೇಶವಾಗಿತ್ತು. ಕ್ರಿ.ಶ. 1645ರಲ್ಲಿ ಸ್ಥಾಪಿತವಾದ ರಾಯಲ್ ಸೊಸಾಯಿಟಿಯ ಸದಸ್ಯರಲ್ಲಿ ರಾಬರ್ಟ್ ಬಾಯ್ಲ್, ಐಸಾಕ್ ನ್ಯೂಟನ್ನರಂತಹ ವಿಜ್ಞಾನಿಗಳೂ ಇದ್ದರು; ಜಾನ್ ವಿಲ್ಕಿನ್ಸ್, ಸೇಥ್ ವಾರ್ಡ್‌ರಂತಹ ಧರ್ಮಾಧಿಕಾರಿಗಳೂ ಇದ್ದರು. ಅವರೆಲ್ಲರೂ ಈ ಸೊಸಾಯಿಟಿಯ ಸಭೆಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಕೂಡ ದೆಂದು ತೀರ್ಮಾನಿಸಿದರು ಮತ್ತು ಅದರಂತೆ ಕರಾರುವಾಕ್ಕಾಗಿ ನಡೆದುಕೊಂಡರೂ; ಕ್ರೈಸ್ತ ಧರ್ಮವನ್ನು ಅವಮಾನಿಸುವಂತಹ ಉದ್ದೇಶಗಳನ್ನುಳ್ಳ ಯಾವ ಚಟುವಟಿಕೆ ಗಳಲ್ಲಿಯೂ ಸದಸ್ಯರು ನಿರತರಾಗಬಾರದು ಎಂದು ಪ್ರಮಾಣ ವಚನ ಸ್ವೀಕರಿಸಿದ್ದರು.[1] ಹೀಗೆ, ಔಷಧವಿಜ್ಞಾನಕ್ಕೇ ಆಗಲಿ, ಯಂತ್ರ ವಿಜ್ಞಾನಕ್ಕೇ ಆಗಲಿ (ಸಂಗೀತ ಅಥವಾ ನೃತ್ಯಕ್ಕೇ ಆಗಲಿ) ಧರ್ಮದ ವಿರುದ್ಧವಾಗಿರುವುದಂತಿರಲಿ, ಧರ್ಮದ ಹೊರ ಗಿರಲೂ ಸಾಧ್ಯವಾಗಿರಲಿಲ್ಲ. ವಿಜ್ಞಾನವು ತನ್ನ ಅಸ್ತಿತ್ವಕ್ಕೆ ಧರ್ಮದ ಅಗತ್ಯವಿಲ್ಲವೆಂದು ಅರಿತುಕೊಂಡ ಕೂಡಲೇ ಅದು ಧರ್ಮದೊಡನೆ ಇದ್ದ ತನ್ನ ಸಂಬಂಧವನ್ನು ಕಳಚಿ ಕೊಂಡಿತು.

ವಿಜ್ಞಾನವೆಂದರೆ ಕ್ರಿ. ಶ. ಹದಿನಾರನೇ ಶತಮಾನದಿಂದ ಈಚೆಗೆ ಬೆಳೆದು ಬಂದಿರುವ ಜ್ಞಾನ ಮಾತ್ರ ಎಂದು ತಿಳಿಯುವುದು ತಪ್ಪು. ಆದಿಮಾನವನೂ, ಒಂದು ವಿಶಾಲವಾದ ಅರ್ಥದಲ್ಲಿ ವಿಜ್ಞಾನಿಯೇ. ಅವನೂ ಸಹ ಗಿಡ, ಮರ, ಪ್ರಾಣಿ, ಹವಾಮಾನ, ಸೂರ್ಯ ಚಂದ್ರರಂತಹ ಆಕಾಶಕಾಯಗಳನ್ನೂ, ಗಿಡ, ಎಲೆ, ಬೇರು ಗಳ ಔಷಧೀಯ ಗುಣಗಳನ್ನೂ ಅಭ್ಯಸಿಸಿದವನೇ; ಪ್ರಾಣಿಗಳನ್ನು ಕೊಲ್ಲಲು, ಮೀನು ಹಿಡಿಯಲು, ಮಾಂಸವನ್ನು ಕತ್ತರಿಸಲು ತನ್ನವೇ ಆದ ಆಯುಧಗಳನ್ನು ಸಲಕರಣೆಗಳನ್ನೂ ಆತ ಮಾಡಿಕೊಂಡಿದ್ದ. ಅವನ ವಿಜ್ಞಾನ ಇಪ್ಪತ್ತನೆ ಶತಮಾನದ ವಿಜ್ಞಾನದಷ್ಟು ಖಚಿತವಾಗಿಯೂ ವಿಸ್ತಾರವಾಗಿಯೂ ಇರಲಿಲ್ಲವಾದರೂ, ಅದು ಪ್ರಾಥಮಿಕ ಸ್ಥಿತಿಯಲ್ಲಿತ್ತು; ಆದ್ದರಿಂದ, ಇಂದಿನ ವಿಜ್ಞಾನ ಅವನ ವಿಜ್ಞಾನದ ವಿಕಸಿತ ರೂಪ ಎನ್ನುವುದನ್ನು ಮರೆಯುವಂತಿಲ್ಲ. ಪ್ರಾಯಶಃ ಇಪ್ಪತ್ತೈದನೆ ಶತ ಮಾನದ ವಿಜ್ಞಾನಕ್ಕೆ ಹೋಲಿಸಿದರೆ ಇಪ್ಪತ್ತನೆ ಶತಮಾನದ ವಿಜ್ಞಾನವು ಅನಾಗರಿಕ ವಾಗಿ ಕಂಡಿತು. ಆದರೂ ಆದಿಮಾನವನ ವಿಜ್ಞಾನಕ್ಕೂ ಇಂದಿನ ವಿಜ್ಞಾನಕ್ಕೂ ಇರುವ ಎರಡು ಮುಖ್ಯ ವ್ಯತ್ಯಾಸಗಳನ್ನು ಕಡೆಗಾಣಿಸುವಂತಿಲ್ಲ. (1) ಆದಿ

1. ಸಿ.ಎ. ಕೌಲ್ಸನ್: ಮೇಲೆ ಹೇಳಿದ ಪುಸ್ತಕ, ಪು. 22–3.

ಮಾನವನು ಪ್ರತಿಯೊಂದು ವಸ್ತುವಿನಲ್ಲಿಯೂ ಒಂದು ಅಲೌಕಿಕ ಶಕ್ತಿ ಅಥವಾ ವ್ಯಕ್ತಿ (ಅಥವಾ ದೇವತೆ)ಯನ್ನು ಕಾಣುತ್ತಿದ್ದ. ಹೀಗಾಗಿ ಅವನು ತನಗೆ ಅರ್ಥವಾದ ಮತ್ತು ಅರ್ಥವಾಗದ ಘಟನೆಗಳೆರಡೂ ದೈವ ಪ್ರೇರಿತ ಎಂದು ನಂಬುತ್ತಿದ್ದನೇ ಹೊರತು, ಅವು ಶುದ್ಧ ಪ್ರಾಕೃತಿಕ ಘಟನೆಗಳೆಂದು ನಂಬುತ್ತಿರಲಿಲ್ಲ. ಆದುದರಿಂದ ಅವನ ಯಂತ್ರ ವಿಜ್ಞಾನಕ್ಕಾಗಲಿ ಔಷಧ ವಿಜ್ಞಾನಕ್ಕಾಗಲಿ ಧರ್ಮದಿಂದ ಸ್ವತಂತ್ರವಾಗಲು ಸಾಧ್ಯವಾಗಲಿಲ್ಲ. ಆದರೆ ಇಂದು ವಿಜ್ಞಾನ ಹಾಗೂ ಧರ್ಮ ಉತ್ತರ ದಕ್ಷಿಣ ಧ್ರುವಗಳಷ್ಟು ದೂರ ಇವೆ. (2) ಇಂದಿನ ವಿಜ್ಞಾನಿಗಳು ಯಾವುದನ್ನೂ ಪ್ರಯೋಗ ಹಾಗೂ ಅವಲೋಕನಕ್ಕೆ ಒಳಪಡಿಸದೆ ನಂಬುವುದಿಲ್ಲ. ಅವರಿಗೆ ಪ್ರಕೃತಿಯ ಏಕಪ್ರಕಾರತಾ ನಿಯಮದ (the Law of Uniformity of Nature) ಬಗ್ಗೆ ಅತೀವ ವಿಶ್ವಾಸವಿದೆ. ಅಂದರೆ, ಅವರ ಪ್ರಕಾರ, ಯಾವ ಘಟನೆಗಳೂ ಪವಾಡಗಳಲ್ಲ. ಇವೆರಡರ ಆಧಾರದ ಮೇಲೆ ಅನುಗಮನ ರೀತ್ಯ ಪ್ರಕೃತಿಯ ರಹಸ್ಯಗಳನ್ನು ಅರಿತು ಕೊಳ್ಳುತ್ತಾರೆ. ಆದರೆ ಆದಿಮಾನವನಿಗೆ ಪ್ರಯೋಗಪದ್ಧತಿಯಾಗಲಿ ಪ್ರಕೃತಿಯ ಏಕ ಪ್ರಕಾರತಾ ನಿಯಮವಾಗಲಿ ಗೊತ್ತಿರಲಿಲ್ಲ. ಅಷ್ಟೇಕೆ, ಗೆಲಿಲಿಯೋ ಮತ್ತು ಟೋರಿಸೆಲ್ಲಿ ಪ್ರಯೋಗ ಪದ್ಧತಿಯನ್ನು ವಿಜ್ಞಾನಕ್ಕೆ ಅಳವಡಿಸುವ ಮೊದಲು ಆದಿಮಾನವನ ವಿಜ್ಞಾನಕ್ಕೂ ಆಧುನಿಕ ವಿಜ್ಞಾನಕ್ಕೂ ಹೆಚ್ಚು ವ್ಯತ್ಯಾಸವಿರಲಿಲ್ಲ.

ಉದ್ದೇಶದ ದೃಷ್ಟಿಯಿಂದ ನೋಡಿದರೆ ಭೌತ ವಿಜ್ಞಾನಗಳೇ ಆಗಲಿ, ಜೀವ ವಿಜ್ಞಾನಗಳೇ ಆಗಲಿ, ಮನೋವಿಜ್ಞಾನಗಳೇ ಆಗಲಿ, ಇವಾವೂ ಧರ್ಮದ ಪರವಾಗಿಯೂ ಇಲ್ಲ, ವಿರುದ್ಧವಾಗಿಯೂ ಇಲ್ಲ. ಏಕೆಂದರೆ ಅವುಗಳ ಕರ್ತವ್ಯ ಇಂದ್ರಿಯ ಗೋಚರ ವಸ್ತುಗಳ ಬಗೆಗಿನ ಸತ್ಯವನ್ನು ಸಂಶೋಧಿಸುವುದೇ ಹೊರತು, ಅಲೌಕಿಕ ಅಥವಾ ಪರಮ ಸತ್ಯದ ಬಗ್ಗೆ ಸಂಶೋಧಿಸುವುದಿಲ್ಲ. ಯಾವ ವಿಜ್ಞಾನವೂ ಈಶ್ವರನ ನಂಬಿಕೆಯು ಸತ್ಯವೆಂದಾಗಲಿ ಸುಳ್ಳೆಂದಾಗಲಿ ಹೇಳಿಲ್ಲ. ಹಾಗಿದ್ದರೂ ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರೋಧಿಗಳೆಂದು ಏಕೆ ಪರಿಗಣಿಸಲಾಗಿದೆಯೆಂಬುದನ್ನು ಪರಿಶೀಲಿಸೋಣ.

17 ಮತ್ತು 18ನೇ ಶತಮಾನಗಳಲ್ಲಿ ವಿಜ್ಞಾನವು ವಿಶ್ವದ ಬಗೆಗಿನ ನಮ್ಮ ಜ್ಞಾನದಲ್ಲಿ ಒಂದು ಕ್ರಾಂತಿಯನ್ನೇ ಮಾಡಿತು. ಖಗೋಳ ಶಾಸ್ತ್ರ ಮತ್ತು ಭೌತ ಶಾಸ್ತ್ರಗಳು 'ಭೂಮಿಯು ವಿಶ್ವದ ಕೇಂದ್ರವಲ್ಲ' ಎಂದು ಹೇಳುವ ಮೂಲಕ ಬೈಬಲ್ಲಿನ ಅಭಿಪ್ರಾಯವನ್ನು ತಿರಸ್ಕರಿಸಿದವು. 19ನೇ ಶತಮಾನದ ಭೂಗರ್ಭಶಾಸ್ತ್ರವು 'ಭೂಮಿಯು 400 ಕೋಟಿ ವರ್ಷಗಳ ಹಿಂದೆ ಕೇವಲ ಒಂದು ಧೂಳಿನ ಮೋಡವಾಗಿತ್ತು. ಆ ಧೂಳಿನ ಕಣಗಳು ಒಂದು ನ್ಯೂಕ್ಲಿಯಸ್ಸಿನ ಸುತ್ತ ತಿರುಗುತ್ತಿದ್ದವು. ಅವು ಪರಸ್ಪರ ಹತ್ತಿರ ಬಂದು ಈಗಿನಂತೆ ಗೋಲಾಕಾರದ ಘನವಾಗಲು 400 ಕೋಟಿ ವರ್ಷಗಳೇ ಬೇಕಾಯಿತು' ಎಂದು ಪ್ರತಿಪಾದಿಸುವ ಮೂಲಕ 'ಭೂಮಿಯು ಒಂದೇ ದಿವಸದಲ್ಲಿ ಸೃಷ್ಟಿಯಾಯಿತು' ಎಂಬ ಬೈಬಲ್ಲಿನ ಹೇಳಿಕೆಯನ್ನು ವಿರೋಧಿಸಿತು.

ಭೂಮಿಯು ಸೂರ್ಯನ ಒಂದು ಭಾಗ ಎಂಬ ಕೆಲ ಭೂಗರ್ಭಶಾಸ್ತ್ರಜ್ಞರ ಅಭಿಪ್ರಾಯವನ್ನು ಒಪ್ಪಿಕೊಂಡರೂ ಅದು ಬೈಬಲ್ಲಿನ ಈ ಅಭಿಪ್ರಾಯಕ್ಕೆ ವಿರೋಧವಾಗುತ್ತದೆ.

19ನೇ ಶತಮಾನದಲ್ಲಿ ಚಾರ್ಲ್ಸ್ ಡಾರ್ವಿನ್ನನಿಂದ ಪ್ರವರ್ಧಮಾನಕ್ಕೆ ಬಂದ ವಿಕಾಸವಾದಿ ಜೀವ ವಿಜ್ಞಾನವು ಬೈಬಲ್ಲಿನ ಇನ್ನೂ ಕೆಲವು ವಿಚಾರಗಳಿಗೆ ಪೆಟ್ಟು ಕೊಟ್ಟಿತು. ಬೈಬಲ್ಲಿನ ಪ್ರಕಾರ ಈಶ್ವರನು ಮನುಷ್ಯನನ್ನು ಒಂದು ವಿಶಿಷ್ಟ ಉದ್ದೇಶಕ್ಕಾಗಿ ಸೃಷ್ಟಿಸಿದ. ಕೆಲವು ಹಿಂದೂ ದರ್ಶನಗಳ ಪ್ರಕಾರವೂ ಅನಾದಿಕಾಲದಿಂದ ಸಂಸಾರ ಬಂಧನಕ್ಕೊಳಗಾಗಿರುವ ಆತ್ಮವು ಮೋಕ್ಷ ಪಡೆಯಲಿ ಎಂಬ ಸದುದ್ದೇಶದಿಂದ ಈಶ್ವರನು ಮಾನವನನ್ನೂ, ಅವನ ಮೋಕ್ಷಕ್ಕೆ ಬೇಕಾದ ಪ್ರಪಂಚವನ್ನೂ ಸೃಷ್ಟಿಸಿದ್ದಾನೆ. ಬೈಬಲ್ಲಿನ ಪ್ರಕಾರ ಒಂದೇ ಸೃಷ್ಟಿಯಾಗಿದೆ; ಆದರೆ ಹಿಂದೂಗಳ ಪ್ರಕಾರ ಈಗಾಗಲೇ ಅಸಂಖ್ಯಾತ ಸೃಷ್ಟಿಗಳಾಗಿವೆ. ಅಂತೂ ಸೃಷ್ಟಿವಾದದ ಪ್ರಕಾರ ಮನುಷ್ಯನನ್ನು ಈಶ್ವರನು ಒಂದೇ ಏಟಿಗೆ ಸೃಷ್ಟಿಸಿದ್ದಾನೆ. ಆದರೆ ವಿಕಾಸವಾದದ ಪ್ರಕಾರ ಅಮೀಬಾ ಮನುಷ್ಯನಾದುದು ಯಾವ ಉದ್ದೇಶವನ್ನು ಪೂರೈಸಲೂ ಅಲ್ಲ, ತನ್ನ ವಿಕಾಸದ ವಿವಿಧ ಹಂತಗಳಲ್ಲಿ (ಉದಾಹರಣೆಗೆ ಕಪ್ಪೆ, ನಾಯಿ, ಕುದುರೆ, ಮಂಗ, ಇತ್ಯಾದಿ) ಬದುಕಲೇಬೇಕೆಂಬ ಪ್ರಬಲ ಇಚ್ಛೆಯಿದ್ದುದರಿಂದ ಮಾತ್ರ. ಯಾವ ಜಾತಿಯ ಪ್ರಾಣಿಗಳು ಪರಿಸರದ ವಿರುದ್ಧ ಹೋರಾಡಲಿಲ್ಲವೋ, ಅಥವಾ ಹೋರಾಡಿ ಸೋತವೋ, ಅವು ನಶಿಸಿಹೋಗಿವೆ. ಪರಿಸರಕ್ಕೆ ಹೊಂದಿಕೊಳ್ಳಲೋಸ್ಕರ ವಿವಿಧ ರೀತಿಯ ಅಂಗಗಳನ್ನು ಬೆಳೆಸಿಕೊಂಡಂತಹ ಪ್ರಾಣಿಗಳು ಉಳಿದುಕೊಂಡಿವೆ.

ಭೂಮಿಗೂ ಮನುಷ್ಯನಿಗೂ ಧರ್ಮವು ಕೊಟ್ಟಿದ್ದ ಅನಗತ್ಯ ಪ್ರಾಶಸ್ತ್ಯವನ್ನು ಭೌತ ಮತ್ತು ಜೀವ ವಿಜ್ಞಾನಗಳು ಕಿತ್ತುಕೊಂಡಿವೆ ಎಂಬುದಕ್ಕೆ ಎರಡು ಕಾರಣಗಳನ್ನು ಕೊಡಬಹುದು. (1) ಬೆಳಕು ಒಂದು ಸೆಕೆಂಡಿಗೆ 30,000 ಕಿ.ಮೀ. ವೇಗದಲ್ಲಿ ಚಲಿಸುತ್ತದೆ; ಅದು ಸೂರ್ಯನಿಂದ ಭೂಮಿಯನ್ನು ತಲುಪಲು ಎಂಟು ನಿಮಿಷಗಳನ್ನು ತೆಗೆದುಕೊಳ್ಳುವುದರಿಂದ, ಸೂರ್ಯನು ನಮ್ಮಿಂದ ಎಂಟು ಜ್ಯೋತಿರ್ನಿಮಿಷಗಳಷ್ಟು (ಅಂದರೆ, 15 ಕೋಟಿ ಕಿ ಮೀ) ದೂರ ಇದ್ದಾನೆಂದು ಹೇಳಬಹುದು. ಆದರೆ ನಮ್ಮ ವಿಶ್ವವು ಎಷ್ಟು ವಿಶಾಲವಾಗಿದೆಯೆಂದರೆ, ನಾವು ಆಧುನಿಕ ದೂರದರ್ಶಕಗಳ ಸಹಾಯದಿಂದ 100 ಕೋಟಿ ಜ್ಯೋತಿರ್ವರ್ಷಗಳಷ್ಟು ದೂರದ ನಕ್ಷತ್ರಗಳನ್ನು ನೋಡಬಹುದು. ಇಷ್ಟು ಕ್ಷೇತ್ರದಲ್ಲಿ 10 ಕೋಟಿ ಗೆಲಾಕ್ಸಿಗಳಿವೆ, ಹಾಗೂ ಪ್ರತಿಯೊಂದು ಗೆಲಾಕ್ಸಿಯಲ್ಲಿಯೂ ನಮ್ಮ ಸೂರ್ಯನನ್ನು ಹೋಲುವ ನೂರಾರು ಕೋಟಿ ನಕ್ಷತ್ರಗಳಿವೆ. ಅದಕ್ಕೂ ಆಚೆ ಏನಿದೆ? ಏನಿದೆಯೋ ಗೊತ್ತಿಲ್ಲ; ಆದರೆ ಏನಾದರೂ ಇರಲೇಬೇಕು. ಇಂತಹ ವಿಸ್ತಾರವಾದ ವಿಶ್ವದಲ್ಲಿ, ಲಕ್ಷಕೋಟಿ ಆಕಾಶಕಾಯಗಳ ಮಧ್ಯದಲ್ಲಿ, ನಮ್ಮ ಭೂಮಿ ಒಂದು ಧೂಳಿನ ಕಣ, ಅಷ್ಟೆ. ನಮ್ಮ ಭೂಮಿಯೋ ಇತರ ಗ್ರಹಗಳಾದ ಶನಿ, ಗುರುಗಳಿಗಿಂತ, ಎಷ್ಟೋ ಸಣ್ಣದು; ಹದಿಮೂರು ಲಕ್ಷ

ಭೂಮಿಗಳು ಸೂರ್ಯನಲ್ಲಿ ಹಿಡಿಸಬಲ್ಲವು. ಇಂತಹ ಸೂರ್ಯನೇ ಇತರ ನಕ್ಷತ್ರಗಳಿಗೆ ಹೋಲಿಸಿದರೆ ಬಹಳ ಸಣ್ಣದು–ಆನೆಗೆ ಇರುವೆಯನ್ನು ಹೋಲಿಸಿದಂತೆ. ಆದುದರಿಂದ ಇಂತಹ ಯಃಕಶ್ಚಿತ್ ಭೂಮಿಗೆ ಧರ್ಮಗಳು ಅನಗತ್ಯ, ಪ್ರಾಶಸ್ತ್ಯಕೊಡುವುದರಲ್ಲಿ ಅರ್ಥವಿಲ್ಲ. (2) ಇಂತಹ ಧೂಳಿನ ರೂಪದ ಭೂಮಿಯ ಮೇಲೆ ಹುಟ್ಟಿರುವ ಮನುಷ್ಯ ಇನ್ನೂ ಸಣ್ಣವನು. ಅಂದಮೇಲೆ, ಈಶ್ವರನು ಅವನಿಗೋಸ್ಕರ ವಿಶ್ವವನ್ನು ಸೃಷ್ಟಿಮಾಡಿದ, ಅಥವಾ ವಿಶೇಷ ಗಮನಕೊಟ್ಟು ಅವನನ್ನು ತನ್ನಂತೆಯೇ ಸೃಷ್ಟಿಸಿದ್ದಾನೆ ಎಂದು ಹೇಳುವುದರಲ್ಲಿ ಏನು ಅರ್ಥವಿದೆ? ಒಂದು ವೇಳೆ ಬೇರೆ ಸೌರವ್ಯೂಹಗಳಲ್ಲಿರುವ ಗ್ರಹಗಳಲ್ಲಿ ನಮಗಿಂತ ಹೆಚ್ಚು ಬುದ್ಧಿವಂತ ಜೀವಿಗಳಿದ್ದರೆ, ನಮ್ಮ ಪ್ರಾಶಸ್ತ್ಯ ಮತ್ತಷ್ಟು ಕಮ್ಮಿಯಾಗುತ್ತದೆ. ಇಂದೇನೋ ಮನುಷ್ಯ ' ಭೂಮಿಯಲ್ಲಿ ಮಾತ್ರ ಜೀವವಿದೆ, ಎಲ್ಲ ಜೀವಿಗಳಿಗಿಂತ ಮನುಷ್ಯನೇ ಶ್ರೇಷ್ಠ' ಎಂದು ಜಂಭ ಕೊಚ್ಚಿಕೊಳ್ಳಬಹುದು. ಆದರೆ ಭೂಮಿಯನ್ನು ಬಿಟ್ಟರೆ ಬೇರೆಲ್ಲೂ ಜೀವವಿಲ್ಲ ಎಂದು ವಿಜ್ಞಾನ ಇನ್ನೂ ಸಿದ್ಧಪಡಿಸಿಲ್ಲ.

ಆದರೆ ಧಾರ್ಮಿಕ ನಂಬಿಕೆಗಳಿಗೆ ಸಹಿಸಲಾಗದಂತಹ ಅಘಾತವನ್ನುಂಟು ಮಾಡಿದುದು ಇಪ್ಪತ್ತನೇ ಶತಮಾನದ ಮಾನವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನಗಳ ಸಂಶೋಧನೆ. ಮಾನವಶಾಸ್ತ್ರದ ಪ್ರಕಾರ ಧರ್ಮವನ್ನು ಈಶ್ವರನು ಬೋಧಿಸಲಿಲ್ಲ. ಮನುಷ್ಯನೇ ಕೆಲವೊಂದು ಸನ್ನಿವೇಶಗಳನ್ನು ಪ್ರಾಕೃತಿಕವಾಗಿ ಅರ್ಥೈಸಲು ಸೋತಾಗ, ಬಿರುಗಾಳಿ, ಪ್ರವಾಹ, ಮುಂತಾದ ಪ್ರಾಕೃತಿಕ ಘಟನೆಗಳನ್ನು ನಿಯಂತ್ರಿಸಲು ಸೋತಾಗ, ನಿಸರ್ಗವನ್ನು ಪ್ರಾಯಶಃ ಅಲೌಕಿಕ ವ್ಯಕ್ತಿಗಳು (ದೇವತೆಗಳು) ನಿಯಂತ್ರಿಸುತ್ತಿರಬಹುದೆಂದು ಊಹಿಸಿದನಲ್ಲದೆ, ಆ ದೇವತೆಗಳನ್ನು ತೃಪ್ತಿಪಡಿಸಲು ತನ್ನದೇ ಆದ ಮಾರ್ಗವನ್ನೂ ಊಹಿಸಿಕೊಂಡ. ಈ ಮಾರ್ಗವೇ ಧರ್ಮ. ಅದೇ ರೀತಿ ಸಮಾಜಶಾಸ್ತ್ರದ ಪ್ರಕಾರ ನೈತಿಕ ನಿಯಮಗಳು ಅಪೌರುಷೇಯವೂ ಅಲ್ಲ, ಈಶ್ವರನಿಂದ ಬಂದವೂ ಅಲ್ಲ. ಮನುಷ್ಯ ತನ್ನ ಸಮಾಜದ ಐಕ್ಯಮತ್ಯವನ್ನೂ ಶಾಂತಿಯನ್ನೂ ಕಾಪಾಡಿಕೊಳ್ಳಲು ಕೆಲವು ನಿಯಮಗಳನ್ನು (ಉದಾಹರಣೆಗೆ ' ಪರಸ್ಪರರಲ್ಲಿ ಕೊಲೆ, ಕಳ್ಳತನ ಮಾಡಬಾರದು ') ರೂಪಿಸಿಕೊಂಡ. ಇವೇ ಮುಂದೆ ನೈತಿಕ ನಿಯಮಗಳೆನಿಸಿಕೊಂಡವು.

ಮನೋವಿಜ್ಞಾನದ ಕೆಲವು ಧೋರಣೆಗಳೂ ತೀರ್ಮಾನಗಳೂ ಧರ್ಮದ ಕೆಲ ಮೂಲಭೂತ ಸಿದ್ಧಾಂತಗಳನ್ನು ವಿರೋಧಿಸಿದವು. (1) ನಮಗೆ ಆತ್ಮವೇ ಇಲ್ಲ, ಆದ್ದರಿಂದ ಅಮರತ್ವದ ಪ್ರಶ್ನೆಯೇ ಏಳುವುದಿಲ್ಲ ಎಂದು ಹೇಳುವ ಮೂಲಕ ಮನೋವಿಜ್ಞಾನವು ಧಾರ್ಮಿಕ ಜೀವನದ ತಳಹದಿಯನ್ನೇ ಕಿತ್ತುಹಾಕಿದೆ. (2) ನಮ್ಮ ಬಂಧುಗಳ ರೋಗ ವಾಸಿಯಾಗಲಿ ಎಂದು ನಾವು ಪ್ರಾರ್ಥಿಸಿದಾಗ, ಅನೇಕ ವೇಳೆ ರೋಗವಾಸಿಯಾದದ್ದುಂಟು. ಆದುದರಿಂದ ಪ್ರಾರ್ಥನೆಗೆ ಅಲೌಕಿಕ ಶಕ್ತಿಯಿದೆ ಎಂದು ಅನೇಕರು ನಂಬುತ್ತಾರೆ. ಆದರೆ ಮನೋವಿಜ್ಞಾನಿಗಳ ಪ್ರಕಾರ

ಇದು ಸರಿಯಲ್ಲ ರೋಗಿಗೆ ತನಗೋಸ್ಕರ ತನ್ನ ಬಂಧುಗಳು ಪ್ರಾರ್ಥಿಸುತ್ತಿದ್ದಾರೆ, ಆದುದರಿಂದ ತನಗೆ ಗುಣವಾಗುತ್ತದೆ ಎಂಬ ಸಮಾಧಾನ ಹಾಗೂ ವಿಶ್ವಾಸವೇ ಗುಣಮುಖನನ್ನಾಗಿ ಮಾಡುತ್ತದೆಯೆ ಹೊರತು, ಪ್ರಾರ್ಥನೆಯಲ್ಲ. (3) ಕೆಲವು ಪ್ರಾಕೃತಿಕ ಘಟನೆಗಳು (ಉದಾಹರಣೆಗೆ, ಗುಡುಗು, ಸಿಡಿಲು) ಹುಟ್ಟಿಸುವ ಭಯದಿಂದ ತನ್ನನ್ನು ಪಾರುಮಾಡಲು ಒಂದು ಅಲೌಕಿಕ ವ್ಯಕ್ತಿ (ಈಶ್ವರ) ಇದ್ದರೆ ಚೆನ್ನಾಗಿರುತ್ತಿತ್ತು ಎಂದು ಮನುಷ್ಯನು ಆಶಿಸುತ್ತಾನೆ; ಅದೇ ರೀತಿ ಅವನು ತಾನು ಸತ್ತ ಮೇಲೆ ಮತ್ತೊಂದು ಲೋಕದಲ್ಲಿ ಹುಟ್ಟಲು ಆಶಿಸುತ್ತಾನೆ, ಹೀಗೆ ಧರ್ಮದ ಅನೇಕ ನಂಬಿಕೆಗಳು ಕೇವಲ ಆಶಾತ್ಮಕ ಚಿಂತನೆಗಳೇ (wishfull thinking) ಹೊರತು, ಆಧಾರವುಳ್ಳ ಚಿಂತನೆಗಳಲ್ಲ. (4) ಕೆಲವು ಮನೋವಿಜ್ಞಾನಿಗಳು ಅನುಭಾವಿಗಳನ್ನು ಅಸಾಧಾರಣ ವ್ಯಕ್ತಿಗಳೆಂದು ಪರಿಗಣಿಸುವುದರ ಬದಲು ಅರೆ ಹುಚ್ಚರೆಂದು ಪರಿಗಣಿಸುತ್ತಾರೆ. ಅಂದರೆ ಮನೋವಿಜ್ಞಾನಿಗಳ ಪ್ರಕಾರ, ಧಾರ್ಮಿಕ ಸಿದ್ಧಾಂತಗಳನ್ನು ದಡ್ಡರು, ಹೇಡಿಗಳು, ಹುಚ್ಚರಷ್ಟೇ ನಂಬುತ್ತಾರೆ.

ಹೀಗೆ 17 ರಿಂದ 20ನೇ ಶತಮಾನದವರೆಗೆ ನಡೆದು ಬಂದ ವಿವಿಧ ವಿಜ್ಞಾನಗಳು ನಮ್ಮ ಜೀವನ ಹಾಗೂ ಚಿಂತನೆಯ ವೈಖರಿಯನ್ನು ಎಷ್ಟು ಗಾಢವಾಗಿ ಪರಿವರ್ತಿಸಿವೆಯೆಂದರೆ, ಇಂದು ವಿಜ್ಞಾನವನ್ನು ನಂಬುವವನು, ಧರ್ಮವನ್ನು ಗಂಭೀರವಾಗಿ ನಂಬಲು ಹಿಂಜರಿಯುತ್ತಾನೆ.

2. ಧರ್ಮದ ಪ್ರತಿಕ್ರಿಯೆ :

ವಿಜ್ಞಾನವು ಪ್ರತಿ ಹಂತದಲ್ಲಿಯೂ ಧರ್ಮವನ್ನು ಹೀಗೆ ವಿರೋಧಿಸಿ, ಅವಮಾನಗೊಳಿಸುತ್ತಿದ್ದಾಗ ಧರ್ಮಗುರುಗಳು, ಧರ್ಮಾಧಿಕಾರಿಗಳು, ದೇವತಾಶಾಸ್ತ್ರಜ್ಞರು ಕೈಕಟ್ಟಿಕೊಂಡು ಕುಳಿತಿರಲು ಸಾಧ್ಯವಿರಲಿಲ್ಲ. ಭಾರತದಲ್ಲೇನೋ ಇಂತಹ ಸಂಘರ್ಷ ಉಂಟಾಗಲಿಲ್ಲ. ಅದಕ್ಕೆ ಪಶ್ಚಿಮದಲ್ಲಿ ತ್ವರಿತಗತಿಯಲ್ಲಿ ನಡೆದಿದ್ದ ವೈಜ್ಞಾನಿಕ ಅರಿವೇ ನಮಗೆ ಆಗದಿದ್ದುದು ಕಾರಣವಿರಬಹುದು; ಅಥವಾ ಧಾರ್ಮಿಕ ಸಿದ್ಧಾಂತಗಳಿಗೂ ವಿಜ್ಞಾನಕ್ಕೂ ಏನು ಸಂಬಂಧವೂ ಇಲ್ಲ. ವಿರೋಧವೂ ಇಲ್ಲ ಎಂಬ ಅಲಕ್ಷ್ಯ ಮನೋಭಾವವೂ ಕಾರಣವಿರಬಹುದು. ಆದರೆ ವೈಜ್ಞಾನಿಕ ಸಂಶೋಧನೆಗಳು ಪಾಶ್ಚಾತ್ಯ ಚರ್ಚೆ ಅಧಿಕಾರಿಗಳನ್ನು ಎಷ್ಟು ರೊಚ್ಚಿಗೆಬ್ಬಿಸಿದುವೆಂದರೆ, ಅವರು ವಿವಿಧ ರೀತಿಯ ದ್ವೇಷಪೂರಿತ ಪ್ರತಿಕ್ರಿಯೆಗಳನ್ನು ತೋರಿಸಿದ್ದಾರೆ.

(ಅ) ಇವುಗಳಲ್ಲಿ ಮೊದಲನೆಯದು ವಿಜ್ಞಾನಿಗಳಿಗೆ ಅಮಾನುಷರೀತಿಯ ಕಿರುಕುಳ ಕೊಡುವುದು. ಉದಾಹರಣೆಗೆ ಜಯರ್ಡಿನೋ ಬ್ರೂನೋ ಎಂಬ ವಿಜ್ಞಾನಿಯನ್ನು ಜೀವಂತ ಸುಡಲಾಯಿತು; ಈಶ್ವರ ನಿರ್ಮಿತ ಆಕಾಶಕಾಯಗಳ ರಹಸ್ಯವನ್ನು ತಿಳಿಯಲು ದೂರದರ್ಶಕವನ್ನು ಕಂಡು ಹಿಡಿದದ್ದಕ್ಕಾಗಿ ಹಾಗೂ ಕೋಪರ್ನಿಕಸ್ ಪ್ರತಿಪಾದಿಸಿದ ಸೂರ್ಯಕೇಂದ್ರವಾದವನ್ನು ಅನುಮೋದಿಸಿದ್ದಕ್ಕಾಗಿ ಗೆಲಿಲಿಯೋನನ್ನು ಸಾರ್ವಜನಿಕವಾಗಿ ಅವಮಾನಿಸಲಾಯಿತು.

(ಆ) ವಿಜ್ಞಾನಿಗಳಿಗೆ ತೊಂದರೆ ಅಥವಾ ಶಿಕ್ಷೆ ಕೊಡಲು ಸಾಧ್ಯವಾಗದಿದ್ದಾಗ ವೈಜ್ಞಾನಿಕ ಸಂಶೋಧನೆಗಳನ್ನು ಧರ್ಮವಿರೋಧಿ ಚಟುವಟಿಕೆಗಳೆಂದು ಸಾರಿ, ಅವುಗಳನ್ನು ಬಹಿಷ್ಕರಿಸಲಾಯಿತು ರೋಗರುಜಿನಗಳು ಅಧಾರ್ಮಿಕ ಮನುಷ್ಯನಿಗೆ ಪಾಠಕಲಿಸಲು ಈಶ್ವರನು ರೂಪಿಸಿದ ಶಿಕ್ಷೆಗಳೇ ಹೊರತು, ನೈಸರ್ಗಿಕವಾಗಿ ಅಥವಾ ಅನುವಂಶೀಯವಾಗಿ ಬಂದುವಲ್ಲವೆಂದೂ, ಬುದ್ಧಿವಿಕಾರವು ದೆವ್ವ ಹಿಡಿದಿದ್ದರ ಪರಿಣಾಮವೆಂದೂ, ಶರೀರ ಶಾಸ್ತ್ರಜ್ಞರು ಮಾನವನ ಹೆಣ ಕೊಯ್ಯುವುದು ಪಾಪವೆಂದೂ ಚರ್ಚ್ ಅಧಿಕಾರಿಗಳು ಸಾರಿದರು. ಇದರ ಪರಿಣಾಮವಾಗಿ ಯೂರೋಪಿನಲ್ಲಿ ವೈಜ್ಞಾನಿಕ ಸಂಶೋಧನೆಯ ಪ್ರಗತಿಯು ಸ್ವಲ್ಪ ಕಾಲದವರೆಗೆ ಕುಂಠಿತವಾಯಿತು.

(ಇ) ಕೆಲವು ಧರ್ಮಾಧಿಕಾರಿಗಳು ಈ ಕ್ರೂರ ಹಾಗೂ ಅತರ್ಕ್ಯ ಮಾರ್ಗಗಳನ್ನು ಬಿಟ್ಟು, ದಾರ್ಶನಿಕ ವಿಧಾನಗಳನ್ನು ಅನುಸರಿಸಿ ವಿಜ್ಞಾನದ ಇತಿಮಿತಿಗಳನ್ನು ತೋರಿಸಲು ಪ್ರಯತ್ನಪಟ್ಟರು. (1) ವಿಜ್ಞಾನವು ಯಾವುದು ಸದ್ವರ್ತನೆ, ಯಾವುದಲ್ಲ, ಯಾವುದು ಸುಂದರ, ಯಾವುದಲ್ಲ, ಈಶ್ವರ ಇದ್ದಾನೆಯೋ ಇಲ್ಲವೊ, ಎಂಬುದನ್ನು ನಿರ್ಣಯಿಸಲು ಅಶಕ್ತವಿದೆ. ಏಕೆಂದರೆ ಒಳ್ಳೆಯತನ, ಸೌಂದರ್ಯ, ಈಶ್ವರ, ಆತ್ಮ, ಮುಂತಾದುವುಗಳು ಇಂದ್ರಿಯಗೋಚರ ವಸ್ತುಗಳ ಪರಿಧಿಯಲ್ಲಿ ಬರುವುದಿಲ್ಲ. ಆದುದರಿಂದ ಕೇವಲ ಇಂದ್ರಿಯಗೋಚರ ವಸ್ತುಗಳನ್ನು ಅಭ್ಯಸಿಸುವ ವಿಜ್ಞಾನಕ್ಕೆ, ಇಂದ್ರಿಯಾನುಭವದ ಹೊರಗಿರುವ ಯಾವ ವಿಷಯವನ್ನೇ ಆಗಲಿ ಸತ್ಯ ಅಥವಾ ಅಸತ್ಯವೆಂದು ಘೋಷಿಸುವ ಹಕ್ಕಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಅದು ನೀಡುವ ನಿರ್ಣಯಗಳನ್ನು ಧರ್ಮ, ನೀತಿಶಾಸ್ತ್ರ, ಸೌಂದರ್ಯಶಾಸ್ತ್ರಗಳು ಗಂಭೀರವಾಗಿ ಪರಿಗಣಿಸುವ ಆವಶ್ಯಕತೆ ಇಲ್ಲ. (2) ವಿಜ್ಞಾನವು ನಡೆದು ಬಂದಿರುವ ದಾರಿಯನ್ನು ನೋಡಿದರೆ ವೈಜ್ಞಾನಿಕ ಸತ್ಯಗಳ ಮಿತಿಯು ಅರಿವಾಗುತ್ತದೆ. ಒಂದು ಕಾಲದಲ್ಲಿ ಸತ್ಯವೆಂದು ಘೋಷಿತವಾದ ಅನೇಕ ಸಿದ್ಧಾಂತಗಳು ಮತ್ತೊಂದು ಕಾಲದಲ್ಲಿ ಅಸತ್ಯವೆಂದು ಪರಿಗಣಿತವಾಗಿದೆ. ನ್ಯೂಟನ್ ಸ್ಥಾಪಿಸಿದ ಸತ್ಯಗಳು ಐನ್‌ಸ್ಟೈಯಿನನಿಂದ ಪರಿಷ್ಕೃತವಾದವು. ಫ್ಲೋಜಿಸ್ಟ್ಯಾನ್ ಇದೆಯೆಂದು ಈಗ ಯಾರೂ ನಂಬುವುದಿಲ್ಲ. ಹೀಗಿರುವಾಗ, ಧರ್ಮದ ವಿರುದ್ಧವಾಗಿ ಮಾಡಿರುವ ವಿಜ್ಞಾನದ ಘೋಷಣೆಗಳನ್ನು ನಾವು ಸಾರ್ವಕಾಲಿಕ, ಅಭಾದಿತ ಸತ್ಯವೆಂದು ಏಕೆ ಪರಿಗಣಿಸಬೇಕು? (3) ಖಗೋಳ ಶಾಸ್ತ್ರವು ತೋರಿಸಿರುವ ವಿಶ್ವದ ಅಗಾಧ ವಿಸ್ತಾರವು ನಮ್ಮನ್ನು ನಿಕೃಷ್ಟ ಮಾಡಬೇಕಾಗಿಲ್ಲ. ಏಕೆಂದರೆ, ಸಣ್ಣದು–ದೊಡ್ಡದು, ವಿಶಾಲವಾದುದು–ಕಿರಿದಾದುದು ಮುಂತಾದ ಭೇದವು ಮಾನವ ನಿರ್ಮಿತವಾದುದು. ಮನುಷ್ಯನ ಜೀವಾವಧಿಗೆ ಹೋಲಿಸಿದರೆ ಜ್ಯೋತಿರ್ವರ್ಷವು ಬಹಳ ದೊಡ್ಡದಾಗಿ ಕಾಣಬಹುದು. ಇರುವೆಗೆ ಬೆಟ್ಟ ಕಂಡಂತೆ. ಆದರೆ ಯಂತ್ರ ವಿಜ್ಞಾನವು ಪ್ರಪಂಚದ ವಿವಿಧ ಸ್ಥಳಗಳ ನಡುವಿನ ಅಂತರವನ್ನು ಕುಗ್ಗಿಸಿದೆ. ಒಂದು ಅರ್ಥದಲ್ಲಿ ಪ್ರಪಂಚದ ಅಗಾಧ ವಿಸ್ತಾರವನ್ನು

ತಿಳಿಸುವ ಮೂಲಕ ವಿಜ್ಞಾನವು ಮನುಕುಲಕ್ಕೆ ಒಂದು ಉಪಕಾರವನ್ನೇ ಮಾಡಿದೆ. ಹೇಗೆಂದರೆ: ಮನುಷ್ಯನ ದೇಹವು ಗ್ರಹ, ನಕ್ಷತ್ರ, ನಕ್ಷತ್ರಪುಂಜ ಇವುಗಳಿಗೆ ಹೋಲಿಸಿದರೆ ಅತಿ ಗೌಣವಾದರೂ ಅವನ ಬುದ್ಧಿಗೆ ಮಾತ್ರ ಇವೆಲ್ಲಾ ಆಕಾಶ ಕಾಯಗಳಿಗಿಂತ ಆಚೆ ನೋಡುವ ಅಥವಾ ಊಹಿಸಿಕೊಳ್ಳುವ ಸಾಮರ್ಥ್ಯವಿದೆ. (4) ವಿಜ್ಞಾನವು ಏನೆಲ್ಲ ಹೇಳಿದರೂ 'ವಿಶ್ವವು ತನ್ನಿಂದ ತಾನೇ ಸೃಷ್ಟಿಯಾಯಿತು' ಎಂದಂತೂ ಹೇಳಿಲ್ಲ. ಅಂದಮೇಲೆ ವಿಶ್ವಕರ್ತನೊಬ್ಬ ಇರಲೇಬೇಕು. (5) ಇಂದ್ರಿಯ ಗಳು ತೋರಿಸಿದುದಷ್ಟನ್ನೇ ನಂಬುವುದು ವಿಜ್ಞಾನದ ಧೋರಣೆಯಾದರೆ, ಒಂದು ವಸ್ತುವನ್ನು ವಿಜ್ಞಾನಿಯು ನೋಡದಿದ್ದರೆ ಅದು ಇಲ್ಲ ಎನ್ನಬೇಕಾದೀತು. ಅರ್ಥಾತ್, ಈಶ್ವರ, ಆತ್ಮ, ಅಮರತ್ವ ಮುಂತಾದವುಗಳನ್ನು ವಿಜ್ಞಾನಿಯು ಇಂದ್ರಿಯಾನು ಭವದಿಂದ ತಿಳಿದುಕೊಳ್ಳಲು ಬರುವುದಿಲ್ಲವೆಂದಮೇಲೆ, ಅವು ಅವನ ಪಾಲಿಗೆ ಅಸತ್ಯ. ಆದರೆ ವಿಜ್ಞಾನಿಯು ಹೀಗೆ ವಾದಿಸುವುದು ಎಷ್ಟು ಹಾಸ್ಯಾಸ್ಪದವೆಂಬುದನ್ನು ಸರ್ ಆರ್ಥರ್ ಎಡ್ಡಿಂಗ್‌ಟನ್ ಎಂಬ ವಿಜ್ಞಾನಿಯು ಒಂದು ಪರಿಣಾಮಕಾರಿ ಉಪಮೆ ಯೊಂದಿಗೆ ಸ್ಪಷ್ಟಪಡಿಸಿದ್ದಾನೆ. ಒಬ್ಬ ವಿಜ್ಞಾನಿಯು ಒಂದು ಅಂಗುಲಕ್ಕಿಂತಲೂ ಹೆಚ್ಚು ದಪ್ಪವಿರುವ ಮೀನುಗಳನ್ನು ಅಭ್ಯಸಿಸಬೇಕಾಗಿದೆ ಎನ್ನೋಣ. ಅವನು ಆ ಗಾತ್ರದ ಮೀನುಗಳನ್ನು ಹಿಡಿಯಬೇಕಾದರೆ, ಅವನು ಉಪಯೋಗಿಸುವ ಮೀನಿನ ಬಲೆಯ ಕಣ್ಣುಗಳು ಪರಸ್ಪರ ಒಂದಂಗುಲ ದೂರವಿರಬೇಕಾಗುತ್ತದೆ. ಆ ಬಲೆಯ ಸಹಾಯದಿಂದ ಅವನು ಒಂದಂಗುಲ ಅಥವಾ ಹೆಚ್ಚು ದಪ್ಪವಿರುವ ಮೀನುಗಳನ್ನು ಹಿಡಿಯುತ್ತಾನೆ. ಆದರೆ, ಅವನ ಬಲೆಗೆ ಒಂದಂಗುಲಕ್ಕಿಂತ ಕಡಿಮೆ ದಪ್ಪವಿರುವ ಮೀನುಗಳು ಸಿಕ್ಕುವುದಿಲ್ಲ ಎಂಬ ಕಾರಣಕ್ಕಾಗಿ ಒಂದಂಗುಲಕ್ಕಿಂತ ಕಡಿಮೆ ದಪ್ಪ ವಿರುವ ಮೀನುಗಳೇ ಇಲ್ಲ ಎನ್ನಲಾದೀತೆ? ಅದೇ ರೀತಿ, ಧಾರ್ಮಿಕ ವಿಷಯಗಳು ವೈಜ್ಞಾನಿಕ ಅವಲೋಕನಕ್ಕೆ ಸಿಕ್ಕುವುದಿಲ್ಲವೆಂದ ಮಾತ್ರಕ್ಕೆ ಧಾರ್ಮಿಕ ವಿಷಯಗಳೆಲ್ಲ (ಆತ್ಮ, ಈಶ್ವರ, ಇತ್ಯಾದಿ) ಅಸತ್ಯ ಎನ್ನಲಾದೀತೆ? (6) ದೈಹಿಕ ಕ್ರಿಯೆಗಳಿಗೂ, ಬೌದ್ಧಿಕ ಕ್ರಿಯೆಗಳಿಗೂ ಇರುವ ವ್ಯತ್ಯಾಸವು ಎಷ್ಟು ಪ್ರಬಲವಾಗಿದೆಯೆಂದರೆ, ಬುದ್ಧಿಯು (ಆತ್ಮವು) ಭೌತಾಣುಗಳ ಸಂಯೋಜನೆಯ ಫಲಎಂದರೆ ಅದನ್ನು ಯಾರೂ ಒಪ್ಪುವುದಿಲ್ಲ (7) ಕೆಲವರು ಧರ್ಮವು ಶ್ರುತಿ ಮತ್ತು ಶ್ರದ್ಧೆಯನ್ನವಲಂಬಿಸಿದೆ, ವಿಜ್ಞಾನವು ಸಾಕ್ಷ್ಯ ಮತ್ತು ತರ್ಕವನ್ನವಲಂಬಿಸಿದೆ' ಎಂದು ಹೇಳಿ, ಧರ್ಮವನ್ನು ಕೀಳುದೃಷ್ಟಿಯಿಂದ ನೋಡುತ್ತಾರೆ. ಆದರೆ ದೇವತಾ ಶಾಸ್ತ್ರಜ್ಞರ (theologians) ಪ್ರಕಾರ ಇದು ತಪ್ಪು ಗ್ರಹಿಕೆ. ಧಾರ್ಮಿಕ ನಂಬಿಕೆಗಳನ್ನು ತರ್ಕದಿಂದ ಸಮರ್ಥಿಸಲು ಸಾಧ್ಯವಿದೆ. ಅಲ್ಲದೆ, ವಿಜ್ಞಾನಿಗಳೂ ಶ್ರದ್ಧೆಯನ್ನು ಅವಲಂಬಿಸುತ್ತಾರೆ. 'ನೀರು ಸಮುದ್ರ ಮಟ್ಟದಲ್ಲಿ 212°F ಉಷ್ಣಾಂಶದಲ್ಲಿ ಕುದಿಯುತ್ತದೆ ಎಂಬ ಸಿದ್ಧಾಂತವು ಇಂದು ಸತ್ಯವಿದ್ದರೂ, ಅದು ಸಾರ್ವಕಾಲಿಕ ಸತ್ಯ ಎಂದು ಹೇಳಲು ವಿಜ್ಞಾನಿಗೆ ಏನು ಆಧಾರವಿದೆ? ಅವನಿಗೆ ಕೇವಲ ಪ್ರಕೃತಿಯ ಏಕ ಪ್ರಕಾರತಾ ನಿಯಮದ ಬಗ್ಗೆ

ಅಚಲ ವಿಶ್ವಾಸ (ಶ್ರದ್ಧೆ) ಇದೆ; ತನ್ನ ಇಂದ್ರಿಯ ಹಾಗೂ ಬುದ್ಧಿಗಳಲ್ಲಿ ವಿಶ್ವಾಸವಿದೆ; ತಾನು ಬಳಸುವ ಸಲಕರಣೆಗಳಲ್ಲಿ ವಿಶ್ವಾಸವಿದೆ.

ಆದರೆ ವಿಜ್ಞಾನದ ವಿರುದ್ಧ ಮಾಡಲಾದ ಈ ಆಪಾದನೆಗಳಾವುವೂ ಧಾರ್ಮಿಕ ಸಿದ್ಧಾಂತಗಳು ಸತ್ಯವೆಂಬುದನ್ನು ಸ್ಥಾಪಿಸುವುದಿಲ್ಲ. ಏಕೆಂದರೆ, (ಅ) ಒಂದು ವೇಳೆ ವಿಜ್ಞಾನವು ಕಲೆ, ನೀತಿ, ಧರ್ಮಗಳನ್ನು ಪರೀಕ್ಷಿಸಲಾರದೆಂದೇ ಊಹಿಸೋಣ; ಆದರೆ ಇದರಿಂದ ಧಾರ್ಮಿಕ ನಂಬಿಕೆಗಳು ಸತ್ಯಾಪನೆ ಆಯಿತು ಎಂದರ್ಥವಲ್ಲ. ಧರ್ಮ, ನೀತಿ, ಸೌಂದರ್ಯಗಳ ಕ್ಷೇತ್ರವೇ ಬೇರೆ, ವಿಜ್ಞಾನದ ಕ್ಷೇತ್ರವೇ ಬೇರೆ ಎಂದು ಹೇಳುವುದು ಸತ್ಯವೇ ಆದರೂ ಧಾರ್ಮಿಕ ಸಿದ್ಧಾಂತಗಳಿಗೂ ವೈಜ್ಞಾನಿಕ ಸಿದ್ಧಾಂತಗಳಿಗೂ ವಿರೋಧವಿಲ್ಲ ಎಂದು ಅರ್ಥವಲ್ಲ. ಹೀಗೆ ವಿರೋಧವಿಲ್ಲ ಎಂದು ನಟಿಸುವವರು ಉಪ್ಪುಪಕ್ಷಿ ಧೋರಣೆಯನ್ನು ಪಾಲಿಸುತ್ತಿದ್ದಾರೆ.[1] ಇದರಿಂದ ಯಾವ ರೀತಿಯ ವೈಷಮ್ಯವನ್ನೂ ಬಗೆಹರಿಸಲಾಗುವುದಿಲ್ಲ. (ಆ) ವೈಜ್ಞಾನಿಕ ಸಿದ್ಧಾಂತಗಳು ಕಾಲ ಕಾಲಕ್ಕೆ ಪರಿಷ್ಕೃತವಾಗುತ್ತಾ ಬಂದಿರುವುದೇನೋ ನಿಜ. ಆದರೆ ಈ ಕಾರಣಕ್ಕಾಗಿ ವೈಜ್ಞಾನಿಕ ಸಿದ್ಧಾಂತಗಳೇ ಬೇಡ ಎಂದು ಯಾವ ವಿಜ್ಞಾನಿಯೂ ಹೇಳಿಲ್ಲ. ಒಂದು ವೇಳೆ ಯಾರಾದರೂ ಹಾಗೆ ಹೇಳಿದರೆ, ಧಾರ್ಮಿಕ ನಂಬಿಕೆಗಳೂ ಬೇಡ ಎನ್ನ ಬೇಕಾಗುತ್ತದೆ, ಏಕೆಂದರೆ ಅವೂ ಸಹ ಕಾಲಕಾಲಕ್ಕೆ ಬದಲಾಗುತ್ತಾ ಬಂದಿವೆ. ಆದರೆ ಒಂದಂತೂ ಸತ್ಯ: ವೈಜ್ಞಾನಿಕ ಸಿದ್ಧಾಂತಗಳನ್ನು ಪರಿಷ್ಕರಿಸಬಹುದು ಅಥವಾ ತಿರಸ್ಕರಿಸಬಹುದು. ಆದರೆ ಯಾವ ವಿಜ್ಞಾನವೂ ವೈಜ್ಞಾನಿಕ ಪದ್ಧತಿಯನ್ನಾಗಲಿ ಸಂಶೋಧಕ ಪ್ರವೃತ್ತಿಯನ್ನಾಗಲಿ ತಿರಸ್ಕರಿಸಿಲ್ಲ, ತಿರಸ್ಕರಿಸುವುದೂ ಇಲ್ಲ. ಒಂದು ವೈಜ್ಞಾನಿಕ ಸಿದ್ಧಾಂತವು ಪರಿಷ್ಕೃತವಾಗುವುದನ್ನೂ ಸಾಧಾರವಾಗಿ ತಿರಸ್ಕೃತವಾಗುವುದನ್ನೂ ವಿಜ್ಞಾನಿಗಳು ಸ್ವಾಗತಿಸುತ್ತಾರೆ; ಆದರೆ ಧರ್ಮವು ಪರಿಷ್ಕೃತವಾಗುವುದನ್ನೂ ತಿರಸ್ಕೃತವಾಗುವುದನ್ನೂ ಯಾವ ಸನಾತನಿಯೂ ಒಪ್ಪುವುದಿಲ್ಲ. (ಇ) ವಿಜ್ಞಾನವು ಪ್ರಪಂಚವು ತಂತಾನೇ ಸೃಷ್ಟಿಯಾಯಿತು ಎಂದು ಹೇಳುವುದಿಲ್ಲವೇನೋ, ನಿಜ. ಆದರೆ ಈಶ್ವರ ಅದರ ಕರ್ತೃ ಎಂಬುದು ಇದರ ಅರ್ಥವಲ್ಲ.

ಆದರೆ ಧರ್ಮಾಧಿಕಾರಿಗಳು ಹೆಚ್ಚುಹೆಚ್ಚು ವಿದ್ಯಾವಂತರಾದಂತೆಲ್ಲಾ ವಿಜ್ಞಾನವು ಇಂದ್ರಿಯ ಪ್ರತ್ಯಕ್ಷ ಸಾಕ್ಷ್ಯಗಳ ಸಮೇತ ಸಿದ್ಧಪಡಿಸಿದ ಸತ್ಯಗಳನ್ನು ತಿರಸ್ಕರಿಸಲು ಹಿಂಜರಿಯುತ್ತಾರೆ. ಹೀಗಾಗಿ, ಇದರ ಸಮಸ್ಯೆ ಪರಿಹಾರವಾಗುವುದರ ಬದಲು, ಅದಕ್ಕೊಂದು ಹೊಸ ತಿರುವು ಸಿಕ್ಕಿದಂತಾಗಿದೆ. ಹೇಗೆಂದರೆ: ವಿಜ್ಞಾನವನ್ನು ಒಪ್ಪಿಕೊಂಡರೆ ಧಾರ್ಮಿಕ ನಂಬಿಕೆಗಳು ಸುಳ್ಳೆಂಬುದು ಖಚಿತವಾಗುತ್ತದೆ. ವಿಜ್ಞಾನ ವನ್ನೂ ಒಪ್ಪಿಕೊಂಡು, ಧಾರ್ಮಿಕ ನಂಬಿಕೆಗಳನ್ನು ತಿರಸ್ಕರಿಸದಿರಲೂ ಸಾಧ್ಯವೆ? ಅರ್ಥಾತ್, ವೈಜ್ಞಾನಿಕ ಸಿದ್ಧಾಂತಗಳಿಗೂ ಧಾರ್ಮಿಕ ಸಿದ್ಧಾಂತಗಳಿಗೂ ರಾಜಿ

1. ಎಚ್. ಜೆ. ಪೇಟನ್, ದಿ ಮಾಡರ್ನ್ ಪ್ರೆಡಿಕಮೆಂಟ್ (ನ್ಯೂಯಾರ್ಕ್: ಕೊಲಿಯರ್ ಬುಕ್ಸ್ 1962) ಪುಟ. 117–8.

ಮಾಡಿಸುವುದು ಹೇಗೆ? ವಿಜ್ಞಾನಿಗಳಿಗೆ ತೊಂದರೆ ಅಥವಾ ಶಿಕ್ಷೆಕೊಡುವುದು ಅನಾಗರಿಕವೆಂದು ತಿಳಿದುಕೊಂಡದುದು, ಮತ್ತು ಈ ರಾಜೀ ಮನೋಭಾವವು ನಾಲ್ಕು ಪ್ರಯತ್ನಗಳ ರೂಪದಲ್ಲಿ ವ್ಯಕ್ತವಾಗಿದೆ.

(1) ಮೇಲ್ನೋಟಕ್ಕೆ ಹಾಸ್ಯವೆಂದೆನಿಸಿದರೂ, ಸ್ವಲ್ಪ ದಾರ್ಶನಿಕ ಗಾಂಭೀರ್ಯವನ್ನುಳ್ಳ ಒಂದು ಪ್ರಯತ್ನ ಫಿಲಿಪ್ಸ್ ಗೋಸೆ ಎಂಬುವವನು ಮಾಡಿದುದು. ಅವನು ತನ್ನ 'ಓಂಫಲೋಸ್' ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾನೆ: ಈಶ್ವರನು ತನ್ನ ಸ್ವ-ಇಚ್ಛೆಯಿಂದ ಇಡೀ ವಿಶ್ವವೇ ಆರೇ ದಿನಗಳಲ್ಲಿ ಸಂಪೂರ್ಣವಾಗಿ ಅರಳುವಂತೆ ಮಾಡಿದ. ಈ ಅವಧಿಯಲ್ಲಿಯೇ ಪಳೆಯುಳಿಕೆಗಳು ಭೂಮಿಯ ವಿವಿಧ ಸ್ತರಗಳಲ್ಲಿ ಹುದುಗುವಂತೆಯೂ, ಪ್ರತಿಯೊಂದು ಮರದ ಕಾಂಡದಲ್ಲಿ ವಾರ್ಷಿಕ ಉಂಗುರಗಳು[1] ಸೇರಿಕೊಳ್ಳುವಂತೆಯೂ ಮಾಡಿದ. ಚಾರ್ಲ್ಸ್‌ಕಿಂಗ್ಸ್ಲೆ ಈ ಪುಸ್ತಕವನ್ನು ಓದಿದ ಬಳಿಕ 'ಹೀಗೆ ನಮ್ಮಿಂದ ಎಲ್ಲವನ್ನೂ ಮುಚ್ಚಿಡುವ ಈಶ್ವರನು ಮಹಾ ಮೋಸಗಾರನಿರಬೇಕು' ಎಂದು ಉದ್ಗರಿಸಿದ.[2] (2) ಧರ್ಮಾಧಿಕಾರಿಗಳೂ ದೇವತಾಶಾಸ್ತ್ರಜ್ಞರೂ ಪ್ರಾಕೃತಿಕ ನಿಯಮಗಳಲ್ಲಿ ದೈವದ ಕೈವಾಡವಿದೆ ಎನ್ನುವುದು ಈ ಪ್ರಯತ್ನದ ಮತ್ತೊಂದು ರೂಪ. 19ನೇ ಶತಮಾನದಿಂದ ಈಚೆಗೆ ಧರ್ಮದ ಪರವಾಗಿ ಬರೆದ ಗ್ರಂಥಗಳಲ್ಲಿ ಈ ಉದ್ದೇಶಕ್ಕೇ ಪ್ರಥಮಸ್ಥಾನ. ಅವರ ಪ್ರಕಾರ ಮಾನವ ಹಾಗೂ ಪ್ರಾಣಿಯ ದೇಹದ ವಿವಿಧ ಅಂಗಗಳಲ್ಲಿರುವ ಪರಸ್ಪರ ಸಹಕಾರ, ಸುವ್ಯವಸ್ಥೆಯನ್ನೂ, ಪ್ರಾಕೃತಿಕ ನಿಯಮಗಳ ಏಕ ಪ್ರಕಾರತೆಯನ್ನೂ ವಿಜ್ಞಾನವೇ ಕಂಡು ಹಿಡಿದಿದ್ದರೂ ಇಂತಹ ಸುವ್ಯವಸ್ಥೆಯನ್ನು ಸರ್ವಜ್ಞನೂ ಸರ್ವಶಕ್ತನೂ ಆದ ಈಶ್ವರನೇ ಮಾಡಿರಬೇಕು ಎಂಬುದನ್ನು ಇದು ಸೂಚಿಸುತ್ತದೆ; ಏಕೆಂದರೆ ಇಂತಹ ಸುವ್ಯವಸ್ಥೆಯನ್ನು ವಿವಿಧ ಅಂಗಗಳು ತಂತಾವೇ ರಚಿಸಿಕೊಳ್ಳುತ್ತವೆ ಎಂಬುದು ನಂಬಲರ್ಹವಲ್ಲ. ವಿಜ್ಞಾನವು ಇಂದ್ರಿಯಾತೀತ, ಈಶ್ವರನ ಬಗ್ಗೆ ಏನೂ ಹೇಳುವುದಿಲ್ಲ. ಆದುದರಿಂದ ಈ ದೃಷ್ಟಿಯಲ್ಲಿ ವಿಜ್ಞಾನವು ಅಪೂರ್ಣ. ಧರ್ಮವು ವೈಜ್ಞಾನಿಕ ಸಂಶೋಧನೆಗಳನ್ನು ಮಾಡುವುದಿಲ್ಲವಾದುದರಿಂದ ಅದೂ ಅಪೂರ್ಣವೆಂದು ಹೇಳಬಹುದಾದರೂ, ಅದು ವಿಜ್ಞಾನದ ಸಂಶೋಧನೆಗಳನ್ನವಲಂಬಿಸಿ ಈಶ್ವರನ ಅಸ್ತಿತ್ವವನ್ನು ಸ್ಥಾಪಿಸಲು ಶಕ್ತವಾಗಿರುವುದರಿಂದ ಅದು ಪೂರ್ಣವೆಂದೇ ಹೇಳಬಹುದು. (3) ಒಂದು ಸ್ಥೂಲ ಅರ್ಥದಲ್ಲಿ ದೇವತಾಶಾಸ್ತ್ರ, ಪುರಾಣ, ಮುಂತಾದ ಧರ್ಮಗ್ರಂಥಗಳಲ್ಲಿಯೂ ವಿಜ್ಞಾನವೂ ಇದೆ. ಉದಾಹರಣೆಗೆ, ಈಶ್ವರನೇ ಮತ್ಸ್ಯ, ಕೂರ್ಮ, ವರಾಹ,

1. ಮರದ ಬುಡವನ್ನು ಕಡಿದಾಗ, ಅದರಲ್ಲಿ ಅದರ ಮಧ್ಯದಿಂದ ಹಿಡಿದ ತೊಗಟೆಯವರೆಗೆ ಅನೇಕ ವೃತ್ತಗಳು (ಉಂಗುರಗಳು) ಕಾಣುತ್ತವೆ. ಸಸ್ಯಶಾಸ್ತ್ರಜ್ಞರ ಪ್ರಕಾರ, ಪ್ರತಿ ಉಂಗುರವೂ ಮರಕ್ಕೆ ಒಂದೊಂದು ವರ್ಷವಾಗಿದೆ ಎಂಬುದನ್ನು ಸೂಚಿಸುತ್ತದೆ.

2. ಸಿ. ಎ. ಕೌಲ್ಸನ್; ಮೇಲೆ ಹೇಳಿದ ಪುಸ್ತಕ. ಪುಟ—34.

ಇತ್ಯಾದಿಗಳಾಗಿ ಅವತರಿಸಿದ್ದಾನೆ ಎಂಬ ಪುರಾಣಗಳ ಮಾತನ್ನೇ, ಚಾರ್ಲ್ಸ್‌ಡಾರ್ವಿನ್ ವೈಜ್ಞಾನಿಕವಾಗಿ ಮೊದಲು ಜೀವವು ಮತ್ಸ್ಯವಾಗಿ, ಆಮೇಲೆ ಕೂರ್ಮವಾಗಿ, ಆಮೇಲೆ ವರಾಹವಾಗಿ ವಿಕಾಸಹೊಂದಿತು ಎಂದು ಹೇಳಿದ್ದಾನೆ. ಆದರೆ ಈ ಪೌರಾಣಿಕ ವಿಜ್ಞಾನವು ಪ್ರಾಥಮಿಕ ಹಂತದ, ಈಗಿನ ಪ್ರಯೋಗಶೀಲತೆಯನ್ನು ಅವಲಂಬಿಸದ, ಒಂದು ಕರಡು ರೂಪದ ವಿಜ್ಞಾನ. ಆದುದರಿಂದ ಅದರಲ್ಲಿ ತಪ್ಪುಗಳಿದ್ದರೆ ಆಶ್ಚರ್ಯವೇನಿಲ್ಲ. ಆಧುನಿಕ ವಿಜ್ಞಾನವು ಆದಿ ವಿಜ್ಞಾನದ ಒಂದು ಆಧುನಿಕ, ಪರಿಷ್ಕೃತ ರೂಪವಷ್ಟೆ. ಎ.ಡಿ. ವೈಟ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಧರ್ಮವು ವಿಜ್ಞಾನವಿರೋಧೀ ಧೋರಣೆಗಳನ್ನು ತ್ಯಜಿಸಿ, ವಿಜ್ಞಾನದ ನೆರವನ್ನು ಪಡೆಯುವುದರಿಂದ ಅದು ಇನ್ನೂ ಬಲವಾಗುತ್ತದೆ ಎನ್ನುತ್ತಾನೆ. (4) ಪೌಲ್ ಟಿಲಿಕ್, ಕಾರ್ಲ್‌ಬಾರ್ಥ್, ಮುಂತಾದ ದೇವತಾಶಾಸ್ತ್ರಜ್ಞರು ಧರ್ಮ ಮತ್ತು ವಿಜ್ಞಾನಗಳಿಗೆ ಇರುವ ವಿರೋಧವು ಧರ್ಮಗ್ರಂಥಗಳನ್ನು ಅಕ್ಷರಶಃ ಅರ್ಥೈಸುವುದರಿಂದ ಉಂಟಾಗುತ್ತದೆ ಎನ್ನುತ್ತಾರೆ. ಉದಾಹರಣೆಗೆ, ಈಡನ್ ವನದಲ್ಲಿನ ಸರ್ಪವು ಪ್ರಥಮ ಮಾನವ ಆಡಮನಿಗೆ ಜ್ಞಾನದ ಹಣ್ಣನ್ನು ತಿನ್ನಬೇಡವೆಂದು ಎಚ್ಚರಿಕೆ ಕೊಡುತ್ತದೆ ಮಾತಾಡುವ ಸರ್ಪ ಒಂದು ವೈಜ್ಞಾನಿಕ ಅಸತ್ಯವಾದುದರಿಂದ, ಅಂತಹ ಮಾತಿಗೂ ವೈಜ್ಞಾನಿಕ ಸಿದ್ಧಾಂತಕ್ಕೂ ವಿರೋಧವುಂಟಾಗುತ್ತದೆ. ಆದರೆ ಇದನ್ನು ಸಂಕೇತಾತ್ಮಕ ಭಾಷೆಯೆಂದು ಪರಿಗಣಿಸಿ, ಅದರ ಹಿಂದಿರುವ ತತ್ವವನ್ನು ನಾವು ಗಮನಿಸಬೇಕು. ಈ ದೃಷ್ಟಿಯಲ್ಲಿ ಪುರಾಣ ಮುಂತಾದ ಧರ್ಮಗ್ರಂಥಗಳ ಭಾಷೆಯೆಲ್ಲಾ ಸಂಕೇತಾತ್ಮಕವೇ. ಈ ಸಂಕೇತಾತ್ಮಕ ಭಾಷೆಗೆ ವಾಚ್ಯಾರ್ಥಕೊಟ್ಟರೆ, ಆಗ ಅದು ವಿಜ್ಞಾನಕ್ಕೆ ವಿರೋಧಿಯಾಗುತ್ತದೆ. ಅದಕ್ಕೇ ಕಾರ್ಲ್‌ಭಾರ್ಥ್ ಹೇಳಿದುದು "ಸರ್ಪ ಏನು ಹೇಳಿತು ಎಂಬುದು ಮುಖ್ಯವೇ ಹೊರತು, ಸರ್ಪವು ಹೇಳಿತೇ ಎಂಬುದಲ್ಲ" ಎಂದು.

(5) ಧರ್ಮಾಧಿಕಾರಿಗಳೂ ದೇವತಾಶಾಸ್ತ್ರಜ್ಞರು ನಿರೀಕ್ಷಿಸದ ಆದರೆ ಬಹಳವಾಗಿ ಸ್ವಾಗತಿಸುವ ಕಾರ್ಯಕ್ರಮವೆಂದರೆ ವಿಜ್ಞಾನಿಗಳೇ ಧರ್ಮದ ಪರವಾಗಿ ಬರೆಯುವುದನ್ನು ಸರ್ ಜೇಮ್ಸ್ ಜೀನ್ಸ್, ಸರ್ ಆರ್ಥರ್ ಎಡಿಂಗ್ಟನ್, ಜಿ.ಬಿ.ಎಸ್. ಹಾಲ್ಡೇನ್ ಮುಂತಾದ ಶ್ರೇಷ್ಠ ವಿಜ್ಞಾನಿಗಳು ನಮಗೆ ಕಾಣುವ ವಿಶ್ವದಲ್ಲಿ ಕಾಣದ ಚೇತನವೂ ಇದೆ ಎಂದು ನಂಬಿದವರು. ಅವರು ವೈಜ್ಞಾನಿಕ ಸಿದ್ಧಾಂತಗಳನ್ನು ಉಪಯೋಗಿಸಿಕೊಂಡು ಧಾರ್ಮಿಕ ನಂಬಿಕೆಗಳು ಸತ್ಯವಾಗಿರಲು ಸಾಧ್ಯವೆಂದೂ, ವಿಜ್ಞಾನಕ್ಕೂ ಧರ್ಮಕ್ಕೂ ವಿರೋಧವಿಲ್ಲವೆಂದೂ ತೋರಿಸಲು ಪ್ರಯತ್ನಪಟ್ಟರು.

ಈ ವಾದ-ವಿವಾದದಲ್ಲಿ ನಾವು ಆಗತ್ಯವಾಗಿ ಗಮನಿಸಬೇಕಾದುದು ವಿಜ್ಞಾನವು ಧರ್ಮದ ಮೇಲೆ ಯುದ್ಧ ಘೋಷಿಸಲಿಲ್ಲ, ಧರ್ಮವೇ ವಿಜ್ಞಾನದ ಮೇಲೆ ಯುದ್ಧ ಘೋಷಿಸಿತು ಎಂಬ ಅಂಶವನ್ನು. ಏಕೆಂದರೆ ವಿಜ್ಞಾನದ ಉದ್ದೇಶ ಪ್ರಪಂಚದ ರಹಸ್ಯಗಳನ್ನು ತಿಳಿದುಕೊಳ್ಳಬೇಕೆಂಬುದೇ ಹೊರತು ಧರ್ಮವನ್ನು ವಿರೋಧಿಸಬೇಕೆಂಬುದಲ್ಲ.

ಆಧುನಿಕ ದೇವತಾಶಾಸ್ತ್ರವು ವಿಜ್ಞಾನವನ್ನು ವಿರೋಧಿಸದೆ ಅದರೊಡನೆ ವೈತ್ರಿ ಬೆಳೆಸಲು ಹಾತೊರೆಯುತ್ತಿರುವುದು ನಿಜವಾದರೂ, ಕೆಲವೊಂದು ಕ್ಷೇತ್ರಗಳಲ್ಲಿ ಮಾತ್ರ ಅವುಗಳಲ್ಲಿನ ವಿರೋಧ ಹಾಗೇ ಉಳಿದುಕೊಳ್ಳುತ್ತದೆ. ಈ ಕ್ಷೇತ್ರಗಳಲ್ಲಿ ಮುಖ್ಯವಾದುವೆಂದರೆ (1) ಅಮರತ್ವ, (2) ಪ್ರಾರ್ಥನೆ, ಮತ್ತು ಪವಾಡ ಮತ್ತು (3) ಅನುಭಾವ.

(1) ಅಮರತ್ವ:-ಪ್ರಾಯಶಃ ಎಲ್ಲ ಸಾಂಪ್ರದಾಯಿಕ ಧರ್ಮಗಳೂ ಆತ್ಮವು ಸಾಯುವುದಿಲ್ಲವೆಂದೂ, ಒಂದಲ್ಲ ಒಂದು ರೀತಿಯಲ್ಲಿ ಅದು ಮತ್ತೆ ಪ್ರಕಟವಾಗುತ್ತದೆ ಎಂದೂ ಸಾರುತ್ತವೆ. ಇಂತಹ ನಂಬಿಕೆಯು ಆತ್ಮವು ದೇಹಕ್ಕಿಂತ ಭಿನ್ನ ಎಂಬುದನ್ನು ಅವಶ್ಯಕವಾಗಿ ಅವಲಂಬಿಸುತ್ತದೆ. ಆದರೆ ಜೀವವಿಜ್ಞಾನವೂ ಮನೋವಿಜ್ಞಾನವೂ ಇದನ್ನು ಒಪ್ಪುವುದಿಲ್ಲ. ಜೀವ ವಿಜ್ಞಾನಿಗಳ ಪ್ರಕಾರ ನಮ್ಮ ಮಿದುಳು ಮತ್ತು ನರಮಂಡಲದ ಕಾರ್ಯವೇ ಬೌದ್ಧಿಕ ಕಾರ್ಯ; ಆತ್ಮ ಅಥವಾ ಬುದ್ಧಿ ಎಂಬ ಮತ್ತೊಂದು ವಸ್ತುವಿಲ್ಲ. ಬೌದ್ಧಿಕ ಕ್ರಿಯೆಗಳಿಗೂ ದೈಹಿಕ ಕ್ರಿಯೆಗಳಿಗೂ ಪ್ರಬಲ ವ್ಯತ್ಯಾಸವಿರುವುದು ನಿಜವೇ ಆದರೂ, ದೈಹಿಕ ಕ್ರಿಯೆಗಳು ಸಂಪೂರ್ಣವಾಗಿ ನಿಂತ ಮೇಲೆಯೂ(ಅಂದರೆ ಸತ್ತಮೇಲೆಯೂ) ಬೌದ್ಧಿಕ ಶಕ್ತಿಗಳು ಕೆಲಸ ಮಾಡುತ್ತವೆ ಎನ್ನಲು ನಮಗೆ ಯಾವ ಆಧಾರವೂ ಇಲ್ಲ. ಅಷ್ಟೇ ಅಲ್ಲ ಭೌತಿಕ ಕ್ರಿಯೆಗಳನ್ನು ಹೇಗೊ ಬೌದ್ಧಿಕ ಕ್ರಿಯೆಗಳನ್ನೂ ಯಾಂತ್ರಿಕ ಹಾಗೂ ರಾಸಾಯನಿಕ ವಿಧಾನಗಳಿಂದ ನಿಯಂತ್ರಿಸಬಹುದಾದ್ದರಿಂದ, ದೇಹವೇ ಬೇರೆ, ಆತ್ಮವೇ ಬೇರೆ ಎಂದು ಹೇಳಲು ಬಾರದು. ವಿಜ್ಞಾನದ ಈ ನಿಲುವು ಧಾರ್ಮಿಕ ಜೀವನದ ತಳಹದಿಯನ್ನೇ ನಾಶ ಮಾಡುತ್ತದೆ.

(2) ಪ್ರಾರ್ಥನೆ ಮತ್ತು ಪವಾಡ:-ಬೈಬಲ್ಲಿನಲ್ಲಿಯೂ, ಹಿಂದೂಪುರಾಣ ಗಳಲ್ಲಿಯೂ ಭಕ್ತಿಯನ್ನು ಭಕ್ತನನ್ನೂ ಕೊಂಡಾಡುವ ಅನೇಕ ಕತೆಗಳಿವೆ. ಭಕ್ತಿಯಿಂದ ಪ್ರಾರ್ಥಿಸಿದುದಕ್ಕೆ ಗಜೇಂದ್ರಮೋಕ್ಷ ಸಾಧ್ಯವಾಯಿತು; ಪ್ರಹ್ಲಾದನನ್ನು ಬೆಟ್ಟದ ಮೇಲಿಂದ ಎಸೆದರೂ, ಅವನ ಭಕ್ತಿ ಅವನನ್ನು ಉಳಿಸಿತು; ಇತ್ಯಾದಿ, ಇತ್ಯಾದಿ. ಹೀಗೆ ಪರಿಣಾಮಕಾರಿಯಾದ ಪ್ರಾರ್ಥನೆಯು ಈಶ್ವರನ ಅಸ್ತಿತ್ವವನ್ನೂ, ಪವಾಡದ ಸಾಧ್ಯತೆ ಯನ್ನೂ ಏಕಕಾಲದಲ್ಲಿ ಸ್ಥಾಪಿಸುತ್ತದೆ. ಆದರೆ ಈಗಿನ ಕಾಲದಲ್ಲಿ ಏಕೆ ಪರಮಾತ್ಮ ನಮ್ಮ ಪ್ರಾರ್ಥನೆಗಳಿಗೆ ಓಗೊಡುವುದಿಲ್ಲ ? ಇದಕ್ಕೆ ದೇವತಾಶಾಸ್ತ್ರಜ್ಞರು “ನಮ್ಮ ಪ್ರಾರ್ಥನೆ ಸಾಕಷ್ಟು ಭಕ್ತಿಪೂರ್ವಕವಾಗಿಲ್ಲ” ಎಂದುತ್ತರಿಸುತ್ತಾರೆ. ಒಂದುವೇಳೆ ಕ್ರಿಕೆಟ್ ಪಂದ್ಯವೊಂದನ್ನು ಪಾಕಿಸ್ತಾನವೇ ಗೆಲ್ಲಬೇಕೆಂದು ಮುಸ್ಲಿಮರೂ, ಭಾರತವೇ ಗೆಲ್ಲಬೇಕೆಂದು ಹಿಂದುಗಳೂ ಬಹಳ ಭಕ್ತಿಯಿಂದ ಪ್ರಾರ್ಥಿಸಿದರೆ ಆಗ ಪರಮಾತ್ಮ ಯಾರಿಗೆ ಒಲಿಯುತ್ತಾನೆ ? ಎಂದು ನಾವು ಕೇಳಿದರೆ ಆಗ ದೇವತಾಶಾಸ್ತ್ರಜ್ಞರು “ಪರಮಾತ್ಮನಿಗೆ ಗೊತ್ತು ಯಾವುದು ಸರಿ, ಯಾವುದು ತಪ್ಪು, ಯಾರಿಗೆ ಜಯಸಿಗ ಬೇಕು, ಯಾರಿಗಲ್ಲ ಎಂದು ; ಆದುದರಿಂದ ನಮ್ಮ ಪ್ರಾರ್ಥನೆಗಳು ಅವನ ಮೇಲೆ

ಯಾವ ಪರಿಣಾಮವನ್ನೂ ಬೀರುವುದಿಲ್ಲ" ಎನ್ನುತ್ತಾರೆ. ಹಾಗಾದರೆ, ನಾವು ಪ್ರಾರ್ಥಿಸಿ ಪ್ರಯೋಜನವೇನು? ವಿಜ್ಞಾನಿಗಳ ಪ್ರಕಾರ ಕೆಲವೊಂದು ಪ್ರಾಕೃತಿಕ ಘಟನೆಗಳಿಗೆ ನಮಗೆ ಕಾರಣಗಳು ಗೊತ್ತಿಲ್ಲ; ಅವು ಪವಾಡಗಳಂತೆ ಅಥವಾ ಭಕ್ತಿಯ (ಪ್ರಾರ್ಥನೆಯ) ಫಲಎಂಬಂತೆ ಕಾಣುತ್ತವೆಯೇ ಹೊರತು, ಅವು ಅಪ್ರಾಕೃತಿಕವೇನಲ್ಲ.

(3) ಅನುಭಾವ: ಕೆಲವು ಅನುಭಾವಿಗಳು ತಮಗೆ ಕೆಲವೊಂದು ವಿಶಿಷ್ಟ ರೀತಿಯ ಅನುಭವಗಳಾಗುತ್ತವೆ ಎಂದು ಹೇಳಿಕೊಳ್ಳುತ್ತಾರೆ. ತಮ್ಮ ಇಂತಹ ಅನುಭವಗಳಲ್ಲಿ ತಾವು ಪರಮಾತ್ಮನನ್ನು ನೋಡಿದುದಾಗಿಯೂ, ಪರಮಾತ್ಮನೊಡನೆ ಸಂಭಾಷಿಸಿದುದಾಗಿಯೂ, ತಮಗೆ ಭವಿಷ್ಯಜ್ಞಾನವಿರುವುದಾಗಿಯೂ, ಪರರ ಚಿತ್ತವನ್ನು ತಾವು ಅತೀಂದ್ರಿಯವಾಗಿ ತಿಳಿದುಕೊಳ್ಳುವುದಾಗಿಯೂ ಹೇಳುತ್ತಾರೆ. ಆದರೆ ಆಧುನಿಕ ಮನೋವಿಜ್ಞಾನಿಗಳು ಇವರಲ್ಲಿ ಕೆಲವರನ್ನು ಮಾನಸಿಕ ರೋಗಿಗಳೆಂದು ಪರಿಗಣಿಸುತ್ತಾರೆ. ಇಡೀ ಜೀವನದಲ್ಲಿ ಲಕ್ಷಾಧಿಪತಿಯಾಗಬೇಕೆಂದು ಹಂಬಲಿಸಿ ಸೋತವನು, ಹೇಗೆ ಹುಚ್ಚನಾಗಿ ಎಲ್ಲೆಲ್ಲೂ ಸಂಪತ್ತನ್ನೇ ಕಾಣುವ ಭ್ರಮೆಗೊಳಗಾಗುತ್ತಾನೋ ಹಾಗೆಯೇ, ಇಡೀ ಜೀವಮಾನವೇ ಪರಮಾತ್ಮನನ್ನು ಕಾಣಬೇಕೆಂದು ಹಂಬಲಿಸಿ ಅವನು ಕಾಣದಿದ್ದಾಗ, ಭಕ್ತನೂ ಹುಚ್ಚನಾಗಿ ಪರಮಾತ್ಮನನ್ನು ಎಲ್ಲೆಲ್ಲೂ ಕಾಣುವ ಭ್ರಮೆಗೊಳಗಾಗುತ್ತಾನೆ. ಆದರೆ ಮನೋವಿಜ್ಞಾನಿಗಳ ಪ್ರಕಾರ ಭವಿಷ್ಯಜ್ಞಾನ, ಪರಚಿತ್ತ ಜ್ಞಾನ, ಅತೀಂದ್ರಿಯ ದೃಷ್ಟಿ ಮುಂತಾದವುಗಳು ಪವಾಡ (ಅಪ್ರಾಕೃತಿಕ)ವೂ ಅಲ್ಲ, ಮೋಸ ಅಥವಾ ಆಕಸ್ಮಿಕವೂ ಅಲ್ಲ, ಅವು ಕೇವಲ ಅಪರೂಪದ ಪ್ರಾಕೃತಿಕ ಶಕ್ತಿಗಳಷ್ಟೆ.

ಧರ್ಮದ ಈಗಿನ ಸ್ವರೂಪವನ್ನು ನೋಡಿದರೆ, ಅದಕ್ಕೂ ವಿಜ್ಞಾನಕ್ಕೂ ವಿರೋಧವಿರುವುದು ಅನಿವಾರ್ಯ. ಆದರೆ ಧರ್ಮದಲ್ಲಿರುವ ಪೌರಾಣಿಕ, ಅವೈಜ್ಞಾನಿಕ ಸಿದ್ಧಾಂತಗಳನ್ನು ತೆಗೆದುಹಾಕಿದರೆ, ಧರ್ಮವು ವಿಜ್ಞಾನಿಗಳಿಗೆ ಸ್ವೀಕಾರಾರ್ಹವಾಗಬಹುದು. ಧರ್ಮವು ನಮ್ಮನ್ನು ನಾವೇ ಮೀರುವ, ಸ್ವ-ಶುದ್ಧೀಕರಣದ ಮಾರ್ಗ ಎಂದುಕೊಂಡರೆ ಅದಕ್ಕೂ ವಿಜ್ಞಾನಕ್ಕೂ ವಿರೋಧವೇ ಇರುವುದಿಲ್ಲ. ಆದರೆ ಇವುಗಳಲ್ಲಿ ಯಾವ ಸಿದ್ಧಾಂತಗಳು ಅವೈಜಾನಿಕವಲ್ಲ ಎಂದು ನಿರ್ಧರಿಸುವುದು ಕಷ್ಟದ ಕೆಲಸ. ಸ್ವರ್ಗ-ನರಕ, ಪವಾಡ, ಮುಂತಾದ ಕಲ್ಪನೆಗಳನ್ನೇನೊ ನಾವು ಅವೈಜ್ಞಾನಿಕವೆಂದು ನಿರ್ಧರಿಸಬಹುದು. ಆದರೆ ಪರಮಾತ್ಮ, ಆತ್ಮ, ಮೋಕ್ಷ, ಮುಂತಾದ, ಧರ್ಮದ ಕೇಂದ್ರವೆನಿಸಿದ, ಸಂಪ್ರತ್ಯಯಗಳನ್ನು ಅವೈಜ್ಞಾನಿಕವೆಂದು ನಿರ್ಧರಿಸಬೇಕೋ ಬೇಡವೊ? ಹೀಗೆ ಕೆಲವನ್ನಿಟ್ಟುಕೊಂಡು, ಕೆಲವನ್ನು ಕೈಬಿಡುವುದು ಧರ್ಮಕ್ಕೂ ಬಾಹಿರ, ತರ್ಕಕ್ಕೂ ಬಾಹಿರ.

ಆದರೆ ಇದನ್ನು ಪರಿಶೀಲಿಸಿ: ಮಳೆ ಪ್ರಾಕೃತಿಕ ಕಾರಣಗಳಿಂದಾಗಿ ಬರುತ್ತವೆ ಎಂಬ ವೈಜ್ಞಾನಿಕ ಸತ್ಯವನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆ ಪ್ರಾಕೃತಿಕ ಕಾರಣಗಳಿಗೊಬ್ಬ ಅಧಿದೇವತೆ-ವರುಣನೋ ಅಥವಾ ಮತ್ತಾರೋ ಇದ್ದಾನೆಂದು

ಚಿಂತಿಸಿದರೆ, ನಮ್ಮ ಚಿಂತನೆಯು ಸ್ವ-ವಿರೋಧಕ್ಕೊಳಗಾಗುವುದಿಲ್ಲ. "ಮಳೆಯು ಯಾವ ಕಾರಣದಿಂದಲೂ ಬರುವುದಿಲ್ಲ" ಎಂದರೆ ಅತರ್ಕವಾಗುತ್ತದೆ. ಆದರೆ "ಮಳೆಯ ಕಾರಣಗಳನ್ನು ನಿಯಂತ್ರಿಸುವವನೊಬ್ಬನಿದ್ದಾನೆ" ಎಂದರೆ, ಧರ್ಮಕ್ಕೂ ವಿಜ್ಞಾನಕ್ಕೂ ಘರ್ಷಣೆಯಾಗುವುದರ ಬದಲು ಸುಸಾಂಗತ್ಯ (Compatibility) ಉಂಟಾಗುತ್ತದೆ. ಇಂತಹ ಅಧಿದೇವತೆಗಳು ಇದ್ದಾರೆಂದು ಹೇಳಲು ನಮಗೆ ಇಂದ್ರಿಯ ಪ್ರತ್ಯಕ್ಷ ಪ್ರಮಾಣಗಳಿಲ್ಲವೆಂದು ವಿಜ್ಞಾನವು ಹೇಳಬಹುದು ; ಆದರೆ ಇಲ್ಲ ವೆಂದು ಹೇಳಲೂ ವಿಜ್ಞಾನಕ್ಕೆ ಯಾವ ಪ್ರತ್ಯಕ್ಷ ಪ್ರಮಾಣಗಳೂ ಇಲ್ಲ ಎಂಬುದನ್ನು ನಾವು ಮರೆಯುವಂತಿಲ್ಲ. ಆದುದರಿಂದ ಕೆಲವು ಧಾರ್ಮಿಕ ಸಿದ್ಧಾಂತಗಳನ್ನು ನಂಬುವುದರಿಂದ ನಾವು ಅಂಧ ವಿಶ್ವಾಸಿಗಳಾಗುವುದಿಲ್ಲ.

ಪಿ. ಎಸ್. ಹರೀಶ್

ಕುದುರೆಯ ಸುಳಿಗಳು ಲಕ್ಷಣಗಳು ಮತ್ತು ನಂಬಿಕೆಗಳು

ಮಾನವ ಕಾಡಿನಲ್ಲಿ ಪ್ರಾಣಿಗಳ ಜತೆಯಲ್ಲಿ ವಾಸ ಮಾಡುತ್ತಿದ್ದ ಕಾಲವೊಂದಿತ್ತು. ತನ್ನ ದೇಹ ರಕ್ಷಣೆಗಾಗಿ ಹಾಗೂ ಜೀವನ ವ್ಯವಹಾರಕ್ಕಾಗಿ ಅವನು ಸಸ್ಯ ಸಂಪತ್ತನ್ನೆಂತು ಸೂರೆಗೊಂಡನೋ ಅಂತೆಯೇ ಪ್ರಾಣಿಸಂಪತ್ತನ್ನೂ ಸಂಪೂರ್ಣವಾಗಿ ಬಳಸಿಕೊಂಡದ್ದುಂಟು. ಹಾವು, ಹುಲಿ, ಆನೆ, ಸಿಂಹ, ಚಿರತೆ ಮೊದಲಾದ ದುಷ್ಟ ಜಂತುಗಳನ್ನು ಕಂಡಾಗ ಹೆದರಿ, ಏನೇನೋ ಕಲ್ಪನೆಗಳನ್ನು ಸೃಷ್ಟಿಸಿಕೊಂಡಿರಬೇಕು; ಹಸು, ಕುದುರೆ, ಮೇಕೆ, ಕುರಿ, ಜಿಂಕೆ ಮೊದಲಾದ ಸಾಧು ಪ್ರಾಣಿಗಳಲ್ಲಿ ತನ್ನ ಸುಖ ಸೌಭಾಗ್ಯಗಳನ್ನು ಕಂಡಿರಬೇಕು; ಅವು ತನಗೆ ಸ್ಪರ್ಧಿಗಳೆಂದು, ಹಗೆಗಳೆಂದು, ತನ್ನ ಸುಖಕ್ಕೆಂತೋ ಅಂತೆಯೇ ದುಃಖಕ್ಕೂ ಕಾರಣಗಳೆಂದು ಅವನು ಬಗೆದಿರಬೇಕು. ಭಯ ವಿಸ್ಮಯಗಳಿಂದ ಕೂಡಿದ ಅವನ ಮುಗ್ಧ ಮನಸ್ಸು ಅವುಗಳ ಬಗೆಗೆ ಚಿತ್ರ ವಿಚಿತ್ರವಾದ ಅಭಿಪ್ರಾಯಗಳನ್ನು ತಳೆದು, ನಾನಾ ಕಥೆಗಳನ್ನು ಕಲ್ಪಿಸಿಕೊಂಡಿರಬೇಕು. ಜಡಪ್ರಾಯದ ಸಸ್ಯಲೋಕದಲ್ಲಿ ಅದ್ಭುತ ಶಕ್ತಿಗಳನ್ನು ಕಂಡವನು, ತನ್ನಂತೆ ತಿನ್ನುವ, ಓಡಾಡುವ, ಮಲಗುವ, ಕೂಗುವ, ಕಾಮಮೋಹಗಳ ಸೆಳೆತಕ್ಕೆ ಸೋಲುವ, ಸಂತಾನೋತ್ಪತ್ತಿಯಲ್ಲಿ ತೊಡಗುವ ಪ್ರಾಣಿಗಳಲ್ಲಿ ಇನ್ನು ಹೆಚ್ಚಿನ ಶಕ್ತಿಗಳನ್ನು ಗುರುತಿಸಿರಬೇಕು. ಆದಿಮಾನವನಂತೂ ತನಗೂ ಅವುಗಳಿಗೂ ಹೆಚ್ಚು ವ್ಯತ್ಯಾಸಗಳನ್ನು ಕಂಡಿರಲಾರನು. ತಾನು ಪ್ರಾಣಿಗಳಿಗಿಂತ ಮುಂದುವರಿದ, ವಿಶೇಷ ಸಾಮರ್ಥ್ಯವುಳ್ಳ ಮಹಾಪ್ರಾಣಿ ಎಂದು ಅರ್ಥಮಾಡಿಕೊಳ್ಳುವ ಹೊತ್ತಿಗೆ ಸಹಸ್ರಾರು ವರ್ಷಗಳು ಸಂದಿರಬೇಕು. ಆ ಹಿಂದೆ ಅವನು ಅಸಂಗತ ಸಾಮ್ಯ ಮತ್ತು ಅಸಂಬದ್ಧ ತರ್ಕಗಳ ಮೂಲಕ ತನ್ನ ಮತ್ತು ಪ್ರಾಣಿಪ್ರಪಂಚದ ಸಂಬಂಧವನ್ನು ನಿರ್ಣಯಿಸಿಕೊಳ್ಳುವಾಗ ಅನೇಕ ನಂಬಿಕೆಗಳು ಹುಟ್ಟಿಕೊಂಡದ್ದುಂಟು (ದೇಜಗೌ: ಜಾನಪದ ಅಧ್ಯಯನ, 362).

ಪ್ರಾಣಿ ಮತ್ತು ಮನುಷ್ಯನ ಸಂಬಂಧ ಶತ್ರು ಮತ್ತು ಮಿತ್ರ ಸ್ತರಗಳಲ್ಲಿ ನಿಲ್ಲುವಂಥದ್ದು. ತನ್ನ ಜೀವಿತದ ಆದಿಕಾಲದಲ್ಲಿ ಮನುಷ್ಯ ಬೇಟೆಯ ಮೂಲಕ ಪ್ರಾಣಿ

ಗಳನ್ನು ಕೊಂದು ಜೀವನ ಸಾಗಿಸಿದ. ಕಾಲಕ್ರಮದಲ್ಲಿ ಆತ ಬೇಸಾಯವನ್ನು ಅವಲಂಬಿಸಿದ. ಕಾಡಿನಲ್ಲಿ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾದಾಗ ಅವುಗಳಿಗೆ ಮನುಷ್ಯನ ಬೇಸಾಯ ಆಹಾರವನ್ನು ಒದಗಿಸುವ ಆಕರವಾಯಿತು. ಬೇಸಾಯದ ಭೂಮಿಯ ಬಳಿಗೆ ಬಂದ ಪ್ರಾಣಿಗಳನ್ನು ಹಿಡಿದು ಮನುಷ್ಯ ಸಾಕತೊಡಗಿದ. ಹಾಗೆ ಪಳಗಿಸಿದ ಪ್ರಾಣಿಗಳಲ್ಲಿ ಹಸು, ಕುರಿ, ಆಡು, ನಾಯಿ, ಹಂದಿಗಳು ಮೊದಲಾದರೆ ಆ ಸಾಲಿನಲ್ಲಿ ಕುದುರೆಯ ಸ್ಥಾನ ಕಡೆಯದು. ಮನುಷ್ಯ ಮೊಟ್ಟ ಮೊದಲು ಕುದುರೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡುದು ಮೆಸಪೊಟೇಮಿಯ ಮತ್ತು ಚೀನಗಳಲ್ಲಿ ಕ್ರಿ.ಪೂ. 4000 ವರ್ಷಗಳ ಹಿಂದೆ ಎಂಬ ಅಭಿಪ್ರಾಯವಿದೆ.

ಭಾರತೀಯರಿಗೆ ವೇದಕಾಲದಿಂದಲೂ ಕುದುರೆಗಳ ಪರಿಚಯವಿದೆ. ಪೂರ್ವ ಕಾಲದಲ್ಲಿ ಅಶ್ವಶಾಸ್ತ್ರ ಪರಿಣತರಾದ ನಳ, ನಕುಲ, ಭೋಜ, ಶಾಲಿಹೋತ್ರ ಇತ್ಯಾದಿ ಮಹಾನುಭಾವರುಗಳಿಂದ ಪ್ರತಿಪಾದಿಸಲ್ಪಟ್ಟಿರುವ ಪ್ರಾಚೀನ ಗ್ರಂಥಗಳಲ್ಲಿ ಅಶ್ವ ಶಾಸ್ತ್ರವು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಅಶ್ವಮೇಧದ ಉಲ್ಲೇಖಗಳು ಸಾಕಷ್ಟು ಲಭ್ಯವಿದೆ. ಆದರೆ ಯುದ್ಧದಲ್ಲಿ ಕುದುರೆಗಳನ್ನು ಬಳಸಿದ ವಿಚಾರ ವೇದಗಳಿಂದ ತಿಳಿದುಬರುವುದಿಲ್ಲ. ರಾಮಾಯಣ, ಮಹಾಭಾರತದ ಕಾಲಕ್ಕೆ ಯುದ್ಧದಲ್ಲಿ ಕುದುರೆ ಗಳನ್ನು ಬಳಸಿದ ಸಂಗತಿಗಳಿವೆ.

ಯಾವುದು ಮಾರ್ಗವನ್ನು ಕ್ರಮಿಸುತ್ತದೆಯೋ ಅದನ್ನು 'ಅಶ್ವ' ಎಂದು ಕರೆಯುವರು. ಇದಕ್ಕೆ ಪೀತಿ, ಪೀತೀ, ಘೋಟ, ಘೋಟಕ, ತುರಗ, ತುರಂಗ, ತುರಂಗಮಾ, ವಾಜಿ, ವಾಹ, ಅರ್ವಾ, ಗಂಧರ್ವ, ಹಯ, ಸೈಂಧವ, ಸಪ್ತಿ ಎಂಬ 14 ಹೆಸರುಗಳಿಂದ ಕರೆಯುವರು. ಕುದುರೆ ಎಂಬ ಕನ್ನಡ ಪದವು ಸಂಸ್ಕೃತದ ಅಶ್ವಕ್ಕೆ ಸಮಾನವಾದುದು. ಅಶ್ವ ಎಂಬುದು ಆಶು ಧಾತುವಿನಿಂದಾಗಿದೆ. ಅಶ್ವದ ಉತ್ಪತ್ತಿ ಸ್ಥಾನವನ್ನು ಸಪ್ತಾಂಶಗಳಿಂದ ಆದುದೆಂದು ಹೇಳುವರು. ಸೂರ್ಯನ ಕುದುರೆಗಳು ಏಳು, ಇವಕ್ಕೆ ಸಪ್ತಾಶ್ವಗಳೆಂದು ಕರೆಯುವರು. ಅಶ್ವದ ಉತ್ಪತ್ತಿಸ್ಥಾನ ಏಳಾದ್ದ ರಿಂದಲೂ ಅಶ್ವ ಪದಕ್ಕೆ ಸಪ್ತ ಎಂಬ ಹೆಸರು ಉಚಿತವಾಗಿದೆ. ಈ ಅಶ್ವ ಎನ್ನುವುದಕ್ಕೆ ಕುದುರೆ, ಅಗ್ನಿ, ಸಪ್ತ ಅಶ್ವ ಬಲವುಳ್ಳ ಒಂದು ಜಾತಿ ಮನುಷ್ಯ ಎಂಬ ಅರ್ಥಗಳಿವೆ.

ಕುದುರೆಯ ಬಗ್ಗೆ ಭಾರತೀಯರಲ್ಲಿ ವಿಶೇಷವಾದ ಗೌರವವಿದೆ. ಅದು ಒಂದು ಕಾಲದಲ್ಲಿ ಜನಸಾಮಾನ್ಯರಿಗೆ ನಿಲುಕದ ಪ್ರಾಣಿಯಾಗಿತ್ತು. ಕೇವಲ ರಾಜ ಮಹಾರಾಜರಿಗೆ ಮತ್ತು ಸಮಾಜದ ಗಣ್ಯರಿಗೆ ಸೀಮಿತವಾಗಿದ್ದ ಕುದುರೆಯು ಒಬ್ಬ ವ್ಯಕ್ತಿಯ ಘನತೆ ಗೌರವಗಳನ್ನು ನಿರ್ಧರಿಸುತ್ತಿತ್ತು. ಹಿಂದೆ ಒಂದು ದೇಶದ ಅಥವಾ ಒಬ್ಬ ರಾಜನ ಸೈನ್ಯದ ಬಲಾಬಲವನ್ನು ಅವನಲ್ಲಿದ್ದ ಕುದುರೆಗಳ ಸಂಖ್ಯಾಬಲದ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಅದನ್ನು 'ಚತುರಂಗಬಲ' ಎಂಬುದಾಗಿ ಕರೆಯುತ್ತಿದ್ದರು.

ಕುದುರೆ ಬಲು ಚುರುಕಾದ ಮತ್ತು ಬಲಾಢ್ಯವಾದ ಪ್ರಾಣಿ. ಯಜ್ಞಯಾಗ

ಗಳಲ್ಲಿ ಕುದುರೆಗೆ ವಿಶೇಷ ಮಹತ್ವವಿದೆ. ಹಾಗೆಯೇ ಅರಸು ಮನೆತನದ ಗೌರವ ಪ್ರತೀಕವಾಗಿ ಶುಭಲಕ್ಷಣಗಳಿಂದ ಕೂಡಿದ ಅಚ್ಚ ಬಿಳಿಯ ಕುದುರೆಯನ್ನು ಪಟ್ಟದ ಕುದುರೆ ಎಂಬುದಾಗಿ ವಿಶೇಷವಾದ ಗೌರವಗಳೊಂದಿಗೆ ಪೂಜಿಸುವರು. ಕುದುರೆ ಸ್ವಾಭಾವಿಕವಾಗಿ ಬೆಲೆಯುಳ್ಳದ್ದು ಎಂಬ ಭಾವನೆಯಿಂದಾಗಿ ಅದರ ಶುಭಾಶುಭ ಲಕ್ಷಣಗಳ ಆಧಾರದ ಮೇಲೆ ಅದರ ಬೆಲೆಯನ್ನು ನಿರ್ಧರಿಸಲಾಗುತ್ತಿತ್ತು. ಕುದುರೆಯ ನಡವಳಿಕೆಯನ್ನು ಗುರುತಿಸುವ ಸಲುವಾಗಿ ಆಸ್ಥಾನದಲ್ಲಿದ್ದ ತಜ್ಞರನ್ನು ನೇಮಿಸಿ ಕೊಳ್ಳುವುದು ಸಂಪ್ರದಾಯವಾಗಿ ಬೆಳೆದುಬಂದಿತ್ತು.

ಕುದುರೆಗಳಲ್ಲಿ ಎಂಟು ಬಗೆಯ ಅಂಗಲಕ್ಷಣಗಳು ಕಂಡುಬರುತ್ತವೆ. ಅವುಗಳೆಂದರೆ ನಾನಾ ಬಗೆಯ ಅಂಗಾಂಗಗಳು, ಸುಳಿಗಳು, ನಡಿಗೆ, ಕೆನೆಯುವುದು, ರೋಮ, ಅಥವಾ ಮೈಬಣ್ಣ, ಶಕ್ತಿ ಅಥವಾ ಬಲ, ಬೆವರಿನ ವಾಸನೆ, ಕಾಂತಿ ಇವೇ ಆ ಎಂಟು ಲಕ್ಷಣಗಳು.

ಕಿವಿ, ವೃಷಣ, ಮತ್ತು ಕುಷ್ಟಿಕ ಇವು ಸಣ್ಣದಾಗಿದ್ದು ಕುತ್ತಿಗೆ ಅಥವಾ ಕತ್ತು, ಮುಸುಡಿ, ತೊಡೆ ಇವು ಉದ್ದವಾಗಿದ್ದು, ಕಣ್ಣು, ಹಲ್ಲುಗಳು, ಬಾಲ, ನಡು, ಅಂಡು ಇವು ಅಗಲವಾಗಿದ್ದು ರೋಮಗಳು ಮೃದುವಾಗಿದ್ದು ಕಟಬಾಯಿ (ಲಗಾಮು ಹಾಕುವ ಭಾಗ) ನಾಲಿಗೆ; ತೋಳು, ಹೊಟ್ಟೆ ಇವು ಸಣ್ಣದಾಗಿರಬೇಕು. ಈ ಲಕ್ಷಣಗಳುಳ್ಳ ಕುದುರೆಗಳು ಯೋಗ್ಯವಾದುವೆಂದು ಅಂತಹ ಕುದುರೆಗಳು ರಾಜರಿಂದ ಪೂಜೆಗೆ ಅರ್ಹವಾದವು ಎನ್ನಿಸಿವೆ.

ಕಿವಿಗಳನ್ನು ಅದುಮಿದರೆ ರಕ್ತ ಬರುವಂತಿರಬೇಕು. ದೂರದೃಷ್ಟಿವುಳ್ಳ ತೀಕ್ಷ್ಣವಾದ ಕಣ್ಣಿರಬೇಕು ನೀರನ್ನು ಕುಡಿಯುವಾಗ ಮುಸುಡಿಯನ್ನು ಮಾತ್ರ ನೀರಿನ ಮೇಲಿಟ್ಟು ಹೀರಿ ಕುಡಿಯಬೇಕು, ಮುಂಭಾಗ ಹಿಂಭಾಗ ಅಗಲವಾಗಿರಬೇಕು. ಇಂತಹ ಕುದುರೆ ಪೂರ್ಣ ಆಯುಸ್ಸಿನಿಂದ ಕೂಡಿರುತ್ತದೆ ಎಂದು ಹೇಳುವರು.

ಕುದುರೆಯ ಬೆಳವಣಿಗೆಯನ್ನು ಅದರ ಹಲ್ಲುಗಳು ಹುಟ್ಟುವುದರ ಮೇಲೆ ನಿರ್ಧರಿಸಲಾಗುವುದು. ಎರಡೆರಡೇ ಹಲ್ಲುಗಳಿರುವ ಕುದುರೆಗಳು 'ಸಂದಂಶ' ಒಳ್ಳೆಯ ಹಲ್ಲುಗಳು ಎಂದೆನಿಸಿಕೊಳ್ಳುತ್ತದೆ. ಕಡೆಯ ಎರಡೆರಡು ಹಲ್ಲುಗಳಿದ್ದರೆ 'ಮಧ್ಯಮ' ಎನಿಸಿಕೊಳ್ಳುತ್ತದೆ. ದವಡೆಯಲ್ಲಿ ಎರಡೆರಡು ಹಲ್ಲುಗಳಿದ್ದರೆ 'ಪಾರಿ ಪಾರ್ಶ್ವ' ಎನಿಸಿಕೊಳ್ಳುತ್ತದೆ. ಈ ಹಲ್ಲುಗಳು ತಿಂಗಳಿಗೆ ಎರಡೆರಡು ಹಲ್ಲುಗಳಂತೆ ಆರು ತಿಂಗಳಲ್ಲಿ ಎಲ್ಲ ಹಲ್ಲುಗಳು ಹುಟ್ಟುವವು.

ಹದಿನೆಂಟು ತಿಂಗಳು ತುಂಬಿದ ಕುದುರೆಗೆ ಈ ಹಲ್ಲುಗಳು ಕೆಂಪು ಬಣ್ಣಕ್ಕೆ ತಿರುಗುತ್ತವೆ. ಅಲ್ಲಿಂದ ಎರಡು ವರ್ಷಗಳನಂತರ ಕಷಾಯದ ವರ್ಣಕ್ಕೆ ತಿರುಗುತ್ತವೆ. ಮೊದಲು ಹುಟ್ಟಿದ ಸಂದಂಶ ಎಂಬ ಎರಡು ಹಲ್ಲುಗಳು ಕುದುರೆಗೆ ಎರಡು ವರ್ಷ ತುಂಬಿದ ತರುವಾಯ ಬೀಳುತ್ತವೆ. ಮೂರನೆಯ ವರ್ಷಕ್ಕೆ ಮತ್ತೆ ಹುಟ್ಟುತ್ತವೆ. ಮೂರನೆಯ ವರ್ಷ ತಲುಪಿದಾಗ ಮಧ್ಯಮ ಎನಿಸಿದ ಹಲ್ಲುಗಳು ಬೀಳುವುವು. ಅವು

ನಾಲ್ಕನೆಯ ವರ್ಷಕ್ಕೆ ಮತ್ತೆ ಹುಟ್ಟುತ್ತವೆ. 'ಪಾರಿಪಾರ್ಶ್ವ' ಎಂಬ ಹಲ್ಲು ನಾಲ್ಕನೆಯ ವರ್ಷಕ್ಕೆ ಬೀಳುತ್ತವೆ. ಐದನೆಯ ವರ್ಷಕ್ಕೆ ಮತ್ತೆ ಹುಟ್ಟುತ್ತವೆ. ಐದು ವರ್ಷಗಳ ತರುವಾಯ ಆ ಹಲ್ಲುಗಳು ಕಪ್ಪಾಗುತ್ತವೆ. ಇವುಗಳನ್ನು 'ಕಾಳಿಕೆ' ಎನ್ನುವರು. ಬಂಗಾರದ ಬಣ್ಣದ ಗೆರೆ ಬಂದರೆ ಅವಕ್ಕೆ 'ಪೊಂಗೆ' ಎನ್ನುವರು. ಬಿಳಿಯ ಬಣ್ಣ ಬಂದರೆ 'ಶುಕ್ತಿ' ಎನ್ನುವರು. ಶಂಖದ ಬಣ್ಣ ಬಂದರೆ 'ಕಾಕ' ಎನಿಸಿಕೊಳ್ಳುತ್ತದೆ.

ಸಂಸ್ಕೃತದ ಆವರ್ತವೇ ಕನ್ನಡದಲ್ಲಿ ಸುಳಿ. ಸುಳಿ ಕೂದಲಿನ ಉಂಗುರಾದ ಸ್ಥಳ. ಸುಳಿ ಅಂದರೆ ಉಂಗುರಾಕಾರದಲ್ಲಿ ಸುತ್ತಿಕೊಂಡಿರುವುದು ಎಂದು ಹೇಳಬಹುದು. ಸುರುಳಿಯಾಕಾರದಲ್ಲಿ ರೋಮಗಳು ಸುತ್ತಿಕೊಂಡಿರುವುದಕ್ಕೆ ಆವರ್ತ ಅಥವಾ ಸುಳಿಗಳೆಂದು ಕರೆದಿರುವುದು ಉಚಿತವಾಗಿದೆ. ಸಾಮಾನ್ಯವಾಗಿ ದನ, ಕುದುರೆಗಳಲ್ಲಿ ಮಾತ್ರವಲ್ಲದೆ ಮನುಷ್ಯರಲ್ಲೂ ಸುಳಿಗಳನ್ನು ಪರಿಗಣಿಸುವುದನ್ನು ನೋಡಬಹುದು. ಸುಳಿಗಳ ಹಿನ್ನೆಲೆಯಲ್ಲಿ ಮೈ ಬಣ್ಣ, ನಡಿಗೆ, ನಡವಳಿಕೆ ಮತ್ತು ಶಾರೀರಿಕ ರಚನೆಗಳ ಆಧಾರದ ಮೇಲೆ ವ್ಯಕ್ತಿ ಮತ್ತು ಪ್ರಾಣಿಗಳ ಒಳಿತು ಕೆಡಕುಗಳನ್ನು ಹೇಳುವುದು ಇಂದಿಗೂ ಪ್ರಚಲಿತವಾಗಿದೆ.

ಜನಪದರ ಬದುಕಿನಲ್ಲಿ ಕುದುರೆ ಇತರೆ ಸಾಕುಪ್ರಾಣಿಗಳಷ್ಟು ಅವರಿಗೆ ಉಪಯುಕ್ತವಲ್ಲದಿದ್ದರೂ ಸಂಪರ್ಕ ಸಾಧನವಾಗಿ ಬಳಸುವುದರಿಂದ, ಅದಕ್ಕೆ ಸಂಬಂಧಪಟ್ಟಂತೆ ಅದನ್ನು ಉಳ್ಳ ಜನರು ಕೆಲವು ನಂಬಿಕೆಗಳನ್ನಿರಿಸಿಕೊಂಡಿದ್ದಾರೆ. ಕುದುರೆಯಲ್ಲಿ ಇರುವಷ್ಟು ಸುಳಿಗಳು ಇನ್ನಿತರೆ ಯಾವ ಪ್ರಾಣಿಗಳಲ್ಲಿಯೂ ಇಲ್ಲವೆಂದು ಹೇಳುತ್ತಾರೆ.

ಕುದುರೆಯ ತಲೆಯ ಜಾಗದಲ್ಲಿ ಎರಡು ಸುಳಿ, ಹಣೆಯಲ್ಲಿ ಒಂದು ಸುಳಿ, ಮೂಗಿನ ತುದಿಯಲ್ಲಿ ಒಂದು ಸುಳಿ, ಹೊಟ್ಟೆಯಲ್ಲಿ ಎರಡು ಸುಳಿ, ಪಕ್ಕೆ ಅಥವಾ ಅಳ್ಳೆಯಲ್ಲಿ ಎರಡು ಸುಳಿ, ಹೊರಭಾಗದ ಪಕ್ಕೆಯಲ್ಲಿ ಎರಡು ಸುಳಿ ಈ ಹತ್ತು ಸುಳಿಗಳಿಗೆ 'ದಶದೈವ' ಎಂದು ಕರೆಯುವರು. ಕಟಬಾಯಿ, ಹೊಟ್ಟೆ ಇವುಗಳ ಮೊದಲಲ್ಲಿ; ಎರಡು ಕಣ್ಣು, ಎರಡು ಕಿವಿ ಮೊದಲಲ್ಲಿ; ಎರಡು ಮುಂಗಾಲುಗಳು, ಕೊರಳ ಮಧ್ಯದಲ್ಲಿ ಸುಳಿಗಳಿದ್ದರೆ ಅದು ಒಳ್ಳೆಯ ಕುದುರೆ. ಅದನ್ನು "ಶುಭದಾ" ಎನ್ನುವರು. ಕೊರಳ ಮಧ್ಯದಲ್ಲಿರುವ ಸುಳಿಗೆ 'ದೇವಮಣಿ' ಎನ್ನುವರು. ಕೊರಳ ಆರಂಭದಲ್ಲಿ ಇರುವ ಸುಳಿಗೆ 'ರೋಚಮಾನ' ಎಂದು ಹೆಸರು. ಈ ಸುಳಿ ಇದ್ದರೆ ಪೂರ್ವಭಾಗದಲ್ಲಿರುವ ಕೆಟ್ಟ ಸುಳಿಗಳ ದೋಷ ನಿವಾರಣೆ ಮಾಡುವ 'ಜವಾಬು' ಸುಳಿಯಾಗಿರುತ್ತದೆ. ನಡುವಿನ ಹಿಂಭಾಗದ ಮಧ್ಯದಲ್ಲಿ ಸುಳಿ ಇದ್ದರೆ ಹಿಂಬದಿಯಲ್ಲಿರುವ ಎಲ್ಲ ಕೆಟ್ಟ ಸುಳಿಗಳ ದೋಷಕ್ಕೆ ಜವಾಬು ಕೊಡುತ್ತದೆ. ಗಲ್ಲ, ಗಲ್ಲದಿಂದ ಕೆಳಕ್ಕೆ, ಮೂಗಿನ ಹೊಳ್ಳೆ, ಬಾಲ, ಕುತ್ತಿಗೆ, ಆಸನ, ಮೂಗಿನ ಹೊಳ್ಳೆಗಳ ಮಧ್ಯೆ, ಕಿವಿಗಳ ಕೆಳಕ್ಕೆ, ಎರಡು ಕಿವಿಗಳ ನೆರೆಗಳ ಜಾಗದಲ್ಲಿ, ಕತ್ತಿನ ಮುಂಭಾಗ, ಉಬ್ಬು, ಹೊಕ್ಕುಳ

ದಿಂದ ಕೆಳಕ್ಕೆ, ಕೆಳಗಣ ಮತ್ತು ಮೇಲಿನ ತುಟಿ, ಅಂಡ, ಶಿಶ್ನ, ಒಳಕಾಲು, ಕಡೆಗಣ್ಣು, ಮೊಣಕಾಲು ಸಂಧಿ, ಕಿವಿ, ಹಣೆ, ಅಳ್ಳೆ, ಎದೆಯ ಮಧ್ಯೆ, ಕೊರಳು, ರೋಚಮಾನ ಮತ್ತು ದೇವಮಣಿ ಸುಳಿಗಳ ನಡುವೆ, ಮುಂಗಾಲುಗಳ ಮತ್ತು ಹಿಂಗಾಲುಗಳ ಮಂಡಿ ಇಂತಹ ಜಾಗದಲ್ಲಿ ಸುಳಿಗಳಿದ್ದರೆ ಅದು ಯೋಗ್ಯವಾದ ಕುದುರೆಯಲ್ಲ.

ಕತ್ತು ಕೊರಳ ಮಧ್ಯದಲ್ಲಿ ಸುಳಿ ಇರುವ; ಎರಡು ನಾಲಿಗೆ ತರಹ ಕಾಣುವ, ಹಲ್ಲುಗಳು ಡೊಂಕಾಗಿರುವ; ಅಂಡದ ಮೇಲೆ ಸುಳಿ ಇರುವ, ಒಂಟಿ ಬೀಜವಿರುವ; ಮೂರು ಕಿವಿಯಂತೆ ಕಾಣುವ ಮುಖದ ಮೇಲೆ ಬೊಟ್ಟು, ಅಥವಾ ನಾಮದಂತ ಪಟ್ಟಿ ಇಲ್ಲದಿರುವಂತ ಕುದುರೆ ಲಕ್ಷಣಹೀನ ಎನಿಸಿಕೊಳ್ಳುತ್ತದೆ.

ಗಂಡುಕುದುರೆಗೆ ಮೊಲೆಬಂದರೆ, ಐದುಕಾಲು ಹುಟ್ಟಿದರೆ, ಕೊಂಬು ಕಾಣಿಸಿ ಕೊಂಡರೆ, ಗೊರಸು ಅತಿ ಕಪ್ಪಾಗಿದ್ದರೆ ಇಂತಹ ಲಕ್ಷಣದ ಕುದುರೆಗಳು ಮಹಾ ದೋಷದವು ಎಂದು ಹೇಳುವರು. ಬೆದರುತ್ತ ನಡೆಯುವ, ಎಡಬಲಕ್ಕೆ ತೂಗಾಡುವ, ಉಸ್ಸರಿಸುವ, ಪಾದಗತಿ ಇಲ್ಲದೆ ನಡೆಯುವ, ತಲೆತೂಗುವ, ನೆಲಕ್ಕೆ ಗೊರಸು ಗೀರುತ್ತಾ ನಡೆಯುವ, ಮುಖವನ್ನು ಕೆಳಕ್ಕೆ ಮಾಡಿಕೊಂಡು ನಡೆಯುವ ಕುದುರೆಗಳು ಸವಾರಿಗೆ ಯೋಗ್ಯವಾದುವಲ್ಲವೆಂದು ಹೇಳುವರು.

ಹುಲ್ಲೆ, ನವಿಲು, ಹಂಸ, ಹದ್ದು ಇವುಗಳ ಲಕ್ಷಣಗಳಂತೆ ನಡೆಯುವ ಕುದುರೆಯು ಸಾಕಿದವನಿಗೆ ಐಶ್ವರ್ಯವನ್ನುಂಟು ಮಾಡುತ್ತವೆ ಎಂದು ನಂಬಿಕೆ. ಗುಡುಗು, ಮೃದಂಗ ಸ್ವರದಂತೆ ಗಂಭೀರವಾದ ಧ್ವನಿಯುಳ್ಳ ಕುದುರೆ ಉತ್ತಮ. ರೂಕ್ಷವಾದ ಧ್ವನಿ, ಗದ್ಗದಿತವಾದ ಧ್ವನಿ ಇವು ಕುದುರೆಗೆ ಯೋಗ್ಯವಾದ ಲಕ್ಷಣವಲ್ಲ.

ಕುದುರೆಯ ಮೈಬಣ್ಣವೂ ಕೂಡ ಇತರೆ ಲಕ್ಷಣಗಳಂತೆ ಪರಿಗಣಿಸಲಾಗುವುದು. ಕುದುರೆ ಒಂದೇ ಬಣ್ಣದಿಂದ ಕೂಡಿದ್ದರೆ ಅದನ್ನು ಅಷ್ಟು ಯೋಗ್ಯವಾದುದಲ್ಲವೆಂದು ಹೇಳುವರು. ಆದರೆ ಅಚ್ಚ ಬಿಳಿ ಮತ್ತು ಸಂಪೂರ್ಣ ಕೆಂಪು ಬಣ್ಣದ ಕುದುರೆಗಳು ಒಳ್ಳೆಯವೆಂದು ಹೇಳುವರು. ಬಿಳಿ, ರಕ್ತವರ್ಣ, ನಸುಹಳದಿ, ಕಪ್ಪು ಇವೇ ನಿಜ ವಾದ ಕುದುರೆಯ ಬಣ್ಣಗಳು ಇವುಗಳನ್ನು ಕುಮೇದು, ಸುರಂಗ್, ನಾಸ್ಲಿ, ಮುಸ್ಕಿ, ಸಮನ್, ಚೀಣಿ, ಅಬ್ಲರ್, ಸಬಜಾ, ಗೋಮಾಜಿ ಸಬಜಾ, ಕರ್ಡಾ, ಮುಂತಾದ ಹೆಸರುಗಳಿಂದಲೂ ಕರೆಯುವರು.

ಕುದುರೆಯು ಮೈ ಬಣ್ಣಕ್ಕಿಂತ ಬೇರೆ ತೆರನಾದ ಅಥವಾ ಬಿಳಿ ಬಣ್ಣಗಳಿಂದ ಕೂಡಿದ ಹಣೆಯಲ್ಲಿ ಮುಖಬೊಟ್ಟು ಇದ್ದರೆ ಅಂತಹ ಕುದುರೆ ಒಳ್ಳೆಯದೆಂದೂ, ನೀಳ ವಾಗಿಚೆನ್ನಾಗಿ ತಿಲಕವಿಟ್ಟಂತೆ ಹಣೆಯ ಮಧ್ಯದಲ್ಲಿದ್ದರೆ ಅದು ಉತ್ತಮ. ನಾಲ್ಕು ಕಾಲುಗಳ ಗೊರಸಿನ ಮೇಲ್ಭಾಗದ ರೋಮಗಳು ಬಿಳಿಯ ಬಣ್ಣದಾಗಿದ್ದರೆ ಒಳ್ಳೆಯ ದೆಂದು ಹೇಳುವರು. ಹಣೆಯಲ್ಲಿರುವ ಬೊಟ್ಟು ಎಡಭಾಗಕ್ಕೆ ಹೆಚ್ಚು ಬಾಗಿರಬಾರದು.


ಕೋಷದ ಕುದುರೆಯನ್ನು ಹೀನವೆಂದು ಕರೆಯುವರು. ಅನೇಕ ಮಿಶ್ರ ಬಣ್ಣ ಗಳಿಂದ ಕೂಡಿದ ಕುದುರೆ 'ಪಿಶಾಚಿ' ಎನಿಸಿಕೊಳ್ಳುತ್ತದೆ.

ಕುದುರೆಯು ಮೈ ಬೆವರಿನ ವಾಸನೆಯು ತಗಣಿ, ಬಜೆ, ಹೊಲಸು, ಬೆಳ್ಳುಳಿ, ಮೂತ್ರ ಇಂತಹ ವಾಸನೆ ಬರಿಸುವ ಕುದುರೆ ಒಳ್ಳೆಯವಲ್ಲ. ಸಂಪಿಗೆ, ತಾವರೆ, ಶ್ರೀಗಂಧ ಮುಂತಾದ ಸುಗಂಧವಾಸನೆಯನ್ನು ಸೂಸುವ ಕುದುರೆ ಸಾಕಲು ಯೋಗ್ಯವೂ ಐಶ್ವರ್ಯಪ್ರದವಾದುದಾಗಿರುತ್ತದೆ. ಬಗೆಬಗೆಯ ಬಣ್ಣದಿಂದ ಕೂಡಿದ, ರೋಮ ನಯವಾಗಿರುವ ಕುದುರೆ 'ಭೂಮಿಅಂಶಭೂತ' ಎನಿಸಿಕೊಳ್ಳುತ್ತದೆ. ಮೇಘವರ್ಣ, ತಾವರೆ ಹೂವಿನ ಬಣ್ಣ, ನೀರಿನ ಬಣ್ಣಗಳಿಂದ ಕೂಡಿದ ಕುದುರೆ 'ಉದಕಾಂಶಭೂತ' ಎನಿಸಿಕೊಳ್ಳುತ್ತದೆ ಹೊಂಬಣ್ಣ. ಹವಳಬಣ್ಣ, ಮಾಣಿಕ್ಯವರ್ಣ ಇವು 'ಅಗ್ನಿಅಂಶ ಭೂತ' ಎನಿಸಿಕೊಳ್ಳುತ್ತವೆ. ಕಿರಿದಾಗಿ ಪುರುಷರಿಗೆ ಸೊಗಸಾಗಿ ಇರುವ ಬಣ್ಣ ವುಳ್ಳದ್ದು 'ವಾಯುವಿನ ಅಂಶಭೂತ' ಎನಿಸಿಕೊಳ್ಳುತ್ತದೆ. ನಯವಿಲ್ಲದ ಕುರುಚ ಲಾಗಿರುವ ಅನೇಕ ಬಣ್ಣದಿಂದ ಕೂಡಿರುವ ಕುದುರೆ 'ಆಕಾಶದ ಅಂಶಭೂತ' ಎನಿಸಿ ಕೊಳ್ಳುತ್ತದೆ.


ಇಂದು ಕುದುರೆಯ ಸುಳಿ ಬಣ್ಣಗಳನ್ನು ಶಾಸ್ತ್ರೋಕ್ತವಾಗಿ ಮೇಲೆ ಹೆಸರಿಸಿದ ಹೆಸರುಗಳಿಂದ ಗುರುತಿಸುವುದು ವಿರಳ. ಅವುಗಳನ್ನು ಇಂದು ಹೆಚ್ಚಾಗಿ ಇಂಡೋ ಅರಬಿಕ್ ಪದಗಳಿಂದ ಗುರುತಿಸುವರು. ಅವುಗಳನ್ನು ಗಮನಿಸಿದರೆ ಕುದುರೆಯ ಹುಟ್ಟು ಅರಬ್ ದೇಶವೆಂದು ಹೇಳಬಹುದು. ಕುದುರೆಯ ಸುಳಿಲಕ್ಷಣಗಳನ್ನು ಯಾವುದೇ ಭಾಷೆಯ ಹೆಸರಿನಿಂದ ಕರೆದರೂ ಅವು ಸ್ವಾಭಾವಿಕವಾಗಿ ಪಡೆದುಕೊಂಡಿರುವ ಸುಳಿಗಳು ಮತ್ತು ಲಕ್ಷಣಗಳ ಬಗ್ಗೆ ಇರುವ ನಂಬಿಕೆಗಳು ಒಂದೇ ತೆರನಾಗಿವೆ. ಇಂದು ಜನಪದರಲ್ಲಿ ಹೆಚ್ಚು ಜನಪ್ರಿಯವಾಗಿರುವ ಕುದುರೆಯ ಸುಳಿಗಳನ್ನು ಕೆಳಕಾಣಿಸಿದಂತೆ ಪಟ್ಟಿ ಮಾಡಬಹುದು. (ಚಿತ್ರದಲ್ಲಿರುವ ಕುದುರೆಯಲ್ಲಿ ಸುಳಿಯನ್ನು ಕಾಣ ಬಹುದು.)

1. ಮಸ್ತುರ್ ಸುಳಿ
2. ದವ್ವಾಲ್ ಮಸ್ತುರ್ ಸುಳಿ
3. ಜನಾರ್ದ ಸುಳಿ
4. ತೋರ್ಪ ಸುಳಿ
5. ಕಂಟಾಸುಳಿ
6. ಸೋಕವಾರ ಸುಳಿ
7. ಪಟ್ಟದ ಸುಳಿ
8. ದೇವಮಣಿ ಸುಳಿ
9. ವರಮಣಿ ಸುಳಿ
10. ಪಂಚ್‌ಭಗತ್ ಸುಳಿ
11. ಹಿದರ್ಾ ಸುಳಿ
12. ಗೋವರ್ ಸುಳಿ
13. ಬೇಡಿ ಸುಳಿ
14. ಪರ್ಕ ಸುಳಿ
15. ಪಾತಾಳ ಸುಳಿ
16. ಕೊಡೆಮೇಲ್ಕೊಡೆ

ಎಂಬುದಾಗಿ ಗುರುತಿಸಲಾಗಿದೆ. ಹೀಗೆ ಕುದುರೆಯ ಲಕ್ಷಣಗಳು ಸುಳಿಗಳು ಮತ್ತು ನಂಬಿಕೆಗಳು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.



1. ಮಸ್ತಕ್ ಸುಳಿ 2. ದವ್ಡಾಲ್‌ಮಸ್ತಕ್ ಸುಳಿ 3. ಜನಾರ್ದ ಸುಳಿ
4. ತೋರ್ಪ ಸುಳಿ 5. ಕಂಟಾ ಸುಳಿ



6. ಸೋಕವಾರ ಸುಳಿ 7. ಪಟ್ಟದ ಸುಳಿ 8. ದೇವಮಣಿ ಸುಳಿ 9. ವರಮಣಿ ಸುಳಿ
10. ಪಂಚ್‌ಭಗತ್ ಸುಳಿ 11. ಹಿದಾರ್ ಸುಳಿ 12 ಗೋವ್ ಸುಳಿ
13. ಬೇಡಿ ಸುಳಿ 14. ಪರ್ಕ ಸುಳಿ 15. ಪಾತಾಳ ಸುಳಿ 16. ಕೊಡೆಮೇಲ್ಕೊಡೆ

ಡಾ. ಕೆ. ಯಶೋಧರ

ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣಕ್ಕಾಗಿ ಯೋಗ್ಯತಾ ದೃಢೀಕರಣ ಹಾಗೂ ಮಾಪನ ಮಂಡಲಿ

1986ರ ಶಿಕ್ಷಣ ರಾಷ್ಟ್ರೀಯ ನೀತಿಯನ್ನು ಅಳವಡಿಸುವ ದಿಸೆಯಲ್ಲಿ ತಯಾರಿಸಿದ ಕ್ರಿಯಾರೂಪ ಕಾರ್ಯಕ್ರಮ ಪಟ್ಟಿಯಲ್ಲಿ (Program of Actions) ಗುರುತಿಸಿರುವ ಪ್ರಮುಖ ವಿಷಯಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಹೆಚ್ಚಿಸಬೇಕೆಂಬುದೂ ಒಂದಾಗಿದೆ. ಈ ಕಾರ್ಯಕ್ರಮ ಪಟ್ಟಿಯಲ್ಲಿ, ಉನ್ನತ ಶಿಕ್ಷಣ ಉತ್ತಮ ಮಟ್ಟದ್ದಾಗಬೇಕಾದರೆ ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯೂ ಸ್ವಯಂ ಮೌಲ್ಯಮಾಪನ ಮಾಡಿಕೊಂಡು ಸ್ವಯಂಪ್ರಗತಿಗಾಗಿ ನಿರಂತರ ಶ್ರಮಿಸುವಂತಾಗಬೇಕು. ಈ ಸಂಸ್ಥೆಯ ಪ್ರಗತಿಯನ್ನು ಮೌಲ್ಯಮಾಪನ ಮಾಡಿ ಅದರ ಯೋಗ್ಯತಾಮಟ್ಟವನ್ನು ಪ್ರಮಾಣೀಕರಿಸಲು ಸೂಕ್ತವಾದ ಕ್ರಮವನ್ನು ಯೋಚಿಸಿ 'ಯೋಗ್ಯತಾ ದೃಢೀಕರಣ ಹಾಗೂ ಮಾಪನ ಮಂಡಲಿ' (Accreditation & Assessment Council) ಯೊಂದನ್ನು ಸ್ಥಾಪಿಸಬೇಕೆಂದೂ ಈ ಸ್ಥಾಪನಾ ಕಾರ್ಯದ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯ ಸಹಾಯಧನ ಆಯೋಗ (UGC) ತೆಗೆದುಕೊಳ್ಳಬೇಕೆಂದೂ ತಿಳಿಸಲಾಗಿದೆ. ಈ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯ ಸಹಾಯಧನ ಆಯೋಗವು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವಾಲಯ ಕಾರ್ಯದರ್ಶಿ ಡಾ. ವಸಂತ್ ಗೋವಾರಿಕರ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ನೇಮಿಸಿ 'ಉನ್ನತ ಶಿಕ್ಷಣ ಗುಣಮಟ್ಟವನ್ನು ಉತ್ತಮಪಡಿಸುವ ದಿಸೆಯಲ್ಲಿ ಇತರೆ ದೇಶಗಳಲ್ಲಿ ಪ್ರಚಲಿತವಿರುವ, ನಮ್ಮ ದೇಶದ ಪರಿಸ್ಥಿತಿಗೆ ಹೊಂದಿಸಿಕೊಳ್ಳಬಹುದಾದಂತಹ ವ್ಯವಸ್ಥೆಗಳ ಗುರಿಗಳು, ವಿಧಾನ ಕ್ರಮಗಳು ಹಾಗೂ ಉಪಯೋಗಗಳನ್ನು ಗಮನದಲ್ಲಿಟ್ಟುಕೊಂಡು ಯೋಗ್ಯತಾ ದೃಢೀಕರಣ ಮತ್ತು ಮಾಪನ ಮಂಡಲಿಯ ರಚನೆ, ಸ್ವರೂಪ, ಉದ್ದೇಶ, ವ್ಯಾಪ್ತಿ ಹಾಗೂ ಕಾರ್ಯಕ್ರಮ ವಿವರಗಳ ಬಗೆಗೆ ಶಿಫಾರಸು ಮಾಡಬೇಕೆಂದು' ಕೇಳಿಕೊಳ್ಳಲಾಯಿತು. ಈ ಬಗೆಗೆ ಅಧ್ಯಯನ ಕೈಗೊಂಡು ಸಲ್ಲಿಸಿದ ಡಾ. ಗೋವಾರಿಕರ್ ವರದಿಯನ್ನು ಇದೀಗ ದೇಶಾದ್ಯಂತ ಚರ್ಚೆಗೆ ಒಳಪಡಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ಈ ವರದಿಯ ವಿವರಗಳಿಗೆ ಹೋಗುವ ಮುನ್ನ ಯೋಗ್ಯತಾ ದೃಢೀಕರಣ ಎಂದರೇನು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು ಉತ್ತಮ. 'ಅಧಿಕೃತ ಸಂಸ್ಥೆ ಅಥವಾ ನಿಯೋಗ ಯಾವುದಾದರೊಂದು ಕಾಲೇಜು, ವಿಶ್ವವಿದ್ಯಾನಿಲಯ ಅಥವಾ ಶಿಕ್ಷಣ ಸಂಸ್ಥೆಯಲ್ಲಿ ಯಾವುದಾದರೊಂದು ಅಧ್ಯಯನ ಕಾರ್ಯಕ್ರಮ ಪೂರ್ವನಿಶ್ಚಿತ ಅರ್ಹತೆಗಳನ್ನು ಅಥವಾ ಗುಣಮಟ್ಟವನ್ನು ಪಡೆದಿದೆ ಎಂದು ಸಮ್ಮತಿಸುವ ಪ್ರಕ್ರಿಯೆಯೇ ಯೋಗ್ಯತಾ ದೃಢೀಕರಣ. ನಿರ್ದಿಷ್ಟವಾಗಿ ಸಂಸ್ಥಾ ಯೋಗ್ಯತಾ ದೃಢೀಕರಣ (Institutional Accreditation) ಎಂದರೆ 'ಅಧಿಕೃತ ಮಂಡಲಿ, ಸಂಸ್ಥೆ ಅಥವಾ ಆಯೋಗ ಶಿಕ್ಷಣ ಸಂಸ್ಥೆಯೊಂದಕ್ಕೆ ನಿಷ್ಕರ್ಷಿತ ಗುಣಮಟ್ಟವನ್ನು ಸಾಧಿಸಿರುವ ಬಗ್ಗೆ ಸಮ್ಮತಿ ನೀಡುವ ಕಾರ್ಯ'. ಶಿಕ್ಷಣ ಸಂಸ್ಥೆ ತನ್ನ ಧ್ಯೇಯೋದ್ದೇಶಗಳ ಸಾಧನೆಗೆ ಅತ್ಯವಶ್ಯಕವಾದ ಸೌಲಭ್ಯ ಸಲಕರಣೆಗಳಿಂದ ಕೂಡಿದ ಪರಿಸರ ಒದಗಿಸಿ, ಸೂಕ್ತ ಕಾರ್ಯಕ್ರಮಗಳನ್ನು ನಿರೂಪಿಸಿ ಉತ್ತಮ ಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗುತ್ತಿದೆ ಎಂಬುದನ್ನು ಪ್ರಮಾಣೀಕರಿಸುವುದೇ ಸಂಸ್ಥಾ ಯೋಗ್ಯತಾ ದೃಢೀಕರಣ. 19ನೇ ಶತಮಾನದಲ್ಲಿ ಅಮೆರಿಕಾದಲ್ಲಿ ಪರಿಮಾಣಾತ್ಮಕ ಅಂಶಕ್ಕೆ ಸಂಬಂಧಿಸಿದಂತೆ ಹುಟ್ಟಿಕೊಂಡ ಈ ಪರಿಕಲ್ಪನೆ 20ನೇ ಶತಮಾನದಲ್ಲಿ ಶಿಕ್ಷಣ ಸಂಸ್ಥೆ ಗುಣಮಟ್ಟ ಹಾಗೂ ಸಮಗ್ರತೆ ಪ್ರಾಮಾಣಿಕತೆಗೆ ಸಂಬಂಧಿಸಿದ ಗುಣಾತ್ಮಕ ಅಂಶವಾಗಿ ರೂಪುಗೊಂಡಿದೆ. ಈ ಪರಿಕಲ್ಪನೆ ಇಂದು ನಮ್ಮ ಭಾರತಕ್ಕೂ ಅಡಿಯಿಟ್ಟು ನಮ್ಮ ವಿದ್ವನ್ಮಣಿಗಳೂ ಆಡಳಿತ ತಜ್ಞರೂ ಈ ಬಗ್ಗೆ ಚಿಂತನೆಮಾಡಬೇಕಾಗಿರುವ ಸಂದರ್ಭ ಒದಗಿದೆ.

ಗೋವಾರಿಕರ್ ವರದಿಯ ಆರಂಭದಲ್ಲಿ ಪ್ರಸ್ತುತ ಉನ್ನತ ಶಿಕ್ಷಣದ ಪರಿಸ್ಥಿತಿಯನ್ನು ವಿವರಿಸುತ್ತಾ, ಇಂದಿನ ವಿಶ್ವವಿದ್ಯಾನಿಲಯ ಶಿಕ್ಷಣ ರಚನಾತ್ಮಕವಾಗಿಲ್ಲ, ಸ್ವಾವಲಂಬಿ ಬೌದ್ಧಿಕ ಜೀವನಕ್ಕೆ ಪ್ರೋತ್ಸಾಹದಾಯಕರವಾಗಿಲ್ಲವೆಂದೂ ; ಆಜ್ಞೆ ಮತ್ತು ಅಧೀನಪೂರ್ವಕ (command and control) ಅಧಿಕಾರಶಾಹಿ ವ್ಯವಸ್ಥೆಯಿಂದಾಗಿ ಉನ್ನತ ಶಿಕ್ಷಣದಲ್ಲಿ ನಿರೀಕ್ಷಿತ ಬೌದ್ಧಿಕ ಹಾಗೂ ಅಧ್ಯಯನಶೀಲ ಪ್ರಗತಿ ಕುಂಠಿತವಾಗಿದೆ; ಸಂಶೋಧನೆ, ಅನ್ವೇಷಣೆ ಮತ್ತು ಪ್ರಯೋಗಾತ್ಮಕ ಚಟುವಟಿಕೆಗಳ ಸಾಧ್ಯತೆ ಕಷ್ಟವಾಗಿದೆ ಎಂದೂ ; ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಮುಖ ಉದ್ದೇಶ ಸಾಧನೆಗಿಂತ ಕೇವಲ ಪರೀಕ್ಷೆ–ಫಲಿತಾಂಶ ಪ್ರಕಟಣೆಗಳ ಸಂಸ್ಕಾರಕ್ಕೆ ಮಾತ್ರ ಗಮನ ಕೊಡುತ್ತಿದೆ ಎಂದೂ ತಿಳಿಸಲಾಗಿದೆ. ಇಂದಿನ ಕಾಲೇಜುಗಳು ಯಾವ ವಿಶ್ವವಿದ್ಯಾನಿಲಯದ ಅಧೀನದಲ್ಲಿರುತ್ತವೆಯೋ ಆ ವಿಶ್ವವಿದ್ಯಾನಿಲಯದ ನಿಯಮಗಳಿಗನುಸಾರವಾಗಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ತಮಗೆ ಅಗತ್ಯವಾದ ಶೈಕ್ಷಣಿಕ ಸ್ವಾತಂತ್ರ್ಯವಿಲ್ಲದೆ ಉತ್ತಮ ಗುಣಮಟ್ಟ ಸಾಧಿಸಲಾಗುತ್ತಿಲ್ಲ. ಅಂತೆಯೇ ಈ ಹಂತದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಶೈಕ್ಷಣಿಕ ಸ್ವಾಯತ್ತತೆ ಅತ್ಯಗತ್ಯ, ಅನಿವಾರ್ಯ ಹಾಗೂ ಅತ್ಯಂತ ತುರ್ತಾಗಿ ಗಮನಿಸಬೇಕಾದ ಅಂಶ ಎಂಬುದನ್ನು ಗುರುತಿಸಿ, ಈ

ದಿಸೆಯಲ್ಲಿ ಯೋಚಿಸಿರುವ ಯೋಗ್ಯತಾ ದೃಢೀಕರಣ ಮತ್ತು ಮಾಪನ ಮಂಡಲಿ ಸ್ಥಾಪನೆ ಅತ್ಯವಶ್ಯಕವಾಗಿದೆ ಎಂಬುದನ್ನು ಎತ್ತಿಹಿಡಿದಿದೆ.

ಸಂಸ್ಥಾ ಯೋಗ್ಯತಾ ದೃಢೀಕರಣ ಶಿಕ್ಷಣ ಸಂಸ್ಥೆ ಗುಣಮಟ್ಟವನ್ನು ಸ್ವಯಂ ನಿಯಂತ್ರಿಸಿಕೊಳ್ಳುವಂತಾಗಲು ಒಂದು ಮಾಧ್ಯಮವಾಗುತ್ತದೆ. ತನ್ನ ಪರಿಣಾಮ ಕಾರೀ ಕಾರ್ಯ ನಿರ್ವಹಣೆಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡಿಕೊಳ್ಳುತ್ತಾ ತನ್ನ ಗೊತ್ತುಗುರಿಗಳನ್ನು ಗರಿಷ್ಠಮಟ್ಟದಲ್ಲಿ ಸಾಧಿಸಲಾಗುತ್ತದೆ. ಎಂಬುದನ್ನು ವಿದ್ವಜ್ಜನರಿಗೂ ಸಾರ್ವಜನಿಕರಿಗೂ ವಿಶದಪಡಿಸಲು ಸಹಾಯಕವಾಗುತ್ತದೆ. ಇದು ಎಲ್ಲಾ ಶಿಕ್ಷಣ ಸಂಸ್ಥೆಗಳ ಗುರಿಗಳು, ಸಾಧನಾಕ್ರಮ ಹಾಗೂ ಮಾಧ್ಯಮಗಳು ಒಂದೇ ಆಗಿರಬೇಕೆಂದೂ ಒಂದು ಸಂಸ್ಥೆಯನ್ನು ಮತ್ತೊಂದು ಸಂಸ್ಥೆಯೊಡನೆ ಹೋಲಿಸ ಬೇಕೆಂದೂ ಒತ್ತಾಯಿಸುವುದಿಲ್ಲ. ಆದರೆ ಒಂದು ಶಿಕ್ಷಣಸಂಸ್ಥೆ ಗೊತ್ತುಗುರಿಗಳನ್ನು ಸಮಂಜಸವಾಗಿ, ಸಮರ್ಪಕವಾಗಿ ರೂಪಿಸಲಾಗಿದೆ; ಇವುಗಳನ್ನು ಸಾಧಿಸಲು ಸೂಕ್ತ ವಾದಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿವೇಚನಾಪೂರ್ವಕವಾಗಿ ಯೋಚಿಸಿ ನಿರ್ವಹಿಸಲಾಗುತ್ತಿದೆ; ನಿರೂಪಿಸಿದ ಗುರಿಗಳಲ್ಲಿ ಬಹಳಷ್ಟನ್ನು ಗಣನೀಯವಾದ ಮಟ್ಟಿಗೆ ಸಾಧಿಸುತ್ತಿದೆ ಮತ್ತು ಇದೇ ರೀತಿ ಮುಂದುವರೆಸಿಕೊಂಡು ಹೋಗಲು ಸಾಕಷ್ಟು ಸಂಪನ್ಮೂಲವನ್ನು ಹೊಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಧ್ಯೇಯೋದ್ದೇಶಗಳಿಗನುಗುಣವಾಗಿ ವೈವಿಧ್ಯಮಯ ಕಾರ್ಯಕ್ರಮಗಳು ಅವಶ್ಯಕವೆನಿಸುವುದರಿಂದ ಗುಣಮಟ್ಟದಲ್ಲಿ ಏಕರೂಪತೆ ತರಲು ಸಾಧ್ಯವಿಲ್ಲ. ಆದರೂ ಸಾಮಾನ್ಯ ಅಂಶಗಳನ್ನಾಧರಿಸಿ ಸಂಸ್ಥೆಯೊಂದಕ್ಕೆ ಕನಿಷ್ಠ ತಮ್ಮ ಗುಣಮಟ್ಟವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

ಯೋಗ್ಯತಾ ದೃಢೀಕರಣ ನೂತನವಾಗಿ ಆರಂಭವಾಗುವ ಖಾಸಗಿ, ಸರ್ಕಾರಿ ಅಥವಾ ಸ್ಥಳೀಯ ಸರ್ಕಾರಿ ಕಾಲೇಜನ್ನು ವಿಶ್ವವಿದ್ಯಾನಿಲಯ ತನ್ನ ಅಂಗಸಂಸ್ಥೆ ಯನ್ನಾಗಿಸಿಕೊಳ್ಳಲು ಒಪ್ಪಿಗೆ ನೀಡುವ ಅಂಗೀಕರಣ (affiliation) ಕ್ಕಿಂತ ಭಿನ್ನ ವಾಗಿದೆ. ಸಂಸ್ಥಾ ಸ್ವಾಯತ್ತತೆಯನ್ನು ಯೋಗ್ಯತಾ ದೃಢೀಕರಣಕ್ಕೆ ಪೂರ್ವಭಾವಿ ಅಂಶವನ್ನಾಗಿ ಪರಿಗಣಿಸಿ, ಬಹಳಷ್ಟು ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ದೊರೆಯು ವಂತಾಗಲು ಶ್ರಮಿಸುವ ಉದ್ದೇಶ ಹೊಂದಿದೆ. ಮೊದಲಿಗೆ ಶಿಕ್ಷಣ ಸಂಸ್ಥೆಯೊಂದಕ್ಕೆ ಅವರ ಧ್ಯೇಯೋದ್ದೇಶಗಳನ್ನು ರೂಪಿಸಿಕೊಂಡು, ಅವುಗಳನ್ನು ಸಾಧಿಸಲು ಸಮರ್ಪಕ ವಾದ ಕಾರ್ಯಕ್ರಮಗಳನ್ನು ಯೋಜಿಸಲು ಸಂಪೂರ್ಣ ಸ್ವಾತಂತ್ರ್ಯವಿತ್ತು. ಅನಂತರ ಆ ದಿಸೆಯಲ್ಲಿ ಸಂಸ್ಥೆಯ ಯಶಸ್ಸನ್ನು ಸಮಗ್ರವಾಗಿ, ನಿರಂತರವಾಗಿ ಪರೀಕ್ಷಿಸುತ್ತಾ ಕುಂದುಕೊರತೆಗಳನ್ನು ಅವಶ್ಯಕವೆನಿಸಿದಲ್ಲಿ ಸಹಾಯಹಸ್ತ ನೀಡುತ್ತಾ ನಿಷ್ಕರ್ಷಿತ ಗುಣಮಟ್ಟ ಸಾಧಿಸಲು ಸಹಕರಿಸುವುದೇ ಇದರ ಪರಮಗುರಿ. ಸಂಸ್ಥಾ ದೃಢೀಕರಣದ ಇತರೆ ಉದ್ದೇಶಗಳನ್ನು ಕೆಳಕಂಡಂತೆ ಗುರುತಿಸಲಾಗಿದೆ.

1. ಶೈಕ್ಷಣಿಕ ಸಮುದಾಯಗಳಿಗೆ, ಸಾರ್ವಜನಿಕರಿಗೆ, ಇತರೆ ಸಂಘ ಸಂಸ್ಥೆಗಳಿಗೆ ಒಂದು ಶೈಕ್ಷಣಿಕ ಸಂಸ್ಥೆಯ ಗುಣಮಟ್ಟ ಹಾಗೂ ಸಮಗ್ರತೆ ಪ್ರಾಮಾಣಿಕತೆಯನ್ನು ದೃಢಪಡಿಸುತ್ತದೆ.
2. ಸಂಸ್ಥಾ ಕಾರ್ಯದಕ್ಷತೆಯನ್ನು ಮಾಪನಮಾಡಲು ಅವಶ್ಯಕವಾದ ನಿರ್ಣಯಾಂಶಗಳನ್ನು ಗುರುತಿಸುವ ಮೂಲಕ ಶಿಕ್ಷಣದಲ್ಲಿ ಉತ್ಕೃಷ್ಟತೆ ಘನತೆಯನ್ನು ತಂದುಕೊಡಲು ಪ್ರಯತ್ನಿಸುತ್ತದೆ.
3. ನಿರಂತರ ಸ್ವಯಂ ಅಧ್ಯಯನ ಹಾಗೂ ಮೌಲ್ಯಮಾಪನಗಳಿಂದ ಸಂಸ್ಥಾ ಹಾಗೂ ಕಾರ್ಯಕ್ರಮ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆ.
4. ಈಗಾಗಲೇ ಪ್ರಗತಿಹೊಂದಿರುವ ಹಾಗೂ ಪ್ರಗತಿಪಥದಲ್ಲಿ ಸಾಗಿರುವ ಸಂಸ್ಥೆಗಳಿಗೆ ಸಹಾಯ ಮತ್ತು ಉಪಬೋಧೆ ಸೌಲಭ್ಯ ಒದಗಿಸುತ್ತದೆ.
5. ನಿಷ್ಕರ್ಷಿತ ಗುಣಮಟ್ಟ ಸಾಧನೆಯ ವಿವಿಧ ಹಂತಗಳಲ್ಲಿರುವಂತೆ ಶ್ರೇಣೀಕರಿಸುವ ಪ್ರಯತ್ನಮಾಡದೆ, ಆ ಗುಣಮಟ್ಟವನ್ನು ಸಾಧಿಸಿರುವ ಶಿಕ್ಷಣ ಸಂಸ್ಥೆಯನ್ನು ಮಾತ್ರ ಗುರುತಿಸಿ ಯೋಗ್ಯತಾ ದೃಢೀಕರಣ ನೀಡಲು ಉದ್ದೇಶಿಸಿದೆ.
6. ದೃಢೀಕರಣ ಮಂಡಲಿ ತನ್ನ ಸದಸ್ಯ ಶಿಕ್ಷಣ ಸಂಸ್ಥೆಯನ್ನು ಸ್ವಾಯತ್ತತೆ ಹಾಗೂ ಶೈಕ್ಷಣಿಕ ಉತ್ಕೃಷ್ಟತೆ ಸ್ವಾತಂತ್ರ್ಯಕ್ಕೆ ಧಕ್ಕೆತರುವ ಯಾವುದೇ ಅತಿಕ್ರಮಣದಿಂದ ರಕ್ಷಿಸಲು ಪ್ರಯತ್ನಿಸುತ್ತದೆ.
7. ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ವೈವಿಧ್ಯತೆ ಹಾಗೂ ಅನ್ವೇಷಣೆಗಳಿಗೆ ಅವಕಾಶ ದೊರಕಿಸುತ್ತದೆ.
8. ಶಿಕ್ಷಣ ಸಂಸ್ಥೆಯೊಂದು ಕೇಂದ್ರ ಸಹಾಯಧನ ಪಡೆಯಲು ಬೇಕಾದ ಅರ್ಹತೆಯನ್ನು ಒದಗಿಸುತ್ತದೆ.

ಸಂಸ್ಥಾ ಯೋಗ್ಯತಾ ದೃಢೀಕರಣ ಆಯಾ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟವನ್ನು ಪರೀಕ್ಷಿಸಿ, ಅವುಗಳನ್ನು ಮುಂದುವರಿಸಿಕೊಂಡು ಹೋಗಲು ಅನುಮತಿ ನೀಡುವ ವೃತ್ತಿಪರ ಯೋಗ್ಯತಾ ದೃಢೀಕರಣ (Professional Accreditation) ಕ್ಕಿಂತ ಭಿನ್ನವಾಗಿದೆಯೆಂದೂ ವೃತ್ತಿಪರ ಯೋಗ್ಯತಾ ದೃಢೀಕರಣಕ್ಕೆ ಇದು ಬುನಾದಿಯಾಗಬೇಕೆಂದೂ ಅಭಿಪ್ರಾಯಪಡಲಾಗಿದೆ.

ಇಂದು ಭಾರತದಲ್ಲಿ ತಲೆಯೆತ್ತುತ್ತಿರುವ ಈ ಯೋಗ್ಯತಾ ದೃಢೀಕರಣ ಮತ್ತು ಮಾಪನ ಮಂಡಲಿ ವ್ಯವಸ್ಥಾಕ್ರಮಕ್ಕೆ ಸಂಬಂಧಿಸಿದಂತೆ ವರದಿಯಲ್ಲಿ ಕೆಳಗಿನ ವಿವರ ಕಂಡುಬರುತ್ತದೆ.

ಯೋಗ್ಯತಾ ದೃಢೀಕರಣ ಮತ್ತು ಮಾಪನ ಮಂಡಲಿಯು ಸರಕಾರದಿಂದ ಹೊರತಾದ ಸ್ವಯಂಸೇವಾ ಸಂಸ್ಥೆಯಾಗಿರಬೇಕು. ರಾಜಕೀಯ ಹಾಗೂ ಅಧಿಕಾರ

ಪ್ರಭಾವ ವಲಯದಿಂದ ದೂರವಿರುವ ಸ್ವತಂತ್ರ, ಸ್ವಯಂ ಅಧಿಕಾರಯುತ ಸಂಸ್ಥೆಯಾಗಿರಬೇಕು. ಹಣಕಾಸಿನ ವಿಷಯದಲ್ಲಿ ಸ್ವಯಂ ಸಾಮರ್ಥ್ಯವುಳ್ಳದ್ದಾಗಿರಬೇಕು; ಅದರ ಸದಸ್ಯ ಶಿಕ್ಷಣ ಸಂಸ್ಥೆಗಳಿಂದ ಸಂಗ್ರಹಿಸಲಾಗುವ ವಾರ್ಷಿಕ ಶುಲ್ಕ ಹಣದಿಂದಲೇ ಕಾರ್ಯನಿರ್ವಹಿಸುವಂತಿರಬೇಕು. ಮೊದಲಿಗೆ ರಾಷ್ಟ್ರಮಟ್ಟದಲ್ಲಿ ಒಂದು ಸಂಸ್ಥೆಯಾಗಿ ಹುಟ್ಟಿ ಅನಂತರ ವಲಯ ಮಟ್ಟದಲ್ಲಿ ಬೆಳೆಯಬೇಕು.

ಆರಂಭದಲ್ಲಿ ಯು.ಜಿ.ಸಿ. 20 ಉತ್ತಮ ಸ್ವಾಯತ್ತತಾ ಶಿಕ್ಷಣಸಂಸ್ಥೆಗಳನ್ನು ಆಯ್ಕೆಮಾಡಿಕೊಂಡು, ಯೋಗ್ಯತಾ ದೃಢೀಕರಣಕ್ಕಾಗಿ ಅಭ್ಯರ್ಥಿಗಳಾಗಲಿಚ್ಛಿಸುವ ಇತರೆ ಶಿಕ್ಷಣ ಸಂಸ್ಥೆಗಳನ್ನು ಸೇರಿಸಿಕೊಂಡು, ಆ ಎಲ್ಲಾ ಸಂಸ್ಥೆಗಳಿಗೂ ದೃಢೀಕರಣ ನೀಡಿ ಸ್ವತಂತ್ರ ಹಾಗೂ ಸ್ವಯಂ ಅಧಿಕಾರಯುತ ಯೋಗ್ಯತಾ ದೃಢೀಕರಣ ಮಂಡಲಿ/ಸಂಸ್ಥೆಯೊಂದನ್ನು ರಚಿಸಲಾಗುತ್ತದೆ. ಈ ಮಂಡಲಿಯ ಪ್ರತಿನಿಧಿಗಳನ್ನು ಆಯಾ ಶಿಕ್ಷಣ ಸಂಸ್ಥೆಯ ಉಪಕುಲಪತಿ ಅಥವಾ ಪ್ರಾಂಶುಪಾಲರು ನೇಮಿಸಬಹುದಾಗಿರುತ್ತದೆ. ಈ ಪ್ರತಿನಿಧಿಗಳು ವರ್ಷಕ್ಕೊಮ್ಮೆ ಸಮಾವೇಶಗೊಳ್ಳಲಿದ್ದು ಆ ವಾರ್ಷಿಕ ಸಭೆಯಲ್ಲಿ ಯೋಗ್ಯತಾ **ದೃಢೀಕರಣ ನಿಯೋಗ** (Accreditation commission) ರಚನೆಗಾಗಿ ಚುನಾವಣೆ ನಡೆಸಲಾಗುತ್ತದೆ. ಈ ನಿಯೋಗ ಸದಸ್ಯ ಶಿಕ್ಷಣ ಸಂಸ್ಥೆಗಳಿಂದಲೂ, ಶೈಕ್ಷಣಿಕ ಕ್ಷೇತ್ರದಿಂದ ಹೊರತಾದ ಇತರೆ ಕ್ಷೇತ್ರಗಳಿಂದಲೂ ಆಯ್ಕೆ ಮಾಡಿದ 15 ಸದಸ್ಯರನ್ನೊಳಗೊಂಡಿದ್ದು ಪ್ರತಿಯೊಬ್ಬ ಸದಸ್ಯನ ಕಾರ್ಯಾವಧಿ 3 ವರ್ಷಗಳಾಗಿರುತ್ತದೆ. ಮೂರುವರ್ಷಗಳ ಅನಂತರ ವರ್ಷಕ್ಕೊಮ್ಮೆ ⅓ರಷ್ಟು ಸದಸ್ಯರನ್ನು ನಿವೃತ್ತಿಗೊಳಿಸಿ ಆ ಸ್ಥಳಗಳಿಗೆ ಹೊಸದಾಗಿ ಸದಸ್ಯರ ಆಯ್ಕೆ ಮಾಡಲಾಗುತ್ತದೆ. ನಿಯೋಗ ವರ್ಷಕ್ಕೆ 4 ಬಾರಿ ಸಮಾವೇಶಗೊಳ್ಳಬೇಕಾಗಿದ್ದು ಪ್ರತಿವರ್ಷದ ಪ್ರಪ್ರಥಮ ಸಭೆಯಲ್ಲಿ ನಿಯೋಗದ ಅಧ್ಯಕ್ಷ ಹಾಗೂ ಸಹಅಧ್ಯಕ್ಷರನ್ನು ಚುನಾವಣೆ ಮೂಲಕ ಆಯ್ಕೆಮಾಡಲಾಗುತ್ತದೆ.

ಇದರ ಜೊತೆಗೆ ದೃಢೀಕರಣ ನಿಯೋಗ ಯು.ಜಿ.ಸಿ.ಯೊಡನೆ ಸಮಾಲೋಚಿಸಿ ಮೌಲ್ಯಮಾಪನ ನಿರ್ದೇಶಕರು ಹಾಗೂ ಸಹನಿರ್ದೇಶಕರನ್ನು ನೇಮಿಸುತ್ತದೆ. ನಿರ್ದೇಶಕರ ಕಾರ್ಯಾವಧಿ 5 ವರ್ಷಗಳು, ಸ್ಥಾನಮಾನದಲ್ಲಿ ವಿಶ್ವವಿದ್ಯಾನಿಲಯ ಉಪಕುಲಪತಿಗೆ ಸಮಾನರು. ಸಹನಿರ್ದೇಶಕರು ಹಾಗೂ ನೇಮಕಗೊಂಡ ವೃತ್ತಿಪರ ಮತ್ತು ಬೆಂಬಲಿಗ ಸಿಬ್ಬಂದಿ ವರ್ಗದವರ ಸಹಾಯದಿಂದ ದಿನನಿತ್ಯ ಕಾರ್ಯಭಾರ ನಿರ್ವಹಿಸಬೇಕಾಗುತ್ತದೆ. ಅಲ್ಲದೆ ವಿವಿಧ ಅಧ್ಯಯನ ಕ್ಷೇತ್ರಗಳಿಂದ ಸುಮಾರು 100 ಮಂದಿ ಮೌಲ್ಯಮಾಪಕರನ್ನು ಆಯ್ಕೆಮಾಡಿ, ಬೇರೆ ಬೇರೆ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನಕ್ಕಾಗಿ ಆಯಾ ಕ್ಷೇತ್ರದ ಮೌಲ್ಯಮಾಪಕರ ಚಿಕ್ಕ ಚಿಕ್ಕ ತಂಡಗಳಲ್ಲಿ ಕಳುಹಿಸಬೇಕು. ಈ ಮೌಲ್ಯಮಾಪಕರು ಯಾವ ಸಂಭಾವನೆಯನ್ನೂ ನಿರೀಕ್ಷಿಸದೆ ಗೌರವಾರ್ಥ ಮಟ್ಟದಲ್ಲಿ ಸೇವೆ ಸಲ್ಲಿಸಬೇಕು. ಇವರು ಶಿಕ್ಷಣ ಸಂಸ್ಥೆ

ಗಳಿಗೆ ಭೇಟಿಕೊಟ್ಟಾಗ ಅಲ್ಲಿಯ ಖರ್ಚುವೆಚ್ಚಗಳನ್ನು ಆಯಾ ಶಿಕ್ಷಣ ಸಂಸ್ಥೆ ನೋಡಿಕೊಳ್ಳಬೇಕಾಗುತ್ತದೆ.

ಸಂಸ್ಥಾ ಯೋಗ್ಯತಾ ದೃಢೀಕರಣವನ್ನು ಪಡೆಯುವುದು ಸ್ವಯಂ ಇಚ್ಛಿತವಾಗಿದೆ. ಯಾವುದಾದರೊಂದು ಶಿಕ್ಷಣ ಸಂಸ್ಥೆ ದೃಢೀಕರಣ ಪಡೆಯಲಿಚ್ಛಿಸಿದರೆ ತನ್ನ ಬಗ್ಗೆ ವಸ್ತುನಿಷ್ಠ ಸ್ವಯಂ ಅಧ್ಯಯನ ಕೈಗೊಂಡು, ಯೋಗ್ಯತಾ ದೃಢೀಕರಣ ಮಂಡಲಿ ನಿಗದಿಪಡಿಸಿರುವ ಅಂಶಗಳಿಗನುಗುಣವಾಗಿ ಈ ಸಂಸ್ಥೆ ಉನ್ನತ ಗುಣಮಟ್ಟದ್ದಾಗಿದ್ದು, ದೃಢೀಕರಣಕ್ಕೆ ಅರ್ಹವಾಗಿದೆ ಎಂದು ವರದಿಮಾಡಿಕೊಂಡು, ನಿಯೋಗಕ್ಕೆ ಅರ್ಜಿ ಸಲ್ಲಿಸಬೇಕು. ಇದರ ಮೇರೆಗೆ ನಿಯೋಗವು ಮೌಲ್ಯಮಾಪಕರ ತಂಡವೊಂದನ್ನು ಆ ಶಿಕ್ಷಣ ಸಂಸ್ಥೆಗೆ ಕಳುಹಿಸಲು ಮೌಲ್ಯಮಾಪನ ನಿರ್ದೇಶಕರಿಗೆ ಆದೇಶ ನೀಡುತ್ತದೆ. ಈ ವರದಿಯನ್ನು ನಿಯೋಗಕ್ಕೆ ಕಳುಹಿಸಿದ ಅನಂತರ ನಿಯೋಗವು ಶಿಕ್ಷಣ ಸಂಸ್ಥೆಯ ಸ್ವಯಂ ಅಧ್ಯಯನ ವರದಿ, ಮೌಲ್ಯಮಾಪನ ತಂಡ ವರದಿ ಹಾಗೂ ಇತರೆ ವಸ್ತುನಿಷ್ಠ ವಿವರಗಳನ್ನು ಆಧರಿಸಿ ಆ ಶಿಕ್ಷಣ ಸಂಸ್ಥೆಗೆ ದೃಢೀಕರಣ ನೀಡುತ್ತದೆ ಇಲ್ಲವೇ ನಿರಾಕರಿಸುತ್ತದೆ.

ಸಂಸ್ಥಾ ದೃಢೀಕರಣ ಒಮ್ಮೆಲೇ ಇದ್ದಕ್ಕಿದ್ದಂತೆ ನೀಡುವುದಿಲ್ಲ. ಯೋಗ್ಯತಾ ದೃಢೀಕರಣಕ್ಕಾಗಿ ಅಭ್ಯರ್ಥಿಯಾಗಲು ನಿಯೋಗ ಅನುಮತಿ ನೀಡಿದ ಮೇಲೆ ಕಾಲಾನುಕಾಲಕ್ಕೆ ಮೌಲ್ಯಮಾಪನ ಕೈಗೊಂಡು, ಕುಂದುಕೊರತೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸಲಹೆ ನೀಡುತ್ತಾ ಸಂಸ್ಥೆಯ ಗುಣಮಟ್ಟವನ್ನು ಉತ್ತಮಪಡಿಸಲು ಅನಂತರ ಯೋಗ್ಯತಾ ದೃಢೀಕರಣವನ್ನು ನೀಡಲಾಗುತ್ತದೆ.

ಯಾವುದೇ ಶಿಕ್ಷಣ ಸಂಸ್ಥೆ ಯೋಗ್ಯತಾ ದೃಢೀಕರಣಕ್ಕೆ ಅರ್ಹವೆನಿಸಬೇಕಾದರೆ ಅದು ಗಮನಿಸಬೇಕಾದ ಅಂಶಗಳನ್ನು ಕೆಳಕಂಡ ವ್ಯಾಪಕ ಕ್ಷೇತ್ರಗಳಲ್ಲಿ ಗುರುತಿಸಿ, ಆಯಾ ಕ್ಷೇತ್ರಗಳಲ್ಲಿ ನಿರ್ದಿಷ್ಟ ನಿರ್ಣಯಾಂಶಗಳನ್ನು ರೂಪಿಸಿಕೊಳ್ಳಬೇಕೆಂದು ಹೇಳಲಾಗಿದೆ.

1. ಸಂಸ್ಥಾ ಧ್ಯೇಯೋದ್ದೇಶಗಳು 2. ಮೌಲ್ಯಮಾಪನ ಮತ್ತು ಯೋಜನೆ 3. ಸಂಘಟನೆ ಮತ್ತು ನಿರ್ವಹಣೆ 4. ಬೋಧನಾ ಕಾರ್ಯಕ್ರಮಗಳು 5. ವಿಶೇಷ ಚಟುವಟಿಕೆಗಳು 6. ಬೋಧಕವರ್ಗ 7. ವಿದ್ಯಾರ್ಥಿ ಸೇವಾ ವಿಷಯಗಳು 8. ಗ್ರಂಥಾಲಯ ಹಾಗೂ ಕಲಿಕಾ ಸಂಪನ್ಮೂಲಗಳು 9. ಸಾಧನ ಸಲಕರಣೆಗಳು 10. ಹಣಕಾಸು ಸಂಪನ್ಮೂಲಗಳು 11. ನೀತಿ ಸಮ್ಮತ ರೂಢಿಗಳು 12. ಪ್ರಕಾಶನ ಮತ್ತು ಜಾಹಿರಾತು ಪ್ರಕಟಣೆ.

ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 'ಸಾಮಾನ್ಯ ಶಿಕ್ಷಣ' ಅಂಶಕ್ಕೆ ಸ್ವಲ್ಪಮಟ್ಟಿನ (25%) ಆದ್ಯತೆ ನೀಡಬೇಕೆಂದೂ; ಸ್ವಾಯತ್ತತೆಯಿಂದಾಗಿ ಶಿಕ್ಷಣ ಸಂಸ್ಥೆಗಳ ಧ್ಯೇಯೋದ್ದೇಶಗಳಲ್ಲಿ ವೈವಿಧ್ಯತೆ ಕಂಡುಬರುವುದರಿಂದ ಸಾಮಾನ್ಯ ಗುಣಮಟ್ಟವನ್ನು

ನಿರ್ಧರಿಸಲು ರಾಷ್ಟ್ರೀಯ ಮೌಲ್ಯಮಾಪನ ಸೇವಾಕಾರ್ಯ (National Testing Service) ಸೌಲಭ್ಯ ಒದಗಿಸಬೇಕೆಂದೂ ಅಭಿಪ್ರಾಯಪಡಲಾಗಿದೆ.

ಯಾವುದೇ ಶಿಕ್ಷಣ ಸಂಸ್ಥೆಗೆ ಸ್ವಾಯತ್ತತೆಯಿಲ್ಲದೆ ದೃಢೀಕರಣ ಕೊಡಲಾಗುವುದಿಲ್ಲ. ಅಂತೆಯೇ ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಯಾವುದೇ ಕಾಲೇಜು ಯೋಗ್ಯತಾ ದೃಢೀಕರಣ ಪಡೆಯಬೇಕಾದರೆ ಅದು ಸ್ವಾಯತ್ತತೆ ಪಡೆಯಬೇಕು. ಯಾವುದೇ ವಿಶ್ವವಿದ್ಯಾನಿಲಯ ಯೋಗ್ಯತಾ ದೃಢೀಕರಣ ಪಡೆಯಬೇಕಾದರೂ ಅದರಲ್ಲಿ ಸೇರಿರುವ ಎಲ್ಲಾ ಕಾಲೇಜುಗಳಿಗೆ ಸ್ವಾಯತ್ತತೆ ನೀಡಬೇಕು. ಮೊದಲಿಗೇ ಸಂಪೂರ್ಣ ಸ್ವಾಯತ್ತತೆ ಕೊಡಲಾಗದಿದ್ದರೂ ಕನಿಷ್ಠಪಕ್ಷ ಅರೆ ಸ್ವಾಯತ್ತತೆಯನ್ನಾದರೂ ನೀಡಬೇಕು ಎಂದು ಒತ್ತಾಯಿಸುತ್ತದೆ. ಇಲ್ಲದಿದ್ದಲ್ಲಿ ವಿಶ್ವವಿದ್ಯಾನಿಲಯ ಯೋಗ್ಯತಾ ದೃಢೀಕರಣಕ್ಕಾಗಿ ಅಭ್ಯರ್ಥಿಯಾಗಿ ಅರ್ಜಿ ಸಲ್ಲಿಸಲೂ ಅರ್ಹವೆನಿಸುವುದಿಲ್ಲ. ಇದರ ಪ್ರಕಾರ ಮುಂದಿನ ಹಲವಾರು ವರ್ಷಗಳಲ್ಲಿ ಎಲ್ಲಾ ಕಾಲೇಜುಗಳು ಸ್ವಾಯತ್ತತಾ ಶಿಕ್ಷಣ ಸಂಸ್ಥೆಗಳಾಗಬೇಕೆಂಬ ಬಯಕೆ ಎದ್ದುಕಾಣುತ್ತದೆ. ಯೋಗ್ಯತಾ ದೃಢೀಕರಣ ಮಾಪನ ಮಂಡಲಿ ಅಸ್ತಿತ್ವಕ್ಕೆ ಬಂದ 5 ವರ್ಷಗಳ ಅನಂತರ ಯೋಗ್ಯತಾ ದೃಢೀಕರಣ ಪಡೆದ ಶಿಕ್ಷಣ ಸಂಸ್ಥೆಗಳು ಮಾತ್ರ ಕೇಂದ್ರ ಸಹಾಯಧನ ಪಡೆಯಲು ಅರ್ಹವೆನಿಸುತ್ತವೆ. ಇದೀಗ ಯು.ಜಿ.ಸಿ. 1990ರ ವೇಳೆಗೆ 500 ಕಾಲೇಜುಗಳಿಗೆ ಸ್ವಾಯತ್ತತೆ ನೀಡಲು ನಿರ್ಧರಿಸಿದೆ.

ಗೋವಾರಿಕರ್ ವರದಿಯನ್ನು ವಿದ್ವನ್ಮಣಿಗಳ ಹಾಗೂ ಆಡಳಿತತಜ್ಞರ ಚರ್ಚೆಗೆ ಒಳಪಡಿಸಿ ಶಿಫಾರಸುಗಳ ಸೂಕ್ತಾಸೂಕ್ತತೆಯನ್ನು ತೀರ್ಮಾನಿಸುವ ಉದ್ದೇಶದಿಂದ ಯು ಜಿ ಸಿ. ದೇಶಾದ್ಯಂತ ಪ್ರಾದೇಶಿಕ ಹಂತಗಳಲ್ಲಿ ಕಮ್ಮಟಗಳನ್ನು ನಡೆಸಲಾಗಿದೆ. ಈವರೆಗೂ ಜರುಗಿರುವ ನಾಲ್ಕು ಕಮ್ಮಟಗಳಲ್ಲಿ ಕೊನೆಯದಾದ ಕಮ್ಮಟವನ್ನು ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದಲ್ಲಿ 1988ನೇ ಡಿಸೆಂಬರ್ 30 ಮತ್ತು 31ರಂದು ಏರ್ಪಡಿಸಲಾಗಿತ್ತು. ಶಿಕ್ಷಣ ವಿಭಾಗದ ಅಧ್ಯಕ್ಷ ಪ್ರೊ. ಡಾ. ಎಸ್. ವೆಂಕಟಯ್ಯನವರು ನಿರ್ದೇಶಕರಾಗಿಯೂ, ಪ್ರೊ. ಡಾ. ಸಿ. ಆರ್. ನಾಯರ್‌ರವರು ವಿದ್ವತ್‌ಪೂರ್ಣ ಅಧಿವೇಶನಗಳ ನೇತಾರರಾಗಿಯೂ ನಡೆಸಿದ ಈ ಕಮ್ಮಟದಲ್ಲಿ ಮೈಸೂರು ನಗರದಿಂದ ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ವಿದ್ವನ್ಮಣಿಗಳೂ, ಶಿಕ್ಷಣ ವಿಭಾಗದ ಬೋಧಕ ವರ್ಗದವರೂ ಸಂಶೋಧನಾ ವಿದ್ಯಾರ್ಥಿಗಳೂ, ಆಡಳಿತತಜ್ಞರೂ ಪಾಲ್ಗೊಂಡಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ: ಸೆಲ್ವಿದಾಸ್‌ರವರಿಂದ ಉದ್ಘಾಟಿಸಲ್ಪಟ್ಟ ಈ ಕಮ್ಮಟದಲ್ಲಿ ಗೋವಾರಿಕರ್ ವರದಿಯ ಬಗ್ಗೆ ಮುಕ್ತ ಚರ್ಚೆ ನಡೆಸಿ ರೂಪಿಸಿದ ಶಿಫಾರಸುಗಳಿಗೆ ಸಂಬಂಧಿಸಿದ ಪ್ರಮುಖಾಂಶಗಳನ್ನು ಈ ಕೆಳಗೆ ಕೊಡಲಾಗಿದೆ:

1. ಗೋವಾರಿಕರ್ ವರದಿ ಶಿಫಾರಸುಗಳು ಬಹುತೇಕವಾಗಿ ಅಮೆರಿಕಾ ಶಿಕ್ಷಣ ವ್ಯವಸ್ಥೆ ಮಾದರಿಯ ಆಧಾರದ ಮೇಲೆ ರೂಪಿತವಾಗಿದೆಯೆಂದು

ಕಂಡುಬಂದುದರಿಂದ, ನಮ್ಮ ಭಾರತದ ಪರಿಸ್ಥಿತಿಗೆ ಹೊಂದಿಕೊಳ್ಳುವಂತಾಗಲು ಕೆಲವು ಬದಲಾವಣೆ ಅತ್ಯಗತ್ಯ ಎಂದು ಅಭಿಪ್ರಾಯಿಸಲಾಯಿತು. ಅಂಗೀಕರಣ ಮತ್ತು ಯೋಗ್ಯತಾ ದೃಢೀಕರಣ ವ್ಯವಸ್ಥೆಗಳೆರಡೂ ಅಸ್ತಿತ್ವದಲ್ಲಿರಬೇಕು; ಒಂದು ಶಿಕ್ಷಣ ಸಂಸ್ಥೆ ಈ ಎರಡೂ ಅಂಶಗಳನ್ನು ಪಡೆಯಬಹುದಾಗಿರಬೇಕು. ಅಂತೆಯೇ ವಿಶ್ವವಿದ್ಯಾನಿಲಯದ ಅಂಗೀಕರಣ ಪಡೆದ ಯಾವುದೇ ಕಾಲೇಜಾಗಲೀ ಅಂಗೀಕೃತ ಕಾಲೇಜುಗಳನ್ನೊಳಗೊಂಡ ವಿಶ್ವವಿದ್ಯಾನಿಲಯವಾಗಲೀ ಯೋಗ್ಯತಾ ದೃಢೀಕರಣಕ್ಕೆ ಅನರ್ಹವೆನಿಸಬಾರದು.

2. ಯೋಗ್ಯತಾ ದೃಢೀಕರಣವನ್ನು ಸ್ವಾಯತ್ತತೆಯಿಂದ ಬೇರ್ಪಡಿಸಿ, ನಿಷ್ಕರ್ಷಿತ ಗುಣಮಟ್ಟದ ಅರ್ಹತೆ ಪಡೆದ ಯಾವುದೇ ಸ್ವಾಯತ್ತತೆ, ಅರೆ ಸ್ವಾಯತ್ತತೆಯಿರುವ ಮತ್ತು ಅಂಗೀಕೃತ ಸಂಸ್ಥೆಯಾಗಲೀ ಯೋಗ್ಯತಾ ದೃಢೀಕರಣ ಪಡೆಯುವಂತಿರಬೇಕು.

3. ವೃತ್ತಿಪರ ಶಿಕ್ಷಣ ಸಂಸ್ಥೆ ಕೈಗೊಳ್ಳುವ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟ ನಿರ್ಧರಿಸಿ ಅನುಮತಿ ನೀಡುವ ನಿರ್ದಿಷ್ಟಮಟ್ಟದ ವೃತ್ತಿಪರ ಯೋಗ್ಯತಾ ದೃಢೀಕರಣ ಸಾಮಾನ್ಯ ಮಟ್ಟದ ಸಂಸ್ಥಾ ಯೋಗ್ಯತಾ ದೃಢೀಕರಣಕ್ಕೆ ಪೂರ್ವಭಾವಿ ಅಂಶವಾಗಬೇಕು.

4. ಯೋಗ್ಯತಾ ದೃಢೀಕರಣ ನೀಡುವ ಜೊತೆಗೆ ಶಿಕ್ಷಣ ಸಂಸ್ಥೆಗಳನ್ನು ಎ. ಬಿ. ಸಿ. ಮೂರು ಅಂಶ ಮಾಪನಿಯಲ್ಲಿ [ಎ–ಅತ್ಯುತ್ತಮ, ಆದರ್ಶಪ್ರಾಯ (ಉತ್ತಮೋತ್ತಮ); ಬಿ– ಉಚ್ಚಮಟ್ಟ (ಉತ್ತಮತರ); ಸಿ– ಉತ್ತಮ] ಶ್ರೇಣೀಕರಿಸಬೇಕು. ಇದರಿಂದ ದೃಢೀಕರಣ ಪಡೆದ ಸಂಸ್ಥೆಗಳೂ ತಮ್ಮ ಗುಣಮಟ್ಟವನ್ನು ಉನ್ನತವಾಗಿಸಿಕೊಂಡು ಉತ್ಕೃಷ್ಟತೆ ಪಡೆಯಲು ನಿರಂತರವಾಗಿ ಶ್ರಮಿಸುವಂತಾಗುತ್ತದೆ.

5. ಯೋಗ್ಯತಾ ದೃಢೀಕರಣ ಮಂಡಲಿ ಸ್ವತಂತ್ರ ಹಾಗೂ ಸ್ವಯಂಸೇವಾ ಸಂಸ್ಥೆಯಾದರೂ ಇದರ ಹೊಣೆಗಾರಿಕೆ ಮತ್ತು ಮೇಲ್ವಿಚಾರಣೆಯನ್ನು ಯು. ಜಿ. ಸಿ. ಅಥವಾ ಉನ್ನತ ಶಿಕ್ಷಣ ರಾಷ್ಟ್ರೀಯ ಮಂಡಲಿ (ಎನ್.ಸಿ.ಎಚ್.ಇ.) ವಹಿಸಿಕೊಂಡರೆ ಉತ್ತಮ. ಇದರಿಂದ ಈ ಮಂಡಲಿಯು ಅವಶ್ಯಕವಾದಷ್ಟು ಹಣಕಾಸಿನ ಸೌಲಭ್ಯ ಹೊಂದಿ, ಹಣಕಾಸಿಗಾಗಿ ಸದಸ್ಯ ಶಿಕ್ಷಣ ಸಂಸ್ಥೆಗಳಿಗೆ ಹೊರೆಯಾಗುವುದನ್ನು ತಪ್ಪಿಸಿ ಕನಿಷ್ಠ ತಮ್ಮ ಶುಲ್ಕದಿಂದ ಮಾತ್ರ ಶಿಕ್ಷಣ ಸಂಸ್ಥೆಗಳು ಯೋಗ್ಯತಾ ದೃಢೀಕರಣ ಸೌಲಭ್ಯ ಪಡೆಯುವಂತೆ ಮಾಡಲು ಸಾಧ್ಯವಾಗುತ್ತದೆ. ಮಂಡಲಿ ರಾಷ್ಟ್ರಮಟ್ಟದ ಸಂಸ್ಥೆಯಾದರೂ ಪ್ರಾರಂಭದಲ್ಲಿ 4 ಅಥವಾ 5 ಪ್ರಾದೇಶಿಕ ವಿಭಾಗಗಳನ್ನು ತೆರೆದು ಅನಂತರದಲ್ಲಿ ಪ್ರತಿಯೊಂದು

ದೊಡ್ಡ ರಾಜ್ಯ ಚಿಕ್ಕ ರಾಜ್ಯಗಳ ಗುಂಪಿಗೆ (ದೃಢೀಕರಿಸಿದ ಹಾಗೂ ದೃಢೀಕರಿಸಬೇಕಾದ ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನಾಧರಿಸಿ) ಒಂದೊಂದು ಘಟಕವನ್ನು ತೆರೆಯಬೇಕು. ಕೇಂದ್ರಮಂಡಲಿ ಒಬ್ಬ ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಕೆಲವರು ಸಹನಿರ್ದೇಶಕರನ್ನೂ, ಪ್ರಾದೇಶಿಕ ಘಟಕ ಪ್ರಾದೇಶಿಕ ಸಹ–ನಿರ್ದೇಶಕರನ್ನೂ ಹೊಂದಿರಬಹುದು. ಅವರು ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ಪೂರ್ಣಾವಧಿ, ಅರೆಕಾಲಿಕ ಮೌಲ್ಯಮಾಪನ ಅಧಿಕಾರಿಗಳನ್ನು ನೇಮಿಸಿಕೊಂಡು ಆಯಾ ವಿಷಯ ಕ್ಷೇತ್ರದ ತಂಡಗಳನ್ನಾಗಿ ರೂಪಿಸಿಕೊಳ್ಳಬಹುದು. ವರದಿಯಲ್ಲಿ ಸೂಚಿಸಿರುವ ಮಂಡಲಿ ಪ್ರತಿನಿಧಿಗಳ ಜೊತೆಗೆ ಎನ್‌ಸಿಟಿಇ, ಯುಜಿಸಿ, ಎಯುಐ (ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ) ಮತ್ತು ಇತರೆ ವೃತ್ತಿಪರ ಸಂಸ್ಥೆಗಳಿಂದ ನಾಮಕರಣಗೊಂಡ ಅಭ್ಯರ್ಥಿಗಳೂ ಪ್ರತಿನಿಧಿಗಳಾಗಿರಬೇಕು. ರಾಷ್ಟ್ರಮಟ್ಟದಲ್ಲಿ ಚುನಾಯಿತ ಅಥವಾ ನಾಮಕರಣಗೊಂಡ ಕೆಲವೇ ಸದಸ್ಯರಿಂದ ಕೂಡಿದ ಸ್ಥಾಯೀ ನಿಯೋಗ ಸಮಿತಿಯೂ ಪ್ರಾದೇಶಿಕ ಮಟ್ಟದಲ್ಲಿ ಸಲಹಾತ್ಮಕ ಯೋಗ್ಯತಾ ದೃಢೀಕರಣ ಸಮಿತಿಯೂ ಇರಬೇಕು. ಪ್ರಾದೇಶಿಕ ಯೋಗ್ಯತಾ ದೃಢೀಕರಣ ಸಮಿತಿಯು ಹಾಗೂ ಮೌಲ್ಯಮಾಪನ ತಂಡದ ಶಿಫಾರಸಿನ ಮೇರೆಗೆ ರಾಷ್ಟ್ರನಿಯೋಗ ಶಿಕ್ಷಣ ಸಂಸ್ಥೆಗಳಿಗೆ ಔಪಚಾರಿಕವಾಗಿ ಯೋಗ್ಯತಾ ದೃಢೀಕರಣ ನೀಡಬಹುದಾಗಿದೆ. ಮಾಪನವು ಯೋಗ್ಯತಾ ದೃಢೀಕರಣದ ಅವಿಭಾಜ್ಯ ಅಂಗವಾಗಿರುವುದರಿಂದ ಮಂಡಲಿಯನ್ನು 'ಉನ್ನತ ಶಿಕ್ಷಣದ ಯೋಗ್ಯತಾ ದೃಢೀಕರಣ ಮಂಡಲಿ' (Accreditation Council for Higher Education) ಎಂದು ಹೆಸರಿಸುವುದು ಉತ್ತಮ.

6. ಯೋಗ್ಯತಾ ದೃಢೀಕರಣ ಸಹಾಯಧನ ಪಡೆಯುವ ವಿಚಾರದಿಂದ ಹೊರತಾಗಿರಬೇಕು; ಕೇವಲ ಶೈಕ್ಷಣಿಕ ಸ್ಥಾನಮಾನ ಹಾಗೂ ಹೆಗ್ಗಳಿಕೆಯ ಕುರುಹಾಗಿ ಮಾತ್ರ ಪರಿಗಣಿಸಬೇಕು. ಉತ್ತಮ ಉದ್ದೇಶ ಸಾಧನೆಗಾಗಿ ಕೆಲವು ಪೂರ್ವನಿಶ್ಚಿತ ಅಂಶಗಳ ಆಧಾರದ ಮೇಲೆ ಎಲ್ಲಾ ರೀತಿಯ ಶಿಕ್ಷಣ ಸಂಸ್ಥೆಗಳಿಗೂ ರಾಜ್ಯ/ಕೇಂದ್ರ ಮಟ್ಟದಲ್ಲಿ ಸಹಾಯಧನ ಪಡೆಯುವ ಅವಕಾಶವಿರಬೇಕು.

7. ಯೋಗ್ಯತಾ ದೃಢೀಕರಣಕ್ಕಾಗಿ ಕೈಗೊಳ್ಳುವ ಮಾಪನಕಾರ್ಯ ಬಾಹ್ಯ ಮತ್ತು ಆಂತರಿಕ ಮಟ್ಟದಲ್ಲಿರಬೇಕು; ಸಮಗ್ರವಾಗಿರಬೇಕು. ದೃಢೀಕರಣ ನೀಡಿದ ಅನಂತರವೂ ವಿಶಿಷ್ಟ ಉದ್ದೇಶಗಳಿಗಾಗಿ ವಿಶೇಷವಾಗಿ ಏರ್ಪಡಿಸಿದಂತೆ ನಿರಂತರ ಮೌಲ್ಯಮಾಪನ ನಡೆಯುತ್ತಿರಬೇಕು.

8. ಮಾಪನದ ನಿರ್ಣಯಾಂಶಗಳು ಮೂಲತಃ ಗುಣಾವಲಂಬಿಯಾಗಿದ್ದರೂ ಸಂಪನ್ಮೂಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಪರಿಮಾಣಾತ್ಮಕ ಮಾಪಕಗಳನ್ನು ಪೂರ್ವಭಾವಿಯಾಗಿ ನಿರೂಪಿಸಿಕೊಂಡು ಬಳಸಬೇಕು. ಶಿಕ್ಷಣ ಸಂಸ್ಥೆಗಳನ್ನು ಎ, ಬಿ, ಸಿ, ವರ್ಗಗಳಲ್ಲಿ ಶ್ರೇಣೀಕರಿಸಲು ಸಾಧ್ಯವಾಗುವಂತಿರಬೇಕು. ನಿರೂಪಿಸಿದ ನಿರ್ಣಯಾಂಶಗಳು ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಒಂದೇ ರೀತಿ ಅನ್ವಯಿಸಿಕೊಳ್ಳಬೇಕಾಗಿಲ್ಲ; ಶಿಕ್ಷಣ ಸಂಸ್ಥೆಯ ವಿಶೇಷತೆಗನುಗುಣವಾಗಿ ಅಗತ್ಯ ಬದಲಾವಣೆ ಮಾಡಿಕೊಳ್ಳುವಂತಿರಬೇಕು.

9. ಶಿಕ್ಷಕರ ನೇಮಕಾತಿ ಹಾಗೂ ಗುಣಮಟ್ಟ ನಿರ್ಧಾರಕ್ಕೆ, ವಿದ್ಯಾರ್ಥಿಗಳ ಆಯ್ಕೆ ಹಾಗೂ ಸಾಧನಮಟ್ಟ ಮಾಪನಕ್ಕೆ ರಾಷ್ಟ್ರೀಯ ಮೌಲ್ಯ ಮಾಪನ ಸೇವಾ ಕಾರ್ಯಗಳನ್ನು ಉಪಯೋಗಿಸಿಕೊಳ್ಳುವುದು ಉತ್ತಮ.

10. ಪದವಿ ಶಿಕ್ಷಣಕ್ಕೆ ಮೊದಲು ವಿದ್ಯಾರ್ಥಿಗಳು 12 ವರ್ಷ ಸಾಮಾನ್ಯ ಶಿಕ್ಷಣ ಪಡೆದಿರುವುದರಿಂದಲೂ ಸಾಮಾನ್ಯ ಹಾಗೂ ವೃತ್ತಿಪರ ಪದವಿ ಶಿಕ್ಷಣದಲ್ಲಿ ವೈವಿಧ್ಯತೆಯಿರುವುದರಿಂದಲೂ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ 'ಸಾಮಾನ್ಯ ಶಿಕ್ಷಣ' ಅಂಶವನ್ನು ಒತ್ತಾಯಿಸುವ ಅಗತ್ಯವಿಲ್ಲ. ಹಾಗೇನಾದರೂ ಐಕ್ಯತೆ, ಸಂಸ್ಕೃತಿ ಪುನರುಜ್ಜೀವನ ಇತ್ಯಾದಿ ರಾಷ್ಟ್ರೀಯ ಗುರಿಗಳಿಗೆ ಆದ್ಯತೆನೀಡುವ ಯಾವುದೇ ಶಿಕ್ಷಣಕ್ರಮ ಆರಂಭಿಸಿದರೆ, ಅದರ ಕಾರ್ಯಕ್ರಮಗಳಲ್ಲೆಲ್ಲಾ ರಾಷ್ಟ್ರೀಯ ಗುರಿಗಳು ಪ್ರತಿಬಿಂಬಿತವಾಗಿರುವಂತೆ ಎಚ್ಚರವಹಿಸಬೇಕು.

ಒಟ್ಟಿನಲ್ಲಿ ಯೋಗ್ಯತಾ ದೃಢೀಕರಣ ವ್ಯವಸ್ಥೆ ನಿರ್ವಹಣೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮೌಲ್ಯಮಾಪನ ನಿರ್ಣಯಾಂಶಗಳನ್ನು ಮತ್ತು ಕಾರ್ಯಕ್ರಮ ವಿವರಗಳನ್ನು ಸ್ಪಷ್ಟೀಕರಿಸಬೇಕಾಗಿದ್ದರೂ ಗೋವಾರಿಕರ್ ವರದಿಯ ಉಳಿದ ಶಿಫಾರಸುಗಳೆಲ್ಲವನ್ನೂ ಒಪ್ಪಿಕೊಳ್ಳಬಹುದಾಗಿದೆ ಎಂಬುದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಕಮ್ಮಟದ ಅಭಿಪ್ರಾಯವಾಗಿದೆ.

ಡಾ|| ಆರ್. ಆರ್. ಕುಲಕರ್ಣಿ

ಭಾರತದ ಆಡಳಿತದಲ್ಲಿ ಜಿಲ್ಲೆಗಳ ಹಾಗೂ ತಾಲ್ಲೂಕುಗಳ ವ್ಯವಸ್ಥೆ—ಒಂದು ಪಕ್ಷಿನೋಟ

ಜಿಲ್ಲೆ ಎಂಬ ಪದಕ್ಕೆ ಆಡಳಿತ ಶಾಸ್ತ್ರಜ್ಞರು ಅನೇಕ ವ್ಯಾಖ್ಯೆಗಳನ್ನು ನೀಡಿದ್ದಾರೆ. ಆದರೆ ಆಕ್ಸ್‌ಫರ್ಡ ಇಂಗ್ಲಿಷ್ ಕೋಶವು ನೀಡಿದ ವ್ಯಾಖ್ಯೆಯು ಹೆಚ್ಚು ಸಮರ್ಪಕವೆನಿಸಿದೆ. A territory marked off for special administrative purpose ಎಂಬ ಆದರ ವ್ಯಾಖ್ಯೆಯು ಅರ್ಥಪೂರ್ಣವಾಗಿದೆ. ಜಿಲ್ಲೆಯು ನಿಜಕ್ಕೂ ಒಂದು ಆಡಳಿತ ಘಟಕವಾಗಿ ಪರಿಣಮಿಸಿದೆ. ಭಾರತೀಯ ಸಂವಿಧಾನವು ಜಿಲ್ಲೆ ಅಥವಾ ಜಿಲ್ಲಾಡಳಿತದ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡದಿರುವುದು ಆಶ್ಚರ್ಯಕರವಾಗಿದೆ. ಆದರೆ 233ನೇ ಕಲಂನಲ್ಲಿ ಮಾತ್ರ ಜಿಲ್ಲಾ ನ್ಯಾಯಾಧೀಶರ ನೇಮಕ ಮಾಡುವ ವಿಷಯದಲ್ಲಿ ಸಾಂದರ್ಭಿಕ ಪ್ರಸ್ತಾಪ ಕಂಡುಬರುತ್ತದೆ. ಸಂಸತ್ತು ಪಾಸು ಮಾಡಿದ ಹಾಗೂ ರಾಜ್ಯವಿಧಾನ ಮಂಡಲಗಳು ಪಾಸುಮಾಡಿದ ಅನೇಕ ಕಾನೂನುಗಳಲ್ಲಿ ಜಿಲ್ಲೆ ಹಾಗೂ ಜಿಲ್ಲಾಧಿಕಾರಿಯ ಬಗ್ಗೆ ಅನೇಕ ದೃಷ್ಟಾಂತಗಳು ಕಂಡುಬರುತ್ತವೆ. ಸಂವಿಧಾನಾತ್ಮಕವಾಗಿ ಜಿಲ್ಲೆಯು ಅಸ್ತಿತ್ವವನ್ನು ಪಡೆಯದಿದ್ದರೂ ಚಾರಿತ್ರಿಕವಾಗಿ ಅದು ಪ್ರಖ್ಯಾತಿಯನ್ನು ಹೊಂದಿದೆ. ಜಿಲ್ಲೆಯು ಐತಿಹಾಸಿಕವಾಗಿ ಯಾವ ರೀತಿಯಾಗಿ ಬೆಳೆದುಬಂದಿದೆ ಎಂಬ ಸಂಗತಿಯು ಅಷ್ಟೇ ವರ್ಣಮಯವಾಗಿರುತ್ತದೆ. ಅದರ ಪ್ರಮುಖ ಚಾರಿತ್ರಿಕ ಹಂತಗಳನ್ನು ಸಂಕ್ಷಿಪ್ತವಾಗಿ ವಿವರಿಸುವುದು ಆವಶ್ಯಕವೆನಿಸಿದೆ.

ಅತ್ಯಂತ ಪ್ರಾಚೀನ ಕಾಲದಲ್ಲಿ ಇದ್ದ ಆಡಳಿತ ವ್ಯವಸ್ಥೆಯ ಬಗ್ಗೆ ಮನು ಋಷಿಯು ಪ್ರಸ್ತಾಪಿಸುತ್ತಾನೆ. ಗ್ರಾಮವು ಸ್ವಾವಲಂಬಿಯಾದ ಗಣರಾಜ್ಯವಾಗಿದ್ದಿತು. ಅದೊಂದು ಸ್ಥಿರವಾದ ಆರ್ಥಿಕ ಸಮತೋಲನವನ್ನು ಹೊಂದಿದ ಸಾಮಾಜಿಕ ಸಾಮರಸ್ಯವನ್ನು ಪಡೆದ ರಾಜಕೀಯ ಘಟಕವಾಗಿದ್ದಿತು. ಪ್ರತಿಯೊಂದು ಗ್ರಾಮವೂ ತನ್ನ ವ್ಯವಹಾರಗಳನ್ನು ಸಾಮುದಾಯಿಕವಾಗಿ ನಿರ್ವಹಿಸುತ್ತಿತ್ತು. ಪ್ರತಿಯೊಂದು ಗ್ರಾಮಕ್ಕೆ ಒಬ್ಬ ಮುಖ್ಯಸ್ಥನಿರುತ್ತಿದ್ದನು. ಸುಮಾರು 1000 ಗ್ರಾಮಗಳ ಸಮುದಾಯಕ್ಕೆ ಒಬ್ಬ ಪ್ರಧಾನ ಅಧಿಕಾರಿಯನ್ನು ನಿಯಮಿಸಿ

ಅವನ ಮೂಲಕ ಸಹಸ್ರ ಗ್ರಾಮಗಳ ಘಟಕದ ವ್ಯವಹಾರಗಳನ್ನು ನಿರ್ವಹಿಸಲಾಗುತ್ತಿತ್ತು. ಆ ಘಟಕವೇ ಜಿಲ್ಲೆಯಾಗಿದ್ದಿತು. ಈ ಸಹಸ್ರ ಸಂಖ್ಯೆಗೆ ಈಗಲಾದರೂ ಅಷ್ಟೇ ಮಹತ್ವವಿದೆ ಕಾಲಚಕ್ರದಲ್ಲಿ ಎಷ್ಟೋ ಶತಮಾನಗಳು ಉರುಳಿ ಹೋಗಿದ್ದರೂ ಇಂದಿಗೂ ಸಾಮಾನ್ಯವಾಗಿ ಪ್ರತಿಯೊಂದು ಜಿಲ್ಲೆಗೆ ಸಾವಿರ ಗ್ರಾಮಗಳು ಇದ್ದೇ ಇರುತ್ತವೆ. ಭಾರತದ ಸುಮಾರು 5 ಲಕ್ಷಗಳಷ್ಟು ಹಳ್ಳಿಗಳು 340ರಷ್ಟು ಜಿಲ್ಲೆಗಳನ್ನು ಆವರಿಸಿಕೊಂಡಿವೆ. ಪ್ರತಿಯೊಂದು ಜಿಲ್ಲೆಯೂ ಸರಾಸರಿ 1400ರಷ್ಟು ಹಳ್ಳಿಗಳನ್ನು ಹೊಂದಿದಂತಾಗುತ್ತದೆ. 1,000 ಹಾಗೂ 1,400 ಇವೆರಡರ ನಡುವಿನ ಅಂತರ ಅಷ್ಟೊಂದು ಗಣನೀಯವಾಗಿರುವುದಿಲ್ಲ.

ಮೊಗಲ್ ಪದ್ಧತಿಯಲ್ಲಿ ಫೌಜುದಾರರು ಜಿಲ್ಲಾಡಳಿತದ ಮುಖ್ಯಸ್ಥರಾಗಿದ್ದರು ಹಾಗೂ ಕಾಝಿಗಳು ಸಾಂಪ್ರದಾಯಿಕ ನ್ಯಾಯಾಧೀಶರಾಗಿದ್ದರು. ಫೌಜುದಾರನು ತನಗೆ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗುತ್ತಿದ್ದನು. ಆದರೆ ಕಾಲಾನುಕ್ರಮದಲ್ಲಿ ಫೌಜುದಾರರು ಹಾಗೂ ಕಾಝಿಗಳು ತಮ್ಮ ಅಧಿಕಾರವನ್ನು ಕಳೆದುಕೊಂಡರು. ಪ್ಲಾಸಿಕದನವು ಈಸ್ಟ್ ಇಂಡಿಯಾ ಕಂಪನಿಯ ರಾಜಕೀಯ ಸ್ಥಿರತೆಯನ್ನು ದೃಢಪಡಿಸಿತು. 1765ರಲ್ಲಿ ಈಸ್ಟ್ ಇಂಡಿಯಾ ಕಂಪನಿಗೆ ದಿವಾಣಿಹಕ್ಕು ದಿಲ್ಲಿಯ ಸಾಮ್ರಾಟನಿಂದ ದೊರಕಿತು. ಬಂಗಾಲ, ಬಿಹಾರ ಹಾಗೂ ಓರಿಸ್ಸಾ ಪ್ರದೇಶಗಳನ್ನು ಒಂದೇ ಪ್ರಾಂತದ ಘಟಕವೆಂದು ಪರಿಗಣಿಸಲಾಗಿತ್ತು. ದಿವಾಣಿ ಎಂಬ ಶಬ್ದಕ್ಕೆ ವ್ಯಾಖ್ಯೆ ಅವಶ್ಯ. ಪ್ರಾಂತೀಯ ಸರಕಾರದ ಆಡಳಿತವು ದಿವಾಣಿ ವಿಭಾಗ ಹಾಗೂ ನಿಜಾಮತ ವಿಭಾಗಗಳೆಂಬ ಶಾಖೆಗಳಲ್ಲಿ ವಿಭಜಿಸಲ್ಪಟ್ಟಿತು.

ದಿವಾಣಿ ಶಾಖೆಯು ದಿವಾಣನ ಅಧಿಕಾರದಲ್ಲಿತ್ತು ಹಾಗೂ ನಿಜಾಮತ ಶಾಖೆಯು ನಿಜಾಮನ ಕೈಯಲ್ಲಿತ್ತು. ನವಾಬನು ಸೈನ್ಯದ ಹಾಗೂ ಕಾರ್ಯಾಂಗದ ಮುಖ್ಯಸ್ಥನಾಗಿದ್ದನು. ಅವನು ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದುಕೊಂಡು ಹೋಗುವುದರ ಜೊತೆಗೆ ಅಪರಾಧಿಗಳಿಗೆ ಶಿಕ್ಷೆ ವಿಧಿಸುತ್ತಿದ್ದನು. ಅಧಿಕಾರ ಹಾಗೂ ಸ್ಥಾನಮಾನಗಳ ದೃಷ್ಟಿಯಿಂದ ದಿವಾಣನು ನವಾಬನಿಗಿಂತ ಕನಿಷ್ಠನಾಗಿದ್ದರೂ ಕಂದಾಯ ವಿಷಯದಲ್ಲಿ ದಿವಾಣನು ಸಾಮ್ರಾಟನಿಗೆ ಅಧೀನನಾಗಿರುತ್ತಿದ್ದನು. ನವಾಬ ಹಾಗೂ ದಿವಾಣ ಇಬ್ಬರೂ ಸಾಮ್ರಾಟನಿಂದ ನೇಮಿಸಲ್ಪಡುತ್ತಿದ್ದರು. ಆದರೆ 1772, ಮೇ 14ರಂದು ವಾರನ್ ಹೇಸ್ಟಿಂಗ್ಸನು ಮಾಡಿದ ನಿಯಮಾವಳಿಯ ಮೇರೆಗೆ ಜಿಲ್ಲೆಯು ಒಂದು ಘಟಕವಾಗಿ ಪರಿಣಮಿಸಿತು ಮಹಮ್ಮದ ರೇಜಾಖಾನ ಹಾಗೂ ರಾಜಾ ಸಿತಾಬ್‌ರಾಯ್ ಎಂಬ ಅಧಿಕಾರಿಗಳನ್ನು ಮುರ್ಶಿದಾಬಾದ ಹಾಗೂ ಪಾಟ್ನಾ ಜಿಲ್ಲೆಗಳ ದಿವಾಣಿ ಕಾರ್ಯಗಳ ನಿರ್ವಹಣೆಗಾಗಿ ನೇಮಕ ಮಾಡಲಾಯಿತು. ಅಂದಿನಿಂದಲೂ ಜಿಲ್ಲೆಯು ಆಡಳಿತದ ಒಂದು ಘಟಕವಾಗಿ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಆದರೆ ಕಾರಣಾಂತರಗಳ ಮೂಲಕ 1774ರಲ್ಲಿ ಜಿಲ್ಲಾಧಿಕಾರಿಗಳನ್ನು

ಹಿಂತೆಗೆದುಕೊಳ್ಳಲಾಯಿತು. ಆದರ ಬದಲಾಗಿ ಆರು ಪ್ರಾಂತೀಯ ಕಂದಾಯ ಸಮಿತಿಗಳನ್ನು ನಿಯಮಿಸಲಾಯಿತು. 1780ರಲ್ಲಿ ನ್ಯಾಯಾಧಿಕಾರಿಗಳನ್ನು ನೇಮಿಸಲಾಯಿತು. ಅವರನ್ನು ದಿವಾಣಿ ಅದಾಲತ್ತುಗಳ ಅಧೀಕ್ಷಕರೆಂದು ಕರೆಯಲಾಗುತ್ತಿತ್ತು. ಈ ಅಧೀಕ್ಷಕರೇ ಜಿಲ್ಲಾ ನ್ಯಾಯಾಧೀಶ ಹುದ್ದೆಯ ಉಗಮಕ್ಕೆ ಕಾರಣರಾದರು. 1787ರಲ್ಲಿ ಅವರ ಕಾರ್ಯಗಳನ್ನು ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸಲಾಯಿತು. ಕಂದಾಯ ಹಾಗೂ ನ್ಯಾಯಿಕ ಅಧಿಕಾರಗಳ ಕೇಂದ್ರೀಕರಣವು ಅಧಿಕಾರಗಳ ಪ್ರತ್ಯೇಕೀಕರಣ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿದೆ ಎಂಬ ಸಂಗತಿಯು ಮನವರಿಕೆಯಾಗಿದ್ದುದರಿಂದ ಲಾರ್ಡ್ ಕಾರ್ನವಾಲೀಸನು 1793ರಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಿಕ ಅಧಿಕಾರಗಳನ್ನು ಬೇರ್ಪಡಿಸಿದನು. ಅಂದಿನಿಂದ ಇಂದಿನವರೆಗೂ ಅದೇ ಹಳೆಯ ಪದ್ಧತಿಯನ್ನನುಸರಿಸಿಕೊಂಡು ಬರಲಾಗಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸಹಿತ ಜಿಲ್ಲೆಯು ಕ್ಷೇತ್ರಾಡಳಿತದ ಒಂದು ಘಟಕವಾಗಿ ಉಳಿದಿದೆ. ಸಾರ್ವಜನಿಕ ವ್ಯವಹಾರಗಳ ನಿರ್ವಹಣೆಗಾಗಿ ಅನುಕೂಲವಾಗುವ ಪ್ರಾದೇಶಿಕ ಘಟಕವೇ ಜಿಲ್ಲೆ. ಜಿಲ್ಲಾಮಟ್ಟದಲ್ಲಿ ಸರಕಾರವು ನಡೆಸುತ್ತಿರುವ ಆಡಳಿತವನ್ನು ಜಿಲ್ಲಾಡಳಿತವೆನ್ನುವರು. ಜಿಲ್ಲಾಡಳಿತವೆಂದರೆ ಸರಕಾರದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳೂ ಆಡಕವಾಗುತ್ತವೆ. ಕಂದಾಯ ವಸೂಲಿಯು ಜಿಲ್ಲಾಡಳಿತದ ಒಂದು ಅಂಶ ಮಾತ್ರ, ಆದರೆ ಅದುವೇ ಜಿಲ್ಲಾಡಳಿತಕ್ಕೆ ಸಮಗ್ರ ವಿಷಯವಾಗಲಾರದು. ಜಿಲ್ಲಾಡಳಿತವು ಸಂಕೀರ್ಣ ಚಟುವಟಿಕೆಗಳ ಜೇನು ಹುಟ್ಟಿನಂತೆ. ಸಾರ್ವಜನಿಕ ಸುರಕ್ಷಿತತೆ, ನಾಗರಿಕರ ಹಿತರಕ್ಷಣೆ, ಶಾಂತಿ ಸುವ್ಯವಸ್ಥೆಗಳ ಪಾಲನೆ, ದಿವಾಣಿ ಹಾಗೂ ಫೌಜುದಾರೀ ನ್ಯಾಯ ವ್ಯವಸ್ಥೆ, ಭೂಕಂದಾಯ, ನೀರಾವರಿಕರ, ಕೃಷಿ ವರಮಾನ ತೆರಿಗೆ, ಮಾರಾಟ ತೆರಿಗೆ, ಸ್ಟ್ಯಾಂಪುಶುಲ್ಕ, ನ್ಯಾಯಾಲಯ ಶುಲ್ಕ, ಅಬಕಾರಿ, ಮನರಂಜನೆ ತೆರಿಗೆ, ವಾಹನಕರ, ಸಾಲಗಳ ವಸೂಲಿ, ಖಜಾನೆ, ಭೂಸುಧಾರಣೆ, ಭೂಸ್ವಾಧೀನ, ಭೂದಾಖಲೆಗಳು, ಕೃಷಿಹಿಡುವಳಿ, ಅಪ್ರಾಪ್ತ ವಯಸ್ಕರ ರಕ್ಷಣೆ, ವಾಣಿಜ್ಯೋದ್ದಿಮೆ, ಸಮುದಾಯ ಅಭಿವೃದ್ಧಿ, ಸಹಕಾರ, ಜನಾರೋಗ್ಯ, ಶಿಕ್ಷಣ, ಸಾಮಾಜಿಕ ಕಲ್ಯಾಣ, ಆಹಾರ ಹಾಗೂ ನಾಗರಿಕ ಪೂರೈಕೆ, ಬರಗಾಲ ಪರಿಹಾರ ಕಾಮಗಾರಿಗಳು, ಪಂಚಾಯತ್ ರಾಜ್ಯ ಸಂಸ್ಥೆಗಳು, ಪುರಸಭೆಗಳು ಹಾಗೂ ನಗರ ಸಭೆಗಳು ಮುಂತಾದ ಈ ಎಲ್ಲ ವಿಷಯಗಳೂ ಆಡಕವಾಗುತ್ತವೆ.

ಕೆಲವು ರಾಜ್ಯಗಳನ್ನು ಹೊರತುಪಡಿಸಿದರೆ, ಸಾಮಾನ್ಯವಾಗಿ ನಾವು ಎಲ್ಲ ರಾಜ್ಯಗಳಲ್ಲಿ ಮೂರು ಪ್ರಕಾರಗಳ ಆಡಳಿತ ಘಟಕಗಳನ್ನು ಕಾಣುತ್ತೇವೆ. ಮೊದಲನೆಯ ಹಂತವೇ ಜಿಲ್ಲೆ, ಎರಡನೆಯ ಹಂತ ಉಪವಿಭಾಗ, ಮೂರನೆ ಹಂತ ತಾಲ್ಲೂಕು ಅಥವಾ ತಹಸೀಲು. ಸಮುದಾಯ ಅಭಿವೃದ್ಧಿ ಹಾಗೂ ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಕಾರ್ಯಾಚರಣೆ ಆರಂಭವಾದಂದಿನಿಂದ ಕ್ಷೇತ್ರವೆಂಬ ಘಟಕಕ್ಕೆ ಮಹತ್ವವು ಪ್ರಾಪ್ತವಾಗಿದೆ. ಕ್ಷೇತ್ರವು ತಾಲ್ಲೂಕಿಗಿಂತ ಗಾತ್ರದಲ್ಲಿ ಕನಿಷ್ಟವಾಗಿರುತ್ತದೆ. ಕೆಲವು ರಾಜ್ಯ

ಗಳಲ್ಲಿ ಉಪವಿಭಾಗ ಹಾಗೂ ತಹಸೀಲುಗಳು ಕಾರ್ಯಕ್ಷೇತ್ರಗಳು ಅಷ್ಟೇ ಗಾತ್ರ ವನ್ನು ಹೊಂದಿರುತ್ತವೆ. ಪಂಜಾಬ ರಾಜ್ಯವು ಇದಕ್ಕೆ ದೃಷ್ಟಾಂತವಾಗಿದೆ. ಪಶ್ಚಿಮ ಬಂಗಾಲ ಹಾಗೂ ಬಿಹಾರ ರಾಜ್ಯಗಳಲ್ಲಿ ಉಪವಿಭಾಗದ ಕೆಳಗಿನ ಹಂತ ಕಂಡು ಬರುವುದಿಲ್ಲ. ಕ್ಷೇತ್ರ ಹಾಗೂ ಜನಸಂಖ್ಯೆಗಳನ್ನು ಪರಿಗಣಿಸಿದರೆ ನಮ್ಮ ರಾಷ್ಟ್ರದ ಜಿಲ್ಲೆಗಳ ಗಾತ್ರದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅವುಗಳ ಬಗ್ಗೆ ವಿವರಗಳನ್ನು ಈ ಕೆಳಗೆ ಕಾಣಿಸಿದ ಪಟ್ಟಿಯಲ್ಲಿ ನಮೂದಿಸಲಾಗಿದೆ.

ವಿವಿಧ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಜಿಲ್ಲೆಗಳಲ್ಲಿ ಪ್ರದೇಶ ಹಾಗೂ ಜನಸಂಖ್ಯೆಯ ಸರಾಸರಿ ಪ್ರಮಾಣ

ರಾಜ್ಯಗಳು	ಪ್ರದೇಶ (ಚದುರ ಕಿ.ಮಿ.ಗಳಲ್ಲಿ)	ಜನಸಂಖ್ಯೆ (1981ರ ಜನಗಣತಿಯ ಮೇರೆಗೆ)
1	2	3
1. ಕರ್ನಾಟಕ	10,094	19,54,511
2. ಆಂಧ್ರಪ್ರದೇಶ	11,960	23,28,247
3. ಅಸ್ಸಾಮ್	4,619	11,70,402
4. ಬಿಹಾರ	5,609	22,55,314
5. ಹರಿಯಾಣ	3,684	10,76,885
6. ಗುಜರಾತ್	10,317	17,93,989
7. ಹಿಮಾಚಲ ಪ್ರದೇಶ	4,639	3.56,735
8 ಜಮ್ಮು ಹಾಗೂ ಕಾಶ್ಮೀರ	15,874	4,27.671
9. ಕೇರಳ	2,776	18,18,120
10. ಮಹಾರಾಷ್ಟ್ರ	9,925	20,25,296
11. ಮಧ್ಯಪ್ರದೇಶ	9,854	11,59,530
12. ಮಣಿಪುರ	3,721	2,36,826
13. ಮೇಘಾಲಯ	4,486	2,67,164
14. ನಾಗಾಲ್ಯಾಂಡ್	2,368	1,10.704
15. ಒರಿಸ್ಸಾ	11,977	20,28,482
16. ಪಂಜಾಬ	4,197	13,99,076
17. ರಾಜಸ್ಥಾನ	13,163	13,17,764
18. ಸಿಕ್ಕಿಂ	1,774	79,096
19. ತಮಿಳುನಾಡು	7,225	26,89,337
20. ತ್ರಿಪುರಾ	3,495	6,84,353
21. ಅರುಣಾಚಲ ಪ್ರದೇಶ	9,305	70,204

1		2	3
22.	ಮಿಝೋರಾಂ	7,027	1,64,586
23.	ಉತ್ತರ ಪ್ರದೇಶ	5,257	19,80,000
24.	ಪಶ್ಚಿಮ ಬಂಗಾಲ	5,547	34,11,290

ಕೇಂದ್ರಾಡಳಿತ ಪ್ರದೇಶಗಳು

1.	ಅಂಡಮಾನ ಹಾಗೂ ನಿಕೋಬಾರ ದ್ವೀಪಗಳು	4,124	94,370
2.	ಗೋವಾ, ದಮನ, ದೀವ	1,274	3,62,243
3.	ದಿಲ್ಲಿ	1,483	62,20,406
4.	ಚಂಡೀಘಡ	114	4,51,118
5.	ಪಾಂಡಿಚೇರಿ	123	1,51,118
6.	ದಾದ್ರಾ ಹಾಗೂ ನಗರ ಹವೇಲಿ	491	1,03,676
7.	ಲಕ್ಷದ್ವೀಪ	32	40,249

ಸಂಸ್ಥಾನಗಳ ವಿಲೀನೀಕರಣ ಹಾಗೂ ಭಾಷಾವಾರು ಪ್ರಾಂತಗಳ ರಚನೆ ಇವೆರಡೂ ಸಂಗತಿಗಳು ನಮ್ಮ ರಾಜ್ಯಗಳ ಹಾಗೂ ಜಿಲ್ಲೆಗಳ ಗಾತ್ರವನ್ನು ಹೆಚ್ಚು ಕಡಮೆ ಮಾಡಿವೆ. ಸಂಸ್ಥಾನಗಳ ವಿಲೀನೀಕರಣವು ಚಿಕ್ಕಪುಟ್ಟ ಜಿಲ್ಲೆಗಳ ನಿರ್ಮಾಣಕ್ಕೆ ಎಡೆಮಾಡಿಕೊಟ್ಟಿತು. ಉದಾಹರಣೆಗೆ ಪಂಜಾಬ ರಾಜ್ಯದ ಕಪುರಾಲ ಜಿಲ್ಲೆಯು ಅದಕ್ಕೆ ಹೊಂದಿಕೊಂಡಿರುವ ನೆರೆಯ ಜಲಂಧರ ಜಿಲ್ಲೆಗಿಂತ ಚಿಕ್ಕದಾಗಿದೆ. 1956ರಲ್ಲಿ ಪೆಪ್ಸು ರಾಜ್ಯವು ಪುನರ್ಘಟಿತವಾಯಿತು. ಆದರೆ ಪೆಪ್ಸುರಾಜ್ಯದ ಜನತೆ ಚಿಕ್ಕ ಜಿಲ್ಲೆಗಳ ನಿರ್ಮಾಣಕ್ಕೆ ಒತ್ತಾಯ ಮಾಡಿತು. ಆಡಳಿತಾತ್ಮಕವಾಗಿ ಆ ಜಿಲ್ಲೆಗಳೆಲ್ಲ ನಿಷ್ಪ್ರಯೋಜಕವಾಗಿದ್ದವು. ರಾಜಕೀಯ ಒತ್ತಡವು ಬಲವತ್ತರವಾಗಿದ್ದುದರಿಂದ ಪೆಪ್ಸುರಾಜ್ಯದ ಜಿಲ್ಲೆಗಳು ಪುನರ್ಘಟಿತಗೊಳ್ಳುವ ಅವಕಾಶವನ್ನು ಕಳೆದುಕೊಂಡವು. 1966ರಲ್ಲಿ ಪಂಜಾಬ ರಾಜ್ಯವು ಭಾಷಾವಾರು ತಳಹದಿಯ ಮೇಲೆ ಪುನರ್ಘಟಿತಗೊಂಡಿತು. ಆದಕಾರಣ ಪಂಜಾಬದ ಜಿಲ್ಲೆಗಳು ಅಸ್ತವ್ಯಸ್ತಗೊಂಡವು. ಉದಾಹರಣೆಗಾಗಿ ಅಂಬಾಲಾ, ಕಾಲ್ಕಾ, ಕಾಂಗ್ರಾ ಹಾಗೂ ಗುರುದಾಸಪುರಗಳನ್ನು ಒಡೆದು ಧಾರ್ಮಿಕ ತಹಳದಿಯ ಮೇಲೆ ನೆರೆಯ ಜಿಲ್ಲೆಗಳೊಂದಿಗೆ ವಿಲೀನಗೊಳಿಸಲಾಯಿತು. ಜನಸಂಖ್ಯೆಯ ಪ್ರಮಾಣ ಹಾಗೂ ಕ್ಷೇತ್ರ ಗಾತ್ರ ಇವೆರಡೂ ಸಂಗತಿಗಳನ್ನು ಕಡೆಗಣಿಸಲಾಯಿತು. ಕೆಲವೊಂದು ಜಿಲ್ಲೆಗಳ ಕ್ಷೇತ್ರ ಗಾತ್ರ ಕಡಮೆಯಾಗಿ ಜನಸಂಖ್ಯೆಯ ಪ್ರಮಾಣ ಹೆಚ್ಚಾಯಿತು. ಅದರಂತೆಯೇ ಕೇರಳದಲ್ಲಿ

ಜಿಲ್ಲೆಯ ಗಾತ್ರ 1454 ಚ.ಮೈಲುಗಳಷ್ಟಾಗಿದ್ದರೆ, ರಾಜಸ್ಥಾನದಲ್ಲಿಯ ಜಿಲ್ಲೆಯ ಗಾತ್ರ 6951 ಚ. ಮೈಲುಗಳಷ್ಟಾಗಿರುತ್ತದೆ. ಭಾರತದಲ್ಲಿಯ ಜಿಲ್ಲೆಗಳ ಗಾತ್ರದ ಬಗ್ಗೆ ಕೇಂದ್ರ ಸರಕಾರದ ಒಂದು ಅಧ್ಯಯನ ತಂಡವು ಪರಿಶೀಲನೆಯನ್ನು ಕೈಕೊಂಡಿತು. ಈ ಅಧ್ಯಯನ ತಂಡವು 4000ಕ್ಕಿಂತಲೂ ಹೆಚ್ಚು ಚ.ಕಿ.ಮೀ.ಗಳಷ್ಟು ಹೆಚ್ಚು ಪ್ರದೇಶವನ್ನು ಹಾಗೂ ಒಂದು ದಶಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ಜಿಲ್ಲೆಯು ಹಾಗೂ ಅದೇ ರೀತಿಯಾಗಿ 750ಕ್ಕಿಂತ ಹೆಚ್ಚು ಚ.ಮೈಲುಗಳಷ್ಟು ಪ್ರದೇಶವನ್ನು ಹಾಗೂ 1,50,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ತಾಲ್ಲೂಕು ದಕ್ಷ ಆಡಳಿತಕ್ಕಾಗಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಕಾರ್ಯಾಚರಣೆಗಾಗಿ ಅಸಮರ್ಪಕವಾಗಿರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿತು. ಈ ಮಾನ ದಂಡದ ಆಧಾರದ ಮೇಲೆ ಭಾರತದಲ್ಲಿ 216 ಜಿಲ್ಲೆಗಳು ಹೆಚ್ಚು ಗಾತ್ರವನ್ನು ಹೊಂದಿರುತ್ತವೆ. ಈ ಮಾತು ದಕ್ಷಿಣ ಭಾರತದಲ್ಲಿಯ ಜಿಲ್ಲೆಗಳಿಗೆ ಹೆಚ್ಚಾಗಿ ಅನ್ವಯಿಸುತ್ತದೆ.

ಎಂ. ಎನ್. ಪ್ರಭಾಕರ್

ಔತ್ತರೇಯ ದ್ರಾವಿಡ: ಜಂಘಾ-ಛಾದ್ಯ ಪ್ರಕರಣವು

ಔತ್ತರೇಯ ಸಂಪ್ರದಾಯದ ಶೈಲಿಗಳನ್ನು ಅಭ್ಯಸಿಸುವಾಗ ಮಿಶ್ರಕ ಶೈಲಿಯ ಹಲವಾರು ವರ್ಣನೆಗಳನ್ನು ಕಾಣುತ್ತೇವೆ. ಮಿಶ್ರಕವೆಂದಲ್ಲಿ ಹಲವಾರು ಔತ್ತರೇಯ ಶೈಲಿಗಳ ಮಿಶ್ರಣವೇ ಆಗಿದೆ. ಅಪರಾಜಿತ ಪೃಚ್ಛಾ ಗ್ರಂಥದ 114ನೇ ಅಧ್ಯಾಯದಲ್ಲಿ ಮಿಶ್ರಕಜಾತಿಯ ಪ್ರಾಸಾದಗಳ ವಿವರಣೆಯಿದೆ.

> ಮಿಶ್ರಕಂ ತಲಚ್ಛಂದಂ ಚ ಪೀಠಂ ವೈನಾಗರಂ ಸ್ಮೃತಂ
> ದ್ರಾವಿಡೇ ಚ ಭವೇತ್ ಜಂಘಾ ಶಿಖರಂ ವಿಮಾನೋದ್ಭವಂ

ಮಿಶ್ರಕ ಜಾತಿಯಲ್ಲಿ ಹಲವಾರು ಪ್ರಭೇದಗಳಿದ್ದು ಅವುಗಳಲ್ಲೊಂದು ನಾಗರ ಪೀಠವನ್ನು, ದ್ರಾವಿಡ ಜಂಘಾ ಹಾಗೂ ವಿಮಾನೋದ್ಭವ (?) ಶಿಖರವನ್ನೂ ಮೈಗೂಡಿಸಿಕೊಂಡಿದೆ. ಈ ರೀತಿಯ ಪ್ರಾಸಾದ ರಚನೆಗಳು ಹಲವಾರು. ಇವು ಶಾಸ್ತ್ರ ಸಮ್ಮತವೆನಿಸಿತು. ಈ ರೀತಿಯ ರಚನೆಗಳು ವೈವಿಧ್ಯಮಯ ಪ್ರಯೋಗ ಶೀಲತೆಗೆ ಕಾರಣವಾಯಿತೆನ್ನಬಹುದು. ಇಂತಹ ಪ್ರಯೋಗಗಳನ್ನು ಹೆಚ್ಚಾಗಿ ಹೊಯ್ಸಳರ ಕಾಲದಲ್ಲಿ ಕಾಣುತ್ತೇವೆ. ಜಗತಿಮೂಲತಃ ನಾಗರಶೈಲಿಯ ಲಕ್ಷಣವೆನಿಸಿದ್ದರೂ ನಾಗರ ಪೀಠಗಳನ್ನೊಳಗೊಂಡ ದ್ರಾವಿಡ ಪ್ರಾಸಾದ ರಚನೆಯು ಸ್ವೀಕೃತವಾಯಿತು. ಈ ರಚನೆಗಳು ಚಿತ್ತಾಕರ್ಷಕವೆನ್ನಿಸುವುದರೊಂದಿಗೆ ಅಧ್ಯಯನಕ್ಕೆ ತೊಡಕಾದದ್ದೂ ಉಂಟು. ಪ್ರಸ್ತುತ ಲೇಖನದಲ್ಲಿ ಔತ್ತರೇಯ ದ್ರಾವಿಡ ಶೈಲಿಯ ದೇವಾಲಯಗಳ ಜಂಘಾ ಹಾಗೂ ಛಾದ್ಯರಚನೆಯನ್ನು ವಿವರಿಸಲು ಯತ್ನಿಸಲಾಗಿದೆ.

ಔತ್ತರೇಯ ದ್ರಾವಿಡಶೈಲಿಯ ವಿವರಣೆಯ ಪ್ರಕಾರ "ಪೀಠೋರ್ಧ್ವೇ ಕರ್ಣ ರೇಖಾಷ್ಟ ಭೂಮಿಕಾ ಕ್ರಮಸಂಸ್ಥಿತಾಃ" ಎಂದು ಗುರುತಿಸಿದ್ದು ಪೀಠಾನಂತರ ಭೂಮಿ ಅಥವಾ ಭೂಮಿಕಾ ರಚನೆಯಿದೆ ಭೂಮಿ ರಚನೆಯಲ್ಲಿ ಜಂಘಾ ಹಾಗೂ ಕೂಟಗಳೇ ಪ್ರಮುಖ ಅಂಗಗಳು.

ಮೊದಲ ಭೂಮಿಯ ಜಂಘಾ ಭಾಗವೇ ಆಲಯದ ಭಿತ್ತಿರಚನೆಗೆ ಪರ್ಯಾಯವಾಗಿ ಮೇಲ್ಕಂಡ ವಿವರಣೆಯಲ್ಲಿ ಗುರುತಿಸಲ್ಪಟ್ಟಿದೆಯೆಂದು ಗಮನಿಸಬೇಕು. ದ್ರಾವಿಡ ಶೈಲಿಯಲ್ಲಿ ಪೂರ್ಣ ಪ್ರಮಾಣದ ಭಿತ್ತಿ ರಚನೆಯು ಒಂದು ರೀತಿಯಲ್ಲಿ ಗೌಣವೆಂದೇ

ಹೇಳಬೇಕು. ಆದರೆ ದೀಪಾರ್ಣವ ಗ್ರಂಥದಲ್ಲಿ "ದ್ರಾವಿಡೀ ಜಂಘಾ" ಎಂಬ ಪ್ರಭೇದವನ್ನು ಗುರುತಿಸುವುದರಿಂದ ಸಂಪೂರ್ಣವಾಗಿ ಅಲ್ಲಗಳೆಯಲಾಗದು.

ಔತ್ತರೇಯ ದ್ರಾವಿಡ ಪೀಠ ರಚನೆಯಲ್ಲಿ ನಾಲ್ಕಾರು ಪಟ್ಟಿಕೆಗಳ ಅಥವಾ ಹಲವಾರು ಸ್ತರಗಳಿಂದ ಕೂಡಿದ ರಚನೆಯು, ಔನ್ನತ್ಯದಿಂದ ಕೂಡಿದ್ದು ಭಿತ್ತಿರಚನೆಯನ್ನು ಕಿರಿದಾಗಿಸಿದೆ. ಬೇಲೂರು ಹಳೇಬೀಡುಗಳಲ್ಲಿ ಜಗತಿಯ ಮೇಲೆ ಪೀಠ ರಚನೆಯಿದ್ದು ಈ ಪೀಠವು ಹಲವಾರು ಪಟ್ಟಿಕೆಗಳಿಂದ ಕೂಡಿದೆ. ತದನಂತರ ಹಲವಾರು ದೇವತಾ ಮೂರ್ತಿಗಳನ್ನುಳ್ಳ ಫಲಕಗಳಿದ್ದು ನಂತರ, ಕೂಟಛಾದ್ಯ ರಚನೆಯಿದೆ. ಕೂಟ ಛಾದ್ಯದನಂತರ ಕುಡ್ಯಸ್ತಂಭಗಳ ರಚನೆಯಿದ್ದು ಇವು ಮೂಲ ಭಾವಣೆಯೊಡನೆ ಸೇರುತ್ತದೆ. ಈ ದೇವಾಲಯಗಳಲ್ಲಿ ಲೀಲಾ ಮೂರ್ತಿಗಳುಳ್ಳ ಫಲಕಗಳೇ ಪ್ರಮುಖವಾಗಿ ಜಂಘಾಭಾಗವನ್ನು ಆಕ್ರಮಿಸುತ್ತದೆ. ಈ ರಚನೆಗಳು ಆವರಿಸಿದ ಸ್ಥಳ ಕಿರಿದಾದರೂ ಅವುಗಳ ರಚನೆ ಗಮನಾರ್ಹವಾದುದು.

ಔತ್ತರೇಯ ಗ್ರಂಥಗಳು ಭಿತ್ತಿಭಾಗವನ್ನು ಮಂಡೋವರವೆಂದು ಗುರುತಿಸುತ್ತದೆ. ಅಪರಾಜಿತ ಪೃಚ್ಛಾ ಗ್ರಂಥದ ಸಂಪಾದನಕಾರರು ಮಂಡೋವರವನ್ನು ಮಂಡಾದ್ರಿ ಮೂಲದ ನಿಶ್ಪತ್ತಿಯೆನ್ನುತ್ತಾರೆ. ಮಂಡೋವರದ ರಚನೆ ಇಂತಿದೆ:

> ವಿಸ್ತಾರ ಸಮಉತ್ಸೇಧೇ ಯಾವತ್ ಪ್ರಥಮಭೂಮಿಕಾ
> ಶೃಂಗಕೂಟೋದಯಂ ತ್ಯಕ್ತ್ವಾ ಶೇಷಂಮಂಡೋವರಂಭವೇತ್
> ವಿಮಾನೇಭೂಮಿಜೇ ಚೈವ ವರಾಟೇಚ ತಥೈವಚ
> ದ್ರಾವಿಡೇ ಚೈವ ಉತ್ಸೇಧಂ ತಾವತ್ಪೀಠೋರ್ಧ್ವ ಮಸ್ತಕಂ

ದ್ರಾವಿಡ ಶೈಲಿಯಲ್ಲಿ ಹನ್ನೆರಡು ಭೂಮಿಯವರೆಗೆ ರಚನೆಗೆ ಅವಕಾಶವಿದೆ. ಮೊದಲ ಭೂಮಿಯ ಶೃಂಗ ಕೂಟಗಳ ಭಾಗವನ್ನು ಹೊರತುಪಡಿಸಿದ ಭಾಗವೇ ಜಂಘಾ ಅಥವಾ ಮಂಡೋವರವೆನ್ನಿಸಿದೆ. ಔತ್ತರೇಯ ಸಂಪ್ರದಾಯದ ಇತರ ಶೈಲಿಗಳ ಮಂಡೋವರ ರಚನೆಯೂ ದ್ರಾವಿಡ ಶೈಲಿಯ ರಚನೆಗಿಂತ ಹೆಚ್ಚು ಭಿನ್ನವೆನಿಸಿಲ್ಲ.

ಪ್ರಾಸಾದಮಂಡನ ಗ್ರಂಥದಲ್ಲಿ ನಾಗರಾದಿ ಶೈಲಿಗಳನ್ನು ವಿವರಿಸುತ್ತಾ "ಪೀಠೋರ್ಧ್ವೇ ಉದಯಶ್ಚೈವ ಥಾದ್ಯಾಂತೇ ನಾಗರಾದಿಷು" ಎಂದು ಪೀಠದ ಮೇಲಿಂದ ಸಜ್ಜೆಯವರೆಗಿನ ಭಾಗವನ್ನು ಮಂಡೋವರವೆಂದು ಬಣ್ಣಿಸಿದೆ. ಮಂಡೋವರದ ಅಲಂಕರಣವು ನಾಲ್ಕು ಪ್ರಭೇದಗಳೆಂದು ದೀಪಾರ್ಣವ ಗ್ರಂಥವು ಗುರುತಿಸಿದ್ದು ಈ ವಿವರಗಳನ್ನು ಕುರಿತ ಭಾಗವು ಈ ರೀತಿಯಿದೆ:

> ನಾಗರೀಚ ತಥಾಲಾಟೀ ವೈರಾಟೀ ದ್ರಾವಿಕೀತಥಾ
> ಶುದ್ಧಾ ತುನಾಗರೀಖ್ಯಾತಾ ಪರಿಕರ್ಮ ವಿವರ್ಜಿತಾ
> ಸ್ತ್ರೀ ಯುಗ್ಮ ಸಂಯುತಾ ಲಾಟೀ ವೈರಾಟೀ ಪತ್ರ ಸಂಕುಲಾ
> ಮಂಜರೀ ಬಹುಲಾ ಕಾರ್ಯಾ ಜಂಘಾಚ ದ್ರಾವಿಡೀ ಸದಾ

ನಾಗರೀಜಂಘಾ ರಚನೆಯು ಶುದ್ಧ ಹಾಗೂ ಸಾದಾ ರಚನೆಯೆಂದು ಗುರುತಿಸ

ಲ್ಪಟ್ಟಿದೆ. ಲಾಟೀ ಶೈಲಿಯಲ್ಲಿ ಸ್ತ್ರೀ ಯುಗ್ಮಗಳನ್ನು ಜಂಘಾ ಭಾಗದ ಅಲಂಕರಣದಲ್ಲಿ ಅಳವಡಿಸಿರುವುದನ್ನು ಶಾಸ್ತ್ರಗಳು ಸಮ್ಮತಿಸಿವೆ.

ವೈರಾಟೀ ಪ್ರಭೇದದಲ್ಲಿ ಕಮಲ ಪತ್ರಗಳ ರಚನೆಯನ್ನು ಪ್ರಾಸಾದ ಮಂಡನದ ಸಂಪಾದನಕಾರರು ಗುರುತಿಸುತ್ತಾರೆ. ದ್ರಾವಿಡೀ ಜಂಘಾರಚನೆಯು ಭಿತ್ತಿಯಲ್ಲಿ ಹಲವಾರು ಶೃಂಗಗಳ ಅಲಂಕರಣವನ್ನು ಅಳವಡಿಸಿಕೊಂಡಿದ್ದು ವಿಶೇಷ ಶೋಭೆಯನ್ನುಂಟುಮಾಡುತ್ತದೆ. ಈ ನಾಲ್ಕು ಪ್ರಭೇದಗಳನ್ನು ಪ್ರತ್ಯೇಕ ಶೈಲಿಗಳಲ್ಲಿ ಸೂಚಿಸಿದ್ದರೂ ಚಾಲುಕ್ಯ ಹಾಗೂ ಹೊಯ್ಸಳರ ಕಾಲದಲ್ಲಿ ಮೀಳಿತವಾಗಿ ಬಳಸಿದ್ದನ್ನು ಗುರುತಿಸಬಹುದು. ಆ ಕಾಲದ ಬಸದಿಗಳಲ್ಲಿ ಭಿತ್ತಿರಚನೆಯು ಅಲಂಕರಣವಿಲ್ಲದೆ ನಿರ್ಮಾಣಗೊಂಡುದೇ ಹೆಚ್ಚು. ದೇವಾಲಯಗಳ ಬಹುಪಾಲು ಜಂಘಾ ಭಾಗಗಳಲ್ಲಿ ಶೃಂಗ ಮಾದರಿಗಳನ್ನು ಅಲಂಕರಣಕ್ಕಾಗಿ ಕಂಡರಿಸಿದ್ದು ನಾಗರ, ಭೂಮಿಜ, ದ್ರಾವಿಡ ಇತ್ಯಾದಿ ಶೈಲಿಗಳ ವಿವಿಧ ಮಾದರಿಗಳನ್ನು ಪ್ರದರ್ಶಿಸಿದ್ದಾರೆ. ವಿದ್ವಾಂಸ ಎಂ. ಎ. ಢಾಕೆಯವರು ಮಂಡೋವರದಲ್ಲಿನ ಅಲಂಕಾರಿಕ ಶೃಂಗ ಲಕ್ಷಣಗಳನ್ನಾಧರಿಸಿ ನಾಗರ, ಭೂಮಿಜ ಶೈಲಿಗಳನ್ನು ಗುರುತಿಸಲು ಶ್ರಮಿಸಿದ್ದಾರೆ.

ಕುಬಟೂರಿನ ಶಾಸನರೀತ್ಯಾ, "ದ್ರಾವಿಡ ಭೂಮಿಜ ಪಿರಿದುಂ ನಾಗರ ಮೆಂಬ ಬಹು ವಿಧದ ಭದ್ರೋಪೇತದಿಂದ" ಎಂಬ ಶಾಸನದ ಒಕ್ಕಣೆ ಜಂಘಾ ಅಲಂಕರಣೆಗೆ ಸಂಬಂಧಿಸಿದೆ 'ಮಂಜರೀ' ಎಂದು ಶಾಸ್ತ್ರ ಗ್ರಂಥಗಳು ಗುರುತಿಸಿರುವುದನ್ನು ಶಾಸನವು ಭದ್ರೋಪೇತದ ಮೇಲಿರುವ ಅಥವಾ ಜಂಘಾ ಭಾಗದ ಮೇಲಿರುವ ಶೃಂಗಾಕೃತಿಗಳನ್ನು ನಿರ್ದೇಶಿಸುತ್ತದೆ.

ಗರ್ಭ ಗೃಹದ ರಚನೆಗಳು ಮೂಲತಃ ಚತುರಶ್ರಾಕಾರವೆನಿಸಿದ್ದರೂ ತ್ರಯಂಗ, ಪಂಚಾಂಗ, ಸಪ್ತಾಂಗ, ನವಾಂಗ ರಚನೆಗಳು ನಕ್ಷತ್ರಾಕಾರವೆಂಬ ಭಾವನೆ ಮೂಡಿಸುವುದುಂಟು ಈ ಅಂಗರಚನೆಗಳು ಪೀಠ ಜಂಘಾದಿಗಳಿಂದ ಮೇಲಕ್ಕೇರುತ್ತಾ ಕಿರಿದಾಗಿ ಅಂತ್ಯಗೊಳ್ಳುತ್ತದೆ. ಅಂಗ ಉಪಾಂಗ ರಚನೆಗಳು, ಕರ್ಣ, ಭದ್ರ, ರಥ, ಪ್ರತಿ ರಥ, ಇತ್ಯಾದಿ ಶಬ್ದಗಳಿಂದ ಗುರುತಿಸಲ್ಪಡುತ್ತದೆ. ಇವನ್ನೇ ಹಿಂಜೆಣೆ ಮುಂಜೆಣೆಯೆಂದೂ ಜಂಘಾ ಭಾಗದಲ್ಲಿ ಅಂಗಗಳನ್ನು ಫಾಲನಾ ಎಂದು ಗುರುತಿಸುತ್ತಾರೆ.

"ತ್ರಿಪಂಚ ಸಪ್ತ ನವಾಂತಂ ಫಾಲನೋಪಾಂಗ ಬಾಹ್ಯತಃ"

ಕೆಲವು ರಚನೆಗಳಲ್ಲಿ ಮಂಡೋವರವು ಕೇವಲ ಜೋಳಾದ ಭಿತ್ತಿ ಭಾಗವನ್ನು ಪ್ರತಿನಿಧಿಸಿದೆ. ಜೋಳಾದ ಭಾಗವನ್ನು ಸಾರ್ಥಕ್ಯಗೊಳಿಸಲು ಕುಡ್ಯಸ್ತಂಭಗಳನ್ನು ನಿರ್ಮಿಸಿದರು. ಮೂಲತಃ ಇದು ಭಿತ್ತಿಯೇ ಹೊರತು ಸ್ವತಂತ್ರ ಸ್ತಂಭಗಳಲ್ಲ. ಉದಾಹರಣೆಗಾಗಿ ಶೆಟ್ಟಿಕೆರೆಯ ಯೋಗಮಾಧವ ದೇವಾಲಯದ ಭಿತ್ತಿ ರಚನೆಯನ್ನು ನೋಡಬಹುದು. ಹಿಂಜೆಣೆ ಮತ್ತು ಮುಂಜೆಣೆಗಳು ಕೂಡುವಲ್ಲಿ ಸ್ತಂಭಗಳನ್ನು ಕಡೆಯುವ ಪ್ರಯತ್ನವಿದೆ. ನಕ್ಷತ್ರಾಕಾರದ ದೇವಾಲಯಗಳ ಅಂಗಗಳನ್ನು ಸ್ತಂಭ

ಗಳೋಪಾದಿಯಲ್ಲಿ ಕಡೆದಿದ್ದನ್ನು ಅರಸೀಕೆರೆಯ ಶಿವಾಲಯದಲ್ಲಿ ಕಾಣಬಹುದು. ಇವನ್ನು ಕುಡ್ಯ ಸ್ತಂಭಗಳೆಂದೇ ಗುರುತಿಸಬೇಕು.

ಜಂಘಾ ಭಾಗದ ಪ್ರತಿ ಅಂಗಗಳ ಅಂಚುಗಳಲ್ಲಿ ನೀಳವಾದ ಅಣುಕು ಸ್ತಂಭಗಳ ರಚನೆಯನ್ನು ಭಿತ್ತಿಯುಗಲಕ್ಕೂ ರಚಿಸಿರುವುದನ್ನು ಬೆಳವಾಡಿಯ ವೀರನಾರಾಯಣ ದೇವಾಲಯದಲ್ಲಿ ಕಾಣಬಹುದು. ಈ ರೀತಿಯ ಸ್ತಂಭರಾಜಿಯ ನಿರ್ಮಾಣ ಹಲವಾರು ದೇವಾಲಯಗಳಲ್ಲಿ ಕಂಡುಬರುತ್ತದೆ.

ಬಹುಶಃ ಅತಿ ಎತ್ತರದ ಜಂಘಾರಚನೆಯು ಡಂಬಳದ ದೊಡ್ಡಬಸಪ್ಪನ ಗುಡಿಯಲ್ಲಿ ಕಂಡುಬರುತ್ತದೆ. ಭಿತ್ತಿ ಭಾಗದಲ್ಲಿ ಶೃಂಗಾಕೃತಿಗಳನ್ನೂ ಕಡೆದಿದ್ದು ಮಂಟಪಗಳಂತೆ ಸ್ತಂಭಗಳನ್ನಾಧರಿಸಿ ನಿಂತಿರುವುದನ್ನೂ ಗುರುತಿಸಬಹುದು.

‘ಮಂಜರೀ’ ರಚನೆಯು ಕೇವಲ ಔತ್ತರೇಯ ದೇವಾಲಯಗಳಿಗೆ ಸೀಮಿತಗೊಂಡಿಲ್ಲ. ಪಟ್ಟದಕಲ್ಲಿನ ಪಾಪನಾಥದ ದೇವಾಲಯದ ಭಿತ್ತಿಯ ಅಲಂಕರಣದಲ್ಲಿ ಪ್ರಕಟಗೊಂಡ ಶೃಂಗಾರಕೃತಿಗಳು ಚೈತ್ಯಗೃಹದ್ವಾರವನ್ನೂ ನೆನಪಿಸುತ್ತದೆ. ಇದೇ ರೀತಿಯ ಅಲಂಕರಣವನ್ನು ಐಹೊಳೆಯ ಗೌಡರ ಗುಡಿಯ ಗರ್ಭಗೃಹದ ಹೊರಮೈಯಲ್ಲಿ ಮತ್ತು ಮಹಾಕೂಟೇಶ್ವರ ದೇವಾಲಯದ ಬಲಭಾಗದ ಜಾಲಂಧ್ರದ ಮೇಲೆ ಗುರುತಿಸಬಹುದು. ಪಾಪನಾಥ ದೇವಾಲಯದ ಬಾಗಿದ ವಿಮಾನ ರಚನೆಯನ್ನೂ ಆದರ ಮೂಲವನ್ನು ಗರುತಿಸುವಲ್ಲಿ ಈ ಅಲಂಕರಣಗಳು ನೆರವಾಗುವ ಸಾಧ್ಯತೆಯಿದೆ. ಔತ್ತರೇಯ ಹಾಗೂ ದಾಕ್ಷಿಣಾತ್ಯ ಸಂಪ್ರದಾಯಗಳು ಕವಲೊಡೆಯುವ ಹಾದಿಯಲ್ಲಿ ಪಾಪನಾಥ ದೇವಾಲಯವು ರಚನೆಗೊಂಡಿದೆ ಎಂದು ಪ್ರಮುಖವಾಗಿ ಗಮನಿಸಬೇಕು.

ಲಾಟೀ ಪ್ರಭೇದದ ಜಂಘಾ ರಚನೆಯಲ್ಲಿ ಸ್ತ್ರೀಯುಗ್ಮಗಳನ್ನು ಕಡೆಯಲು ಅವಕಾಶವಿದೆಯಷ್ಟೆ. ಪಾಪನಾಥ ಮುಂತಾದ ದೇವಾಲಯಗಳಲ್ಲಿಯೂ ಭಿತ್ತಿಯ ಮೇಲೆ ದಂಪತಿ ಶಿಲ್ಪವನ್ನು ಕಾಣುತ್ತೇವೆ. ಭಿತ್ತಿಯ ಚೈತ್ಯಗೃಹ ದ್ವಾರಾಕೃತಿಯ ಕೆಳಗೆ ದೇವತೆಗಳ ಲೀಲಾವಿಲಾಸ ಶಿಲ್ಪಗಳನ್ನು ಕಾಣುತ್ತೇವೆ. ಈ ರೀತಿಯ ರಚನೆಯೂ ಸಂಪ್ರದಾಯವೆನ್ನಿಸಿತು. ಅರಸೀಕೆರೆಯ ದೇವಾಲಯವನ್ನು ಗಮನಿಸಿದಾಗ ಇದು ಮೂಲತಃ ಶಿವಾಲಯವೆನಿಸಿದ್ದರೂ ನಕ್ಷತ್ರಾಕಾರದ ಗರ್ಭಗೃಹದ ಹೊರಾಂಗಣದಲ್ಲಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳು ಹೆಸರುಗಳೊಂದಿಗೆ ಪ್ರದಕ್ಷಿಣಾನುಸಾರವಾಗಿ ಕಡೆಯಲ್ಪಟ್ಟಿದೆ. ಇದರಿಂದ ದೇವಾಲಯವನ್ನು ಶೈವ ಅಥವಾ ವೈಷ್ಣವ ಎಂದು ವರ್ಗೀಕರಿಸಲಾಗದು. ಅಂದಿನ ರೂವಾರಿಗಳು ಕಾರ್ಯದಲ್ಲಿ ತಾಂತ್ರಿಕ ಕುಶಲತೆಗೆ ಗಮನವಿರಿಸಿದ್ದರೇ ಹೊರತು ಶೈವ ಅಥವಾ ವೈಷ್ಣವ ಎಂಬ ಧಾರ್ಮಿಕ ಸಂಪ್ರದಾಯಗಳು ಅವರನ್ನು ಕಾಡಲಿಲ್ಲ ಎಂದು ಗಮನಿಸಬಹುದು. ಚತುರ್ವಿಂಶತಿ ಮೂರ್ತಿಗಳ ಕಂಡರಣೆಯನ್ನು ಜಾವಗಲ್ಲು ಹಾಗೂ ನುಗ್ಗೆಹಳ್ಳಿಯಲ್ಲಿರುವ ಜಗತಿಯುಳ್ಳ ಲಕ್ಷ್ಮೀನರಸಿಂಹ ದೇವಾಲಯದಲ್ಲಿಯೂ ಕಾಣಬಹುದು. ಅರಸೀಕೆರೆಯ ದೇವಾಲಯದಲ್ಲಿ

ಕಂಟಕವುಳ್ಳ ಪೀಠ ರಚನೆಯಿದ್ದು, ಕಂಟಕದನಂತರ ವೇದಿಕೆಯಂತಿದ್ದು ವಿಷ್ಣು ಮೂರ್ತಿಗಳು ರಚಿಸಲ್ಪಟ್ಟಿವೆ. ಈ ಮೂರ್ತಿಗಳ ಮೇಲ್ಭಾಗದಲ್ಲಿ ಕುಡ್ಯ ಸ್ತಂಭಗಳ ರಚನೆಯಿದ್ದು ಬಾಗಿದ ಛಾದ್ಯ ರಚನೆಯನ್ನು ಆಶ್ರಯಿಸುತ್ತದೆ. ನಾಗರ ಶೈಲಿಯ ಜಂಘಾ ಅಥವಾ ಮಂಡೋವರ ರಚನೆಯಲ್ಲಿಯೂ ದೇವತಾ ವಿಗ್ರಹಗಳನ್ನು ಕಡೆಯುವ ಸಂಪ್ರದಾಯವಿದೆ.

ಕರ್ಣೇಶ್ವಷ್ಟೌಚದಿಕ್ಪಾಲಾಃಪ್ರಾಚ್ಯದಿಷು ಪ್ರದಕ್ಷಿಣಂ
ನಟೇಶಃ ಪಶ್ಚಿಮೇ ಭದ್ರೇ ಹ್ಯಂದಕ್ಯೈಃ ಸಹದಕ್ಷಿಣೇ
ಚಂಡಸ್ಯಚೋತ್ತರೇದೇವೀ ದಂಷ್ಟ್ರಾನನಸುಶೋಭಿತಾ

ಅಪರಾಜಿತ ಪೃಚ್ಛಾ ಗ್ರಂಥದ ಪ್ರಕಾರ ಜಂಘಾ ರಚನೆಯಲ್ಲಿ ಪ್ರದಕ್ಷಿಣಾನುಸಾರ ಅಷ್ಟಮೂಲೆಗಳಲ್ಲಿ ದಿಕ್ಪಾಲಕರು, ಪಶ್ಚಿಮದ ಭದ್ರೋಪೇತದಲ್ಲಿ ನಟರಾಜಶಿಲ್ಪ, ದಕ್ಷಿಣದಲ್ಲಿ ಅಂಧಕೇಶ್ವರ ಉತ್ತರ ದಿಕ್ಕಿನಲ್ಲಿ ವಿಕೃತ ಸ್ವರೂಪಳಾದ ಚಂಡಿಕಾದೇವಿ ವಿಗ್ರಹವನ್ನು ಕಂಡರಿಸಲು ಶಾಸ್ತ್ರಗಳು ನಿರ್ದೇಶಿಸಿದೆ. ನಾಗರ ಜಾತಿಯಲ್ಲಿ ಕಲ್ಪಿಸಿದ ಈ ಅವಕಾಶವನ್ನೂ ಇತರ ಶೈಲಿಗಳಿಗೂ ರೂವಾರಿಗಳು ವಿಸ್ತರಿಸಿದರು ಎನ್ನಲು ಸಾಧ್ಯವಿದೆ.

ಪಂಚಾಂಗ, ಸಪ್ತಾಂಗ ಇತ್ಯಾದಿ ರಚನೆಗಳುಳ್ಳ ಚತುರಶ್ರಾಕಾರದ ಗರ್ಭ ಗೃಹದ ಹೊರವಲಯಗಳಲ್ಲಿ ದೇವಕೋಷ್ಠ ರಚನೆಗಳಿದ್ದು ಇವೂಭದ್ರೋಪೇತ ರಚನೆ ಗಳೆನ್ನಿಸಿದೆ. ಭದ್ರಕೋಷ್ಠಗಳೂ ಮಂಡೋವರ ಸ್ಥಾನವನ್ನಾಕ್ರಮಿಸಿದ್ದು ಶೃಂಗ ರಚನೆಗಳಿಂದ ಕೂಡಿವೆ.

ಜಂಘಾ ಅಥವಾ ಮಂಡೋವರ ರಚನೆಯು ಛಾದ್ಯ ರಚನೆಯೊಂದಿಗೆ ಅಂತ್ಯ ಗೊಳ್ಳುತ್ತದೆ. ಛಾದ್ಯವೆಂದಲ್ಲಿ ಛಾದರ; ಮೇಲಿನ ಹೊದಿಕೆ. ಛಾದ್ಯದ ನಂತರ ಭೂಮಿಯ ರಚನೆ ಅಥವಾ ಕೈಪಿಡಿಯ ಗೋಡೆಯನ್ನು ಕಾಣುತ್ತೇವೆ. ದಾಕ್ಷಿಣಾತ್ಯ ದೇವಾಲಯಗಳಲ್ಲಿ ಪ್ರಸ್ತರದ ಕಪೋತ ಭಾಗವೇ ಛಾದ್ಯವೆನಿಸುತ್ತದೆ. ಕಪೋತದ ಕೆಳಗೆ ಉತ್ತರ, ವಾಚನ, ವಲಭಿ ಮುಂತಾದ ರಚನೆಗಳಿದ್ದು ಇವು ಛಾವಣಿಯ ಕೆಳಗಿನ ತೊಲೆ ಇತ್ಯಾದಿ ಭಾಗಗಳನ್ನು ಪ್ರತಿನಿಧಿಸುತ್ತದೆ. ಔತ್ತರೇಯ ರಚನೆಗಳೂ ಇದಕ್ಕಿಂತ ಹೆಚ್ಚು ಭಿನ್ನವೆನಿಸಿಲ್ಲ. ಔತ್ತರೇಯ ದ್ರಾವಿಡ ರಚನೆಯ ಆರಂಭ ಕಾಲದ ದೇವಾಲಯಗಳಲ್ಲಿ ಛಾದ್ಯ ರಚನೆಯೂ ಕಪೋತವೆನಿಸಿ ಕಾಣಿಸಿಕೊಳ್ಳುತ್ತದೆ. ಉತ್ತರ, ವಾಜನಾದಿಗಳಿಗೆ ಬದಲಾಗಿ, ಪಟಿಕಾ, ವಸಂತಪಟ್ಟಿಕಾ ಇತ್ಯಾದಿ ಸ್ತರ ಗಳಿವೆ. ಈ ರೀತಿಯ ರಚನೆಯನ್ನು ಕುಕ್ಕನೂರಿನ ಕಲ್ಲೇಶ್ವರ, ಡಂಬಳದ ದೊಡ್ಡ ಬಸಪ್ಪ, ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯಗಳಲ್ಲಿ ಗುರುತಿಸಬಹುದು. ಇದು ಪ್ರಾರಂಭಿಕ ಲಕ್ಷಣವೂ ಹೌದು. ತದನಂತರ ಕಾಲದಲ್ಲಿ ಛಾದ್ಯವು ಸ್ವತಂತ್ರ ಸ್ತರ ವೆನಿಸಿದ್ದು ಮುಂಚಾಚಿ ಬಾಗಿ ಜಂಘಾ ಭಾಗದ ಅಲಂಕರಣಗಳಿಗೆ ರಕ್ಷಣೆಯನ್ನೊದಗಿ ಸಿವೆ. ಈ ರೀತಿಯ ರಚನೆಯನ್ನು ಹಾವೇರಿಯ ಸಿದ್ದೇಶ್ವರ, ಚೌಡದಾನಪುರದ

ಮುಕ್ತೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಛಾದ್ಯವು ಪ್ರತ್ಯೇಕ ರಚನೆಯೆಂಬು ದನ್ನು ಗಮನಿಸಬೇಕು. ಛಾದ್ಯದ ನಂತರ ಕಪೋತ ರಚನೆಯು ವಿವಿಧಾಕಾರವನ್ನು ತಳೆದು ಭೂಮಿಯ ಭಾಗವೆನಿಸಿದ್ದನ್ನು ಹೊಯ್ಸಳರ ಕಾಲದ ದೇವಾಲಯಗಳಲ್ಲಿ ನಿಚ್ಚಳವಾಗಿ ಕಾಣಬಹುದು. ಮುಂಚಾಚಿದ ಬಾಗಿದ ಛಾದ್ಯ ರಚನೆಯನ್ನು ಮುಖ ಮಂಟಪ ಮುಂತಾದೆಡೆಯಲ್ಲಿ ಪ್ರಾರಂಭದಿಂದ ಗುರುತಿಸಬಹುದು.

ಹಾವೇರಿಯ ಸಿದ್ದೇಶ್ವರ ಹಾಗೂ ಚೌಡದಾನಪುರದ ಮುಕ್ತೇಶ್ವರ ದೇವಾಲಯ ಗಳಲ್ಲಿನ ಭಿತ್ತಿಭಾಗವನ್ನು ದೇವಾಲಯದ ಒಟ್ಟು ಗಾತ್ರದೊಡನೆ ಗಮನಿಸಿದಾಗ ಮಂಡೋವರಕ್ಕೆ ನೀಡಿದ ಅವಕಾಶ ಕಡಿಮೆ ಎನಿಸುತ್ತದೆ.

ಭಿತ್ತಿಯ ಬೋಳುತನವನ್ನು ಪರಿಹರಿಸಲು ವಿಗ್ರಹಗಳು ಕಂಡರಣೆಯನ್ನು ಗುರುತಿಸಿದೆವಷ್ಟೆ. ತೋರಣಗಳುಳ್ಳ ವಿಗ್ರಹ ಫಲಕಗಳು ಜಂಘಾ ಭಾಗದ ಅರ್ಧ ಭಾಗವನ್ನು ಆಕ್ರಮಿಸಿದ್ದು ತದನಂತರ ಕೂಟ ಛಾದ್ಯದ ರಚನೆಯಿದೆ. ಕೂಟ ಛಾದ್ಯವೆಂದಲ್ಲಿ ಛಾದ್ಯದ ಅನುಕರಣೆಯೇ ಹೊರತು ಪೂರ್ಣ ಪ್ರಮಾಣದ ಛಾದ್ಯವಲ್ಲ. ಕೂಟಛಾದ್ಯದ ನಂತರ ಪುನರ್ಜಂಘಾ ರಚನೆಯಿದ್ದು ಶೃಂಗಾಕೃತಿಗಳ ಅಲಂಕರಣೆಯೂ ಹೆಚ್ಚು ತದನಂತರ ಛಾದ್ಯರಚನೆಯನ್ನು ಕಾಣುತ್ತೇವೆ. ಕೂಟ ಛಾದ್ಯ ರಚನೆಯ ಸುತ್ತಲೂ ಆವರಿಸಿರುವುದನ್ನು ಹಾರ್ನಳ್ಳಿಯ ಕೇಶವ ಹಾಗೂ ಸೋಮನಾಥಪುರದ ಕೇಶವ ದೇವಾಲಯದಲ್ಲಿ ಗಮನಾರ್ಹವಾಗಿ ಗುರುತಿಸಬಹುದು. ಕೂಟ ಛಾದ್ಯ ರಚನೆಯು ಔತ್ತರೇಯ ನಾಗರ ಶೈಲಿಯ ಮೇರು ಮಂಡೋವರ ರಚನೆ ಗಳಲ್ಲಿ ಮೂಲತಃ ಗುರುತಿಸಲ್ಪಟ್ಟಿದೆ.

ಮೇಲ್ಕಂಡ ವಿವರಗಳು ಚಾಲುಕ್ಯರ ಹಾಗೂ ಹೊಯ್ಸಳರ ಕಾಲದ ದೇವಾಲಯ ಗಳ ಜಂಘಾ ಹಾಗೂ ಛಾದ್ಯಗಳನ್ನು ಗುರುತಿಸುವಲ್ಲಿ ಸಹಕಾರಿಯೆನಿಸಿದೆ.

ಆಧಾರ ಗ್ರಂಥಗಳು :

1. ಪಿ. ಎ. ಮಂಕಡ್ (ಸಂ.) ಅಪರಾಜಿತ ಪೃಚ್ಛಾ, (ಬರೋಡಾ, 1950)
2. ವಿ. ಎಸ್. ಅಗರ್‌ವಾಲಾ (ಸಂ.) ಸಮರಾಂಗಣ ಸೂತ್ರಧಾರ, (ಬರೋಡ, 1966)
3. ಭಗವಾನ್‌ದಾಸ್ ಜೈನ್ (ಸಂ.) ಪ್ರಾಸಾದಮಂಡನ, (ಜೈಪುರ, 1963)
4. ಪಿ. ಒ. ಸೋಂಪುರ (ಸಂ.) ದೀಪಾರ್ಣವ, (ಪಾಲಿಟಾನ, 1960)

ಮೂಲ : ಎಚ್. ಜಿ. ವೇಲ್ಸ್
ಅನು : ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರಿದುದು)

58. ಔದ್ಯೋಗಿಕ ಕ್ರಾಂತಿ

ನಾವು ಇಲ್ಲಿ ಯಾಂತ್ರಿಕ ಕ್ರಾಂತಿಯೆಂದು ಹೆಸರಿಸಿರುವ ಮಾನವನ ಅನುಭವದಲ್ಲಿ ಪೂರ್ಣ ನೂತನವಾದ ವಿಜ್ಞಾನ ಸಂಬಂಧವಾದ ಕ್ರಾಂತಿಯನ್ನೂ ಬೇರೆಯೇ ಮೂಲಗಳಿಂದ ಉದ್ಭವಿಸಿದ ಔದ್ಯೋಗಿಕ ಕ್ರಾಂತಿಯನ್ನೂ ಒಂದೇ ಎಂದು ಹೇಳಿ ಗೊಂದಲ ಗೊಳಿಸುವ ಪ್ರವೃತ್ತಿ ಅನೇಕ ಚರಿತ್ರೆ ಪುಸ್ತಕಗಳಲ್ಲಿದೆ. ಮೊದಲನೆಯದು ಸುವ್ಯವಸ್ಥಿತವಾದ ವಿಜ್ಞಾನದ ಬೆಳವಣಿಗೆಯಿಂದ ಉತ್ಪನ್ನವಾದದ್ದು. ಕೃಷಿ ಮಾಡುವುದು, ಲೋಹಗಳನ್ನು ಕಂಡುಹಿಡಿದದ್ದು ಇಂತಹ ಹೊಸಹೊಸ ಹೆಜ್ಜೆಗಳಿಗೆ ಸಂಬಂಧಿಸಿದ್ದು. ಎರಡನೆಯದಾದ ಔದ್ಯೋಗಿಕ ಕ್ರಾಂತಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಸಂಬಂಧಿಸಿದ್ದು. ಇದಕ್ಕೆ ಚರಿತ್ರೆಯಲ್ಲಿ ಪೂರ್ವ ನಿದರ್ಶನಗಳುಂಟು. ಈ ಎರಡೂ ಕ್ರಿಯೆಗಳೂ ಒಂದರ ಪಕ್ಕದಲ್ಲಿ ಒಂದು ನಡೆಯುತ್ತಲೇ ಇದ್ದು ಒಂದರಮೇಲೊಂದು ಎಡೆ ಬಿಡದೆ ಪ್ರತಿಕ್ರಿಯೆ ನಡೆಸುತ್ತಿದ್ದರೂ ಇವುಗಳ ಮೂಲ ಕಾರಣಗಳೂ ಮತ್ತು ಮುಖ್ಯಾಂಶಗಳೂ ಬೇರೆ ಬೇರೆ ಕಲ್ಲಿದ್ದಲು, ಹಬೆಯ ಶಕ್ತಿ ಮತ್ತು ಯಂತ್ರಗಳು ಇಲ್ಲದಿದ್ದರೂ ಯಾವುದೋ ಒಂದು ವಿಧದ ಔದ್ಯೋಗಿಕ ಕ್ರಾಂತಿ ನಡೆಯುತ್ತಲೇ ಇದ್ದಿತು. ಆದರೆ ಅಂತಹ ಸಂದರ್ಭದಲ್ಲಿ ಇದು ಪ್ರಾಯಶಃ ರೋಮನ್ ಪ್ರಜಾಪ್ರಭುತ್ವದ ಕೊನೆಯ ವರ್ಷಗಳ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳನ್ನು ಹೆಚ್ಚಾಗಿ ಅನುಸರಿಸುತ್ತಿತ್ತು. ತಮ್ಮ ಸ್ವಾಮ್ಯಗಳನ್ನು ಕಳೆದುಕೊಂಡ ಸ್ವತಂತ್ರ ಬೇಸಾಯಗಾರರು, ಕೂಲಿ ಗ್ಯಾಂಗ್‌ಗಳು; ದೊಡ್ಡ ದೊಡ್ಡ ಎಸ್ಟೇಟುಗಳು, ಭಾರೀ ಆಸ್ತಿಗಳು ಮತ್ತು ಸಮಾಜವನ್ನು ಹಾಳು ಮಾಡುವಂತಹ ಆರ್ಥಿಕ ವ್ಯವಸ್ಥೆ ಇವುಗಳ ಕತೆ ಪುನರಾವೃತ್ತಿಯಾಗುತ್ತಿತ್ತು. ಯಂತ್ರಗಳು ಮತ್ತು ಯಂತ್ರ ಶಕ್ತಿ ಬರುವುದಕ್ಕೂ ಮುಂಚೆಯೇ ಕಾರ್ಖಾನೆ ವ್ಯವಸ್ಥೆ ಜಾರಿಗೆ

ಬಂದಿದ್ದಿತು. "ಕಾರ್ಖಾನೆ"ಗಳು ದುಡಿತದ ಹಂಚಿಕೆಯ ಫಲವೇ ಹೊರತು ಯಂತ್ರಗಳಿಂದ ಬಂದ ವ್ಯವಸ್ಥೆಯಲ್ಲ. ಉದ್ಯಮ ಕ್ಷೇತ್ರದಲ್ಲಿ ನೀರಿನ ಗಾಲಿ ಉಪಯೋಗಕ್ಕೆ ಬರುವುದಕ್ಕೆ ಮುಂಚೆಯೇ ಕಠಿನ ಶಿಸ್ತಿಗೊಳಪಡಿಸಲಾದ ಶ್ರಮಜೀವಿಗಳು ರಟ್ಟಿನ ಪೆಟ್ಟಿಗೆಗಳು, ಟೋಪಿಗಳು ಪೀಠೋಪಕರಣಗಳು, ಭೂಪಟಗಳು, ಪುಸ್ತಕಗಳಲ್ಲಿ ಬೇಕಾಗುವ ಚಿತ್ರಗಳು ಮುಂತಾದುವುಗಳನ್ನು ತಯಾರಿಸುತ್ತಿದ್ದರು. ಆಗಸ್ಟಸನ ಕಾಲದಲ್ಲೇ ರೋಮಿನಲ್ಲಿ ಕಾರ್ಖಾನೆಗಳಿದ್ದುವು. ಉದಾಹರಣೆಗೆ ಪುಸ್ತಕ ಮಾರಾಟಗಾರರು ನಡೆಯಿಸುತ್ತಿದ್ದ ಕಾರ್ಖಾನೆಗಳಲ್ಲಿ ನಕಲುದಾರರನ್ನು ಸಾಲಾಗಿ ಕುಳ್ಳಿರಿಸಿ ಉಕ್ತಲೇಖನ ಹೇಳಿ ಅವರಿಂದ ಹೊಸ ಹೊಸ ಪುಸ್ತಕಗಳ ಪ್ರತಿಗಳನ್ನು ತಯಾರಿಸಲಾಗುತ್ತಿತ್ತು. ಡೆಫೋವಿನ ಬರೆವಣಿಗೆಗಳನ್ನೂ ಫೀಲ್ಡಿಂಗನ ರಾಜಕೀಯ ಕಿರುಹೊತ್ತಿಗೆಗಳನ್ನೂ ಗಮನವಿಟ್ಟು ಅಧ್ಯಯನ ಮಾಡುವವರಿಗೆ ಬಡಜನರನ್ನು ಒಂದೆಡೆ ಕೂಡಿ ಹಾಕಿ ಜೀವನೋಪಾಯಕ್ಕಾಗಿ ಸಾಮೂಹಿಕವಾಗಿ ಅವರಿಂದ ಕೆಲಸ ಮಾಡಿಸುವುದು 17ನೆ ಶತಮಾನ ಮುಗಿಯುವ ಹೊತ್ತಿಗಾಗಲೇ ಬ್ರಿಟನ್ನಿನಲ್ಲಿ ಪ್ರಚಲಿತವಿದ್ದಿತೆಂದೂ ತಿಳಿಯುತ್ತದೆ. ಥಾಮಸ್‌ಮೋರನ ಯುಟೋಪಿಯ (1516) ಹೊರಬಿದ್ದ ಕಾಲದಲ್ಲಾಗಲೇ ಇದರ ಮುನ್ಸೂಚನೆಗಳನ್ನು ಕಾಣಬಹುದು. ಇದು ಸಾಮಾಜಿಕ ಬೆಳೆವಣಿಗೆಯೇ ಹೊರತು ಯಂತ್ರಗಳಿಂದ ಆದುದಲ್ಲ.

18ನೆ ಶತಮಾನದ ಮಧ್ಯಭಾಗದವರೆಗೆ ಪಶ್ಚಿಮ ಯೂರೋಪಿನ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯು ರೋಮನ್ ಸಾಮ್ರಾಜ್ಯ ತನ್ನ ಅಸ್ತಿತ್ವದ ಕೊನೆಯ ಮೂರು ಶತಮಾನಗಳಲ್ಲಿ ಹಿಡಿದ ಹಾದಿಯನ್ನೇ ಅನುಸರಿಸುತ್ತಿತ್ತು. ಆದರೆ ಯೂರೋಪಿನ ರಾಜಕೀಯ ಒಡಕುಗಳು, ರಾಜಪ್ರಭುತ್ವಕ್ಕೆ ವಿರೋಧ ಹುಟ್ಟಿದ್ದರಿಂದ ಆದ ರಾಜಕೀಯ ಕ್ಷೋಭೆಗಳು, ಸಾಮಾನ್ಯ ಜನರ ಅವಿಧೇಯತೆ ಮತ್ತು ಇವುಗಳೊಡನೆ ಪ್ರಾಯಶಃ ಯಾಂತ್ರಿಕ ಕಲ್ಪನೆಗಳು ಮತ್ತು ಉಪಜ್ಞೆಗಳು ಪಶ್ಚಿಮ ಯೂರೋಪಿನ ಬುದ್ಧಿ ಜೀವಿಗಳಿಗೆ ಹೆಚ್ಚು ಹೆಚ್ಚಾಗಿ ಸಿಗತೊಡಗಿದುದು ಎಲ್ಲ ಸೇರಿ ಈ ಕ್ರಿಯೆ ತೀರಾ ಹೊಸ ದಾರಿಗಳಿಗೆ ತಿರುಗಿತು. ಕ್ರೈಸ್ತ ಧರ್ಮದ ಪ್ರಭಾವದಿಂದ ಉದ್ಭವಿಸಿದ ಮಾನವರೆಲ್ಲ ಒಂದೇ ಎಂಬ ಭಾವನೆಗಳು ಈ ಹೊಸ ಯೂರೋಪಿಯನ್ ಪ್ರಪಂಚದಲ್ಲಿ ರೋಮಿಗಿಂತ ಬಹುವ್ಯಾಪಕವಾಗಿ ಹರಡಿದ್ದುವು. ರಾಜಕೀಯ ಶಕ್ತಿ ಅಷ್ಟು ಕೇಂದ್ರೀಕೃತವಾಗಿರಲಿಲ್ಲ. ಹೀಗಾಗಿ ಬೇಗ ಬೇಗ ಹಣವಂತನಾಗಬೇಕೆಂದು ಆಸೆಯಿದ್ದ ಕ್ರಿಯಾಶಾಲಿಯಾದ ವ್ಯಕ್ತಿಗಳು ಹುಮ್ಮಸ್ಸಿನಿಂದ ಗುಲಾಮರು ಮತ್ತು ಕೂಲಿ ಗ್ಯಾಂಗುಗಳ ಪ್ರಪಂಚವನ್ನು ಬಿಟ್ಟು ಯಾಂತ್ರಿಕ ಶಕ್ತಿ ಮತ್ತು ಯಂತ್ರಗಳ ಕಡೆ ತಿರುಗಿದರು.

ಯಾಂತ್ರಿಕ ಉಪಜ್ಞೆಗಳು ಮತ್ತು ಸಂಶೋಧನೆಗಳ ಪ್ರಕ್ರಿಯೆಯಾದ ಯಾಂತ್ರಿಕ ಕ್ರಾಂತಿ ಮಾನವನ ಅನುಭವದಲ್ಲೇ ಹೊಸದಾದುದು. ಸಾಮಾಜಿಕ, ರಾಜಕೀಯ, ಆರ್ಥಿಕ, ಔದ್ಯಮಿಕ ಕ್ಷೇತ್ರಗಳಲ್ಲಿ ಇದರಿಂದ ಆಗಬಹುದಾದ

ಪರಿಣಾಮಗಳ ಪರಿವೆಯೇ ಇಲ್ಲದೆ ಇದು ಮುಂದುವರೆಯುತ್ತಾ ಹೋಯಿತು. ಆದ್ದರಿಂದ ಔದ್ಯೋಗಿಕ ಕ್ರಾಂತಿ ಯಾದರೋ ಇತರ ಅನೇಕ ಮಾನವ ವ್ಯವಹಾರಗಳಂತೆಯೇ ಯಾಂತ್ರಿಕ ಕ್ರಾಂತಿಯಿಂದ ಒಂದೇ ಸಮನೆ ಮಾರ್ಪಾಡಾಗುತ್ತಿದ್ದ ಮಾನವ ಜೀವನದ ಪರಿಸ್ಥಿತಿಗಳ ಫಲವಾಗಿ ಮತ್ತೂ ಮತ್ತೂ ಆಳವಾಗಿ ಬದಲಾಯಿಸುತ್ತಾ ಹೊಸ ಹೊಸ ದಾರಿ ಹಿಡಿಯುತ್ತಾ ಹೋಯಿತು. ರೋಮನ್ ಪ್ರಜಾಪ್ರಭುತ್ವದ ಕಡೆಯ ಭಾಗದಲ್ಲಿ ಕಂಡು ಬಂದ ಕೆಲವೇ ಜನರಲ್ಲಿ ಐಶ್ವರ್ಯ ಸಂಗ್ರಹವಾಗುವುದು, ಸಣ್ಣ ದರ್ಜೆಯ ರೈತರು ಮತ್ತು ವ್ಯಾಪಾರಿಗಳ ನಿರ್ಮೂಲನ, ಮತ್ತು ಭಾರೀ ಹಣ ಕಾಸಿನ ವಹಿವಾಟು ಈ ಪರಿಸ್ಥಿತಿಗೂ ಬಹುಮಟ್ಟಿಗೆ ಹೀಗೇ ತೋರುತ್ತಿದ್ದ ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನದ ಬಂಡವಾಳದ ಕೇಂದ್ರೀಕರಣಕ್ಕೂ ಇದ್ದ ಮುಖ್ಯ ವ್ಯತ್ಯಾಸ ಯಾಂತ್ರಿಕ ಕ್ರಾಂತಿಯ ಪರಿಣಾಮವಾಗಿ ಹುಟ್ಟಿಕೊಂಡ ಕೂಲಿಕಾರರ ಸ್ವಭಾವದಲ್ಲಿದೆ. ಪ್ರಾಚೀನ ಪ್ರಪಂಚದಲ್ಲಿ ಶಕ್ತಿ ಎಂದರೆ ಮನುಷ್ಯ ಶಕ್ತಿಯೇ ಆಗಿತ್ತು. ಪ್ರತಿಯೊಂದು ಕೆಲಸವೂ ಕೊಟ್ಟಕೊನೆಗೆ ಅಜ್ಞಾನಿಗಳಿಂದ ತುಳಿತಕ್ಕೊಳಗಾದ ಜನರ ಶರೀರ ಬಲದ ಚಾಲಕ ಶಕ್ತಿಯನ್ನೇ ಅವಲಂಬಿಸಿತ್ತು. ಸ್ವಲ್ಪ ಮಟ್ಟಿಗೆ ಎತ್ತು ಕುದುರೆ ಗಳಂತಹ ಪ್ರಾಣಿಗಳ ಸಹಾಯ ಗಾಡಿ ಮುಂತಾದುವು ಗಳನ್ನು ಎಳೆಯುವಂತಹ ಕಾರ್ಯಗಳಲ್ಲಿ ಇರುತ್ತಿತ್ತು. ತೂಕದ ಸಾಮಾನು ಎತ್ತ ಬೇಕಿದ್ದರೆ ಮನುಷ್ಯರೇ ಎತ್ತುತ್ತಿದ್ದರು. ಬಂಡೆಯನ್ನು ಅಗೆದು ತೆಗೆಯಬೇಕಾದಲ್ಲಿ ಮನುಷ್ಯರೇ ಅದನ್ನು ಕೊರೆದು ಹೊರತೆಗೆಯುತ್ತಿದ್ದರು. ಹೊಲ ಉಳಬೇಕಾದಲ್ಲಿ ಮನುಷ್ಯರೇ ಅದನ್ನು ಉಳುತ್ತಿದ್ದರು. ಇಂದಿನ ಹೊಗೆಜಹಜಿನ ಸ್ಥಾನವನ್ನು ರೋಮಿನಲ್ಲಿ ಪಡೆದಿದ್ದುದು ಸಾಲುಸಾಲಾಗಿ ಜನ ಬೆವರುಸುರಿಸುತ್ತಾ ಹುಟ್ಟು ಹಾಕಿ ನಡೆಸುತ್ತಿದ್ದ ಗ್ಯಾಲಿಗಳು. ಪ್ರಪ್ರಥಮ ನಾಗರಿಕತೆಗಳಲ್ಲಿ ಅಧಿಕಾಂಶ ಜನರು ಯಂತ್ರಿಕವಾದ ಕತ್ತೆಚಾಕರಿ ಮಾಡುತ್ತಿರುತ್ತಿದ್ದರು. ಕೃತಕ ಶಕ್ತಿ ಚಾಲಿತ ಯಂತ್ರಗಳು ಬಂದ ಹೊಸದರಲ್ಲೂ ಬುದ್ಧಿ ಉಪಯೋಗ ಬೇಕಿಲ್ಲದ ಇಂತಹ ದುಡಿಮೆ ಯಿಂದ ಜನರಿಗೆ ಬಿಡುಗಡೆಯಾಗಬಹುದು ಎನ್ನಿಸಲಿಲ್ಲ ನಾಲೆಗಳನ್ನು ಅಗೆಯುವುದು, ರೈಲ್ವೆಗಳಿಗಾಗಿ ಗುಡ್ಡಗಳನ್ನು ಕಡಿದು ದಾರಿ ಮಾಡುವುದು, ಹಳ್ಳಗಳಿರುವಲ್ಲಿ ಒಡ್ಡು ಹಾಕುವುದು ಇಂತಹ ಕೆಲಸಗಳಿಗಾಗಿ ಭಾರೀ ಕೂಲಿ ಗ್ಯಾಂಗುಗಳು ಕೆಲಸ ಮಾಡು ತ್ತಿದ್ದುವು. ಗಣಿ ಕೆಲಸಗಾರರ ಸಂಖ್ಯೆಯೂ ಬಹುವಾಗಿ ಹೆಚ್ಚಾಯಿತು. ಆದರೆ ಸೌಕರ್ಯಗಳು ಮತ್ತು ವ್ಯಾಪಾರದ ಸರಕು ಅದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಹೆಚ್ಚಾದುವು. 19ನೆಯ ಶತಮಾನ ಮುಂದುವರೆದಂತೆ ಈ ಹೊಸ ಪರಿಸ್ಥಿತಿಯ ಸ್ವರೂಪ ಸ್ಪಷ್ಟವಾಯಿತು. ಇನ್ನು ಮುಂದೆ ಮಾನವರು ಗೊತ್ತುಗುರಿಯಿಲ್ಲದೆ ಉಪಯೋಗಿಸಬಹುದಾದ ಶಕ್ತಿ ಮೂಲವಾಗಿ ಉಳಿಯಲಿಲ್ಲ ಒಬ್ಬ ಮನುಷ್ಯ ತನ್ನ ಶಕ್ತಿಯನ್ನು ಉಪಯೋಗಿಸಿ ಮಾಡುವಷ್ಟು ಕೆಲಸವನ್ನು ಇನ್ನೂ ಚೆನ್ನಾಗಿ ಇನ್ನೂ ಬೇಗ ಒಂದು ಯಂತ್ರ ಮಾಡಲು ಸಾಧ್ಯವಾಯಿತು. ಬುದ್ಧಿ ಶಕ್ತಿ ಮತ್ತು ವಿವೇಚನೆ

ಬೇಕಾದಲ್ಲಿ ಮಾತ್ರ ಮನುಷ್ಯ ಅವಶ್ಯಕವೆಂದೆನಿಸಿತು. ಮನುಷ್ಯರನ್ನು ಮನುಷ್ಯರನ್ನಾಗಿಯೇ ಉಪಯೋಗಿಸುವಂತಾಯಿತು. ಹಿಂದಿನ ನಾಗರೀಕತೆಗಳೆಲ್ಲವೂ ಕತ್ತೆ ಚಾಕರಿ ಮಾಡುತ್ತಿದ್ದ ಗುಲಾಮನನ್ನು ಅವಲಂಬಿಸಿದ್ದುವು. ಮತ್ತೊಬ್ಬರು ಹೇಳಿದ್ದನ್ನೇ ವಿಧೇಯನಾಗಿ ಅನುಸರಿಸುತ್ತಿದ್ದ ಇವನಿಗೆ ತಲೆಯಲ್ಲಿ ಮೆದುಳಿಲ್ಲದಿದ್ದರೂ ನಡೆಯುತ್ತಿತ್ತು. ಇನ್ನು ಮುಂದೆ ಮಾನವ ವರ್ಗದ ಸೌಖ್ಯಕ್ಕೆ ಇಂತಹ ವ್ಯಕ್ತಿ ಬೇಕಾಗಲಿಲ್ಲ.

ಈ ಮಾತು ಅತ್ಯಂತ ಹೊಸದಾದ ಲೋಹವಿದ್ಯಾಕ್ರಿಯೆಗಳ ಸಂಬಂಧದಲ್ಲಿ ಎಷ್ಟು ನಿಜವೋ ಪ್ರಾಚೀನ ಉದ್ಯಮಗಳಾದ ಕೃಷಿ ಮತ್ತು ಗಣಿ ಕೆಲಸಗಳ ವಿಷಯದಲ್ಲಿಯೂ ಅಷ್ಟೆ ನಿಜ. ಉಳುವುದು, ಬಿತ್ತನೆ, ಕೊಯ್ಲು ಕೆಲಸಗಳಿಗೆ ಡಜನ್‌ಗಟ್ಟಲೆ ಜನರ ಕೆಲಸವನ್ನು ಒಮ್ಮೆಗೇ ಬೇಗ ಬೇಗ ಮಾಡಬಲ್ಲ ಯಂತ್ರಗಳು ಬಂದುವು. ರೋಮನ್ ನಾಗರೀಕತೆ ರಚಿತವಾಗಿದ್ದು ಹೀನಸ್ಥಿತಿಗಿಳಿದಿದ್ದ ಜೀವಿಯನ್ನೇ ಕಳೆದುಕೊಂಡಿದ್ದ ಮನುಷ್ಯ ಪ್ರಾಣಿಗಳ ಮೇಲೆ. ಆಧುನಿಕ ನಾಗರಿಕತೆ ಅಗ್ಗವಾಗಿರುವ ಯಂತ್ರಶಕ್ತಿಯ ಆಧಾರದ ಮೇಲೆ ರಚಿತವಾಗುತ್ತಿದೆ. ಈಗ ನೂರು ವರ್ಷಗಳಿಂದ ಯಂತ್ರಶಕ್ತಿ ಅಗ್ಗವಾಗುತ್ತಿದ್ದು ಮನುಷ್ಯರ ದುಡಿಮೆಯು ಬೆಲೆ ಏರುತ್ತಿದೆ. ಗಣಿ ಕೆಲಸದಲ್ಲಿ ಮೊದಲು ಕೆಲಕಾಲ ಯಂತ್ರಗಳನ್ನು ಉಪಯೋಗಿಸದಿದ್ದುದಕ್ಕೆ ಕಾರಣ ತುಂಬ ಸರಳ; ಅಷ್ಟು ದಿನ ಯಂತ್ರಗಳಿಗಿಂತ ಮನುಷ್ಯರೇ ಅಗ್ಗವಾಗಿದ್ದರು.

ಇಲ್ಲಿ ಅತ್ಯಂತ ಮೂಲಭೂತವಾದ ಮುಖ್ಯ ಬದಲಾವಣೆಯನ್ನು ಮಾನವ ವ್ಯವಹಾರದಲ್ಲಿ ಕಾಣುತ್ತೇವೆ. ವಿರಾಮವಿಲ್ಲದೆ ದುಡಿಯುವ ಮನುಷ್ಯರನ್ನು ಒದಗಿಸಿಕೊಳ್ಳುವುದೇ ಹಳೆಯ ನಾಗರೀಕತೆಗಳಲ್ಲಿ ಧನಿಕರು ಮತ್ತು ಆಳುವ ವರ್ಗದವರ ಮುಖ್ಯ ಚಿಂತೆಯಾಗಿತ್ತು. ಹತ್ತೊಂಬತ್ತನೆ ಶತಮಾನ ಮುಂದುವರಿದಂತೆ ಬುದ್ಧಿವಂತರಾದ ಜನರಿಗೆಲ್ಲ ಸಾಮಾನ್ಯ ಮನುಷ್ಯ ಇನ್ನು ಮುಂದೆ ಬರಿಯ ದುಡಿತದಾಳು ಆಗಿದ್ದರೆ ಸಾಲದು, ಅವನು ಅದಕ್ಕಿಂತ ಉತ್ತಮನಾಗಬೇಕೆಂಬುದು ಸ್ಪಷ್ಟವಾಯಿತು. ಔದ್ಯೋಗಿಕ ದಕ್ಷತೆಗೋಸ್ಕರವಾಗಿಯಾದರೂ ಅವನಿಗೆ ವಿದ್ಯೆಕಲಿಸಬೇಕಾಯಿತು. ತಾನೇನು ಮಾಡುತ್ತಿದ್ದೇನೆ ಎನ್ನುವುದು ಅವನಿಗೆ ಅರ್ಥವಾಗಬೇಕಾಯಿತು. ಕ್ರೈಸ್ತರು ಮೊದಲ ಬಾರಿಗೆ ಪ್ರಚಾರ ಆರಂಭಿಸಿದಾಗಿನಿಂದಲೂ ಯುರೋಪಿನಲ್ಲಿ ಜನಸಾಮಾನ್ಯರಿಗೆ ವಿದ್ಯೆಕಲಿಸಬೇಕೆಂಬ ಭಾವನೆ ಹೊಗೆಯಾಡುತ್ತಲೇ ಇದ್ದಿತು. ಇಸ್ಲಾಂ ಕಾಲಿಟ್ಟಲ್ಲೂ ಏಷ್ಯದಲ್ಲೆಲ್ಲಾ ಹೀಗೆ ಆಗಿತ್ತು. ಏಕೆಂದರೆ ಈ ಧರ್ಮಗಳನ್ನು ನಂಬುವವನು ತನಗೆ ಆಶ್ರಯವನ್ನು ಕೊಟ್ಟ ಈ ಧರ್ಮಗಳ ಸ್ವಲ್ಪ ಭಾಗವನ್ನಾದರೂ ಅರ್ಥ ಮಾಡಿಕೊಳ್ಳಬೇಕಾದುದು ಅವಶ್ಯವಾಗಿತ್ತು. ಈ ಧರ್ಮಗಳ ಪವಿತ್ರ ಗ್ರಂಥಗಳಲ್ಲಿ ಸ್ವಲ್ಪವನ್ನಾದರೂ ಓದಲು ಅವನು ಸಮರ್ಥನಾಗಬೇಕಾಗಿತ್ತು. ಕ್ರೈಸ್ತಧರ್ಮದಲ್ಲಿ ಎದ್ದ ಭಿನ್ನಾಭಿಪ್ರಾಯಗಳಿಂದ ಆದ ಶಾಖೆಗಳು ಅನುಯಾಯಿಗಳನ್ನು ಪಡೆಯಲು ಸ್ಪರ್ಧಿಸುತ್ತಾ ಜನಸಾಮಾನ್ಯರ ವಿದ್ಯಾರ್ಜನೆಯ ಸುಗ್ಗಿಗೆ ಬೀಜ ಬಿತ್ತಿದುವು.

ಉದಾಹರಣೆಗೆ ಇಂಗ್ಲೆಂಡಿನಲ್ಲಿ ಹತ್ತೊಂಬತ್ತನೆ ಶತಮಾನದ ಮೂರನೆ ಮತ್ತು ನಾಲ್ಕನೆ ದಶಕಗಳ ಹೊತ್ತಿಗೆ ಈ ಶಾಖೆಗಳ ವಾದವಿವಾದಗಳು ಮತ್ತು ಅನುಯಾಯಿಗಳನ್ನು ಎಳೆಯ ವಯಸ್ಸಿನಲ್ಲಿಯೇ ಹಿಡಿಯಬೇಕೆಂಬ ಅಗತ್ಯಗಳೇ ಕಾರಣವಾಗಿ ಚಿಕ್ಕ ಹುಡುಗರಿಗಾಗಿ ಸ್ಪರ್ಧಿಸುತ್ತಿದ್ದ ಅನೇಕ ವಿದ್ಯಾಸಂಸ್ಥೆಗಳು ಕ್ರೈಸ್ತಸಂಘದ "ರಾಷ್ಟ್ರೀಯ ಶಾಲೆಗಳು", ಈ ಸಂಘವನ್ನು ಒಪ್ಪಿಕೊಳ್ಳದ "ಬ್ರಿಟಿಷ್ ಶಾಲೆಗಳು" ಮತ್ತು ರೋಮನ್ ಕ್ಯಾಥೊಲಿಕ್ ಪ್ರಾಥಮಿಕ ಶಾಲೆಗಳು — ಹುಟ್ಟಿಕೊಂಡುವು. ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಾತ್ಯ ಪ್ರಭಾವವಿದ್ದಲೆಲ್ಲಾ ಜನಸಾಮಾನ್ಯರ ವಿದ್ಯಾಭ್ಯಾಸದಲ್ಲಿ ತೀವ್ರಪ್ರಗತಿಯಾಯಿತು. ಮೇಲ್ವರ್ಗದ ಜನರ ವಿದ್ಯಾರ್ಜನೆಯಲ್ಲಿ ಮೊದಲಿದ್ದುದಕ್ಕೆ ಹೋಲಿಸಿದಾಗ ಸ್ವಲ್ಪ ಮುನ್ನಡೆಯಾದರೂ ಇದಕ್ಕೆ ಸಮಾನಾಂತರವಾದ ಮುನ್ನಡೆಯಾಗಲಿಲ್ಲ. ಹೀಗಾಗಿ ಅಕ್ಷರಸ್ಥರು ಮತ್ತು ನಿರಕ್ಷರಕುಕ್ಷಿಗಳು ಎಂದು ಎರಡು ದೊಡ್ಡ ವಿಭಾಗಗಳನ್ನು ಸೃಜಿಸಿದ್ದ ಕಂದರ ಹೋಗಿ ವಿದ್ಯಾಭ್ಯಾಸ ಮಟ್ಟದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸ ಇವರ ನಡುವೆ ಉಳಿದುಕೊಂಡಿತು. ಈ ಕ್ರಿಯೆಗೆ ಪರೋಕ್ಷ ಕಾರಣ ಯಾಂತ್ರಿಕ ಕ್ರಾಂತಿ. ತೋರಿಕೆಗೆ ಸಾಮಾಜಿಕ ಪರಿಸ್ಥಿತಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲದಂತೆ ಕಂಡರೂ ಇದು ಸಂಪೂರ್ಣ ನಿರಕ್ಷರ ಕುಕ್ಷಿಗಳಾದ ಒಂದು ವರ್ಗ ಪ್ರಪಂಚದಲ್ಲೆಲ್ಲಿಯೂ ಇರಕೂಡದು ಎಂಬ ಒಂದು ಪರಿಸ್ಥಿತಿಗೆ ಎಡೆಕೊಟ್ಟಿತು.

ರೋಮನ್ ಪ್ರಜಾಪ್ರಭುತ್ವದ ಸಾಮಾನ್ಯ ಜನತೆಗೆ ಅಲ್ಲಿ ನಡೆದ ಆರ್ಥಿಕ ಕ್ರಾಂತಿಯ ಅರ್ಥವನ್ನು ಸ್ಪಷ್ಟವಾಗಿ ಗ್ರಹಿಸಲು ಆಗಿಯೇ ಇರಲಿಲ್ಲ. ಅಂದಿನ ಶ್ರೀಸಾಮಾನ್ಯನಿಗೆ ತನ್ನ ಬದುಕಿನ ಅವಧಿಯಲ್ಲಿ ನಡೆದ ಬದಲಾವಣೆಗಳನ್ನು ಈಗ ನಾವು ತಿಳಿದುಕೊಳ್ಳುವಂತೆ ಸುಸ್ಪಷ್ಟವಾಗಿ ಅರ್ಥಪೂರ್ಣವಾಗಿ ಅರಿತುಕೊಳ್ಳಲು ಆಗಲೇ ಇಲ್ಲ. ಆದರೆ ಹತ್ತೊಂಬತ್ತನೆ ಶತಮಾನ ಮುನ್ನಡೆಯುತ್ತಾ ಹೋದಂತೆ ತಮ್ಮ ಮೇಲೆ ಪರಿಣಾಮ ಬೀರುತ್ತಿದ್ದ ಔದ್ಯೋಗಿಕ ಕ್ರಾಂತಿ ಒಂದೇ ಒಂದು ಅಖಂಡಕ್ರಿಯೆ ಎಂಬುದು ಸಾಮಾನ್ಯ ಜನರಿಗೂ ಸ್ಪಷ್ಟವಾಗುತ್ತಾ ಹೋಯಿತು. ಏಕೆಂದರೆ ಇವರೆಲ್ಲರಿಗೂ ಈಗ ಓದು ಬರಹ ಬರುತ್ತಿದ್ದು ಒಬ್ಬರೊಡನೊಬ್ಬರು ಚರ್ಚೆಮಾಡಿ ವಿಚಾರ ವಿನಿಮಯ ಮಾಡಿಕೊಳ್ಳುವ ಶಕ್ತಿಯಿತ್ತು. ಈಗಿನ ಜನ ಸಮುದಾಯ ಪಡೆದಿರುವ ವಿಷಯ ಗ್ರಹಣಶಕ್ತಿ ಹಿಂದೆ ಯಾವಾಗಲೂ ಯಾವ ಜನರಿಗೂ ಇರಲಿಲ್ಲ.

59. ಆಧುನಿಕ ರಾಜಕೀಯ ಮತ್ತು ಸಾಮಾಜಿಕ ಭಾವನೆಗಳ ಬೆಳವಣಿಗೆ

ಪ್ರಾಚೀನ ನಾಗರೀಕತೆಗಳಲ್ಲಿ ಸಂಪ್ರದಾಯಗಳು, ಸಂಸ್ಥೆಗಳು ಮತ್ತು ರಾಜಕೀಯ ಭಾವನೆಗಳು ಒಂದು ಯುಗದಿಂದ ಮತ್ತೊಂದು ಯುಗಕ್ಕೆ ನಿಧಾನವಾಗಿ ತಮ್ಮಷ್ಟಕ್ಕೆ ತಾವೇ ಬೆಳೆದುಬಂದುವು. ಯಾರೂ ಇವುಗಳನ್ನು ನಿಯೋಜಿಸಲಿಲ್ಲ. ಯಾರೂ ಇವು ಹೀಗೆ ಬೆಳೆಯಬಹುದೆಂದು ನಿರೀಕ್ಷೆ ಮಾಡಲೂ ಇಲ್ಲ. ಕ್ರಿ.ಪೂ.

6ನೆ ಶತಮಾನದಲ್ಲಿ ಮಾನವ ಜಗತ್ತು ಪ್ರಾಯಕ್ಕೆ ಬಂದಿತೆನ್ನಬಹುದು. ಆಗಷ್ಟೆ ಮಾನವರು ಪರಸ್ಪರ ತಮ್ಮಲ್ಲಿದ್ದ ಸಂಬಂಧಗಳನ್ನು ಕುರಿತು ಚಿಂತಿಸಲು ಪ್ರಾರಂಭಿಸಿದರು ಮತ್ತು ಮೊಟ್ಟ ಮೊದಲ ಬಾರಿಗೆ ಮಾನವ ಪ್ರಪಂಚದ ಆಡಳಿತ ಕ್ರಮದ ಮಾರ್ಗಗಳು, ನಿಯಮಗಳು ಮತ್ತು ಅದನ್ನು ಕುರಿತ ನಂಬಿಕೆಗಳನ್ನು ಪ್ರಶ್ನಿಸಿ ಅವುಗಳನ್ನು ಬದಲಾಯಿಸಿ ಹೊಸ ರೀತಿಯಲ್ಲಿ ಏರ್ಪಡಿಸಬೇಕೆಂದು ಯೋಚಿಸತೊಡಗಿದರು.

ಗ್ರೀಸ್ ಮತ್ತು ಅಲೆಕ್ಸಾಂಡ್ರಿಯಾಗಳ ಭವ್ಯವಾದ ಬೌದ್ಧಿಕ ಅರುಣೋದಯವನ್ನು ಈ ಮುಂಚೆಯೇ ವರ್ಣಿಸಿ ಆಗಿದೆ. ಈ ಮುಂಬೆಳಗಿನ ಉಪಯೋಗ ಆಗುವಷ್ಟರಲ್ಲೇ ಗುಲಾಮಗಿರಿಯ ಆಧಾರದ ಮೇಲೆ ನಿಂತಿದ್ದ ನಾಗರೀಕತೆಗಳು ಕುಸಿದು ಹೋದುವು. ಧಾರ್ಮಿಕ ಅಸಹನೆ ಮತ್ತು ನಿರಂಕುಶ ಪ್ರಭುತ್ವಗಳ ಮೋಡಗಳು ಆವರಿಸಿ ಪುನಃ ಮಬ್ಬು ಕವಿಯಿತು. ಅನಿರ್ಭಯ ಚಿಂತನೆಯ ಬೆಳಕು ಮತ್ತೊಮ್ಮೆ ಯೂರೋಪಿನ ಮಬ್ಬುಗತ್ತಲೆಯನ್ನು ಭೇದಿಸಿದ್ದು ಹದಿನೈದು ಮತ್ತು ಹದಿನಾರನೆ ಶತಮಾನಗಳಲ್ಲೇ. ಯೂರೋಪಿನ ಬೌದ್ಧಿಕ ಆಕಾಶದಲ್ಲಿದ್ದ ಮೋಡಗಳನ್ನು ಚದುರಿಸುವಲ್ಲಿ ಅರಬ್ಬರ ಕುತೂಹಲಭರಿತ ಮನೋವೃತ್ತಿ ಮತ್ತು ಮಂಗೋಲರ ದಿಗ್ವಿಜಯಗಳ ಪಾತ್ರವನ್ನು ತಿಳಿಸಿಕೊಡುವುದಕ್ಕೂ ಸ್ವಲ್ಪಮಟ್ಟಿಗೆ ಪ್ರಯತ್ನಿಸಿದ್ದಾಯಿತು. ಮಾನವ ಕುಲದ ಮನುಷ್ಯತ್ವದ ಈ ಪುನಶ್ಚೈತನ್ಯದ ಮೊದಲ ಫಲಗಳು ಭೌತಿಕ ಸಾಧನೆಗಳು ಮತ್ತು ಭೌತಶಕ್ತಿ. ಮಾನವರ ನಡುವಿನ ಸಂಬಂಧಗಳ ಜ್ಞಾನ, ವೈಯಕ್ತಿಕ ಮತ್ತು ಸಾಂಘಿಕ ಮನಶ್ಶಾಸ್ತ್ರ, ಶಿಕ್ಷಣವಿಜ್ಞಾನ, ಅರ್ಥಶಾಸ್ತ್ರ ಇವೆಲ್ಲ ಸೂಕ್ಷ್ಮ ಹಾಗೂ ಜಟಿಲ ವಿಷಯಗಳು. ಅಲ್ಲದೆ ಇವುಗಳ ಜೊತೆ ರಾಗದ್ವೇಷಯುತ ಮನೋಭಾವಗಳು ಬಿಡಿಸಲಾಗದಂತೆ ಕಗ್ಗಂಟು ಹಾಕಿಕೊಂಡಿವೆ. ಈ ಕಾರಣಗಳಿಂದ ಈ ಕ್ಷೇತ್ರಗಳಲ್ಲಿ ಶೀಘ್ರವಾಗಿ ಮುನ್ನಡೆಯಾಗಿಲ್ಲ. ಆಗಿರುವ ಪ್ರಗತಿಯೂ ಬಲವಾದ ಪ್ರತಿಭಟನೆಗಳನ್ನು ಜಯಿಸಿ ಆಗಿದ್ದು. ನಕ್ಷತ್ರಗಳನ್ನೂ ಕುರಿತು ಎಷ್ಟೇ ವಿಚಿತ್ರವಾದ ಊಹೆಗಳನ್ನು ಹೇಳಿದರೂ ಜನನಿರ್ಲಿಪ್ತರಾಗಿ ಕುಳಿತು ಕೇಳುತ್ತಾರೆ. ಆದರೆ ನಮ್ಮ ಜೀವನ ಕ್ರಮಗಳನ್ನು ಕುರಿತು ಮಾತನಾಡಿದರೆ ನಮ್ಮ ಸುತ್ತಲಿರುವವರಲ್ಲಿ ಪ್ರತಿಯೊಬ್ಬನ ಮನಸ್ಸೂ ಕೆರಳುತ್ತದೆ.

ಗ್ರೀಸಿನಲ್ಲಿ ಅರಿಸ್ಟಾಟಲನು ನೈಜಾಂಶಗಳ ಅನ್ವೇಷಣೆಗೆ ಶ್ರಮಿಸುವುದಕ್ಕೂ ಮುಂಚೆಯೇ ಪ್ಲೇಟೋ ಸ್ಥೂಲವಾದ ಒಂದು ಊಹಾ ಪ್ರಪಂಚವನ್ನು ಮುಂದಿಟ್ಟದ್ದನು. ಹಾಗೆಯೇ ಯೂರೋಪಿನಲ್ಲೂ ಈ ನೂತನ ಯುಗದಲ್ಲಿ ಮೊದಲು ಬಂದ ರಾಜಕೀಯ ಚಿಂತನೆಗಳೆಲ್ಲ "ಕಾಲ್ಪನಿಕ ಆದರ್ಶ ರಾಜ್ಯ"ಗಳ ರೂಪದಲ್ಲಿವೆ. ಇವೆಲ್ಲ ಪ್ಲೇಟೋವಿನ "ರಿಪಬ್ಲಿಕ್" ಮತ್ತು "ನಿಯಮಗಳು" ಇವುಗಳ ನೇರ ಅನುಕರಣೆಗಳೇ. ಸರ್ ಥಾಮಸ್ ಮೋರನ ಯುಟೋಪಿಯ ಗ್ರಂಥವು ಪ್ಲೇಟೋವನ್ನು ಒಂದು ವಿಚಿತ್ರ ರೀತಿಯಲ್ಲಿ ಅನುಕರಿಸಿ ಬರೆದದ್ದಾಗಿದೆ. ಇದರ ಫಲವಾಗಿ ಬಡವರಿಗಾಗಿ ಒಂದು ಹೊಸ ಕಾನೂನು ಇಂಗ್ಲೆಂಡಿನಲ್ಲಿ ಜಾರಿಗೆ ಬಂದಿತು. ನೇಪಲ್ಸಿನ ಕಂಪಾನೆಲ್ಲನ

ಸೂರ್ಯನಗರ ಇದಕ್ಕಿಂತ ವಿಚಿತ್ರವಾದದ್ದು. ಇದರಿಂದ ಅಷ್ಟೇನೂ ಪ್ರಯೋಜನವಾಗಲಿಲ್ಲ.

ಹದಿನೇಳನೆ ಶತಮಾನದ ಕೊನೆಗೆ ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಕುರಿತ ಸಾಹಿತ್ಯಗಳು ಗಮನಾರ್ಹವಾಗಿ ಬೆಳೆಯಲು ಮೊದಲಾಗಿತ್ತು. ಈ ವಿವೇಚನೆಗಳಲ್ಲಿ ಮೊದಲಿಗರಲ್ಲಿ ಜಾನ್‌ಲಾಕ್ ಒಬ್ಬ. ಇವನು ಒಬ್ಬ ಇಂಗ್ಲಿಷ್ ಪ್ರಜಾಪ್ರಭುತ್ವವಾದಿಯ ಮಗ. ಆಕ್ಸ್‌ಫರ್ಡಿನ ವಿದ್ಯಾರ್ಥಿ. ಮೊದಲು ಇವನಿಗೆ ರಸಾಯನಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳಲ್ಲಿ ಆಸಕ್ತಿ ಉಂಟಾಯಿತು. ಆಡಳಿತ, ಶಿಕ್ಷಣ ಮತ್ತು ಸಹಿಷ್ಣುತೆಗಳನ್ನು ಕುರಿತು ಇವನು ಬರೆದಿರುವ ಪುಸ್ತಕಗಳನ್ನು ನೋಡಿದರೆ ಇವನ ಮನಸ್ಸು ಸಾಮಾಜಿಕ ಪುನರ್‌ರಚನೆಯ ಸಾಧ್ಯತೆಗಳನ್ನು ಪೂರ್ತಿ ಅರಿತುಕೊಂಡಿತ್ತು ಎನಿಸುತ್ತದೆ. ಇಂಗ್ಲೆಂಡಿನ ಜಾನ್‌ಲಾಕನಿಗಿಂತ ಈಚೆಗೆ (ಕ್ರಿ. ಶ. 1689–1755) ಜೀವಿಸಿದ್ದರೂ ಅವನ ಹಾಗೆಯೇ ಫ್ರಾನ್ಸಿನ ಮಾಂಟೆಸ್ಕ್ಯೂ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಮೂಲಭೂತವಾದ ಪರೀಕ್ಷಾತ್ಮಕ ವಿಶ್ಲೇಷಣೆಗೆ ಒಳಪಡಿಸಿದನು. ಫ್ರಾನ್ಸಿನ ನಿರಂಕುಶ ಪ್ರಭುತ್ವವನ್ನು ಆವರಿಸಿದ್ದ ಒಂದು ವಿಧದ ಮಾಂತ್ರಿಕ ಪ್ರತಿಷ್ಠೆಯನ್ನು ಇವನು ಕಿತ್ತುಹಾಕಿದನು. ಉದ್ದೇಶಪೂರ್ವಕವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಮಾನವ ಸಮಾಜವನ್ನು ಪುನರ್‌ರಚಿಸುವ ಪ್ರಯತ್ನಗಳಿಗೆ ಅಡ್ಡಿಯಾಗುತ್ತಿದ್ದ ಅನೇಕ ಸುಳ್ಳು ನಂಬಿಕೆಗಳನ್ನು ಅಳಿಸಿ ಹಾಕಿದ ಗೌರವ ಇವನಿಗೆ ಮತ್ತು ಲಾಕನಿಗೆ ಸಮಸಮವಾಗಿ ಸಲ್ಲಬೇಕು.

ಹದಿನೆಂಟನೆ ಶತಮಾನದ ನಡುವಿನ ಮತ್ತು ಕೊನೆಯ ದಶಕಗಳಲ್ಲಿ ಇವನ ನಂತರ ಬಂದ ತಲೆಮಾರಿನವರು ಇವನ ನೈತಿಕ ಮತ್ತು ಬೌದ್ಧಿಕ ವಿವರಣೆಗಳನ್ನು ಉದ್ರೇಕಪಟ್ಟುಕೊಳ್ಳದೆಯೇ ಪರಿಶೀಲಿಸಿದರು ವಿಶ್ವಕೋಶವಾದಿಗಳೆಂದು (encyclopaedists) ಹೆಸರಾದ ಅತ್ಯಂತ ತೀಕ್ಷ್ಣ ಬುದ್ಧಿಯ ಲೇಖಕರ ಗುಂಪೊಂದು ಹೊಸ ಪ್ರಪಂಚವನ್ನೇ ನಿಯೋಜಿಸಲು ಹೊರಟಿತು (1766). ಇವರಲ್ಲಿ ಅನೇಕರು ಅತ್ಯುತ್ತಮ ಜೆಸ್ಯೂಟ್ ಶಾಲೆಗಳಲ್ಲಿ ವಿದ್ಯಾರ್ಥಿಗಳಾಗಿದ್ದವರು ಮತ್ತು ಬಂಡಾಯ ಪ್ರವೃತ್ತಿಯವರು. ಇವರ ಜೊತೆ ಜೊತೆಯಲ್ಲೇ ಅರ್ಥವಾದಿಗಳು ಅಥವಾ ಪ್ರಕೃತಿ ಸಂಪತ್‌ವಾದಿಗಳು (Economists or Physiocrats) ಆಹಾರ ಸಾಮಗ್ರಿ ಹಾಗೂ ಇತರ ಅವಶ್ಯ ಪದಾರ್ಥಗಳ ಹಂಚಿಕೆಗಳನ್ನು ಕುರಿತು ಅಪಕ್ವ ರೀತಿಯಲ್ಲೇ ಆದರೂ ಧೈರ್ಯವಾಗಿ ವಿವೇಚನೆ ನಡೆಸಿದ್ದರು. “ಪ್ರಕೃತಿಯ ನಿಯಮ” (Code de la nature) ಎಂಬ ಗ್ರಂಥದ ಲೇಖಕನು ಖಾಸಗಿ ಆಸ್ತಿಯನ್ನು ಹೊಂದಿರುವುದು ನೈತಿಕವಾಗಿ ತಪ್ಪು ಎಂದು ಆಸ್ತಿ ವ್ಯವಸ್ಥೆಯನ್ನು ಖಂಡಿಸಿ ಸಮಾಜವನ್ನು ಎಲ್ಲರಿಗೂ ಸಮಾನ ಹಕ್ಕಿರುವಂತಹ ಸಮಸ್ತ ಜನಸ್ವಾಮ್ಯಕ್ಕನುಸಾರವಾಗಿ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದನು. 19ನೆ ಶತಮಾನದಲ್ಲಿದ್ದ ಸಮಾಜವಾದಿಗಳೆಂಬ ಒಂದೇ ಹೆಸರಿನಿಂದ ಕರೆಸಿಕೊಳ್ಳುವ ಹಲವಾರು ಮಂದಿ ವಿವಿಧ ರೀತಿಯ ಚಿಂತಕರ ಮೊದಲಿಗ ಇವನೆ.

ಸಮಾಜವಾದ ಎಂದರೇನು? ಇದಕ್ಕೆ ನೂರಾರು ಸೂತ್ರಗಳೂ, ಸಮಾಜವಾದಿಗಳಲ್ಲಿ ನೂರಾರು ಶಾಖೆಗಳೂ ಇವೆ. ವೈಯಕ್ತಿಕ ಸ್ವಾಮ್ಯ ಭಾವನೆಯನ್ನು ಸಾರ್ವಜನಿಕ ಹಿತದ ದೃಷ್ಟಿಯಿಂದ ವಿರೋಧಿಸುವುದೇ ಇವರ ತಿರುಳು. ಯುಗ ಯುಗಾಂತರಗಳಿಂದ ಈ ಭಾವನೆ ಹೇಗೆ ಬೆಳೆದುಬಂದಿದೆಯೆಂದು ಅತ್ಯಂತ ಸಂಕ್ಷೇಪವಾಗಿ ಸಮೀಕ್ಷಿಸೋಣ. ಇದು ಮತ್ತು ಅಂತರರಾಷ್ಟ್ರೀಯತಾ ಮನೋಭಾವ ನಮ್ಮ ರಾಜಕೀಯ ಜೀವನದ ಎರಡು ಪ್ರಮುಖ ಭಾವನೆಗಳಾಗಿವೆ. ಈ ಎರಡು ಕೇಂದ್ರಗಳ ಸುತ್ತಲೂ ನಮ್ಮ ರಾಜಕೀಯ ಜೀವನ ತಿರುಗುತ್ತಿದೆ.

ಆಸ್ತಿಯ ಕಲ್ಪನೆ ಪ್ರಾಣಿಗಳಲ್ಲಿರುವ ಹೋರಾಡುವ ಪ್ರವೃತ್ತಿಯಿಂದ ಉದ್ಭವವಾಗುತ್ತದೆ. ಮಾನವರು ಮನುಷ್ಯತ್ವ ಪಡೆಯುವದಕ್ಕೂ ಮುಂಚೆಯೇ ನಮ್ಮ ಪೂರ್ವಜನಾದ ವಾನರ "ಒಡೆಯ"ನಾಗಿದ್ದ. ಸರಳವಾದ್ದೇ ಆಗಲಿ ತನ್ನ ಸ್ವತ್ತಿಗೋಸ್ಕರ ಪ್ರಾಣಿ ಜಗಳ ಕಾಯುತ್ತದೆ. ನಾಯಿ ಮತ್ತು ಅದರ ಮೂಳೆ, ಹೆಣ್ಣು ಹುಲಿ ಮತ್ತು ಅದರ ಗವಿ, ಗರ್ಜಿಸುವ ಗಂಡುಜಿಂಕೆ ಮತ್ತು ಅದರ ಮಂದೆ ಇವೆಲ್ಲ ಒಡೆತನಕ್ಕೆ ಎದ್ದು ಕಾಣುವ ಉದಾಹರಣೆಗಳು. "ಪ್ರಾಚೀನ ಸಮತಾವಾದ" ಎಂಬ ಹೇಳಿಕೆಗಿಂತ ದಡ್ಡತನದ ಮಾತು ಸಮಾಜಶಾಸ್ತ್ರದಲ್ಲಿ ಬೇರೆ ಇಲ್ಲ. ಪ್ರಾಚೀನ ಶಿಲಾಯುಗದ ಗಣಕುಟುಂಬದ (Family tribe) ಮುದುಕನು ತನ್ನ ಹೆಂಡಿರು ಮತ್ತು ಹೆಣ್ಣುಮಕ್ಕಳು ತನ್ನ ಸಲಕರಣೆಗಳು, ತನ್ನ ಸುತ್ತಲ ಆವರಣ ಇವೆಲ್ಲದರ ಒಡೆತನದ ಹಕ್ಕನ್ನು ಸಾಧಿಸುತ್ತಿದ್ದನು. ಮತ್ತೆ ಯಾವನಾದರೂ ಗಂಡಸು ತನ್ನ ಕಣ್ಣಳತೆಯ ಈ ಪ್ರಪಂಚದೊಳಗೆ ಬಂದರೆ ಅವನೊಡನೆ ಹೋರಾಡಿ ತನ್ನಿಂದ ಸಾಧ್ಯವಾದಲ್ಲಿ ಅವನನ್ನು ಕೊಲ್ಲುತ್ತಿದ್ದನು. ಕಾಲಕಳೆದಂತೆ ಪ್ರಾಚೀನ ಯುಗದ ಈ ವೃದ್ಧ ಮುಖ್ಯಸ್ಥರು ತಮಗಿಂತ ಕಿರಿಯರ ಇರುವಿಕೆಯನ್ನು ಸಹಿಸಲು ಮೊದಲುಮಾಡಿದರು; ಈ ಕಿರಿಯರು ಕುಲದ ಹೊರಗಿನಿಂದ ಹಿಡಿದು ತಂದ ಹೆಂಡತಿಯರು, ಅವರೇ ಮಾಡಿಕೊಂಡ ಆಯುಧಗಳು, ಬೇಟೆಯಲ್ಲಿ ಕೊಂದ ಮೃಗಗಳು ಅವರದ್ದೇ ಸ್ವತ್ತು ಎಂದು ಕುಲದ ವೃದ್ಧ ಒಡೆಯ ಒಪ್ಪಿಕೊಳ್ಳಲು ನಿಧಾನವಾಗಿ ಪ್ರಾರಂಭಿಸಿದರು. ಹೀಗಾಗಿ ಯುಗಗಳು ಕಳೆದಂತೆ ನಿಧಾನವಾಗಿ ಕುಲ(tribe) ಬೆಳೆಯಿತು" ಎಂದು ಅಟ್ಕಿನ್‌ಸನ್ ತಮ್ಮ "ಆದಿಯುಗದ ನಿಯಮ" (Primal Law) ಎಂಬ ಪುಸ್ತಕದಲ್ಲಿ ಮನದಟ್ಟಾಗುವಂತೆ ತೋರಿಸಿಕೊಟ್ಟಿದ್ದಾರೆ. ವ್ಯಕ್ತಿಗಳು ಒಬ್ಬರೊಬ್ಬರ ಸ್ವತ್ತುಗಳನ್ನು ಒಪ್ಪಿಕೊಂಡಿದ್ದರಿಂದ ಮಾನವ ಸಮಾಜ ಬೆಳೆಯಿತು. ತನ್ನ ದೃಷ್ಟಿಯ ವ್ಯಾಪ್ತಿಯಲ್ಲಿರುವ ಆವರಣದಿಂದ ಮತ್ತೊಂದು ಕುಲದವರನ್ನು ಓಡಿಸಬೇಕಾಗಿ ಬಂದಾಗ ಮನುಷ್ಯರು ತಮ್ಮ ಸ್ವಾಭಾವಿಕ ಪ್ರವೃತ್ತಿಗಳನ್ನು ತಿದ್ದಿಕೊಳ್ಳಲೇಬೇಕಾಗುತ್ತಿತ್ತು. ಸುತ್ತಲಿರುವ ಗುಡ್ಡ ಕಾಡು ನದಿಗಳು "ನಿನ್ನದೂ" ಆಗಲು ಸಾಧ್ಯವಿಲ್ಲ, "ನನ್ನದೂ" ಆಗಲು ಸಾಧ್ಯವಿಲ್ಲವಾದರೆ ಅವೆಲ್ಲ "ನಮ್ಮದು" ಆಗಬೇಕಾಯಿತು. ಆದರೆ ಪ್ರತಿಯೊಬ್ಬನಿಗೂ ಅದು "ತನ್ನದು" ಆಗಿದ್ದರೆ ಚೆನ್ನ ಎನಿಸುತ್ತಿದ್ದರೂ ಅದು ನಡೆಯು

ತ್ತಿರಲಿಲ್ಲ. ಏಕೆಂದರೆ ಹಾಗೆ ವರ್ತಿಸಿದರೆ ಆ ಬೇರೆ ಕುಲದವರು ಇವರೆಲ್ಲರನ್ನೂ ನಾಶಮಾಡುತ್ತಿದ್ದರು. ಹೀಗೆ ಸಮಾಜ ಎಂದರೆ ಮೊದಲಿನಿಂದಲೂ ಒಡೆತನದ ಹಕ್ಕನ್ನು ಮಿತಗೊಳಿಸುವ ಒಂದು ವಿಷಯ. ಇಂದಿನ ನಾಗರಿಕ ಪ್ರಪಂಚಕ್ಕಿಂಥ ಪಶುಪ್ರಾಣಿಗಳಲ್ಲಿ ಹಾಗೂ ಪ್ರಾಚೀನ ಮನುಷ್ಯನಲ್ಲಿ ಒಡೆತನದ ಹಕ್ಕಿನ ಮನೋಭಾವ ತುಂಬಾ ತೀಕ್ಷ್ಣ. ಈ ಭಾವನೆ ನಮ್ಮ ಬುದ್ಧಿಗಿಂತಲೂ ನಮ್ಮ ಹುಟ್ಟರಿವಿನಲ್ಲಿ ಬಲವಾಗಿ ಬೇರೂರಿರುತ್ತದೆ.

ಕಾಡುಜನರು ಹಾಗೂ ಶಿಕ್ಷಣವೇ ಇಲ್ಲದ ಮನುಷ್ಯರಲ್ಲಿ ಎಂತಹ ವಸ್ತುವಾದರೂ ಸರಿ ಒಬ್ಬರ ಸ್ವತ್ತಾಗಬಹುದೆಂಬ ಭಾವನೆ ಇರುತ್ತದೆ. ಹೋರಾಡಿ ಗೆಲ್ಲಬಹುದಾದು ದೆಲ್ಲವೂ ತಮ್ಮ ಸ್ವತ್ತಾಗುವುದು ಸಾಧ್ಯ ಎಂದು ಅವರ ಕಲ್ಪನೆ; ಹೆಂಗಸರು, ಕೊಲ್ಲದೆ ಉಳಿಸಿಕೊಂಡ ಸೆರೆಯಾಳು, ಹಿಡಿದು ತಂದ ಮೃಗ, ಅರಣ್ಯದ ಭಾಗ, ಕಲ್ಲುಗಣಿ ಹೀಗೆ. ಸಮುದಾಯ ಬೆಳೆದಂತೆ ಒಳಜಗಳಗಳನ್ನು ತಡೆಯುವುದಕ್ಕಾಗಿ ಒಂದು ಬಗೆಯ ಕಾನೂನು ವ್ಯವಸ್ಥೆ ಜಾರಿಗೆ ಬಂದಿತು. ಯಾವುದೇ ಪದಾರ್ಥದ ಸ್ವಾಮ್ಯ ವನ್ನು ಗೊತ್ತುಪಡಿಸಲು ಮಾನವರು ಒಡ್ಡೊಡ್ಡಾದ ಆದರೆ ಅಲ್ಲಿಂದಲ್ಲೇ ತೀರ್ಮಾನಕ್ಕೆ ಬರಬಹುದಾದ ಮಾರ್ಗಗಳನ್ನು ಹವಣಿಸಿಕೊಂಡರು. ಒಂದು ವಸ್ತುವನ್ನು ಉಳಿದ ಎಲ್ಲರಿಗಿಂತ ಮೊದಲು ವಶಪಡಿಸಿಕೊಂಡವರು ಅಥವಾ ಮೊದಲು ತಮ್ಮದೆಂದು ಘೋಷಿಸಿಕೊಂಡವರು ಅದರ ಒಡೆಯರಾಗುತ್ತಿದ್ದರು. ಸಾಲ ತೀರಿಸದಿದ್ದವನು ಸಾಲಕೊಟ್ಟವನ ಸ್ವತ್ತು ಎಂಬುದು ಅವರಿಗೆ ತುಂಬ ಸಹಜವಾಗಿ ಕಂಡಿತು. ಜಮೀನಿನ ಒಂದು ತುಂಡನ್ನು ಮೊದಲು ಸ್ವಾಧೀನಕ್ಕೆ ತೆಗೆದುಕೊಂಡವನು ಅನಂತರ ಅದನ್ನು ಯಾರಾದರೂ ಉಪಯೋಗಿಸಬಯಸಿದರೆ ಅವರಿಂದ ಪ್ರತಿಫಲ ವಸೂಲು ಮಾಡುವುದು ಅಷ್ಟೇ ಸ್ವಾಭಾವಿಕವಾಗಿತ್ತು. ಯಾವ ಹದ್ದು ಬಸ್ತು ಇಲ್ಲದೆ ಕಂಡಿದ್ದೆಲ್ಲವನ್ನು ತಮ್ಮದು ಎಂದುಕೊಳ್ಳುವುದರಿಂದ ಒಟ್ಟನಲ್ಲಿ ಕಡೆಗೆ ಕೆಡುಕುಂಟಾಗು ತ್ತದೆ ಎನ್ನುವುದು ಸುವ್ಯವಸ್ಥಿತ ಜೀವನದಿಂದ ಏನೇನು ಸಾಧ್ಯವೆಂದು ನಿಧಾನವಾಗಿ ಒಂದೊಂದಾಗಿ ತಿಳಿದುಬಂದಂತೆ ಮಾನವರಿಗೆ ಹೊಳೆಯಿತು. ಎಷ್ಟೋ ಸಲ ಎಷ್ಟೋ ಮನುಷ್ಯರು ಭೂಮಿಯ ಮೇಲೆ ಕಣ್ಣು ಬಿಡುವಷ್ಟರಲ್ಲೇ ಸುತ್ತಲಿನದೆಲ್ಲವನ್ನೂ ಬೇರೆಯವರು ತಮ್ಮದೆಂದು ಆಗಲೇ ಆಕ್ರಮಿಸಿಕೊಂಡಿರುವುದನ್ನು ಕಾಣುವುದು ಸಾಮಾನ್ಯವಾಗಿ ಹೋಯಿತು. ಇದು ಹೇಗಾದರೂ ಇರಲಿ, ಎಷ್ಟೋ ಜನ ಹುಟ್ಟು ವಾಗಲೇ ತಾವೇ ಮತ್ತೊಬ್ಬರ ಸ್ವತ್ತೆಂದು ಪರಿಗಣಿಸಲ್ಪಟ್ಟಿರುತ್ತಿದ್ದರು. ಮೊದ ಮೊದಲ ನಾಗರೀಕತೆಗಳ ಇಂತಹ ಸಾಮಾಜಿಕ ಹೋರಾಟಗಳನ್ನು ಈಗ ಚಿತ್ರಿಸಿ ಕೊಳ್ಳುವುದು ಕಷ್ಟ. ಸಾಲಗಳು ಬರಬರುತ್ತಾ ಒಂದು ಸಾರ್ವಜನಿಕ ಸಮಸ್ಯೆಯಾಗಿ ಪರಿಣಮಿಸಿ ಅವುಗಳನ್ನು ತೀರಿಸುವುದನ್ನು ನಿರಾಕರಿಸಬೇಕಾಯಿತು; ಅಲ್ಲದೆ ಯಾವ ಮಿತಿಯೂ ಇಲ್ಲದೆ ಎಷ್ಟಾದರೂ ಭೂಮಿಗೆ ಒಬ್ಬನೇ ಮಾಲೀಕನಾಗುವುದೂ ಸಹಾ ಹಾಗೆಯೇ ಒಂದು ಅನಾನುಕೂಲವೇ ಆಯಿತು. ಈ ವಿಷಯಗಳನ್ನು ರೋಮ್

ಪ್ರಜಾಪ್ರಭುತ್ವದಲ್ಲಿ ಸಮಾಜವು ನಿಧಾನವಾಗಿ ತಿಳಿದುಕೊಂಡಿತೆಂದು ಚರಿತ್ರೆಯಿಂದ ತಿಳಿಯುತ್ತೇವೆ. ಬೇಬಿಲೋನಿಯ ಪ್ರಭುತ್ವದ ಉತ್ತರಾರ್ಧದಲ್ಲಿ ಅಧಿಕ ಸಂಖ್ಯೆಯಲ್ಲಿ ಗುಲಾಮರನ್ನು ಹೊಂದಿರುವುದಕ್ಕೆ ತೀವ್ರವಾದ ಪ್ರತಿಬಂಧ ಹಾಕಲಾಯಿತು. ಕಡೆಗೆ ಆ ಮಹಾಕ್ರಾಂತಿಕಾರಿ ನಾಜಾರೇತಿನ ಯೇಸು ತನ್ನ ಬೋಧನೆಯಲ್ಲಿ ಆಸ್ತಿಯನ್ನು ಹಿಂದೆಂದೂ ಕಾಣದಷ್ಟು ಕಸುವಿನಿಂದ ಪ್ರತಿಭಟಿಸಿರುವುದನ್ನು ಕಾಣುತ್ತೇವೆ. ಒಂಟೆಯೊಂದು ಸೂಜಿಯ ಕಣ್ಣಿನೊಳಗೆ ತೂರುವುದು ಎಷ್ಟು ಕಷ್ಟವೋ ಅದಕ್ಕಿಂತಲೂ ಕಷ್ಟ ಆಸ್ತಿವಂತನೊಬ್ಬ ದೇವರ ಸಾಮ್ರಾಜ್ಯವನ್ನು ಪ್ರವೇಶಿಸುವುದು ಎಂದು ಆತ ಹೇಳಿದನು. ಒಬ್ಬನ ಆಸ್ತಿಯ ವ್ಯಾಪ್ತಿ ಎಷ್ಟಿರತಕ್ಕದ್ದು ಎಂದು ಈಗ ಇಪ್ಪತ್ತೈದು ಅಥವಾ ಮೂವತ್ತು ಶತಮಾನಗಳಿಂದಲೂ ಟೀಕೆ ಟಿಪ್ಪಣಿ ಅವಿರತವಾಗಿ ನಡೆಯುತ್ತಲೇ ಇವೆ. ನಜರೇತಿನ ಯೇಸುವಿನನಂತರ ಹತ್ತೊಂಭತ್ತು ನೂರುವರ್ಷಗಳಾದ ಮೇಲೆ ಕ್ರೈಸ್ತಧರ್ಮ ಬೋಧನೆಗೆ ಒಳಪಟ್ಟ ಪ್ರದೇಶಗಳಲ್ಲೆಲ್ಲಾ ಮನುಷ್ಯರನ್ನು ಆಸ್ತಿಯನ್ನಾಗಿ ಪರಿಗಣಿಸಕೂಡದೆಂಬ ಭಾವನೆ ಬಂದಿದೆ. ಉಳಿದ ಸ್ವತ್ತು ವಿಷಯದಲ್ಲೂ ‘‘ನನ್ನ ಪದಾರ್ಥವನ್ನು ನಾನು ಏನಾದರೂ ಮಾಡುತ್ತೇನೆ’’ ಎಂಬ ಮನೋಭಾವ ಅಳ್ಳಕವಾಗುತ್ತಿದೆ.

ಆದರೆ 18ನೆ ಶತಮಾನದ ಕಡೆಯ ಭಾಗದಲ್ಲಿ ಈ ವಿಷಯಗಳನ್ನು ಕುರಿತು ಇನ್ನೂ ಪ್ರಶ್ನೆಗಳು ಏಳುತ್ತಿದ್ದುವು ಅಷ್ಟೆ. ಈ ಸಂಬಂಧವಾಗಿ ಏನಾದರೂ ನಿರ್ಧಾರವಾಗಿರುವುದು ಹಾಗಿರಲಿ ವಿಷಯ ಕೂಡ ಸ್ಪಷ್ಟವಾಗಿರಲಿಲ್ಲ. ಅಂದ ಮೇಲೆ ಈ ವಿಷಯದಲ್ಲಿ ಹೀಗೆ ನಡೆಯಬೇಕೆಂದೂ ಹೇಳಲಾಗುತ್ತಿರಲಿಲ್ಲ. ರಾಜಮಹಾರಾಜರ ದುರಾಸೆ ಮತ್ತು ದುಂದುಗಾರಿಕೆ ಹಾಗೂ ಸಟ್ಟಾ ಮನೋಭಾವದ ಶ್ರೀಮಂತರ ಸುಲಿಗೆಯಿಂದ ವೈಯಕ್ತಿಕ ಆಸ್ತಿಗಳನ್ನು ರಕ್ಷಿಸಿಕೊಳ್ಳಬೇಕೆಂಬುದೇ ಈ ಚಿಂತನೆಯ ಮೊದಲ ಉದ್ದೇಶವಾಗಿತ್ತು. ಫ್ರೆಂಚ್ ಕ್ರಾಂತಿ ಮೊದಲಾಗಿದ್ದೇ ಮುಖ್ಯವಾಗಿ ಖಾಸಗಿ ಆಸ್ತಿಯನ್ನು ತೆರಿಗೆಯಿಂದ ರಕ್ಷಿಸುವುದಕ್ಕಾಗಿ. ಆದರೆ ಈ ಕ್ರಾಂತಿಯು ಸಮಾನ ತತ್ತ್ವದ ಫಲವಾಗಿ ಅದು ರಕ್ಷಿಸಬೇಕಾಗಿದ್ದ ಖಾಸಗಿ ಸ್ವತ್ತೇ ಟೀಕೆಗೊಳಗಾಯಿತು. ಅನೇಕ ಜನರಿಗೆ ಇರಲು ತಾಣವಿಲ್ಲದೆ, ತಿನ್ನಲು ಕೂಳಿಲ್ಲದೆ ಇರುವಾಗ, ಇದೆಲ್ಲ ಇದ್ದ ಜನರು ಉಳಿದವರು ದುಡಿಯದ ಹೊರತು (ಮಿತಿ ಮೀರಿ ದುಡಿಯದ ಹೊರತು ಎಂದು ಬಡವರ ಅಭಿಪ್ರಾಯವಾಗಿತ್ತು) ಅವರಿಗೆ ಇವುಗಳನ್ನು ಕೊಡಲು ಸಿದ್ಧರಿಲ್ಲದಾಗ ಎಲ್ಲರೂ ಸ್ವತಂತ್ರರು ಸಮಾನರು ಎಂದು ಹೇಗೆ ಹೇಳುವುದು ?

ಈ ಸಮಸ್ಯೆಗೆ ಒಂದು ಪ್ರಮುಖ ರಾಜಕೀಯ ತಂಡದ ಉತ್ತರ ಹೀಗಿತ್ತು ; ಎಲ್ಲವನ್ನೂ ಹಂಚಿಕೊಂಡು ಬಿಡುವುದು ಆಸ್ತಿ ಬೇಕೆಂಬ ಭಾವನೆಯನ್ನು ತೀವ್ರಗೊಳಿಸಿ ಎಲ್ಲರಿಗೂ ಆಸ್ತಿಯಿರುವಂತೆ ಮಾಡಬೇಕೆಂಬುದು ಈ ಜನರ ಇಚ್ಛೆಯಾಗಿತ್ತು. ಇದೇ ಗುರಿ ಆದರೆ ಬೇರೆ ಹಾದಿ ಪ್ರಪ್ರಥಮ ಸಮಾಜ ವಾದಿಗಳು—ಅಂದರೆ ಕಮ್ಯೂನಿಸ್ಟರದ್ದಾಗಿತ್ತು. ಇವರು ಖಾಸಗಿಸ್ವತ್ತನ್ನೇ ತೆಗೆದುಹಾಕಿಬಿಡಬೇಕೆನ್ನು

ತ್ತಿದ್ದರು. ಎಲ್ಲ ಆಸ್ತಿಯೂ ಸರ್ಕಾರಕ್ಕೆ—(ಎಂದರೆ ಪ್ರಜಾಪ್ರಭುತ್ವ ನಿಯಮದ ಸರ್ಕಾರವೆಂದು ಅವರ ಅಭಿಪ್ರಾಯ) ಸೇರಬೇಕಾಗಿತ್ತು.

ಸ್ವಾತಂತ್ರ್ಯ ಹಾಗೂ ಸುಖ, ಇವೇ ಅಂತಿಮ ಗುರಿಗಳಾಗಿದ್ದ ಜನರಲ್ಲಿಯೇ ಕೆಲವರು ಆಸ್ತಿಯೇ ಇಲ್ಲದಂತೆ ಮಾಡಬೇಕೆಂದೂ ಮತ್ತೆ ಕೆಲವರು ಆಸ್ತಿಯ ಭಾವನೆ ಮತ್ತೂ ತೀಕ್ಷ್ಣವಾಗುವಂತೆ ಮಾಡಬೇಕೆಂದೂ ಹೇಳುತ್ತಿದ್ದುದು ವಿರೋಧಾಭಾಸವೇ ಸರಿ. ಆದರೆ ಅವರು ಹಾಗೆನ್ನುತ್ತಿದ್ದುದು ನಿಜ. ಇದಕ್ಕೆ ವಿವರಣೆ ಹೀಗೆ ಕೊಡಬಹುದು. ಒಡೆತನ ಎಂದರೆ ಒಂದೇ ವಿಷಯವಲ್ಲ, ಬೇರೆ ಬೇರೆ ವಿಷಯಗಳ ಒಂದು ಸಮುದಾಯ.

ಹತ್ತೊಂಬತ್ತನೇ ಶತಮಾನ ನಡೆದು ಬಂದಂತೆ ಈ ಕೆಳಕಂಡ ವಿಷಯಗಳನ್ನು ಜನ ಅರಿತುಕೊಂಡರು. ಆಸ್ತಿಯೆಂದರೆ ಸರಳವಾಗಿ ವಿವರಿಸಬಹುದಾದ ಒಂದೇ ಸಂಗತಿಯಲ್ಲ ; ಬೇರೆ ಬೇರೆ ಬೆಲೆ ಹಾಗೂ ಪರಿಣಾಮಗಳನ್ನುಳ್ಳ ಒಡೆತನಗಳ ಒಂದು ದೊಡ್ಡ ಸಂಕೀರ್ಣ. ಶರೀರ, ಕಲಾವಿದನ ಸಾಧನಗಳು (Implements), ಬಟ್ಟೆ ಬರೆ, ಹಲ್ಲುಜ್ಜುವ ಬ್ರಷ್ಷು ಇಂಥ ಅನೇಕ ವಸ್ತುಗಳು ನಿರ್ವಿವಾದವಾಗಿ ಒಬ್ಬ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು. ರೈಲ್ವೇಗಳು, ವಿವಿಧ ಯಂತ್ರೋಪಕರಣಗಳು, ಮನೆಗಳು, ತೋಟಗಳು, ಮೋಜಿಗಾಗಿ ಉಪಯೋಗಿಸುವ ದೋಣಿಗಳು, ಇಂತಹ ವಸ್ತುಗಳಲ್ಲಿ ಪ್ರತಿಯೊಂದನ್ನೂ ಎಚ್ಚರಿಕೆಯಿಂದ ಪರಿಶೀಲಿಸಿ ಇವು ಖಾಸಗಿ ಸ್ವತ್ತಾಗಲು ಏನೇನು ನಿರ್ಬಂಧಗಳಿವೆ, ಎಷ್ಟರ ಮಟ್ಟಿಗೆ ಇವು ಸಾರ್ವಜನಿಕರ ವ್ಯಾಪ್ತಿಗೆ ಬರುತ್ತವೆ, ಎಲ್ಲರಿಗೂ ಅನುಕೂಲವಾಗುವುದಕ್ಕಾಗಿ ಸರ್ಕಾರ ಇವುಗಳನ್ನು ಹೇಗೆ ವಹಿಸಿಕೊಂಡು ಜನರ ಬಳಕೆಗೆ ಬಿಟ್ಟುಕೊಡಬಹುದು ಎಂದು ನಿರ್ಧರಿಸಬೇಕು. ಪ್ರಾಯೋಗಿಕ ಮಟ್ಟದಲ್ಲಿ ಈ ಅಂಶಗಳು ರಾಜ್ಯ ಶಾಸ್ತ್ರಕ್ಕೆ ಅಂದರೆ ದಕ್ಷವಾದ ರಾಜ್ಯಾಡಳಿತವನ್ನು ರೂಪಿಸಿ ನಡೆಸಿಕೊಂಡು ಬರುವುದಕ್ಕೆ ಸೇರುತ್ತವೆ. ಇಲ್ಲಿಂದ ಮುಂದೆ ಈ ಪ್ರಶ್ನೆಗಳು ಸಮಾಜ ಮನೋ ವಿಜ್ಞಾನದಲ್ಲಿ ಮತ್ತಷ್ಟು ಪ್ರಶ್ನೆಗಳನ್ನೆಬ್ಬಿಸಿ ಶಿಕ್ಷಣ ವಿಜ್ಞಾನದ ಚಿಂತನೆಗಳೊಡನೆ ಪರಸ್ಪರ ಪ್ರತಿಕ್ರಿಯೆ ಬೀರುತ್ತವೆ. "ಆಸ್ತಿಯ ವಿವೇಚನೆ" ಇನ್ನೂ ಒಂದು ವಿಜ್ಞಾನ ಶಾಖೆಯ ಮಟ್ಟಕ್ಕೆ ಬಂದಿಲ್ಲ ; ಇನ್ನೂ ಭಾವೋದ್ರೇಕದಿಂದ ತುಂಬಿದ ಒಂದು ದೊಡ್ಡ ಹುಡುಗು ತೊಟ್ಟಿಯ ರೂಪದಲ್ಲೇ ಇದೆ. ಒಂದು ಕಡೆ ವ್ಯಕ್ತಿ ವಾದಿಗಳು (individualists) ಈಗ ನಮಗಿರುವ ಸ್ವಾಮ್ಯದ ಹಕ್ಕುಗಳನ್ನು ರಕ್ಷಿಸಿ ವಿಸ್ತರಿಸಬೇಕೆಂದು ಹೇಳಿದರೆ ಮತ್ತೊಂದು ಕಡೆ ಸಮಾಜ ವಾದಿಗಳು ನಮ್ಮ ಸ್ವಾಮ್ಯಗಳನ್ನೆಲ್ಲ ಒಂದು ಗೂಡಿಸಿ ಒಡೆತನದ ವಹಿವಾಟುಗಳಿಗೆಲ್ಲ ತಡೆ ಹಾಕಬೇಕೆನ್ನುತ್ತಾರೆ. ಸರ್ಕಾರದ ಕೆಲಸ ನಡೆಯಲು ಅತ್ಯಗತ್ಯವಾದ ತೆರಿಗೆ ಕೊಡುವುದನ್ನೂ ಸಹಿಸಲಾರದ ಉತ್ಕಟ ವ್ಯಕ್ತಿ ವಾದಿಯಿಂದ ಹಿಡಿದು ಯಾವ ವ್ಯಕ್ತಿಯೂ ಏನನ್ನೂ ತನ್ನದು ಎಂದು ಕೊಳ್ಳಲೇ ಬಾರದು ಎನ್ನುವ ಉಗ್ರ ಕಮ್ಯೂನಿಸ್ಟರವರೆಗೆ ಎಲ್ಲ ವಿಧದ ಜನರೂ ಈಗ ಇದ್ದಾರೆ. ಇಂದು ಸಾಮಾನ್ಯವಾಗಿ ಕಾಣಬರುವ ಸೋಷಿಯಲಿಸ್ಟರನ್ನು

"ರಾಷ್ಟ್ರ ಸೌಮ್ಯ ವಾದಿ"ಗಳೆಂದು ಕರೆಯಬಹುದು. ಇವರು ತಕ್ಕಷ್ಟು ಪ್ರಮಾಣದ ವೈಯಕ್ತಿಕ ಆಸ್ತಿ ಇರಬಹುದು ಎನ್ನುತ್ತಾರೆ. ಆದರೆ ಶಿಕ್ಷಣ, ಸಾರಿಗೆ, ಗಣಿಗಳು ಭೂಮಿ, ಅನೇಕ ಮುಖ್ಯ ಸರಕುಗಳ ಸಗಟು ಉತ್ಪಾದನೆ, ಇಂತಹ ಕೆಲವು ವಲಯ ಗಳು ಬಹು ಚೆನ್ನಾಗಿ ವ್ಯವಸ್ಥಿತವಾದ ಸರ್ಕಾರದ ಕೈಯಲ್ಲಿರಬೇಕೆನ್ನುತ್ತಾರೆ. ಈಗಿನ ಕಾಲದಲ್ಲಿ ವಿವೇಚನೆಯುಳ್ಳ ಮನುಷ್ಯರೆಲ್ಲ ವೈಜ್ಞಾನಿಕ ತಳಹದಿಯುಳ್ಳ, ಎಚ್ಚರಿಕೆ ಯಿಂದ ನಿಯೋಜಿಸಿದ ಸಮಾಜ ವಾದದ ಕಡೆಗೆ ಒಮ್ಮುಖವಾಗಿ ಚಲಿಸುತ್ತಿದ್ದಾರೆ ಎನಿಸುತ್ತದೆ. ಹಾಗೆಯೇ ಬೃಹತ್ಪ್ರಮಾಣದ ಕಾರ್ಯಗಳಲ್ಲಿ ಶಿಕ್ಷಿತನಲ್ಲದ ಮನುಷ್ಯ ಫಲಪ್ರದ ರೀತಿಯಲ್ಲಿ ಸುಲಭವಾಗಿ ಸಹಕರಿಸಲಾರನೆಂದೂ ತಿಳಿದುಬರುತ್ತಿದೆ. ಸರ್ಕಾರ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಾ ಹೋಗಿ ಖಾಸಗಿ ವಲಯಗಳಿಂದ ಜವಾಬ್ದಾರಿ ಗಳನ್ನು ಒಂದೊಂದಾಗಿ ವಹಿಸಿಕೊಂಡಂತೆ ಜನತೆಯ ಶಿಕ್ಷಣದಲ್ಲಿಯೂ ಅದಕ್ಕೆ ಸರಿಯಾದ ಮುನ್ನಡೆಯಾಗಬೇಕು ಮತ್ತು ಯೋಗ್ಯವಾದ ವಿಮರ್ಶಾ ಶಕ್ತಿ ಮತ್ತು ನಿಯಂತ್ರಣ ವ್ಯವಸ್ಥೆಯಾಗಬೇಕು ಎಂದು ಬರಬರುತ್ತಾ ಹೆಚ್ಚು ಸ್ಪಷ್ಟವಾಗುತ್ತಾ ಇದೆ. ಇಂದಿನ ಪತ್ರಿಕೋದ್ಯಮ ಮತ್ತು ರಾಜಕೀಯ ಪದ್ಧತಿಗಳು ದೊಡ್ಡ ಪ್ರಮಾಣದಲ್ಲಿ ಸಾಂಘಿಕ ಚಟುವಟಿಕೆಗಳ ವಿಸ್ತರಣೆಯಾಗಲು ತಕ್ಕಷ್ಟು ಇನ್ನೂ ಸುಸಂಸ್ಕೃತವಾಗಿಲ್ಲ.

ಒಂದು ಕಾಲದಲ್ಲಿ ಮಾಲೀಕರು ಮತ್ತು ಕೆಲಸಗಾರರ ಮಧ್ಯೆ ಇದ್ದ—ಮುಖ್ಯ ವಾಗಿ ಸ್ವಾರ್ಥ ಯಜಮಾನರು ಮತ್ತು ಪ್ರತಿಭಟನಾ ಭಾವನೆಯ ಕೆಲಸಗಾರರ ಮಧ್ಯೆ ಇದ್ದ—ಒತ್ತಡಗಳ ಫಲವಾಗಿ ಪ್ರಪಂಚದಾದ್ಯಂತ ಬಹು ಉಗ್ರವಾದ ಮೂಲ ರೂಪದ ಕಮ್ಯೂನಿಸಂ ಹರಡಿತು. ಇದಕ್ಕೇ ಮಾರ್ಕ್ಸನ ಹೆಸರಿರುವುದು. ಈ ಕೆಳಗೆ ಕಾಣಿಸಿರುವ ಭಾವನೆಗಳ ಆಧಾರದ ಮೇಲೆ ಮಾರ್ಕ್ಸ್ ತನ್ನ ಸಿದ್ಧಾಂತವನ್ನು ಬೆಳೆಸಿದನು ; ಮನುಷ್ಯರ ಆರ್ಥಿಕ ಅವಶ್ಯಕತೆ ಅವರ ಚಿಂತನೆಗೆ ಒಂದು ಪರಿಮಿತಿ ಯನ್ನು ಹಾಕುತ್ತದೆ. ಅನುಕೂಲಸ್ಥರಾಗಿದ್ದು ಕೆಲಸದವರನ್ನಿಟ್ಟುಕೊಳ್ಳುವಂತಹ ವರ್ಗದ ಜನರಿಗೂ ಅವರ ಕೆಳಗೆ ಕೆಲಸ ಮಾಡುತ್ತಿರುವ ಜನ ರಾಶಿಗೂ ತಮ್ಮ ತಮ್ಮ ಹಿತಾರ್ಥಗಳ ವಿಷಯದಲ್ಲಿ ಸಹಜವಾಗಿಯೇ ಘರ್ಷಣೆ ಇರುತ್ತದೆ. ಯಾಂತ್ರಿಕ ಕ್ರಾಂತಿಯ ಫಲವಾಗಿ ಸಾಮಾನ್ಯ ಜನರಲ್ಲಿಯೂ ವಿದ್ಯಾಭ್ಯಾಸ ಹರಡುತ್ತದೆ. ಬಹು ಸಂಖ್ಯಾತರಾದ ಕೆಲಸಗಾರರಲ್ಲಿ ಇದರಿಂದ ವರ್ಗ ಪ್ರಜ್ಞೆ ಬೆಳೆಯುತ್ತಾ ಹೋಗಿ ಆಳುವ ಅಲ್ಪಸಂಖ್ಯಾತರ (ಇವರೂ ವರ್ಗ ಪ್ರಜ್ಞೆಯುಳ್ಳವರು) ಮೇಲಿನ ವರ್ಗ ವೈರ ಮತ್ತೂ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಯಾವುದಾದರೊಂದು ಮಾರ್ಗದಿಂದ ವರ್ಗ ಪ್ರಜ್ಞೆ ಯುಳ್ಳ ಕೆಲಸಗಾರರು ಅಧಿಕಾರವನ್ನು ಸ್ವಾಧೀನ ಮಾಡಿಕೊಂಡು ಒಂದು ಹೊಸತಾದ ಸಮಾಜ ವಾದಿ ರಾಜ್ಯವನ್ನು ಪ್ರಾರಂಭಿಸುವರು ಎಂದು ಮಾರ್ಕ್ಸ್ ಭವಿಷ್ಯ ನುಡಿದನು. ಆ ತರಹದ ವೈರ, ಬಂಡಾಯ ಮತ್ತು ಕ್ರಾಂತಿಗಳ ಸಾಧ್ಯತೆ ಅರ್ಥವಾಗು ತ್ತದೆ. ಆದರೆ ಇದರಿಂದ ಸಾಮಾಜಿಕವಾಗಿ ವಿನಾಶಕಾರಿಯಾದ ಕ್ರಿಯೆಯೊಂದು

ನಡೆಯುವುದು ಖಂಡಿತ ಎಂದು ಹೇಳಬಹುದೇ ಹೊರತು ಒಂದು ಹೊಸ ಸಮಾಜ ವಾದಿ ರಾಜ್ಯ ಅಥವಾ ಅಂಥದೇ ಮತ್ತೊಂದು ಇದರ ಫಲವಾಗಿ ಬಂದೇ ಬರುತ್ತದೆ ಎಂದು ಒಪ್ಪಿಕೊಳ್ಳುವುದು ಕಷ್ಟ.

ರಾಷ್ಟ್ರಗಳ ಮಧ್ಯೆ ಇರುವ ದ್ವೇಷಗಳ ಸ್ಥಾನದಲ್ಲಿ ವರ್ಗ ದ್ವೇಷವನ್ನು ತರಲು ಮಾರ್ಕ್ಸ್ ಪ್ರಯತ್ನಪಟ್ಟನು. ಮಾರ್ಕ್ಸ್‌ನ ಫಲವಾಗಿ ಒಂದಾಗುತ್ತಾಲೊಂದು ಮೂರು ಅಂತರ ರಾಷ್ಟ್ರೀಯ ಸಮ್ಮೇಳನಗಳು ನಡೆದಿವೆ. ಆದರೆ ಆಧುನಿಕ ವ್ಯಕ್ತಿ ಸ್ವಾತಂತ್ರ್ಯ ವಾದವನ್ನು ಪ್ರಾರಂಭ ಬಿಂದುವನ್ನಾಗಿಟ್ಟುಕೊಂಡೂ ಅಂತರ ರಾಷ್ಟ್ರೀಯ ಭಾವನೆಗಳನ್ನು ಮುಟ್ಟಲು ಸಾಧ್ಯ. ಭೂಮಿಯಲ್ಲಿ ಎಲ್ಲ ಕಡೆಯಲ್ಲಿಯೂ ಸಂಪತ್ಸಮೃದ್ಧಿಯಿರಬೇಕಾದರೆ ಎಲ್ಲ ಪ್ರದೇಶಗಳ ನಡುವೆ ಯಾವ ಎಡರು ತೊಡರೂ ಇಲ್ಲದೆ ವ್ಯಾಪಾರ ನಡೆಯಬೇಕು ಎಂಬ ಗ್ರಹಿಕೆ ಶ್ರೇಷ್ಠ ಅರ್ಥ ಶಾಸ್ತ್ರಜ್ಞನಾದ ಆಡಂಸ್ಮಿತ್ತನ ಕಾಲದಿಂದಲೂ ಹೆಚ್ಚುತ್ತಾ ಬಂದಿದೆ. ಆ ಸರ್ಕಾರವನ್ನು ವಿರೋಧಿಸುವ ವ್ಯಕ್ತಿ ವಾದಿಯು ಪ್ರಪಂಚವನ್ನು ರಾಷ್ಟ್ರಗಳನ್ನಾಗಿ ವಿಂಗಡಿಸುವುದರ ಫಲವಾದ ಸರಹದ್ದುಗಳಿಂದ ಉಂಟಾಗುವ ಸುಂಕಗಳು, ಸ್ವತಂತ್ರ ಚಲನವಲನಗಳ ಮೇಲಿನ ನಿರ್ಬಂಧಗಳು ಇವುಗಳನ್ನು ಸಹ ವಿರೋಧಿಸುತ್ತಾನೆ. ವ್ಯಕ್ತಿಗಳು ಸ್ವತಂತ್ರವಾಗಿ ವ್ಯಾಪಾರ ಮಾಡಬೇಕೆಂಬ ವಿಕ್ಟೋರಿಯ ರಾಣಿಯ ಕಾಲದ ಬ್ರಿಟಿಷ್ ವರ್ತಕರ ಮನೋವೃತ್ತಿ ಮತ್ತು ಮಾರ್ಕ್ಸ್‌ನ ವರ್ಗ ಕಲಹ-ಸಮಾಜವಾದ ಇವು ಹೊರ ನೋಟ ಒಳ ತಿರುಳು ಎರಡರಲ್ಲೂ ಅತ್ಯಂತ ಭಿನ್ನ ಭಾವನೆಗಳು. ಇವುಗಳಲ್ಲಿ ಮೂಲ ಭೂತವಾದ ವ್ಯತ್ಯಾಸಗಳೇ ಇವೆ. ಹೀಗಿದ್ದರೂ ಈ ಭಾವನೆಗಳು ಮಾನವ ವ್ಯವಹಾರಗಳನ್ನು ರಾಷ್ಟ್ರಗಳ ಸರಹದ್ದು ಮತ್ತು ಪರಿಮಿತಿಗಳನ್ನು ಮೀರಿದ, ನೂತನ ವಾದ, ಪ್ರಪಂಚಕ್ಕೆಲ್ಲ ಸಲ್ಲುವ ರೀತಿಯಲ್ಲಿ ನಡೆಸಬೇಕು ಎಂಬ ಅಭಿಪ್ರಾಯದ ದಿಕ್ಕಿನಲ್ಲಿ ಸಾಗುತ್ತಿರುವುದು ತುಂಬ ಗಮನಾರ್ಹ. ಸಿದ್ಧಾಂತಗಳಿಂದ ಹುಟ್ಟಿದ ತರ್ಕ ನಿಜ ಸ್ಥಿತಿಯ ಪ್ರಮಾಣವೆದುರು ಸೋಲಬೇಕಾಗುತ್ತದೆ. ವ್ಯಕ್ತಿತ್ವವಾದ ಮತ್ತು ಸಮಾಜ ವಾದ ಎಂಬ ಎರಡು ಅತ್ಯಂತ ವಿಭಿನ್ನ ಬಿಂದುಗಳಿಂದ ಹೊರಟರೂ ಈ ಎರಡೂ ಮಾರ್ಗಗಳ ಗುರಿ ಒಂದೇ, ಇವು ಒಂದೇ ಅನ್ವೇಷಣೆಯ ಭಾಗಗಳು ಎಂದು ನಾವು ಗ್ರಹಿಸತೊಡಗುತ್ತೇವೆ. ಮಾನವರೆಲ್ಲಾ ಒಂದಾಗಿ ವ್ಯವಹರಿಸಲು ಸಾಧ್ಯವಾಗುವಂತೆ ಮಾಡುವ ವಿಶಾಲವಾದ ಸಾಮಾಜಿಕ ಹಾಗೂ ರಾಜಕೀಯ ಭಾವನೆಗಳಿಗಾಗಿ ಹಾಗೂ ಅವುಗಳ ವ್ಯಾಖ್ಯಾನಗಳಿಗಾಗಿ ಈ ಅನ್ವೇಷಣೆ ನಡೆದಿದೆ. ಇದು ಮೊದಲು ಆಗಿದ್ದು ಯೂರೋಪಿನಲ್ಲಿ. ಪವಿತ್ರ ರೋಮನ್ ಸಾಮ್ರಾಜ್ಯ ಮತ್ತು ಕ್ರೈಸ್ತ ಧರ್ಮಗಳ ಚಿಂತನೆಗಳಲ್ಲಿ ಜನರ ನಂಬಿಕೆ ಸವೆಯುತ್ತಾ ಬಂದು ಸಂಶೋಧನಾ ಯುಗ ಮುನ್ನಡೆದಂತೆ ಮೆಡಿಟರೇನಿಯನ್ ಸಮುದ್ರದ ಸುತ್ತಲ ಪ್ರದೇಶಕ್ಕೆ ಸೀಮಿತ ವಾಗಿದ್ದ ಈ ಅನ್ವೇಷಣೆ ಈ ವಿಶಾಲ ಸಂಪೂರ್ಣ ಪ್ರಪಂಚದಷ್ಟಕ್ಕೂ ಪಸರಿಸಿ ತೀವ್ರ ವಾಗುತ್ತಾ ಬಂದಿದೆ.

ಮಾನವ ವರ್ಗವೆಲ್ಲ ಒಂದೇ ಸಮುದಾಯ ಎಂದೂ ಅನೇಕ ವಿಷಯಗಳಲ್ಲಿ ಪ್ರಪಂಚಾದ್ಯಂತ ಸಾಮಾನ್ಯ ನಿಯಂತ್ರಣಗಳಿರುವುದು ಅವಶ್ಯಕ ಎಂದೂ ಸ್ಪಷ್ಟವಾಗುತ್ತಿದೆ. ಉದಾಹರಣೆಗೆ ನಮ್ಮ ಭೂ ಗ್ರಹ ಆರ್ಥಿಕವಾಗಿ ಒಂದೇ. ಅದರ ಪ್ರಾಕೃತಿಕ ಸಂಪತ್ತನ್ನು ಸರಿಯಾಗಿ ಉಪಯೋಗಿಸಬೇಕಾಗಿದ್ದರೆ ಒಂದು ವ್ಯಾಪಕ ದೃಷ್ಟಿ ಅತ್ಯವಶ್ಯಕ. ಸಂಶೋಧನೆಗಳ ಫಲವಾಗಿ ಮನುಷ್ಯ ಪ್ರಯತ್ನದ ಶಕ್ತಿ ಮತ್ತು ವ್ಯಾಪ್ತಿಗಳೆರಡೂ ತುಂಬಾ ಹೆಚ್ಚಾಗಿವೆ. ವ್ಯವಹಾರಗಳನ್ನು ಈಗ ನಡೆಸುತ್ತಿರುವಂತೆ ಹರುಕು ಮುರುಕಾಗಿ ಜಗಳವಾಡಿಕೊಂಡು ನಡೆಸಿಕೊಂಡು ಹೋದರೆ ಅದರಿಂದ ತುಂಬಾ ನಷ್ಟ ಮತ್ತು ಅಪಾಯವಾಗುತ್ತದೆ. ಹಣಕಾಸಿಗೆ ಮತ್ತು ನಾಣ್ಯ ವಿನಿಮಯಗಳಿಗೆ ಸಂಬಂಧಿಸಿದ ಸಂಗತಿಗಳು ಕೂಡ ಸಮಗ್ರ ಪ್ರಪಂಚದ ದೃಷ್ಟಿಯಿಂದ ವ್ಯವಹರಿಸಿದರೆ ಮಾತ್ರ ಯಶಸ್ವಿಯಾಗಬಹುದಾದ ಜಾಗತಿಕ ವಿಷಯಗಳಾಗುತ್ತಿವೆ. ಸಾಂಕ್ರಾಮಿಕ ರೋಗಗಳು, ಜನಸಂಖ್ಯೆಯ ಏರುವಿಕೆ, ಜನವಲಸೆ ಹೋಗುವುದು ಇವೆಲ್ಲ ಈಗ ಸ್ಪಷ್ಟವಾಗಿ ಜಾಗತಿಕ ವಿಷಯಗಳು. ಮಾನವ ಚಟುವಟಿಕೆಗಳ ಶಕ್ತಿ ಮತ್ತು ವ್ಯಾಪ್ತಿ ಹೆಚ್ಚಾಗಿರುವುದರಿಂದ ಯುದ್ಧ ತುಂಬಾ ವಿನಾಶಕಾರಿಯಾಗಿದೆ ಹಾಗೂ ತೀವ್ರವಾದ ಅವ್ಯವಸ್ಥೆಯನ್ನುಂಟು ಮಾಡುತ್ತದೆ. ಅಷ್ಟೇ ಅಲ್ಲದೆ ಜನಾಂಗಗಳ ಮಧ್ಯೆ ಮತ್ತು ಸರ್ಕಾರಗಳ ನಡುವೆ ಇರುವ ಸಮಸ್ಯೆಗಳನ್ನು ಪರಿಹರಿಸುವ ಒಡ್ಡೊಡ್ಡಾದ ಮಾರ್ಗವೆಂದುಕೊಂಡರೂ ಇದರಿಂದ ಅಂತಹ ಉಪಯೋಗವೂ ಆಗುತ್ತಿಲ್ಲ. ಈ ಎಲ್ಲ ಸಂಗತಿಗಳನ್ನೂ ಸರಿಪಡಿಸಲು ಇದುವರೆಗೂ ಯಾವಾಗಲೂ ಎಲ್ಲಿಯೂ ಯಾವ ಸರ್ಕಾರವೂ ಪಡೆದಿರಲಿಲ್ಲವಾದಂತಹ ವಿಶಾಲವಾದ ವ್ಯಾಪ್ತಿ ಅವುಗಳಿಂದ ಕೂಡಿದ ಹತೋಟಿಗಳು ಮತ್ತು ವಿಧಾಯಕ ಶಕ್ತಿಗಳು ಬೇಕಾಗಿವೆ.

ಆದರೆ ಪ್ರಪಂಚವನ್ನೆಲ್ಲಾ ಜಯಿಸುವುದರ ಮೂಲಕವೋ ಅಥವಾ ಈಗಿರುವ ಎಲ್ಲ ಸರ್ಕಾರಗಳ ಮಿಲನದಿಂದಲೋ ರೂಪುಗೊಳ್ಳುವ ಒಂದು ಮಹಾ ಆಡಳಿತವೇ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂದು ಕೊಳ್ಳುವ ಹಾಗಿಲ್ಲ. ಈಗಿರುವ ಸಂಸ್ಥೆಗಳನ್ನು ಹೋಲಿಸಿಕೊಂಡು ಮಾನವ ವರ್ಗಕ್ಕೆಲ್ಲ ಒಂದು ಪಾರ್ಲಿಮೆಂಟ್, ಪ್ರಪಂಚ ಪರಿಷತ್, ಭೂ ಮಂಡಲಕ್ಕೆಲ್ಲ ಒಬ್ಬ ಸಮ್ರಾಟ ಅಥವಾ ಅಧಿಪತಿ ಎಂದು ಯೋಚನೆ ಮಾಡ ತೊಡಗುತ್ತಾರೆ. ಈ ತೀರ್ಮಾನವೇ ಇಲ್ಲಿ ನಮ್ಮೆಲ್ಲರ ಮೊದಲ ಸಹಜ ಪ್ರತಿಕ್ರಿಯೆ ಈಗ ಅರ್ಧ ಶತಮಾನದಿಂದಲೂ ಇಂತಹ ಹಲವು ಸಲಹೆಗಳು ಮತ್ತು ಪ್ರಯತ್ನಗಳು ಮುಂದೆ ಬಂದಿದ್ದು ಅವುಗಳ ಬಂಧವಾಗಿ ಅನೇಕ ಚರ್ಚೆಗಳು ನಡೆದಿವೆ, ಅನುಭವಗಳೂ ಆಗಿವೆ. ಇದರ ಫಲವೆಂದರೆ ಅಂತಹ ಮೊದಲ ಸಹಜ ಸ್ಫುರಿತ ಭಾವನೆಯಲ್ಲಿ ನಂಬಿಕೆ ಹೋಗುತ್ತಿದೆ. ಪ್ರಪಂಚದ ಏಕತೆಗಾಗಿ ಅಂತಹ ಮಾರ್ಗ ಹಿಡಿದಾಗ ಎದುರಾಗುವ ಅಡ್ಡಿಗಳು ನಿಜಕ್ಕೂ ಮಿತಿ ಮೀರಿದುವು. ಈಗ ಪ್ರಪಂಚಾದ್ಯಂತ ಅಧಿಕಾರವಿರುವ ವಿಶೇಷ ಸಮಿತಿಗಳು ಅಥವಾ ಸಂಸ್ಥೆಗಳತ್ತ ದೃಷ್ಟಿ ಹರಿದಿದೆ. ಈ ಸಂಸ್ಥೆ–ಸಮಿತಿಗಳು ಪ್ರಕೃತಿ ಸಂಪತ್ತು ವ್ಯರ್ಥವಾಗುವುದು ಮತ್ತು

ಆದರ ಅಭಿವೃದ್ಧಿ, ಶ್ರಮಜೀವಿಗಳ ಪರಿಸ್ಥಿತಿ ಎಲ್ಲ ಕಡೆ ಒಂದೇ ಇರುವಂತೆ ಸರಿ ಮಾಡುವುದು, ವಿಶ್ವಶಾಂತಿ, ಹಣವಿನಿಮಯ, ಜನಸಾಂದ್ರತೆ, ಆರೋಗ್ಯ ಇತ್ಯಾದಿ ಗಳನ್ನು ನೋಡಿಕೊಳ್ಳುವುವು.

ಪ್ರಪಂಚದ ಎಲ್ಲ ಸಾಮಾನ್ಯ ವಿಷಯಗಳೂ ಒಂದೇ ವ್ಯವಹಾರವೆಂಬಂತೆ ನಿರ್ವಹಿಸಲ್ಪಡುತ್ತಿವೆಯೆಂದು ಅರಿತ ಮೇಲೂ ಪ್ರಪಂಚಾಡಳಿತ ಬಂದಿದೆಯೆಂದು ಜನತೆ ತಿಳಿದುಕೊಳ್ಳದೆ ಹೋಗಬಹುದು. ಆದರೆ ಅಷ್ಟರ ಮಟ್ಟಿಗೆ ಮಾನವರಲ್ಲಿ ಒಗ್ಗಟ್ಟು ಏರ್ಪಡಬೇಕಾದಲ್ಲಿ, ರಾಷ್ಟ್ರಗಳ ನಡುವೆ ಇರುವ ಸಂಶಯ ಮನೋಭಾವ ಹಾಗೂ ಅಸೂಯೆಗಳನ್ನು ಇಂತಹ ಅಂತರರಾಷ್ಟ್ರೀಯ ವ್ಯವಸ್ಥೆಗಳು ಮೀರಿ ನಿಲ್ಲುವ ಮೊದಲು ಮಾನವಕುಲದ ಸಾಮಾನ್ಯರೆಲ್ಲರ ಮನಸ್ಸಿನಲ್ಲಿ ಮಾನವರೆಲ್ಲ ಒಂದೇ ಎಂಬ ಭಾವ ಬರಬೇಕು ಮತ್ತು ಮಾನವನೆಲ್ಲ ಒಂದೇ ಕುಟುಂಬದವರು ಎಂಬ ಸಂಗತಿ ವಿಶ್ವಾದ್ಯಂತ ಬೋಧನೆಯಾಗಬೇಕು ಮತ್ತು ಎಲ್ಲರ ಅರಿವಿಗೂ ಬರಬೇಕು.

ಇಪ್ಪತ್ತು ಶತಮಾನಗಳ ಕಾಲ ಅಥವಾ ಇನ್ನೂ ಹೆಚ್ಚು ಕಾಲ ಹಿರಿಯ ವಿಶ್ವ ಧರ್ಮಗಳ ಅಂತಸ್ಸತ್ವಗಳು ಇಂತಹ ವಿಶ್ವಭ್ರಾತೃತ್ವದ ಭಾವನೆಯನ್ನು ಉಳಿಸಿ ಪಸರಿಸಲು ಹೋರಾಡುತ್ತಲೇ ಇವೆ. ಆದರೆ ಇಂದಿನವರೆಗೂ ಕುಲಗಳ, ರಾಷ್ಟ್ರಗಳ, ಧರ್ಮಗಳ, ಜನಾಂಗಗಳ ಘರ್ಷಣೆಯಿಂದ ಬರುವ ದ್ವೇಷ, ಕೋಪ ಮತ್ತು ಅಪ ನಂಬಿಕೆಗಳು ಮನುಷ್ಯರೆಲ್ಲ ಪರಸ್ಪರ ಪಾಲುದಾರರೆನಿಸಲು ಕಾರಣವಾದ ವಿಶಾಲ ದೃಷ್ಟಿ ಮತ್ತು ಉದಾರ ಪ್ರವೃತ್ತಿಗಳಿಗೆ ಅಡ್ಡಿಯಾಗುತ್ತಿವೆ ಕ್ರಿ.ಶ. ಆರು ಮತ್ತು ಏಳನೆಯ ಶತಮಾನಗಳಲ್ಲಿನ ಗೊಂದಲ ಹಾಗೂ ಅವ್ಯವಸ್ಥೆಗಳ ಮಧ್ಯೆ ಯೂರೋಪಿನ ಚೇತನ ವನ್ನು ತನ್ನದನ್ನಾಗಿ ಮಾಡಿಕೊಳ್ಳಲು ಕ್ರೈಸ್ತ ಧರ್ಮ ಪ್ರಯತ್ನಿಸಿದಂತೆ ಈಗ ವಿಶ್ವಭ್ರಾತೃತ್ವದ ಭಾವನೆ ಮಾನವ ವರ್ಗದ ಚೇತನವನ್ನು ಗೆಲ್ಲಲು ಪ್ರಯತ್ನಿಸುತ್ತಿದೆ. ಇಂತಹ ಭಾವನೆಗಳ ಪ್ರಸಾರ ಮತ್ತು ಗೆಲುವು ಶ್ರದ್ಧೆಯುಳ್ಳ ಆದರೆ ಅಂತಹ ಎತ್ತಿ ಕಾಣುವ ಗುಣಗಳೇನೂ ಇಲ್ಲದ ಪ್ರಚಾರಕರಿಂದಲೇ ಆಗಬೇಕು. ಸಮಕಾಲೀನ ಲೇಖಕರು ಯಾರಿಗೂ ಇದುವರೆಗೆ ಈ ನಿಟ್ಟಿನಲ್ಲಿ ಎಷ್ಟು ಕೆಲಸ ನಡೆದಿದೆ, ಇದರ ಫಲಗಳೇನು ಎಂದು ಊಹಿಸಲೂ ಸಾಧ್ಯವಾಗದು.

ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳು ಅಂತರರಾಷ್ಟ್ರೀಯ ಪ್ರಶ್ನೆ ಗಳೊಂದಿಗೆ ಬಿಡಿಸಲಾಗದಂತೆ ಹೆಣೆದು ಕೊಂಡಿವೆ. ಮನುಷ್ಯರ ಹೃದಯಗಳೊಳ ಸೇರಿ ಅದನ್ನು ಪ್ರೇರಿಸಬಲ್ಲ ಕ್ರಿಯಾತ್ಮಕ ಉತ್ಸಾಹದಿಂದಲೇ ಇಂತಹ ಪ್ರತಿಯೊಂದು ಸಂದರ್ಭದಲ್ಲಿಯೂ ಉತ್ತರ ಕಂಡುಹಿಡಿಯುವುದು ಸಾಧ್ಯ. ರಾಷ್ಟ್ರಗಳಲ್ಲಿನ ಅಪನಂಬಿಕೆ, ಹಠಮಾರಿತನ ಮತ್ತು ಸ್ವಾರ್ಥ ಸಾಧಕ ಪ್ರವೃತ್ತಿಗಳು ವೈಯುಕ್ತಿಕ ವಾಗಿ ಮಾಲೀಕ ಮತ್ತು ದುಡಿಮೆಗಾರರಲ್ಲಿ ಕಾಣುವ ಎಲ್ಲರ ಹಿತದ ವಿರುದ್ಧ ಕೆಲಸ ಮಾಡುವ ಅಪನಂಬಿಕೆ, ಮೊಂಡುತನ ಮತ್ತು ಸ್ವಾರ್ಥಗಳನ್ನು ಪ್ರತಿಬಿಂಬಿಸುತ್ತವೆ ಮತ್ತು ಅವುಗಳಿಂದ ಪ್ರತಿಬಿಂಬಿತವೂ ಆಗುತ್ತವೆ. ಚಕ್ರವರ್ತಿಗಳು ಮತ್ತು

ರಾಷ್ಟ್ರಗಳ ಬಿಗಿಮುಷ್ಟಿ ದುರಾಸೆಗಳು, ವ್ಯಕ್ತಿಗಳ ಒಡೆತನದ ಭಾವನೆಯು ಅತಿರೇಕಗಳು ಒಂದಕ್ಕೊಂದು ಸಮಾನಾಂತರವಾಗಿರುತ್ತವೆ. ಇವುಗಳಿಗೆ ಕಾರಣ ಒಂದೇ. ಒಂದೇ ರೀತಿಯ ಸಹಜ ಪ್ರವೃತ್ತಿಗಳು, ಅಜ್ಞಾನಗಳು ಮತ್ತು ಆಚಾರಗಳ ಫಲಗಳು ಇವು. ರಾಷ್ಟ್ರಗಳಲ್ಲಿನ ಸಮತಾವಾದವೇ ಅಂತರರಾಷ್ಟ್ರೀಯತೆ, ಮನುಷ್ಯರ ಪರಸ್ಪರ ಸಹಕಾರ ಮತ್ತು ವ್ಯವಹಾರಗಳ ಹಾದಿಯಲ್ಲಿ ಬರುವ ಈ ತೊಡಕುಗಳನ್ನು ನಿಜವಾಗಿಯೂ ಅಂತಿಮವಾಗಿ ಬಿಡಿಸುವ ಪರಿಹಾರಗಳನ್ನು ಜಾರಿಗೆ ತರಲು ಸಾಕಷ್ಟು ಯೋಜಿಸಿದಂತಹ ವಿದ್ಯಾಭ್ಯಾಸ ಕ್ರಮ ಮತ್ತು ವ್ಯವಸ್ಥೆ ಹಾಗೂ ಆಳವಾದ ಸುಭದ್ರವಾದ ಮನೋವಿಜ್ಞಾನದ ಬೆಳವಣಿಗೆ ಬೇಕಾಗುತ್ತವೆ. ಇವು ಇನ್ನೂ ಇಲ್ಲವೆಂದೇ ಇಂತಹ ಸಮಸ್ಯೆಗಳನ್ನು ಬಿಡಿಸಲು ಹೆಣಗಿದವರೆಲ್ಲರಿಗೂ ಎನ್ನಿಸುತ್ತದೆ. ಕ್ರಿ.ಶ. 1820 ರಲ್ಲಿದ್ದ ಜನರಿಗೆ ವಿದ್ಯುತ್ ರೈಲ್ವೆ ವ್ಯವಸ್ಥೆಯನ್ನು ಹಾಕಲು ಹೇಗೆ ಸಾಧ್ಯವಿರಲಿಲ್ಲವೋ ಹಾಗೇ ನಮಗೂ ಈಗ ನಿಜವಾಗಿಯೂ ಪರಿಣಾಮಕಾರಿಯಾದ ಶಾಂತಿ ಸಂಸ್ಥೆಯನ್ನು ಸ್ಥಾಪಿಸುವುದು ಸಾಧ್ಯವಾಗದೆ ಹೋಗಿದೆ. ಆದರೆ ನಮಗೇನು ಗೊತ್ತು, ಇಂತಹ ಶಾಂತಿ ವ್ಯವಸ್ಥೆಯೂ ಅಷ್ಟೇ ಕಾರ್ಯ ಸಾಧ್ಯವಿದ್ದು ಇಷ್ಟರಲ್ಲೇ ಜಾರಿಗೆ ಬರಲೂಬಹುದು.

ಯಾವ ಮನುಷ್ಯನೂ ತನ್ನ ತಿಳಿವಳಿಕೆಯನ್ನು ಮೀರಿ ನಡೆಯಲಾರನು. ಯಾವ ಚಿಂತನೆಯೂ ಸಮಕಾಲೀನ ಚಿಂತನೆಯನ್ನು ಲಂಘಿಸಿ ಮುಂದೆ ಹೋಗಲಾರದು. ಇಂದಿನ ನಮ್ಮ ದುಂದುಗಾರಿಕೆಯ ಗೊತ್ತು ಗುರಿಯಿಲ್ಲದ ಜೀವನದ ರಾತ್ರಿ ಕಳೆದು ಚರಿತ್ರೆಯ ಕೈಮರ ಮುನ್ಸೂಚಿಸುತ್ತಿರುವ ಶಾಂತಿಯ ಮುಂಬೆಳಗನ್ನು ಕಾಣಲು ಮತ್ತೆಷ್ಟು ತಲೆಮಾರುಗಳು ಕಳೆಯಬೇಕೋ ನಮಗೆ ಈಗ ಅದನ್ನು ಊಹಿಸುವುದಾಗಲೀ ಭವಿಷ್ಯ ನುಡಿಯುವುದಾಗಲೀ ಸಾಧ್ಯವಿಲ್ಲ. ಈ ನಾವು ಮುಂದಿಡುತ್ತಿರುವ ಪರಿಹಾರ ಕ್ರಮಗಳು ಇನ್ನೂ ಅಸ್ಪಷ್ಟ ಮತ್ತು ಅನಾಗರೀಕವಾದುವು. ಅವುಗಳನ್ನು ರಾಗದ್ವೇಷ ಸಂಶಯಗಳು ಆವರಿಸಿವೆ. ಬೌದ್ಧಿಕ ಪುನರ್ನಿರ್ಮಾಣದ ದೊಡ್ಡ ಕಾರ್ಯ ನಡೆಯುತ್ತಿದೆ. ಇದಿನ್ನೂ ಪೂರ್ಣವಾಗಿಲ್ಲ. ನಮ್ಮ ಕಲ್ಪನೆಗಳು ಬರಬರುತ್ತಾ ಸ್ಫುಟಗೊಳ್ಳುತ್ತಿವೆ. ಮತ್ತು ನಿಖರವಾಗುತ್ತಿವೆ. ಇದಾಗುತ್ತಿರುವ ವೇಗ ಹೆಚ್ಚೋ ಕಡಿಮೆಯೋ ಹೇಳುವುದು ಕಷ್ಟ. ಆದರೆ ಈ ಕಲ್ಪನೆಗಳು ಸ್ಫುಟಗೊಂಡಂತೆ ಮಾನವರ ಮನಸ್ಸು ಮತ್ತು ಕಲ್ಪನಾ ಶಕ್ತಿಗಳ ಮೇಲೆ ಹೆಚ್ಚು ಹತೋಟಿ ಪಡೆದುಕೊಳ್ಳುವುವು. ಈಗ ಈ ಹತೋಟಿಯಿಲ್ಲದಿರುವುದಕ್ಕೆ ಇವು ನಿಖರವಾಗಿಲ್ಲದಿರುವುದು ಮತ್ತು ಅವುಗಳಲ್ಲಿ ನೆಚ್ಚಿಗೆಯಿಲ್ಲದಿರುವುದೇ ಕಾರಣ. ಇವುಗಳನ್ನು ವಿವಿಧ ರೀತಿಗಳಲ್ಲಿ ಗೊಂದಲ ಹುಟ್ಟುವಂತೆ ಜನರ ಮುಂದಿಡುತ್ತಿರುವುದರಿಂದ ಅಪಾರ್ಥಗಳಿಗೆಡೆಯಾಗಿದೆ. ನಿಖರವಾಗಿ ನಿಸ್ಸಂಶಯ ರೀತಿಯಲ್ಲಿ ಇವುಗಳನ್ನು ಮುಂದಿಟ್ಟರೆ ಪ್ರಪಂಚದ ಆ ಹೊಸ ದೃಷ್ಟಿ ಜನರನ್ನು ತನ್ನೆಡೆಗೆ ಸೆಳೆದು ಕೊಳ್ಳುತ್ತದೆ. ಇಷ್ಟರಲ್ಲೇ ಬಹುಬೇಗನೇ ಈ ದೃಷ್ಟಿ ಪ್ರಬಲವೂ ಆಗಬಹುದು. ಸಹಜವಾಗಿ, ಖಂಡಿತವಾಗಿ

ಇದರಿಂದ ಶಿಕ್ಷಣ ಕ್ಷೇತ್ರದಲ್ಲಿ ಬೃಹತ್ಪ್ರಮಾಣದ ಪುನರ್ರಚನೆಯಾಗಿ ಅದರಿಂದ ಮಾನವರ ತಿಳವಳಿಕೆ ಮತ್ತಷ್ಟು ಸ್ಫುಟವಾಗುತ್ತದೆ.

60. ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿಸ್ತರಣೆ :

ಸಾರಿಗೆ ಕ್ಷೇತ್ರದ ಹೊಸ ಹೊಸ ಉಪಜ್ಞೆಗಳನ್ನು ಉಪಯೋಗಿಸಿ ಆಶ್ಚರ್ಯಕರ ಪರಿಣಾಮಗಳನ್ನು ಬಹುಬೇಗನೆ ತೋರಿಸಿದ ಪ್ರದೇಶವೆಂದರೆ ಉತ್ತರ ಅಮೆರಿಕಾ. ರಾಜಕೀಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಹದಿನೆಂಟನೆ ಶತಮಾನದ ಮಧ್ಯ ಭಾಗದ ಉದಾತ್ತ ಭಾವನೆಗಳ ಮೂರ್ತ ಸ್ವರೂಪ, ಅದರ ಸಂವಿಧಾನ ಈ ಭಾವನೆಗಳು ಹಳುಕು ಗಟ್ಟಿ ಆದಂತೆ ಇದೆ. ಅದು ಆಡಳಿತ–ಚರ್ಚು–ರಾಜ ಈ ವ್ಯವಸ್ಥೆಯನ್ನು ಬಿಟ್ಟುಬಿಟ್ಟಿತು. ಬಿರುದು ಬಾವಲಿಗಳನ್ನು ತಿರಸ್ಕರಿಸಿತು. ಸ್ವತ್ತನ್ನು ಹೊಂದಿರುವುದು ಒಂದು ರೀತಿಯಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಾಧನವೆಂದು ಆ ಹಕ್ಕನ್ನು ಬಹಳ ಜಾಗರೂಕತೆಯಿಂದ ರಕ್ಷಿಸಿತು; ಮತ್ತು ನಿಖರವಾಗಿ ಪರೀಕ್ಷಿಸಿದರೆ ವಿವರಗಳು ವಿವಿಧ ಸಂಸ್ಥಾನಗಳಲ್ಲಿ ಬೇರೆಯಾಗಿದ್ದಿರಬಹುದಾದರೂ–ಹೆಚ್ಚು ಕಡಿಮೆ ಪ್ರತಿಯೊಬ್ಬ ವಯಸ್ಕ ಗಂಡಸಿಗೂ ಮತದಾನದ ಹಕ್ಕನ್ನು ಕೊಟ್ಟಿತು. ಅಲ್ಲಿಯ ಮತದಾನದ ವಿಧಾನಗಳು ತುಂಬಾ ಅಸಂಸ್ಕೃತವಾಗಿದ್ದುವು. ಇದರಿಂದ ಅಲ್ಲಿನ ರಾಜಕೀಯ ಜೀವನ ಬಹುಬೇಗ ಅತ್ಯಂತ ವ್ಯವಸ್ಥಿತವಾದ "ಪಾರ್ಟಿ ಯಂತ್ರ"ಗಳ ಕೈಗೆ ಬಿದ್ದಿತು. ಆದರೂ ಹೊಸದಾಗಿ ವಿಮೋಚನೆ ಪಡೆದ ಆ ಜನತೆಯಲ್ಲಿ ಆಗಿನ ಇತರ ಜನತೆಗಳೆಲ್ಲಕ್ಕಿಂತ ಮಿಗಿಲಾದ ಒಂದು ಶಕ್ತಿ ಧೈರ್ಯ ಮತ್ತು ಸಾಂಘಿಕ ಅಭಿಮಾನ ಅಭಿವೃದ್ಧಿಯಾಗಲು ಇದರಿಂದ ಅಡ್ಡಿಯಾಗಲಿಲ್ಲ.

ಅಷ್ಟು ಹೊತ್ತಿಗೆ ಸಾರಿಗೆ ಸಂಪರ್ಕಗಳ ವೇಗ ಹೆಚ್ಚಿತು. ಇದನ್ನು ಆಗಲೇ ಗಮನಿಸಿ ಆಗಿದೆ. ಇದರಿಂದ ಅತ್ಯಂತ ಹೆಚ್ಚಿನ ಪ್ರಯೋಜನ ಪಡೆದಿರುವುದೆಂದರೆ ಅಮೆರಿಕವೇ. ಆದರೂ ಆದೇಶಕ್ಕೆ ಹಾಗನ್ನಿಸಿಯೇ ಇಲ್ಲ. ಇದೊಂದು ವಿಚಿತ್ರ ಸಂಗತಿ, ರೈಲ್ವೆ, ನದಿಗಳ ಹಬೆಜಹಜು, ತಂತಿ ವರ್ತಮಾನ ಸೌಕರ್ಯ ಇತ್ಯಾದಿಗಳು ತನ್ನ ಸ್ವಾಭಾವಿಕ ಬೆಳೆವಣಿಗೆಯ ಅಂಗಗಳೇ ಎಂಬಂತೆ ಆ ರಾಷ್ಟ್ರಕ್ಕೆ ತೋರ್ಪಡೆಯಾಗಿವೆ. ಇದು ನಿಜವಲ್ಲ. ಅಮೆರಿಕದ ಏಕತೆಗೆ ಹಾನಿಯಾಗುವಂತಿದ್ದ ಸಮಯಕ್ಕೆ ಸರಿಯಾಗಿ ಇವು ಬಂದು ಆ ಏಕತೆಯನ್ನುಳಿಸಿದುವು ಅಷ್ಟೆ. ಇಂದಿನ ಅಮೆರಿಕ ಸಂಯುಕ್ತ ಸಂಸ್ಥಾನಗಳು ರಚಿತವಾಗಿದ್ದು ಮೊದಲು ನದಿಯಲ್ಲಿ ಯಾನಮಾಡುವ ಹಬೆಜಹಜಿನಿಂದ, ಬಳಿಕ ರೈಲ್ವೆಗಳಿಂದ, ಈ ಸಾಧನಗಳಿಲ್ಲದಿದ್ದಲ್ಲಿ ಈಗಿನ ಅಮೆರಿಕ ಸಂಯುಕ್ತ ಸಂಸ್ಥಾನಗಳ, ಈ "ದೊಡ್ಡ ಭೂಖಂಡ ರಾಷ್ಟ್ರ"ದ ಇರುವಿಕೆ ಅಸಾಧ್ಯವಾಗುತ್ತಿತ್ತು. ಜನರು ಆ ದೇಶದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ವಲಸೆ ಹೋಗುವುದು ಈಗ ಆದುದಕ್ಕಿಂತ ತುಂಬಾ ನಿಧಾನವಾಗುತ್ತಿತ್ತು. ಒಹುಶಃ ಜನರು ಅಲ್ಲಿನ ಮಧ್ಯದ ವಿಶಾಲ ಮೈದಾನ ಪ್ರದೇಶಗಳನ್ನು ದಾಟುತ್ತಿದ್ದರೋ ಇಲ್ಲವೋ ?

ಪೂರ್ವ ತೀರದಿಂದ ಮಿಸ್ಸೋರಿ ನದಿಯವರೆಗೆ ಜನ ನೆಲಸಲು ಹೆಚ್ಚು ಕಡಿಮೆ ಇನ್ನೂರು ವರ್ಷಗಳೇ ಹಿಡಿದುವು. ಇದು ಆ ಭೂ ಖಂಡದಲ್ಲಿ ಅರ್ಧದಷ್ಟು ದೂರ ಹೋದಂತಲ್ಲ. ಈ ನದಿಯ ಆಚೆ ಸ್ಥಾಪಿತವಾದ ಮೊದಲ ರಾಜ್ಯವೆಂದರೆ ನದಿಯ ಹಡಗಿನ ಓಡಾಟದ ಫಲವಾಗಿ ಆದ ಮಿಸ್ಸೋರಿ–1821ರಲ್ಲಿ ಆದರೆ ಪೆಸಿಫಿಕ್ ತೀರದವರೆಗಿನ ಉಳಿದ ಪ್ರದೇಶಗಳಲ್ಲಿ ಕೆಲವೇ ದಶಕಗಳಲ್ಲಿ ಜನ ನೆಲಸಿದರು.

ಚಲನ ಚಿತ್ರದ ಮೂಲಕ ಅಮೇರಿಕದ ಭೂಪಟವನ್ನು ಕ್ರಿ.ಶ. 1600 ರಿಂದ ಇಂದಿನವರೆಗೆ ಮುಂದೆ ಹೇಳಿದಂತೆ ಒಂದೊಂದು ವರ್ಷವಾಗಿ ತೋರಿಸಲು ಆದರೆ ತುಂಬಾ ಸ್ವಾರಸ್ಯವಾಗಿರುತ್ತದೆ. ಭೂಪಟದಲ್ಲಿ ನೂರು ಜನರಿಗೆ ಒಂದು ಚುಕ್ಕಿ, ಒಂದು ಲಕ್ಷ ಜನರಿರುವ ಪಟ್ಟಣಕ್ಕೆ ಒಂದು ನಕ್ಷತ್ರದ ಗುರುತು ಇರುವಂತೆ ತೋರಿಸ ಬೇಕು.

ಆಗ ಇನ್ನೂರು ವರ್ಷ ಕಾಲ ಮೆಲ್ಲಮೆಲ್ಲನೆ ಅಟ್ಲಾಂಟಿಕ್ ಸಮುದ್ರ ತೀರದ ಜಿಲ್ಲೆಗಳಲ್ಲಿ ಮತ್ತು ನೌಕೆಗಳು ಸಂಚರಿಸಬಹುದಾದ ಜಲಮಾರ್ಗಗಳ ಪಕ್ಕದಲ್ಲಿ ಇನ್ನೂ ನಿಧಾನವಾಗಿ ಇಂಡಿಯಾನ, ಕೆಂಟಕಿ ಈ ಪ್ರದೇಶಗಳಲ್ಲಿ ಚುಕ್ಕಿಗಳು ಹರಡುವುದನ್ನು ಕಾಣುತ್ತೇವೆ. ಆಮೇಲೆ 1810ರಲ್ಲಿ ಒಂದು ಬದಲಾವಣೆ ಕಾಣಿಸುತ್ತದೆ. ನದೀ ಮಾರ್ಗಗಳಲ್ಲಿ ಈ ಹರಡುವಿಕೆ ಚುರುಕಾಗುತ್ತದೆ. ಚುಕ್ಕಿಗಳು ಹೆಚ್ಚುತ್ತಾ ಹೋಗುವುವಲ್ಲದೆ ಹರಡುತ್ತಲೂ ಹೋಗುತ್ತವೆ. ಇದಕ್ಕೆ ಕಾರಣ ಹಬೆ ಹಡಗು. ಅಲ್ಲಿನ ದೊಡ್ಡ ನದೀ ತೀರಗಳಲ್ಲಿನ ಕೆಲವು ಸ್ಥಾನಗಳಿಂದ ಈ ಚುಕ್ಕಿಗಳು ಬಹುಬೇಗನೇ ಕಾನ್ಸಾಸ್, ನೆಬ್ರಾಸ್ಕಾ ಪ್ರದೇಶಗಳ ಮೇಲೆ ಹರಡುತ್ತವೆ.

ಬಳಿಕ ಸುಮಾರು 1830 ರಿಂದ ಮುಂದೆ ರೈಲ್ವೆಗಳ ಕಪ್ಪು ಗೆರೆಗಳು ಕಾಣಿಸಿ ಕೊಳ್ಳುತ್ತವೆ. ಆಮೇಲೆ ಈ ಕಪ್ಪು ಚುಕ್ಕೆಗಳು ಮುಂದೆ ಸರಿಯುವುದಲ್ಲ, ಓಡುತ್ತವೆ. ಅವು ಎಷ್ಟು ಬೇಗ ಬೇಗ ಕಾಣಿಸಿಕೊಳ್ಳುತ್ತವೆ ಎಂದರೆ ಅವುಗಳನ್ನು ಯಾವುದೋ ಮಿಷನ್ನಿನಿಂದ ಸ್ಪ್ರೇ ಮಾಡುತ್ತಿದ್ದಾರೆ ಎನಿಸುತ್ತದೆ. ಆಮೇಲೆ ಇದ್ದಕ್ಕಿದಂತೆ ಲಕ್ಷ ಜನರಿರುವ ದೊಡ್ಡ ಪಟ್ಟಣಗಳನ್ನು ಸೂಚಿಸುವ ಮೊದಲ ನಕ್ಷತ್ರಗಳು ಕಾಣಿಸಿ ಕೊಳ್ಳುತ್ತವೆ, ಮೊದಲು ಒಂದು, ಆಥವಾ ಎರಡು–ಆ ಮೇಲೆ ಹಲವಾರು, ಗುಂಪು ಗುಂಪಾಗಿ, ಒಂದೊಂದೂ ಬೆಳೆಯುತ್ತಿರುವ ರೈಲ್ವೆ ಬಲೆಯಲ್ಲಿನ ಗಂಟುಗಳಂತೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಬೆಳವಣಿಗೆ ಪ್ರಪಂಚದ ಚರಿತ್ರೆಯಲ್ಲೇ ಪೂರ್ವ ನಿದರ್ಶನವಿಲ್ಲದ ಕ್ರಿಯೆ. ಇದು ಹೊಸ ರೀತಿಯ ಘಟನೆ. ಇಂತಹ ಸಮಾಜ ಅದಕ್ಕೆ ಮುಂಚೆ ಅಸ್ತಿತ್ವಕ್ಕೆ ಬರಲು ಸಾಧ್ಯವಿರಲಿಲ್ಲ. ಅಥವಾ ಅಸ್ತಿತ್ವಕ್ಕೆ ಬಂದರೂ ರೈಲ್ವೆಗಳಿಲ್ಲದಿದ್ದರೆ ಬಹುಮುಂಚೆಯೇ ಖಂಡಿತವಾಗಿಯೂ ಚೂರು ಚೂರಾಗಿ ಹೋಗುತ್ತಿತ್ತು. ರೈಲ್ವೆ ಮತ್ತು ತಂತಿ ಸೌಕರ್ಯಗಳಿಲ್ಲದಿದ್ದರೆ ವಾಷಿಂಗ್‌ಟನ್ನಿನಿಂದ ಕ್ಯಾಲಿಫೋರ್ನಿಯವನ್ನು ಆಳುವುದಕ್ಕಿಂತಲೂ ಪೀಕಿಂಗನ್ನು ಆಳುವುದೇ ಸುಲಭ. ಆದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಈ ಭಾರೀ ಜನಸಮುದಾಯ ಮಿತಿಮೀರಿ

ಬೆಳೆದಿರುವುದಷ್ಟೇ ಅಲ್ಲ; ಅದರಲ್ಲಿ ಏಕರೂಪತೆ ಉಳಿದುಕೊಂಡುಬಂದಿದೆ; ಇಲ್ಲ, ಅದರ ಏಕರೂಪ ಹೆಚ್ಚುತ್ತಿದೆ. ಈಗ ಒಂದು ಶತಮಾನದ ಹಿಂದೆ ವರ್ಜಿನಿಯದ ಒಬ್ಬ ವ್ಯಕ್ತಿಗೂ ನ್ಯೂ ಇಂಗ್ಲೆಂಡಿನ ಒಬ್ಬ ವ್ಯಕ್ತಿಗೂ ಇದ್ದ ಸಾಮ್ಯಕ್ಕಿಂತ ಇಂದಿನ ಸ್ಯಾನ್ ಫ್ರಾನ್ಸಿಸ್ಕೊ ಮತ್ತು ನ್ಯೂಯಾರ್ಕಿನ ವ್ಯಕ್ತಿಗಳ ಮಧ್ಯೆ ಹೆಚ್ಚು ಸಾಮ್ಯವಿರುತ್ತದೆ. ಈ ಸಮಾನೀಕರಣ ಕ್ರಿಯೆ ಯಾವ ಅಡೆ ತಡೆಯೂ ಇಲ್ಲದೆ ನಡೆಯುತ್ತಾ ಇದೆ. ರೈಲ್ವೆ ಟೆಲಿಗ್ರಾಫ್‌ಗಳು ಈ ರಾಷ್ಟ್ರವನ್ನು ಮಾತುಕತೆ, ಚಿಂತನೆ, ಕಾರ್ಯ ನಿರ್ವಹಣೆ ಎಲ್ಲವೂ ಹೊಂದಾಣಿಕೆಯಿಂದ ನಡೆಯುವ ಬೃಹತ್ತಾದ ಒಂದು ಏಕತೆಯಾಗುವಂತೆ ನೇಯುತ್ತಿವೆ. ವಿಮಾನ ಯಾನ ಈ ವಸ್ತ್ರದ ಹೆಣಿಗೆಯನ್ನು ದಿನ ದಿನಕ್ಕೂ ಇನ್ನೂ ಬಿಗಿಗೊಳಿಸುತ್ತಿದೆ.

ಚರಿತ್ರೆಯಲ್ಲೇ ಇದೊಂದು ಹೊಚ್ಚ ಹೊಸ ಸಂಗತಿ. ನೂರು ಮಿಲಿಯನ್ನಿಗಿಂತ ಹೆಚ್ಚು ಜನ ಸಂಖ್ಯೆ ಇರುವ ಬೃಹತ್ ಸಾಮ್ರಾಜ್ಯಗಳು ಈ ಮುಂಚೆ ಆಗಿ ಹೋಗಿವೆ. ಆದರೆ ಇವು ವಿಭಿನ್ನ ಜನತೆಗಳ ಸಂಘಗಳಾಗಿದ್ದುವು. ಹಿಂದೆಂದೂ ಈ ಪ್ರಮಾಣದಲ್ಲಿ ಜನರು ಒಂದಾಗಿರಲಿಲ್ಲ. ಈ ಹೊಸ ಸಂಗತಿಗೆ ಒಂದು ಹೊಸ ಹೆಸರೇ ಬೇಕಾಗುತ್ತದೆ. ಫ್ರಾನ್ಸ್ ಅಥವಾ ಹಾಲೆಂಡ್ ಒಂದು ದೇಶ ಎನ್ನುವಂತೆಯೇ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನೂ ಒಂದು ದೇಶವೆಂದು ಕರೆಯುತ್ತೇವೆ. ಆದರೆ ಅದಕ್ಕೂ ಈ ದೇಶಗಳಿಗೂ ಮೋಟಾರ್‌ಕಾರು ಮತ್ತು ಜಟಕಾಗಾಡಿಗಳಿಗಿರುವಷ್ಟೇ ವ್ಯತ್ಯಾಸವಿದೆ. ಇವುಗಳು ಬೇರೆ ಬೇರೆ ಯುಗಗಳಲ್ಲಿ ಬೇರೆ ಬೇರೆಯ ಪರಿಸ್ಥಿತಿಗಳಿಂದ ನಿರ್ಮಿತವಾದುವು. ಇವುಗಳ ಕಾರ್ಯನಿರ್ವಹಣೆಯ ವೇಗ ಮತ್ತು ವಿಧಾನಗಳು ಬೇರೆ ಬೇರೆಯೇ ಆಗಿವೆ. ಯೂರೋಪಿನ ಒಂದು ದೇಶ ಮತ್ತು ಪ್ರಪಂಚವೆಲ್ಲ ಸೇರಿ ಆಗಬಹುದಾದ ಭವಿಷ್ಯದ ಸಾಧ್ಯತೆ ''ಪ್ರಪಂಚದ ಸಂಯುಕ್ತ ಸಂಸ್ಥಾನ''ಗಳನ್ನು ಹೋಲಿಸಿದರೆ ವ್ಯಾಪ್ತಿ ಮತ್ತು ಸಾಧ್ಯತೆಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಅವೆರಡರ ಮಧ್ಯೆ ಇದೆ.

ಕಳಿತ ಹಣ್ಣುಗಳಿಗೆಲ್ಲ ಕೆಳಗೆ ಬೀಳಬೇಕಾಗುತ್ತದೆಯೆಂಬುದೊಂದೇ ಭಯ, ಬೇರೆಯಿಲ್ಲ. ಹಾಗೆಯೇ ಹುಟ್ಟಿದ ಮನುಷ್ಯರಿಗೆಲ್ಲ ಇರುವ ಭಯವೆಂದರೆ ಸಾವು ಮಾತ್ರ.

—ರಾಮಾಯಣ

ಕಿಂದರಲ್ಲಿ ಚೆಲುವಾಗಿ ನಿರ್ಣಯ ಹೇಳುವವನೇ ವಾಗ್ಮಿ.

ಆಪತ್ಕಾಲದಲ್ಲಿ ಯಾರಿಗೆ ಬುದ್ಧಿ ಓಡುವುದೋ ಅವನೇ ನಿಜವಾಗಿ ಧೀರ.

ಎಲ್ಲರಿಗೂ ಲೇಸನ್ನು ಬಯಸುವುದೇ ದಯೆ.

ಟಿ. ಬಿ. ಬಸವರಾಜ್

ಮತಧರ್ಮಗಳ ಬೆಳವಣಿಗೆ ಮತ್ತು ವಿಶ್ವಧರ್ಮ

'ಧರ್ಮ' ಎನ್ನುವ ಶಬ್ದ ನಮಗೆ ಹೊಸದೇನಲ್ಲ! ದಿನನಿತ್ಯದ ವ್ಯವಹಾರದಲ್ಲೂ ಸಹ ನಾವು ಅನೇಕ ವಿಧದಲ್ಲಿ ಬಳಸುತ್ತೇವೆ. ಆದರೆ, ವಸ್ತುನಿಷ್ಠತೆಯನ್ನು ಗುರುತಿಸುವ ನಿಟ್ಟಿನಲ್ಲಿ 'ಧರ್ಮ' ಶಬ್ದದ ನೈಜ ಅರ್ಥವನ್ನು ಕುರಿತು ವಿವೇಚನೆ ಅತ್ಯಗತ್ಯ; 'ಧರ್ಮ' ಎನ್ನುವ ಶಬ್ದವು ಬಹಳ ಪ್ರಾಚೀನವಾದದ್ದು. ಒಂದು 'ಅತೀತ' ತತ್ವದ ಸುತ್ತಲೂ ನಡೆದುಬಂದಿರುವ ರೀತಿ, ನೀತಿ, ನಡವಳಿಕೆ, ನಂಬಿಕೆ, ವಿಶ್ವಾಸ ಇತ್ಯಾದಿಗಳನ್ನು 'ಧರ್ಮ'ವೆಂದು ಕರೆಯಲಾಗಿದೆ ಎನ್ನಬಹುದು. ಪ್ರಸ್ತುತದಲ್ಲಿ ನಾವು ಧರ್ಮ ಎನ್ನುವ ಪದವನ್ನು ಮತೀಯ ಅರ್ಥದಲ್ಲಿಯೇ ಹೆಚ್ಚು ಬಳಸುತ್ತಿದ್ದೇವೆ. ಈ ಬಗ್ಗೆ ಉದಾಹರಿಸುವುದಾದರೆ; ಬೌದ್ಧಧರ್ಮ, ಹಿಂದೂಧರ್ಮ, ಕ್ರೈಸ್ತಧರ್ಮ, ಜೈನಧರ್ಮ, ಇಸ್ಲಾಂಧರ್ಮ ಇತ್ಯಾದಿ. ಧರ್ಮ ಎಂದು ನಾವು ಕರೆಯುವ ಪದವು ಆಂಗ್ಲಭಾಷೆಯ 'ರಿಲಿಜನ್' ಎನ್ನುವ ಶಬ್ದಕ್ಕೆ ಸಮನಾದುದಾಗಿದೆ ಎನ್ನಬಹುದು. ಈಗ ಮತಧರ್ಮಗಳು ವಿಕಾಸವಾದ ಬಗೆಯನ್ನು ಚರ್ಚಿಸಬಹುದು.

ಧರ್ಮದ ಬಗೆಗೆ ಚರ್ಚಿಸುವಾಗ, ಮತಧರ್ಮಗಳು ಬೆಳೆದುಬಂದಿರುವ ಮೂರು ಪ್ರಮುಖ ಹಂತಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮತಧರ್ಮಗಳು ಬೆಳೆದುಬಂದ ಬಗೆಯನ್ನು ಪೂರ್ಣವಾಗಿ ಗಮನದಲ್ಲಿಟ್ಟುಕೊಂಡು, ಅವುಗಳು ಹಂತ ಹಂತವಾಗಿ ವಿಕಾಸವಾದ ಹಿನ್ನೆಲೆಯಲ್ಲಿ ಮೂರು ಪ್ರಮುಖ ಹಂತಗಳನ್ನಾಗಿ ಇದೂವರೆವಿಗೂ ಗುರುತಿಸಲಾಗಿದೆ.

ನಾಗರೀಕತೆಯ ಸೋಂಕಿಲ್ಲದೆ, ಅನಾಗರೀಕ ಜನರ ತಂಡಗಳನ್ನು, ಆಂಗ್ಲಭಾಷೆಯಲ್ಲಿ ಸಾಮಾನ್ಯವಾಗಿ 'ಟ್ರೈಬ್' ಎಂದು ಹೆಸರಿಸುತ್ತಾರೆ. ನಮ್ಮಲ್ಲಿ ಈ ರೀತಿಯ ತಂಡಗಳನ್ನು ಬಹುಶಃ ಅದೇ ಅರ್ಥಕ್ಕೆ ಸಮನಾಗಬಹುದಾದ 'ಕುಲ' ಎಂದು ಕರೆದಿದ್ದಾರೆ. ಇಷ್ಟೇ ಅಲ್ಲದೆ 'ಬುಡಕಟ್ಟು', 'ಬಣ', ಇತ್ಯಾದಿ ಹೆಸರುಗಳಿಂದಲೂ ಈ ತಂಡಗಳು ಕರೆಯಲ್ಪಟ್ಟಿವೆ. ಇದು ಮತಧರ್ಮದ ಬೆಳವಣಿಗೆಯಲ್ಲಿ ಪ್ರಥಮ ಹಂತವೆಂದು ಗುರುತಿಸಲ್ಪಟ್ಟಿದೆ.

ಈ ಹಂತದಲ್ಲಿ ಪ್ರಮುಖವಾಗಿ ನಮಗೆ ಗೋಚರಿಸುವುದು ಕೇವಲ ' ಐಹಿಕತೆ' ಮಾತ್ರ. ಇಂತಹ ಕುಲಧರ್ಮದಲ್ಲಿ ಆಳವಾದ, ಭೌತಿಕಾತೀತ ಚಿಂತನೆ ಅಷ್ಟಾಗಿ ಕಾಣ ಸಿಗದು. ಈ ಲೌಕಿಕ ಬದುಕಿನಲ್ಲಿ ತಮ್ಮ ಸರ್ವ ವಿಷಯಾಸಕ್ತ ಬಯಕೆಗಳನ್ನು, ಯಾವುದೋ ಕಾಣದ ಶಕ್ತಿಗಳ ಮೂಲಕ ಪೂರೈಸಿಕೊಳ್ಳುವ ನಿರಂತರ ಯತ್ನವೇ ಇಲ್ಲಿನ ವೈಶಿಷ್ಟ್ಯ! ಈ ಬಗ್ಗೆ ಸ್ಪಷ್ಟತೆ ನೀಡುವುದಾದರೆ, ಕುಲಧರ್ಮದ ಪ್ರಾರ್ಥನೆಯ ವಿಧಿ, ವಿಧಾನಗಳಲ್ಲಿ ಬಳಕೆಯಲ್ಲಿದ್ದ ' ದೇಹಿಮೇದದಾಮಿತೆ' ಅರ್ಥಾತ್ ನಾನು ನಿನಗೆ ಇದನ್ನು ನೀಡುವೆ. ನೀನು ಅದನ್ನು ನನಗೆ ನೀಡು ಎನ್ನುವಂತಹ ಇಲ್ಲಿನ ಪ್ರಾರ್ಥನೆ, ಪೂಜೆಗಳೆಲ್ಲಾ ಯಾವಸ್ತರದಲ್ಲೂ ಭೌತಿಕತೆಯ ಸೀಮೆಯನ್ನು ದಾಟಲು ಶಕ್ತವಾಗಿಲ್ಲ. ಅನಾಗರೀಕ ಜನರಲ್ಲಿ ಮಾನಸಿಕ ಪ್ರಬುದ್ಧತೆಯ ಕೊರತೆ ಇರುವಲ್ಲಿ ನಾವು ಎಣಿಸಬಹುದಾದ ಭಯ, ಭೀತಿ, ವ್ರತ, ಉಪವಾಸ, ಮಾಟ, ತಂತ್ರ, ಅದೃಶ್ಯ ಶಕ್ತಿಗಳಲ್ಲಿ ನಂಬಿಕೆ ಇತ್ಯಾದಿಗಳೆಲ್ಲಾ ಇಲ್ಲಿ ಕಾಣಸಿಗುವ ಅಂಶ. ಒಟ್ಟಾರೆ ಈ ಮೇಲಿನ ಅಂಶಗಳು ' ಕುಲಧರ್ಮ 'ದಲ್ಲಿ ಕೇವಲ ಭೌತಿಕತೆಯನ್ನೇ ಉದ್ದೇಶವನ್ನಾಗಿ ಹೊಂದಿರುವುದರ ಸ್ಪಷ್ಟ ಸೂಚನೆಗಳು ಆಗಿರುವಂತೆ, ಅವುಗಳ ಸಫಲತೆಗಳಿಗೆ ಯತ್ನ ಗಳಾಗಿಯೂ ನಮಗೆ ಗೋಚರಿಸುತ್ತವೆ. ವಿಶೇಷವೆಂದರೆ ' ಪುರೋಹಿತ'ವರ್ಗ ವೊಂದನ್ನೂ ನಾವು ಇಲ್ಲಿ ಕಾಣಬಹುದಾಗಿದೆ.

ಸಾಕ್ರೆಟೀಸ್‌ರಂತಹ ತತ್ವಶಾಸ್ತ್ರಜ್ಞರ ದೃಷ್ಟಿಯಲ್ಲಿ ಈ ತೆರನ ಮತಧರ್ಮವು ' ದೇವತೆಗಳೊಡನೆ ನಾವು ನಡೆಸುವ ವ್ಯಾಪಾರ 'ವೆಂದೇ ಅನ್ನಿಸಿಕೊಳ್ಳುತ್ತದೆ. ಕುಲ ಧರ್ಮದಲ್ಲಿ ಮತ್ತೊಂದು ವಿಶಿಷ್ಟ ಅಂಶವೂ ಉಂಟು, ಅದು ಪಿತೃಪೂಜೆ. ಪಿತೃ ಪೂಜೆಯ ಹಿನ್ನೆಲೆಯಲ್ಲಿ ಮೃತಪಟ್ಟಿರುವ ಹಿರಿಯರ ಆಶೀರ್ವಾದ ಪಡೆದುಕೊಳ್ಳುವ ಆಶಯವನ್ನು ಗುರುತಿಸಬಹುದಾಗಿದೆ. ಜೊತೆಗೆ ಕುಲಧರ್ಮದ ನಂಬಿಕೆ, ನಡಾವಳಿ ಗಳಲ್ಲಿ ' ಭೂತ 'ಗಳ ಕಲ್ಪನೆಗಳೂ ಕಾಣಸಿಗುತ್ತವೆ. ಗಿಡ, ಮರ, ಬೆಟ್ಟಗಳಲ್ಲದೆ ಇನ್ನೂ ಕೆಲವು ಗೊತ್ತಾದ ನಿರ್ದಿಷ್ಟ ಪ್ರದೇಶಗಳಲ್ಲಿ ' ಭೂತ 'ಗಳ ಅಸ್ತಿತ್ವವನ್ನು ಅವರು ಕಂಡುಕೊಂಡಿದ್ದಾರೆ. ಗೊತ್ತಾದ ನಿರ್ದಿಷ್ಟ ವಸ್ತುವಿನಲ್ಲಿ ಭೂತವೊಂದರ ಸಮಾವೇಶ ಅಡಗಿದೆ ಎನ್ನುವ ಅವರ ನಂಬಿಕೆಯ ಪರಿಣಾಮವೇ ಅವರನ್ನು ' ಆರಾಧನೆಗೆ ' ತೊಡಗಿಸುತ್ತದೆ. ಇದರ ಫಲವೇ ಆರಾಧಕರು, ಮನೆದೇವರು, ಕುಲ ದೇವತೆ, ಇತ್ಯಾದಿ ನಂಬಿಕೆಗಳ ಸಂಪ್ರದಾಯಗಳನ್ನೇರ್ಪಡಿಸಿಕೊಳ್ಳುತ್ತಾರೆ. ಇಂತಹ ಸಂಪ್ರದಾಯವು, ಆರಾಧಕರು, ಮತ್ತು ಆರಾಧಕರಲ್ಲದವರ ನಡುವೆ ಪರಸ್ಪರ ಹೊರಗಿ ನವರು, ತಮ್ಮವರು ಎಂಬ ಪ್ರತ್ಯೇಕತೆಯನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗುತ್ತದೆ. ಇದರ ಬೆನ್ನಿನಲ್ಲಿಯೇ ಮಡಿ, ಮೈಲಿಗೆ, ಬಹಿಷ್ಕಾರ ಇತ್ಯಾದಿ ಭಾವಗಳೂ ಜೋತು ಬೀಳುವುದನ್ನು ನಾವು ಕಾಣಬಹುದು. ಇಂತಹ ಅಂಧಭಕ್ತಿಯ ಪೂಜೆಯು ' ಫೆಟೀಷ್ ' ಎಂದೆನಿಸಿಕೊಳುತ್ತದೆ.

ಕುಲಧರ್ಮದಲ್ಲಿ ದೇವತ್ವದ ಬಗ್ಗೆಯೇ ಆಗಲೀ, ಆಧ್ಯಾತ್ಮದ ಬಗ್ಗೆಯೇ ಆಗಲಿ

ಒಂದು ಖಚಿತಪೂರ್ಣ ಚಿತ್ರಣ ನಮಗೆ ಗೋಚರವಾಗುವುದಿಲ್ಲ. ಅದು ಎನಿದ್ದರೂ ಅಸ್ಪಷ್ಟವಾಗಿ, ಮಸುಕು ಮಸುಕಾಗಿ ಕಾಣಸಿಗುತ್ತದೆ. ವೈಚಾರಿಕ ಭಾವ ಇಲ್ಲಿ ಅಲಭ್ಯವೆಂದೇ ಹೇಳಬೇಕು. ಬಹುಶಃ ವೈಚಾರಿಕತೆಯ ಕೊರತೆ ಈ ಮೇಲಿನ ಬೌದ್ಧಿಕ ಕುಬ್ಜತೆಗೆ ಕಾರಣವಾಗಿರಬಹುದು. ಆದಕಾರಣವೇ ಇಂತಹ ಮತಧರ್ಮಗಳಲ್ಲಿ ನಾವು ಹೆಚ್ಚು ಮೂಢನಂಬಿಕೆಗಳನ್ನು ಕಾಣಲು ಸಾಧ್ಯ. ಇದನ್ನು ಯಾವುದೇ ಮೂಢಧರ್ಮದ ಮೂಢ ಆಚರಣೆಗಳೇ ವ್ಯಕ್ತಪಡಿಸುತ್ತವೆ. ಆದರೂ ಒಟ್ಟಾರೆ ದೃಷ್ಟಿಯಲ್ಲಿ ಇಂತಹ ಮತಧರ್ಮ (ಕುಲಧರ್ಮ) ಅದೆಷ್ಟೇ ಸಂಕುಚಿತ, ವೈಚಾರಿಕ ದೃಷ್ಟಿವಿಹೀನ, ಅಪ್ರಬುದ್ಧ ಎಂದು ನಮಗೆ ಮನವರಿಕೆಯಾದರೂ, ಮತಧರ್ಮವು ಹಂತಹಂತವಾಗಿ ಬೆಳೆದುಬಂದ ಬಗ್ಗೆ ದಾಖಲೆಯಾಗಿ ನಮಗೆ ಪ್ರಾಮುಖ್ಯವೆನಿಸುವುದು ಸಹಜವೇ ಆಗಿದೆ.

ಕುಲಧರ್ಮಕ್ಕಿಂತಲೂ ಹೆಚ್ಚು ವಿಸ್ತೃತ, ವ್ಯಾಪಕವಾದ ಮತ್ತೊಂದು ಘಟಕವನ್ನು ನಾವು ಮತಧರ್ಮದ ಬೆಳವಣಿಗೆಯಲ್ಲಿ ಕಾಣಬಹುದು, 'ರಾಷ್ಟ್ರಧರ್ಮ' ಎಂದೇ ಹೆಸರಾಗಿರುವ ಈ ಧರ್ಮ ಮತಧರ್ಮದ ಬೆಳವಣಿಗೆಯಲ್ಲಿ 'ದ್ವಿತೀಯ ಹಂತ'ವೆಂದು ನಾವು ಭಾವಿಸಲಡ್ಡಿಯಿಲ್ಲ. ಸ್ಥೂಲವಾಗಿ ಹೇಳುವುದಾದರೆ ಇಂತಹ ರಾಷ್ಟ್ರಧರ್ಮವು ಅನೇಕ ಕುಲಗಳನ್ನು ಒಳಗೊಂಡಿರುತ್ತದೆ, ಅಲ್ಲದೆ ಸರ್ವರೀತಿಯಿಂದಲೂ ಕುಲಧರ್ಮಕ್ಕಿಂತ ಪ್ರಾಮುಖ್ಯತೆಗಳಿಸುತ್ತದೆ. ಸಂಕುಚಿತ ದೃಷ್ಟಿಯ ಕುಲಧರ್ಮಕ್ಕೆ ಹೋಲಿಸಿದಾಗ ರಾಷ್ಟ್ರಧರ್ಮವು ವಿಶಾಲವಾಗಿ ಕಾಣುವುದು. ಕುಲದ ಅಧಿಕಾರವು ಆದರ ಕೆಲವು ಹಿರಿಯರ ಕೈಯಲ್ಲಿರುತ್ತದೆ. ಆದರೆ, ರಾಷ್ಟ್ರದ ಅಧಿಕಾರ ಇದಕ್ಕಿಂತ ಭಿನ್ನ, ಅದು ಅಧಿಕಾರಸೂತ್ರ ಹಿಡಿದ ರಾಜರ ಅಥವಾ ಪ್ರಭುಗಳ ವಶದಲ್ಲಿರುತ್ತದೆ. ಕುಲಧರ್ಮದಲ್ಲಿ ಅದೃಶ್ಯ ನಿಸರ್ಗಶಕ್ತಿಗಳ ಪ್ರಭುತ್ವದ ಡಂಭಾಚಾರವೇ ಜಾಸ್ತಿಯಾಗಿ ನಮಗೆ ತೋರಿಬಂದರೆ, ರಾಷ್ಟ್ರಧರ್ಮದಲ್ಲಿ ಧಾರ್ಮಿಕ ಪ್ರಭಾವ ಮಾನವಾಧಿಕಾರಿಗಳ ಕೈಯಲ್ಲಿರುತ್ತದೆ.

ಮಾನವನು ಅನಾಗರೀಕ ಸ್ಥಿತಿಯಿಂದ ಹಂತಹಂತವಾಗಿ ಬೆಳೆದು ಕ್ರಮೇಣ ಅತಿ ಪ್ರಬುದ್ಧನಾದಂತೆಲ್ಲಾ ಅಲೆದಾಡುವ ಸ್ಥಿತಿ ತೊರೆದು, ಒಂದು ಕಡೆ ನೆಲೆ ನಿಂತದ್ದು, ತತ್‌ಪರಿಣಾಮವಾಗಿ ನಾಗರೀಕಜೀವನ ಆರಂಭಗೊಂಡದ್ದು ಐತಿಹಾಸಿಕ ಮಹತ್ವ. ಇಂತಹ ಸನ್ನಿವೇಶದಲ್ಲಿ ವಿವಿಧ ಕುಲಗಳು, ಬುಡಕಟ್ಟುಗಳು ಒಬ್ಬರೊಡನೆ ಸೇರಿ ಒಬ್ಬರು ಬಾಳುವುದು ಅನಿವಾರ್ಯವಾಯಿತು. ಇಂತಹ ಸಂದರ್ಭದಲ್ಲಿ ಸಹಜವಾಗಿಯೇ ಎದುರಾಗಬಹುದಾದ ಪರರ ಆಕ್ರಮಣ ಅಥವಾ ಇತರರಿಂದ ಒದಗಬಹುದಾದ ಯುದ್ಧಭೀತಿ ಇತ್ಯಾದಿ ಆಪತ್‌ಸಂದರ್ಭವನ್ನು ಯಾವ ಕುಲವು ಸಮರ್ಥವಾಗಿ, ತನ್ನಬಲದ ಜಾಣ್ಮೆಯ ಪ್ರತಿಭೆಯನ್ನು ಯಶಸ್ವಿಯಾಗಿ ಮೆರೆಯುತ್ತಿತ್ತೊ ಅಂತಹ ಕುಲವು ಹೆಚ್ಚು ಪ್ರಾಶಸ್ತ್ಯ ಪಡೆದುಕೊಂಡು ಅಧಿಕಾರಸೂತ್ರ ಹಿಡಿಯುತ್ತಿತ್ತು. ಹೀಗೆ ಇತರ ಕುಲಗಳನ್ನು ಹತೋಟಿಯಲ್ಲಿಡುವ ಬುಡಕಟ್ಟಿನ ಜನ ಪ್ರಭುತ್ವವನ್ನು

ಪಡೆದುಕೊಂಡರು. ಇದು ರಾಷ್ಟ್ರದ ಉಗಮಕ್ಕೆ ನಾಂದಿಯಾಯಿತು. ಇತರ ಕುಲಗಳು ಪ್ರಾಬಲ್ಯ ಹೊಂದಿದ ಕುಲಕ್ಕೆ ಅಧೀನವಾಗಿ ಸಾಮಂತ ಕುಲಗಳು ಎನಿಸಿಕೊಂಡವು. ಇದು ರಾಷ್ಟ್ರದ ಉಗಮದ ಸ್ಥೂಲ ಚಿತ್ರಣ.

ರಾಷ್ಟ್ರಧರ್ಮದ ವಿಶೇಷವೆಂದರೆ ಕುಲಧರ್ಮದಲ್ಲಿ ಅಸ್ಪಷ್ಟವಾಗಿದ್ದ ಕೆಲವು ಅಂಶಗಳು ಇಲ್ಲಿ ಆಕಾರ, ಸ್ಪಷ್ಟತೆಯನ್ನು ಪಡೆದುಕೊಂಡಿವೆ ಎನ್ನುವುದು. ಇಲ್ಲಿ ಅನೇಕ ದೇವತೆಗಳ ಆರಾಧನೆ, ಉಪಾಸನೆ ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆದುಕೊಂಡಿತು. ಆರಾಧನೆಯ ದೇವತೆಗಳಲ್ಲಿ ಮಾನವಶ್ರೇಷ್ಠರಲ್ಲಿ ಕಾಣುವ ಸದ್ಗುಣಗಳನ್ನು ಆರೋಪಿಸಲಾಯಿತು. ದೇವತೆಗಳು ಜ್ಞಾನದ ಅನಂತತೆ, ಅನಂತ ಶಕ್ತಿಯ ಸಾಕಾರವೆನಿಸಿದರು, ನಿಸರ್ಗವನ್ನು ಅವರು ಮೀರಿದವರೆಂಬ ನಂಬಿಕೆ ಧೃಢಗೊಂಡಿತು. ವಿಧಿವತ್ತಾದ ಅರ್ಚನೆಗಳಲ್ಲಿ ಒಂದು ಅದ್ಭುತ ಆಧ್ಯಾತ್ಮಶಕ್ತಿಯ ಸಮಾವೇಶವಿದೆ ಎಂಬ ನಂಬಿಕೆ ಬಲಗೊಂಡಿತು. ಪೂಜೆಗಳು ಸಾಮೂಹಿಕತೆ ಪಡೆದುಕೊಂಡು ರಾಷ್ಟ್ರದ ಹಬ್ಬಗಳು ಎನಿಸಿದವು. ಮಂತ್ರ, ತಂತ್ರಗಳ ಬೆಳವಣಿಗೆಯಾಯಿತು. 'ಮಂತ್ರಾಧೀನಂತು ದೈವತಂ' ಎಂಬ ತತ್ವದ ಉಗಮಕ್ಕೆ ಇದು ಮೂಲವಾಯಿತು. ಈ ಮತ ಪಂಥಗಳು ಮತಧರ್ಮದ ಅನುಸರಣೆಯಲ್ಲಿ ಇಡೀ ರಾಷ್ಟ್ರದಲ್ಲಿಯೇ ಒಂದು ಎನ್ನುವ ಐಕ್ಯಮತಕ್ಕೆ ನಾಂದಿಯಾಯಿತು.

ಮತಧರ್ಮದ ವಿಕಾಸದಲ್ಲಿ ಮೂರನೆಯ ಅತ್ಯುನ್ನತ ಘಟಕದ ಬಗ್ಗೆ ಈಗ ವಿವೇಚಿಸಬಹುದು. ಇದು ಮತಧರ್ಮದ ಬೆಳವಣಿಗೆಯಲ್ಲಿ ಪರಿಪೂರ್ಣತೆಯ ಸಾಕಾರವೇ ಆಗಿದೆ. ಚಿಂತನಾಶೀಲನಾದ ಮಾನವನ ಬೌದ್ಧಿಕ ಪಕ್ವತೆಯ ವ್ಯಕ್ತರೂಪವೇ 'ವಿಶ್ವಧರ್ಮ'. ಹೆಸರೇ ಸೂಚಿಸುವಂತೆ ಇಡೀ ಮಾನವ ಕುಲಕ್ಕೆ, ಅರ್ಥಾತ್ ಇಡೀ ಜಗತ್ತಿಗೇ ಅನ್ವಯಿಸುವ ಧರ್ಮ. ಇದು ಒಟ್ಟಾರೆ ಮಾನವ ಜನಾಂಗದ ಆದರ್ಶ ಎನಿಸಿರುವ ಹಾಗೆಯೇ ಅನುಷ್ಠಾನಗೊಳ್ಳಬೇಕಾಗಿರುವ ಧರ್ಮವೂ ಆಗಿದೆ. ಆದರೆ ಪ್ರಸ್ತುತದವರೆವಿಗೂ ವಾಸ್ತವದಲ್ಲಿ ಪ್ರತ್ಯೇಕವಾಗಿ ಇಂತಹ ಧರ್ಮದ ಅಸ್ತಿತ್ವ ನೆಲೆಗೊಂಡಿಲ್ಲವೆನ್ನುವುದು ಗಮನಾರ್ಹ. ಆದರೆ, ವಿಶ್ವದಲ್ಲಿರುವ ವಿವಿಧ ಧರ್ಮಗಳಲ್ಲಿ ಕುಲಧರ್ಮ, ರಾಷ್ಟ್ರಧರ್ಮಗಳ ಅಂಶಗಳು ಸೇರಿಕೊಂಡಿರುವಂತೆ, ವಿಶ್ವ ಧರ್ಮದ ಅಂಶಗಳನ್ನೂ ಅವುಗಳಲ್ಲಿ ಗುರುತಿಸಲು ಸಾಧ್ಯ. ಮುಖ್ಯವಾಗಿ ಈ ಅಂಶಗಳು ಸ್ವಲ್ಪಮಟ್ಟಿಗಾದರೂ ಅವುಗಳಲ್ಲಿರುವುದರಿಂದಲೇ ಸಾಂಪ್ರದಾಯಿಕ ಅಥವಾ ಐತಿಹಾಸಿಕವಾಗಿ ಅದೆಷ್ಟೇ ತಾತ್ವಿಕ ಭಿನ್ನಾಭಿಪ್ರಾಯ ಇತ್ಯಾದಿ ಅಂತರಗಳೇರ್ಪಟ್ಟಿದ್ದರೂ ಸಹಬಾಳ್ವೆಯ ದೃಷ್ಟಿಯಿಂದ ಒಂದುಗೂಡುವ ಅವಕಾಶ ಹೇರಳವಾಗಿದೆ.

ಈಗ ನಮಗೊಂದು ಪ್ರಶ್ನೆ ಎದುರಾಗುತ್ತದೆ. ಅದೆಂದರೆ, ಈ ರೀತಿಯ ವಿಶ್ವ ಧರ್ಮವೊಂದು ಜಗತ್ತಿನಲ್ಲಿ ಅಸ್ತಿತ್ವಕ್ಕೆ ಬರಲು ಸಾಧ್ಯವಿದೆಯೇ? ಇದು ಸಹಜ ಪ್ರಶ್ನೆ ಕೂಡ, ಅಥವಾ ಈಗಾಗಲೇ ಅಸ್ತಿತ್ವದಲ್ಲಿರುವ ಧರ್ಮವೊಂದು ಸರ್ವರೀತಿ

ಯಿಂದಲೂ ವಿಶ್ವಧರ್ಮದ ಆದರ್ಶಕ್ಕೆ ಪೂರಕವಾಗಿದ್ದು, ಅದು ಇಡೀ ಜಗತ್ತಿಗೇ ವಿಸ್ತರಿಸಲ್ಪಡುವ ಸಾಧ್ಯತೆ ಇದೆಯೇ ಎನ್ನುವುದು. ಈಗಾಗಲೇ ನಾವು ಕಾಣುತ್ತಿರುವಂತೆ ಕೆಲವು ಧರ್ಮಗಳು ಮತಾಂತರವನ್ನು ಪ್ರೋತ್ಸಾಹಿಸುತ್ತಿವೆ. ಬಹುಶಃ ಇವುಗಳ ಉದ್ದೇಶ ಇಡೀ ಜಗತ್ತಿಗೇ ವಿಸ್ತರಿಸಲ್ಪಡುವುದಿರಬೇಕು. ಅಥವಾ ಮತಾಂತರದ ಮೂಲಕ ಆಕರ್ಷಿಸಿ ತನ್ನ ಧರ್ಮದ ಅಚ್ಚೊತ್ತುವುದು ಇಲ್ಲಿ ಸಾಮಾನ್ಯ. ತತ್ ಪರಿಣಾಮವಾಗಿ ಆ ಎಲ್ಲಾ ಒಂದೇ ಧರ್ಮದವರೆನಿಸುತ್ತಾರಷ್ಟೇ. ಇಂತಹ ಗುಣಗಳ ಆಗರವೇ ಆಗಿರುವ ಧರ್ಮವನ್ನೇ ಕೆಲವರು 'ವಿಶ್ವಧರ್ಮ'ವೆಂದು ತೀರ್ಮಾನಿಸಿ ಬಿಡುತ್ತಾರೆ. ನಮ್ಮಲ್ಲಿ ಅಸ್ತಿತ್ವದಲ್ಲಿರುವ ಅನೇಕ ಧರ್ಮಗಳೂ ತನ್ನದೇ ಆದ ಐತಿಹಾಸಿಕ, ಸಾಂಸ್ಕೃತಿಕ ಮಹತ್ವವನ್ನು ಪಡೆದಿವೆ. ಪ್ರತಿಯೊಂದು ಧರ್ಮವೂ ಚಾರಿತ್ರಿಕ ಗುಣ ವಿಶೇಷಗಳಲ್ಲಿ ವೈವಿಧ್ಯತೆಯನ್ನು ಹೊಂದಿರುವಂತೆ ಅವುಗಳದೇ ಆದ ಸಾಂಪ್ರದಾಯಿಕ ನಿಯಮಬದ್ಧತೆಯಲ್ಲಿ ಸಿಕ್ಕಿಬಿದ್ದಿರುತ್ತವೆ. ಇಂಥಾ ಚೌಕಟ್ಟಿನಡಿಗೆ ಸಿಲುಕಿ ಬೆಳೆಯಲು ಅಪೇಕ್ಷಿಸುತ್ತವೆ ಕೂಡ. ಆದರೂ ಇವುಗಳಲ್ಲಿ ಒಂದು ಗಮನಾರ್ಹ ವಿಶಿಷ್ಟ ಅಂಶವೊಂದನ್ನು ನಾವು ಗಮನಿಸಬಹುದು. ಅದು ಈಗಾಗಲೇ ಹೇಳಿರುವಂತೆ ಸಾಂಸ್ಕೃತಿಕ ಮಹತ್ವ. ಪ್ರತಿಯೊಂದು ಧರ್ಮದಲ್ಲೂ ಇದು ವಿಶಿಷ್ಟವಾಗಿ, ಒಂದಕ್ಕಿಂತ ವೈವಿಧ್ಯಮಯವಾಗಿರುತ್ತದೆ. ಇಂತಹ ವೈವಿಧ್ಯತೆ ತೊಡೆದುಹಾಕುವ ಯತ್ನ ಸಾಧು ಎನಿಸುವುದಿಲ್ಲ. ವೈವಿಧ್ಯತೆಗಳನ್ನು ಉಳಿಸಿಕೊಂಡು, ನಾವು ಬೆಳೆಯಬೇಕಾದುದು ಅತ್ಯಗತ್ಯ. ಆದರೆ ಈ ವೈವಿಧ್ಯತೆಗಳು ಸಂಕುಚಿತತೆಯ ಪ್ರತೀಕವಾಗಬಾರದು ಅಷ್ಟೆ. ಧರ್ಮದಲ್ಲಿ ಇರಬಹುದಾದ ಕೊಳೆಯನ್ನು ಕಿತ್ತೊಗೆಯಲು ನಾವು ಕಂಕಣಬದ್ಧರಾಗಬೇಕಾಗಿದೆ ಎನ್ನುವುದೇ ಇಲ್ಲಿನ ಮಹತ್ವದ ಅಂಶ.

ಎಲ್ಲಾ ಧರ್ಮಗಳ ಉದ್ದೇಶವೂ ಒಂದೇ ಆಗಿದೆ ಎನ್ನುವ ಶ್ರೀ ರಾಮಕೃಷ್ಣ ಪರಮಹಂಸರ ಮಾತು ಜಗತ್ತಿಗೆ ಮನನೀಯವಾಗಬೇಕಾಗಿದೆ. ಅವರು ಹೇಳುತ್ತಿದ್ದಂತೆ ಸರ್ವಧರ್ಮಗಳೂ ಒಂದೇ, ಸತ್ಯ ಸಾಕ್ಷಾತ್ಕಾರಕ್ಕೆ ಇರುವ ಸರ್ವಪಥಗಳು. ಸತ್ಯದ ಮನಗಾಣುವಿಕೆಯೇ ಧರ್ಮದ ಸಾರ. ಅನೇಕ ಧರ್ಮಗಳ ಅಸ್ತಿತ್ವದ ವೈವಿದ್ಯತೆಯು ಜೀವನದ ಸೊಗಸು ಲವಲವಿಕೆ ಎಂದು ಮನೋಜ್ಞವಾಗಿ ಧರ್ಮಗಳ ದೃಷ್ಟಿವೈಶಾಲ್ಯ ಕುರಿತು ಹೇಳುತ್ತಿದ್ದರು. ಸಂಸ್ಕೃತದ ಶ್ಲೋಕವೊಂದು ಶ್ರೀರಾಮಕೃಷ್ಣರ ಮಾತನ್ನೇ ಸಮರ್ಥಿಸುತ್ತದೆ. 'ರುಚೀನಾ ವೈಚಿತ್ರ್ಯಾತ್ ಅರ್ಣವ ಇವ' ಎಂದು. ಅಂತೆಯೇ 'ಲೋಕೋಭಿನ್ನರುಚಿಃ' ಎನ್ನುವ ಮಾತನ್ನೂ ಸಹ ನಾವು ಅರಿತಿದ್ದೇವೆ. ಈ ತೆರನ ಭಿನ್ನಭಿನ್ನ ರುಚಿಗಳ ಸ್ವಾದವನ್ನು ತೆಗೆದುಹಾಕಬಾರದು. ಸದಭಿರುಚಿಯ ಬುನಾದಿಯಲ್ಲಿ ನಿಂತ ಯಾವುದೇ ಪಂಥ, ದಾರಿ, ರೀತಿ, ನೀತಿಗಳೇ ಆಗಲಿ ಒಂದೇ ಆದರ್ಶದ ಬೆಸುಗೆಯಲ್ಲಿ ಒಂದೇ ಆಗಿಬಿಡುತ್ತವೆ. ಇಂತಹ ಆದರ್ಶವೇ 'ಮೋಕ್ಷ' ಅಥವಾ ಪರಮ ಪುರುಷಾರ್ಥ. ಒಟ್ಟಾರೆ ಅದು ಏಕಮೇವಾದ್ವಿತೀಯವಾದದ್ದು. ಈ ಹಿನ್ನೆಲೆಯಲ್ಲಿಯೇ ಶ್ರೀ ರಾಮಕೃಷ್ಣ ಪರಮಹಂಸರಂತಹ ಅನುಭಾವಿಗಳು ಪ್ರತಿಪಾದಿಸಿರುವಂತೆ 'ಧರ್ಮ

ಗಳ ಅನೇಕತೆಯಲ್ಲೂ ಏಕತೆ' ಇದೆ. ಈ ರೀತಿಯ ಭಾವನಾತ್ಮಕ ಏಕತೆಯೇ ಅತೀ ಪ್ರಾಮುಖ್ಯವಾದ ವಿಶ್ವಧರ್ಮದ ಲಕ್ಷಣ.

ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಪ್ರಾಚೀನಕಾಲದಿಂದಲೂ ಅನೇಕ ದಾರ್ಶನಿಕರು, ಸಂತರು ಹೇಳುತ್ತಾ ಬಂದಿದ್ದಾರೆ. ಇತ್ತೀಚೆಗೆ, ಶ್ರೀ ರಾಮಕೃಷ್ಣ ಪರಮಹಂಸರೂ ಸೇರಿದಂತೆ ಎಲ್ಲರೂ ವಿಶ್ವಾತ್ಮಕ ದೃಷ್ಟಿವೈಶಾಲ್ಯದ ಅನುಷ್ಠಾನಕ್ಕಾಗಿ ಯತ್ನಿಸಿದ್ದಾರೆ. ಈ ಎಲ್ಲರ ಪ್ರಯತ್ನಗಳಿಂದ, ವೈಚಾರಿಕತೆಯ ಬೆಳವಣಿಗೆಯೂ ಆಗಿ, ಸರ್ವಧರ್ಮ ಸಮನ್ವಯದೃಷ್ಟಿ ನಿಧಾನವಾಗಿಯಾದರೂ ಅಂಗೀಕಾರಾರ್ಹವಾಗಿ, ಅನುಷ್ಠಾನಗೊಳ್ಳುವ ನಿಟ್ಟಿನಲ್ಲಿ ಜಗತ್ತಿನಲ್ಲಿ ಎಲ್ಲರನ್ನೂ ಯೋಚಿಸುವಂತೆ ಮಾಡುವಲ್ಲಿ ಸಫಲವಾಗಿದೆ. ಇದು ಸಫಲವಾದರೆ ಸರ್ವಧರ್ಮಗಳ ಶ್ರದ್ಧಾಳುಗಳು ಸಹಚರರಾಗಿ, ಸಹಯಾತ್ರಿಕರಾಗಿ, ಭಾವಸಾತ್ಕರವಾಗಿ ಏಕತೆಯನ್ನು ಜಗತ್ತಿನಲ್ಲಿ ಮೆರೆಯಬಹುದು.

ಮತಧರ್ಮಗಳ ವಿಕಾಸವಾದ ಬಗೆಯನ್ನು ಒಟ್ಟಾರೆಯಾಗಿ ಗಮನದಲ್ಲಿಟ್ಟು ವಿವೇಚಿಸಿದಾಗ, ಮುಖ್ಯವಾಗಿ ಮೂಲಸ್ತರಗಳಾದ ಕುಲಧರ್ಮ ರಾಷ್ಟ್ರಧರ್ಮಗಳ ಬಗ್ಗೆ ಹೇಳುವಾಗ ಅಲ್ಲಿ ಬೌದ್ಧಿಕ ಪ್ರೌಢತೆಯನ್ನು ಪೂರ್ಣವಾಗಿ ಕಾಣಲಾಗದಿದ್ದುದು ಸಹಜವೇ ಆಗಿದೆ. ಆಂತರಿಕ ದೃಷ್ಟಿಯನ್ನು, ಅದು ಪಡೆದುಕೊಳ್ಳಬಹುದಾದ ವ್ಯಾಪಕತೆಯ ಸಾಧ್ಯತೆಗಳನ್ನು ಇಲ್ಲಿನ ಜನರು ಕಂಡುಕೊಂಡಿರಲಿಲ್ಲ ಎನ್ನುವುದು ಸ್ಪಷ್ಟ. ಆಂತರಿಕ ವಿಕಾಸವನ್ನು ಗೌಣವಾಗಿಸಿ ಬಾಹ್ಯತೆಯ ಡಂಭಾಚಾರಗಳೇ ಅಲ್ಲಿ ಮೆರೆದಿವೆ. ವಿಶ್ವಧರ್ಮದಲ್ಲಿ ಮತಧರ್ಮದ ಬೆಳವಣಿಗೆ ಒಂದು ಬಗೆಯ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ, ಪೂರ್ಣಗೊಂಡಂತಾಗುತ್ತದೆ. ಹೃದಯಶುದ್ಧಿ, ಭಾವಶುದ್ಧಿಗಳ ಸಂಗಮವೇ ವಿಶ್ವಧರ್ಮದ ಅವಿಭಾಜ್ಯ ಅಂಗಗಳಾಗುತ್ತವೆ. ಅತ್ಯಂತ ಒಳ್ಳೆಯ ಗುಣಗಳ ಪಕ್ಷಪಾತಿಯೇ ವಿಶ್ವಧರ್ಮ ಎನಿಸಿರುತ್ತದೆ.

ವಿಶ್ವಧರ್ಮದ ವಿಶಿಷ್ಟಲಕ್ಷಣವೊಂದಿದೆ. ಅದು ಪರಮ ಪುರುಷಾರ್ಥ ಕಲ್ಪನೆ. ಮಾನವನು ತನ್ನ ಬದುಕಿನಲ್ಲಿ ಅನೇಕ ಪುರುಷಾರ್ಥಗಳನ್ನು ಹಮ್ಮಿಕೊಂಡಿದ್ದಾನೆ. ಅವುಗಳನ್ನು ಸಾಧಿಸುವತ್ತ ಹೆಜ್ಜೆಹಾಕುತ್ತಿದ್ದಾನೆ. ಭಾರತೀಯ ಧರ್ಮಗಳಲ್ಲಿ ಕಾಣಸಿಗುವ ಚತುರ್ವಿಧ ಪುರುಷಾರ್ಥಗಳಲ್ಲಿ, ಪರಮಪುರುಷಾರ್ಥವೇ 'ಮೋಕ್ಷ' ಎನಿಸಿಕೊಂಡಿದೆ. ಕ್ರೈಸ್ತಧರ್ಮವು ಈ ಬಗೆಯನ್ನು 'ರಿಡೆಂಪ್ಷನ್' ಎಂದೇ ಕರೆಯುತ್ತದೆ. ಇದೇ ಮಾನವನ ಅತ್ಯುನ್ನತ ಉದ್ದೇಶವೆನಿಸಲ್ಪಟ್ಟಿದೆ. ಇದನ್ನೇ ದಾರ್ಶನಿಕರು 'ಅಲ್ಟಿಮೇಟ್‌ವ್ಯಾಲ್ಯೂ' ಎಂದು ಕರೆದಿದ್ದಾರೆ. ಹಿಂದೂಧರ್ಮವು ತಾನು ಸೃಜಿಸಿಕೊಂಡಿರುವ ಜೀವನ ಮೌಲ್ಯಗಳನ್ನು ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳೆಂದು ಹೆಸರಿಸುತ್ತದೆ. ಇಲ್ಲಿನ ವಿಶೇಷವೆಂದರೆ, ಧರ್ಮ, ಅರ್ಥ ಕಾಮಗಳು ಪರಮಪುರುಷಾರ್ಥ ಎನಿಸಲಾರವು. ಅವು ಮೋಕ್ಷಕ್ಕೆ ಸಾಧನಗಳು ಎಂಬಂಥ ಮಟ್ಟಕ್ಕೇ ನಿಲ್ಲುತ್ತವೆ. ಆದರೂ ಇವೂ ಸಹ ಮೌಲ್ಯಗಳ ವ್ಯಾಪ್ತಿಯಲ್ಲಿ ಬರುತ್ತವೆ. ಆದರೆ ಈ ಉಪಕರಣಗಳು ಪರಮಮೌಲ್ಯವೆನಿಸಲಾರವು ; ಪರಮ ಪುರುಷಾರ್ಥವೂ

ಆಗಲಾರವು. 'ಗ್ಯಾಲೋವೆ' ಎನ್ನುವ ವ್ಯಕ್ತಿ ಹೀಗೆನ್ನುತ್ತಾನೆ. ಪರಮ ಪುರುಷಾರ್ಥ ಆಧ್ಯಾತ್ಮಿಕವಾದರೆ ಇತರ ಪುರುಷಾರ್ಥಗಳು ಆದಿಭೌತಿಕವಾಗುತ್ತವೆ. ಸರ್ವಧರ್ಮಗಳೂ ವಿಶ್ವಧರ್ಮದ ಅಂಶಗಳ ದೃಷ್ಟಿಯಿಂದ ಇದು ಸಮಂಜಸವೆಂದೇ ಅಭಿಪ್ರಾಯ ತಾಳಿವೆ.

ವಿಶ್ವಧರ್ಮದಲ್ಲಿ ಮೋಕ್ಷವೇ ಆಧ್ಯಾತ್ಮಿಕಮೌಲ್ಯವೆನಿಸಿದೆ. ಅದೇ ಆಧ್ಯಾತ್ಮ ಬದುಕಿನ ಉನ್ನತಾವಸ್ಥೆ, ಪರಮಪುರುಷಾರ್ಥ. ಕುಲ, ಲಿಂಗ, ಜಾತಿ, ವರ್ಗ ಇತ್ಯಾದಿ ಯಾವ ಭೇದವೂ ಇಲ್ಲದೆ ಅದನ್ನು ಸಾಧಿಸಿಕೊಳ್ಳಬಹುದು. ಸರ್ವರನ್ನೂ ಅದು ಆಹ್ವಾನಿಸುತ್ತದೆ. ವಿಶ್ವಧರ್ಮವು ಪ್ರತಿಯೊಬ್ಬರಿಗೂ ಅವಕಾಶ ನೀಡುವ ವ್ಯವಸ್ಥೆಯಾಗಿದೆ. ಇಲ್ಲಿ ಅರ್ಹತೆಯ ಬಗ್ಗೆ ಪೂರ್ವಾಗ್ರಹವಿಲ್ಲ. ಯಾರೇ ಆದರೂ ಅರ್ಹತೆಯನ್ನು ಪಡೆಯಬಹುದು. ಇಂತಹ ಅರ್ಹತೆಯನ್ನು ಮಾನವ ಗಳಿಸಿಕೊಳ್ಳಲೆಂದೇ ಮತಧರ್ಮಗಳು ಅಸ್ತಿತ್ವದಲ್ಲಿರಬೇಕು, ಮಾರ್ಗದರ್ಶಿಸಬೇಕು. ಈ ರೀತಿಯ ಸಹಕಾರಮಾಡುವ ಅದರ ಮನೋಭಾವದ ಮೇಲೆ ಒಂದು ಧರ್ಮದ ಯುಕ್ತಾಯುಕ್ತತೆಯನ್ನು ನಿರ್ಣಯಿಸಬಹುದು. ಇಂತಹ ಯುಕ್ತಾಯುಕ್ತತೆಗೆ ಮತಧರ್ಮಗಳ ಪುನರ್ವಿಮರ್ಶೆಗೆ ವಿಶ್ವಧರ್ಮ ನಮಗೆ ಓರೆಗಲ್ಲು (ಕ್ರೈಟೀರಿಯನ್) ಎನಿಸುತ್ತದೆ.

ವಿಶ್ವಧರ್ಮದ ಅಂಶಗಳು ಮತಧರ್ಮ ಹಾಗೂ ಅವು ಆಚರಿಸಬಹುದಾದ ಮತಗಳ ರೀತಿನೀತಿಗಳ ಮೇಲೂ ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ. ಅಷ್ಟು ಪ್ರಭಾವಯುಕ್ತವಾಗಿದೆ. ಉದಾಹರಣೆಗೆ, ಕುಲಧರ್ಮ, ರಾಷ್ಟ್ರಧರ್ಮಗಳು ಆಚರಿಸುವ ಪ್ರಾರ್ಥನೆಯ ವಿಧಿಯಲ್ಲಿ 'ದೇಹಿಮೇದದಾಯಿತೆ' ಎನ್ನುವಂಥಾ ಭಾವವನ್ನು ಕಾಣಬಹುದು. ಈ ವಿಧದ ಪ್ರಾರ್ಥನೆಗಳಲ್ಲಿ ಇಷ್ಟವಸ್ತುಗಳ ಪೂರೈಕೆಯ ಉದ್ದೇಶವನ್ನು ಕಾಣಬಹುದು. ಇಲ್ಲಿ ಲೌಕಿಕ ಸ್ವಾರ್ಥ ಹೊಕ್ಕಿರುತ್ತದೆ. ಆದರೆ ವಿಶ್ವಧರ್ಮದ ದೃಷ್ಟಿಯ ಬಗ್ಗೆ ಹೇಳುವುದಾದರೆ, ಪ್ರಾರ್ಥನೆ ಎನ್ನುವುದು ಶುದ್ಧ ಪ್ರಾರ್ಥನೆಯೇ ಆಗಿರುತ್ತದೆ. ಅದು ಉಪಾಸನಾತ್ಮಕವಾಗಿರಬೇಕು. ಇಂಥ ಪ್ರಾರ್ಥನೆಗಳಲ್ಲಿ ಐಹಿಕ ವಸ್ತು–ವಿಷಯಗಳ ಬಯಕೆಯ ಮನೋಭಾವ ಕಾಣದು, ಬದಲಾಗಿ ಶುದ್ಧ ಪ್ರಾರ್ಥನೆಯಾಗಿಯೇ ಇರುತ್ತದೆ. ಇಲ್ಲಿ ಉದ್ದೇಶ ಒಂದೇ, ಅದು ಭಗವಂತನಲ್ಲಿ ತಾದಾತ್ಮ್ಯವನ್ನು ಹೊಂದುವುದು ಅಂತರಂಗದಲ್ಲಿ ಸ್ಫುರಿಸುವ ಭಾವಾನುಭೂತಿಯು ಇಲ್ಲಿ ಅತಿಮುಖ್ಯವಾದ ಅಂಶ. ಅಂತರಂಗವು ಪರಿಶುದ್ಧವಾಗಿರುವುದರ ಸಂಕೇತವೇ ಬಹಿರಂಗದ ಶುದ್ಧ ನಡವಳಿಕೆಗಳ ಪ್ರಾರ್ಥನೆ. ಈ ಸಂದರ್ಭದಲ್ಲಿ ಅಂತರಂಗ–ಬಹಿರಂಗಗಳ ಸಾಮರಸ್ಯವನ್ನು ಕಾಣಬಹುದು.

ವೀರಶೈವ ಧರ್ಮ ಒಪ್ಪಿಕೊಳ್ಳುವ 'ಐಕ್ಯಸ್ಥಳ', ವೈಷ್ಣವ ಧರ್ಮದಲ್ಲಿ ಕಾಣಸಿಗುವ 'ಅವಿಚ್ಛಿನ್ನ ಸಂಸ್ಮೃತಿ'ಗಳು ಅಂತಿಮ ಸ್ಥಳವೆಂದೇ ಗುರುತಿಸಿಕೊಂಡಿವೆ. ಅಂತೆಯೇ ಪ್ರಾರ್ಥನೆಯೂ ಸಹ 'ಏಕತೆ'ಯನ್ನು ಸಾಧಿಸಬೇಕು. ಎಲ್ಲಾ ಮತದ ಭಕ್ತರು, ಸಂತರಾದವರು ಭಗವಂತನಲ್ಲಿ ಬೇಡಿಕೊಂಡಿರುವುದು ಈ ಒಂದನ್ನೇ.

ಅವರೆಲ್ಲರೂ ಜಗತ್ತಿನ ವಿಷಯಾಸಕ್ತ ಬದುಕಿಗೆ ತಿಲಾಂಜಲಿ ಇಟ್ಟು, ಅನಾಸಕ್ತಿ ಹೊಂದಿ, ಅಂತರ್ಯದ ಅತ್ಯುನ್ನತ ಬಯಕೆ ಎನಿಸಿದ 'ಮುಕ್ತಿ'ಯ ಕಡೆ ಮನಸ್ಸು ಮಾಡಿರುವುದು ಅನೇಕ ದೃಷ್ಟಾಂತಗಳಲ್ಲಿ ಕಂಡುಬರುತ್ತದೆ.

ವಿಶ್ವಧರ್ಮದ ವಿಶಾಲ ಗುಣಗಳು ಹೃದಯದಲ್ಲಿ ಬಂದರೆ ಸಾಲದು, ಅದು ಕಾರ್ಯಗತವಾಗಬೇಕು. ವಿಷಯಾಸಕ್ತ ಜೀವನವೇ ಪರಮಮೌಲ್ಯ, ಸಂಕುಚಿತ ಭಾವಗಳೇ ಜೀವನದ ಆದರ್ಶವೆಂದು ನಂಬಿ ನಡೆಯುವ 'ಬದ್ಧ' ಸಮಾಜದಲ್ಲಿ ಇದರ ಅನುಷ್ಠಾನ ಸುಲಭ ಸಾಧ್ಯವೇನಲ್ಲ. ಏಕೆಂದರೆ ಲೌಕಿಕ ಜೀವನವನ್ನೇ, ಕೇವಲ ಭೋಗವನ್ನೇ ಗುರಿಯಾಗಿ ಹೊಂದಿರುವ ಸಮಾಜದಲ್ಲಿ ಅವುಗಳ ವಿರುದ್ಧ ನಂಬಿಕೆಗಳನ್ನು ಸ್ಥಾಪಿಸಲು ಹೊರಟರೆ ಆಗ ಬದ್ಧ ಸಮಾಜವು ತೀರಾ ಅಮಾನುಷವಾಗಿ ಪ್ರತಿಕ್ರಿಯಿಸುತ್ತದೆ. ಕತ್ತಿಯ ಅಲಗಿನ ಮೇಲೆ ನಡೆಯುವ ಕೆಲಸವಿದು. ಮತಾಂಧತೆ, ಉನ್ಮತ್ತಗೊಂಡ ಹುಚ್ಚು ಅಭಿಮಾನ ಎನ್ನುವ ಸಂಕುಚಿತತೆಯ ಕತ್ತಿಗಳು ವಿಶ್ವಧರ್ಮದ ಆದರ್ಶಗಳನ್ನು ಕಾರ್ಯಗೊಳಿಸಲೆತ್ನಿಸುವವರನ್ನು ಇರಿಯಲು ಸಿದ್ಧವಿರುತ್ತವೆ ಎನ್ನುವುದು ಇತಿಹಾಸ ಹೇಳುವ ಅನುಭವ ಸತ್ಯ. ಅತ್ಯಂತ ಒಳ್ಳೆಯದನ್ನು ಯಾವ ಕಡೆಯಿಂದಲಾದರೂ ಸ್ವಾಗತಿಸಲು ಸಿದ್ಧವಾಗಿರುವ 'ಮುಕ್ತ' ಸಮಾಜದ ನಿರ್ಮಾಣಕ್ಕಾಗಿ ಹಲವು ಅಡ್ಡಿ-ಆತಂಕಗಳನ್ನು ಎದುರಿಸಲೇಬೇಕಾದುದು ಅನಿವಾರ್ಯ.

ಹಿಂದಿನಿಂದಲೂ ಸಮಾಜ ಸುಧಾರಣೆ, ಮತ್ತು ಮತಧರ್ಮದ ಸ್ಫೂರ್ತಿ ಜೊತೆಯಲ್ಲಿಯೇ ಸಾಗಿಬಂದಿವೆ. ಇದುವರೆವಿಗೆ ಅನೇಕ ಮಹಾನ್ ಚಿಂತಕರೂ, ಸಂತರು, ದಾರ್ಶನಿಕರು ವಿಶ್ವಧರ್ಮದ ಅಗತ್ಯವನ್ನು ಹೇಳಿಹೋಗಿದ್ದಾರೆ. ಆಯಾ ಕಾಲದ ತಮ್ಮ ಸಮಾಜದ ಹುಳುಕು ಅಂಶಗಳನ್ನು, ರೋಗಗ್ರಸ್ಥ ನೀತಿ ನಿಯಮಗಳನ್ನು ತೋರಿಸಿಕೊಟ್ಟು ವಿಶ್ವಧರ್ಮವನ್ನು ಸಮರ್ಥಿಸಿಕೊಂಡಿದ್ದಾರೆ. ಅನೇಕ ಕಂದಾಚಾರಗಳ ವಿರುದ್ಧ ನೈತಿಕ ಸಮರವನ್ನೇ ಹೂಡಿದ್ದಾರೆ. ಇಂತಹ ಪ್ರಯತ್ನದ ಹಿಂದೆ ಇದ್ದ ಸಮಾಜದ ಮೇಲಣ ಕಾಳಜಿ, ದಿಟ್ಟತನ ನಿಜಕ್ಕೂ ಅನನ್ಯ.

ವಿಶ್ವಧರ್ಮದ ಅನುಷ್ಠಾನದಲ್ಲಿ ವೈಚಾರಿಕತೆಯೂ ಸೇರಿದಂತೆ, ಸಮಾಜದ ಬಗ್ಗೆ ಗಂಭೀರ ಅಧ್ಯಯನ, ವಸ್ತುನಿಷ್ಠ ಚರ್ಚೆ ಪರಿಣಾಮಕಾರಿಯಾಗುತ್ತವೆ. ಬದ್ಧ ಸಮಾಜದಂತಹ ಸಂಕುಚಿತ ಸಮಾಜಗಳಲ್ಲಿ ಇವು ಅತ್ಯಂತ ಅಗತ್ಯ. ಅಂಧಕಾರದ ಮಬ್ಬನ್ನು ಹೋಗಲಾಡಿಸಲು ತಮ್ಮ ಸಮಾಜಕ್ಕಾಗಿ ಅನೇಕ ಸಂತರು, ಶ್ರೇಷ್ಠರು ತಮ್ಮನ್ನೇ ಬಲಿಕೊಟ್ಟು ಹುತಾತ್ಮರಾಗಿದ್ದಾರೆ. ಇಂತಹ ಪ್ರಾಜ್ಞ ಚಿಂತಕರು, ಆದರ್ಶವಾದಿಗಳು ವಿಶ್ವಧರ್ಮವನ್ನೇ ಬೋಧಿಸಿದ್ದಾರೆ. ಮಾನವೀಯ ಮೌಲ್ಯಗಳ ಪ್ರತಿಷ್ಠಾಪನೆಗೆ ಜಗತ್ತಿನ ದೇಶಗಳ ಪರಸ್ಪರ ಭಾವಾತ್ಮಕ ಐಕ್ಯಕ್ಕೆ ವಿಶ್ವಧರ್ಮವೇ ಅತ್ಯಂತ ಸೂಕ್ತ ಎಂಬ ನಂಬಿಕೆ ತಾಳಿದ್ದಾರೆ. ಇಂಥಲ್ಲಿ ಸಮಾಜಸುಧಾರಣೆ ಮತ್ತು ಮತಧರ್ಮ ಸ್ಫೂರ್ತಿ ಒಂದಕ್ಕೊಂದು ತಳಕು ಹಾಕಿಕೊಂಡಿರುವುದು ಕಾಣಸಿಗುತ್ತದೆ.

ಗ್ರಂಥಋಣ

1. ಗ್ಯಾಲೊವೆ—ದಿ ಫಿಲಾಸಫಿ ಆಫ್ ರಿಲಿಜನ್
2. ಸೊರೊಕಿನ್—ಸೋಷಿಯಲ್ ಫಿಲಾಸಫೀಸ್ ಇನ್ ಎನ್ ಏಜ್ ಆಫ್ ಕ್ರೈಸೀಸ್, ಲಂಡನ್ (1952)
3. ಸುರೇಂದ್ರನಾಥ ದಾಸಗುಪ್ತ—ಎ ಹಿಸ್ಟರಿ ಆಫ್ ಇಂಡಿಯನ್ ಫಿಲಾಸಫಿ, ಕೇಂಬ್ರಿಡ್ಜ ಯೂನಿವರ್ಸಿಟಿ ಪ್ರೆಸ್–1922
4. ಡಬ್ಲ್ಯೂ. ಕೆ. ಸಿ. ಗುಥ್ರೈ—ಎ ಹಿಸ್ಟರಿ ಆಫ್ ಗ್ರೀಕ್ ಫಿಲಾಸಫಿ, ಕೇಂಬ್ರಿಡ್ಜ ಯೂನಿವರ್ಸಿಟಿ ಪ್ರೆಸ್–1965
5. ಚಾರ್ಲ್ಸ್ ಪಿ. ಲೂಮಿಸ್—ಸೋಷಿಯಲ್ ಸಿಸ್ಟಮ್ಸ್ ಎಸ್ಸೇಸ್ ಆನ್ ದೆರ್ ಪರ್ ಸಿಸ್ಟೆನ್ಸ್ ಅಂಡ್ ಚೇಂಜ್ (ಲಂಡನ್ 1960)
6. ಹಿಸ್ಟರಿ ಆಫ್ ಫಿಲಾಸಫಿ, ಈಸ್ಟರ್ನ್ ಅಂಡ್ ವೆಸ್ಟರ್ನ್, ವಾಲ್ಯೂಮ್ ನಂ. 2— ಸ್ಪಾನ್ಸರ್ಡ್ ಬೈ ಮಿನಿಸ್ಟ್ರಿ ಆಫ್ ಎಜುಕೇಷನ್, ಗೌರ್ನಮೆಂಟ್ ಆಫ್ ಇಂಡಿಯಾ (1953)
7. ದಿ ಥಿಯಾಸಾಫಿಕಲ್ ಮೂವ್‌ಮೆಂಟ್ (1875–1925)—ಎ ಹಿಸ್ಟರಿ ಅಂಡ್ ಸರ್ವೆ, ಇ. ಪಿ. ದತ್ತನ್ ಅಂಡ್ ಕಂಪನಿ, ನ್ಯೂಯಾರ್ಕ್ 1925.

ಧರ್ಮವಿರುವ ಕಡೆ ಜಯವೂ ಇರುತ್ತದೆ.

—ಮಹಾಭಾರತ

ಆಚಾರದಿಂದಲೇ ಬರತಕ್ಕದ್ದು ಧರ್ಮ;
ಧರ್ಮದಿಂದಲೇ ಆಯುರ್ವೃದ್ಧಿ.

—ಮಹಾಭಾರತ

ಕ್ಷಮೆಯನ್ನು ಸರಿಗಟ್ಟುವ ತಪಸ್ಸಿಲ್ಲ,
ಸಂತೋಷಕ್ಕಿಂತ ಮಿಗಿಲಾದ ಸುಖವಿಲ್ಲ,
ಆಸೆಗಿಂತ ಬೇರೆ ಯಾವ ವ್ಯಾಧಿಯಿಲ್ಲ,
ದಯೆಯನ್ನು ಮೀರಿಸಿದ ಧರ್ಮವಿಲ್ಲ.

ಡಾ. ಅಂಬಳಿಕೆ ಹಿರಿಯಣ್ಣ

ಭಾರತೀಯ ಜಾನಪದದಲ್ಲಿ ಏಕರೂಪತೆ

ಭಾರತೀಯ ಜಾನಪದದ ಏಕರೂಪತೆಯನ್ನು ಮೂರು ದೃಷ್ಟಿಗಳಿಂದ ಪರಿಶೋಧಿಸಬಹುದು :

(1) ಒಂದು ಅಧ್ಯಯನ ಶಿಸ್ತಾಗಿ ಜಾನಪದವು ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯ ಏಕತಾ ಮನೋಭಾವವನ್ನು ಬಲಪಡಿಸಲು ಸಹಕಾರಿಯಾಗಿರುವುದು.

(2) ಬೇರೆ ಬೇರೆ ರಾಜ್ಯಗಳ ಕಲೆ, ಸಂಪ್ರದಾಯಾಚರಣೆ ಮತ್ತು ಕ್ರಿಯೆಗಳಲ್ಲಿ ಸಾದೃಶ್ಯವಿರುವುದು.

(3) ಅನ್ಯಾಯಗಳ ವಿರುದ್ಧ ಸಾಮಾಜಿಕ ಪ್ರತಿಭಟನೆ ತೋರುವ ಸಾಧನವಾಗಿ ಜನಪದ ಕಲಾರೂಪಗಳು ಬಳಕೆಗೊಳ್ಳುತ್ತಿರುವುದು.

೧

ಜಾನಪದ, ಅದರ ಅಧ್ಯಯನದ ಇತಿಹಾಸದುದ್ದಕ್ಕೂ ರಾಷ್ಟ್ರೀಯ ಸಮಸ್ಯೆಗಳು ಮತ್ತು ಕಾಳಜಿಗಳೊಂದಿಗೆ ತನ್ನನ್ನು ಗುರುತಿಸಿಕೊಂಡಿದೆ. ಪ್ರಪಂಚದಾದ್ಯಂತ ಈಗ ತೀವ್ರವಾಗಿರುವ 'ರಾಷ್ಟ್ರೀಯತ್ವ'ದ ಲಾಭದಿಂದಲ್ಲ; ಒಂದು ಅಧ್ಯಯನ ಶಿಸ್ತಾಗಿ ಜಾನಪದ ರಾಷ್ಟ್ರೀಯ ಏಕತಾ ಮನೋಭಾವನೆಯನ್ನು ಬಲಪಡಿಸಲು ಶಕ್ತವಾಗಿದೆ. ಜನಪದ ಪರಂಪರೆಯಿಂದಾಗಿಯೇ ಈಗ ಬುದ್ಧಿಜೀವಿಗಳು ಮತ್ತು ನೀತಿನಿಯಮ ನಿರೂಪಕರು ತಮ್ಮ ಅಸ್ತಿತ್ವದ ಬಗೆಗೆ ಹೆಚ್ಚು ಜಾಗ್ರತರಾಗಿದ್ದಾರೆ.[1] ನಿಜವಾಗಿಯೂ, ಈ ಜ್ಞಾನಶಾಖೆ, ಜನತೆಯನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯಲು ನೀತಿನಿಯಮ ನಿರೂಪಕರಿಗೆ ಹಾಗೂ ಯೋಜಕರಿಗೆ ಒಂದು ಉತ್ತಮ ಕಾರ್ಯಸಾಧನವಾಗಿ ಪರಿಣಮಿಸಿದೆ. ಗ್ರಾಮಾಂತರ ಪ್ರದೇಶಗಳಲ್ಲಂತೂ ಇದು ಒಂದು ಸ್ವಯಂ ಪ್ರಗತಿಯ ಪ್ರಕ್ರಿಯೆಯಾಗಿ ಸಾಮಾಜಿಕ ಅಭಿವೃದ್ಧಿಯನ್ನು ಪ್ರೇರೇಪಿಸುತ್ತಿದೆ.

1. Richard M. Dorson, *Folklore in the Modern World*, 1978. p. 38.

ಜಾನಪದ, ಪ್ರಾಚೀನಾನ್ವೇಷಣೆಯ ಹವ್ಯಾಸದಿಂದ ದೂರ ಇದ್ದು, ತನ್ನ ಅಧ್ಯಯನದ ದಾರಿಯುದ್ದಕ್ಕೂ ರಾಷ್ಟ್ರೀಯ ಮಹತ್ವದ ವಿಷಯ ಹಾಗೂ ಘಟನೆಗಳೊಂದಿಗೆ ಸಂಬಂಧ ಸಾಧಿಸಿರುವುದು ಎಲ್ಲರಿಗೂ ತಿಳಿದ ವಿಚಾರ. ರಾಷ್ಟ್ರೀಯ ಸಮಗ್ರತಾ ಮನೋಭಾವವನ್ನು ಬಲಪಡಿಸಿಕೊಳ್ಳಲು ಜನಪದ ಪರಂಪರೆಗಳು ಸಹಾಯಕ ಎಂಬುದನ್ನು ಬಹುತೇಕ ಎಲ್ಲ ರಾಷ್ಟ್ರಗಳೂ ಈಗ ಮನಗಂಡಿರುವುದು ಗಮನಾರ್ಹ.

ಜಾಕಬ್ ಮತ್ತು ವಿಲ್‌ಹೆಲ್ಮ್ ಗ್ರಿಮ್ಮರು ಹಿಮ್ಮೆಯ ಗತ ಜರ್ಮನಿಯನ್ನು ಪುನರ್‌ನಿರ್ಮಿಸುವ ಕಾರ್ಯದೊಂದಿಗೆ ಜಾನಪದ ಅಧ್ಯಯನವನ್ನು ಬೆಸೆದಿದ್ದರು. ಜರ್ಮನ್ ಪ್ರಜ್ಞೆಯನ್ನು ಚೋದಿಸಲು ಅಲ್ಲಿಯ ಪಕ್ಷ ನೀತಿ ರೈತ ಶಾಲೆ ಹಾಗೂ ಸಂಸ್ಥೆಗಳನ್ನು ಹುಟ್ಟುಹಾಕಿತು. ಜಾನಪದ ತರಗತಿಗಳು ರೈತರ ಹಬ್ಬ ಹರಿದಿನಗಳು ಸಂಗೀತ ಕುಣಿತಗಳನ್ನು ಪ್ರೋತ್ಸಾಹಿಸುವುದರ ಮೂಲಕ ಜರ್ಮನ್ ಪ್ರಜ್ಞೆ ಮರುಕಳಿಸಲು ಪ್ರೇರಣೆ ಒದಗಿಸಿದವು. ಪಕ್ಷದ ಜನಪದ ಶಿಕ್ಷಣ ಕಾರ್ಯಕ್ರಮ ಜರ್ಮನ್ ಸಂಸ್ಕೃತಿಯ ವಾಹಕದಂತೆ ಜರ್ಮನರಿಗೆ ಬೋಧಿಸುವ ಯತ್ನಮಾಡಿತು. ಪರಿಣಾಮವಾಗಿ ಜರ್ಮನ್ ರೈತನ ವಿಶಿಷ್ಟ ಶೂರ ಗುಣ ಉದ್ದೀಪಿತವಾಯಿತು. ಜರ್ಮನಿಯ ರಾಜಕೀಯ ಗಡಿಗಳನ್ನು ವಿಸ್ತರಿಸಲು ಅದು ಬೇಕಾಗಿತ್ತು. ಜನತೆಯ ಈ ಹುರುಪು ಯುದ್ಧೋಚಿತ ಹುರುಪೆನ್ನುವಂತೆ ಕಳೆಗಟ್ಟಿತು.[2]

ಜಾನಪದ ಸಂಶೋಧನೆ ಮತ್ತು ರಾಷ್ಟ್ರೀಯತ್ವಕ್ಕೆ ಸಂಬಂಧಿಸಿದ ನಿದರ್ಶನಗಳು ಇಮ್ಮಡಿಗೊಂಡವು. ರಾಜಕೀಯ ಕಾರ್ಯಚರಣೆಯ ಅಂಗವಾಗಿ ವಿದ್ವಾಂಸರು ಅದರ ಅಗತ್ಯವನ್ನು ಹೀಗೆ ಮನಗಂಡಿದ್ದರು : 'ಭವಿಷ್ಯಕ್ಕೆ ನಿರಾತಂಕವಾಗಿ ನಡೆದುಹೋಗ ಬೇಕೆನ್ನುವ ಹಂಬಲವಿದ್ದರೆ ನಾವು ನಮ್ಮ ಜನಪದ ಜೀವನದ ಗಟ್ಟಿ ನೆಲದ ಮೇಲೆ ಹಾದು ಹೋಗಬೇಕು'.[3]

ರಾಷ್ಟ್ರೀಯ ಚಳವಳಿಗಳಲ್ಲಿ ಜಾನಪದ ವಹಿಸುವ ಪಾತ್ರದ ಮಹತ್ವವನ್ನು ಒತ್ತಿ ಹೇಳುತ್ತಾ ಆಸ್ಕರ್ ಜೆ. ಫಾಲ್ನೆಸ್ ಅವರು ಒಂದೆಡೆ ನಾರ್ವೆಯಲ್ಲಿನ ರಾಷ್ಟ್ರೀಯ ರಮ್ಯ ಪ್ರಜ್ಞೆಯನ್ನು ಸಮರ್ಥಿಸಿರುವುದು ಗಮನಾರ್ಹ.[4] ನಾರ್ವೇಜಿಯನ್ನರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಚಳವಳಿ ನಡೆಸಲಿಲ್ಲ; ಸಾಂಸ್ಕೃತಿಕ ಸ್ವಾತಂತ್ರ್ಯಕ್ಕಾಗಿ 19ನೆಯ ಶತಮಾನದುದ್ದಕ್ಕೂ ಹೋರಾಟ ನಡೆಸಿದ್ದು ಈಗ ಇತಿಹಾಸವಾಗಿದೆ.

ರಾಷ್ಟ್ರೀಯ ತತ್ವಾದರ್ಶಗಳನ್ನು ವಸ್ತು, ರೂಪ, ವ್ಯಾಖ್ಯಾನದಲ್ಲಿನ ವ್ಯತ್ಯಯಗಳ ಮೂಲಕ ಅಳವಡಿಸಿಕೊಳ್ಳಲು ಜಾನಪದ ಅವಕಾಶ ಕಲ್ಪಿಸುತ್ತದೆ. ರಷ್ಯಾದ ಜಾನಪದ

---

2. *Journal of American Folklore,* Vol 85, 1972, pp. 221–235.
3. Ibid.
4. *National Romanticism in Norway,* New York, 1933, p.215.

ಅಧ್ಯಯನ ತರಗತಿಗಳು ಇದಕ್ಕೆ ಒಂದು ಉತ್ತಮ ನಿದರ್ಶನ. ಇದನ್ನು ಫೆಲಿಕ್ಸ್ ಒಯ್ನಾಸ್ ಬಹಳ ಚೆನ್ನಾಗಿ ದಾಖಲುಗೊಳಿಸಿದ್ದಾರೆ. ಅವರು ನಿರೂಪಿಸಿರುವಂತೆ, ಜಾನಪದ ತಜ್ಞರೂ ಸೇರಿಕೊಂಡು ವಿಮರ್ಶಕ, ವಿದ್ವಾಂಸ ಮತ್ತು ಬರಹಗಾರರ ಮೇಲೆ ಸರಕಾರದ ನಿಯಂತ್ರಣ 1929 ರಿಂದ ಬಿಗಿಯಾಯಿತು. ಸೋವಿಯತ್ ಬರಹಗಾರರ ಒಕ್ಕೂಟದ ಸೇರ್ಪಡೆಯೊಂದಿಗೆ (1932) ಸ್ಟಾಲಿನ್ ಅವರ ಪಂಚವಾರ್ಷಿಕ ಯೋಜನೆಗಳ ಅಳವಡಿಕೆಯೊಡನೆ ನಿಯಂತ್ರಣವನ್ನು ಬಿಗಿಗೊಳಿಸಲಾಯಿತು. ಸೋವಿಯತ್ ಬರಹಗಾರರ ಪ್ರಥಮ ಒಕ್ಕೂಟದ (1934) ಪ್ರಧಾನ ಭಾಷಣದಲ್ಲಿ ಮ್ಯಾಕ್ಸಿಂಗಾರ್ಕಿ ಅವರು ಜಾನಪದ ಮೌಲ್ಯಗಳ ಮಹತ್ವವನ್ನು ಎತ್ತಿಹಿಡಿದರು. ಶ್ರಮಿಕ ವರ್ಗದ ವಾಸ್ತವ ಬದುಕು ಮತ್ತು ಆಕಾಂಕ್ಷೆಗಳ ಅಭಿವ್ಯಕ್ತಿ ಜಾನಪದ ಎಂದು ಹೇಳಿ ಅದರ ಮೌಲ್ಯಗಳನ್ನು ಪ್ರತಿಪಾದಿಸಿದರು. ಅಂದಿನಿಂದ ರಷ್ಯದ ಸರಕಾರ ವ್ಯಾಪಕ ಸಂಗ್ರಹ ಚಟುವಟಿಕೆಗಳನ್ನು ಬೆಂಬಲಿಸಿದ್ದಲ್ಲದೆ ಜಾನಪದದ ಸಮಾಜವಾದಿ ವ್ಯಾಖ್ಯಾನವನ್ನೂ ಪ್ರೋತ್ಸಾಹಿಸಿತು. ಪ್ರಸಿದ್ಧ ಜಾನಪದ ತಜ್ಞ ಸೊಕೊಲೊವ್[5] ಅವರು ತಮ್ಮ 'ರಷ್ಯನ್ ಜಾನಪದ' ಗ್ರಂಥದಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರಚಲಿತ ತತ್ವಾದರ್ಶೀಯ ಧೋರಣೆ ಮತ್ತು ಜಾನಪದದ ಬಗೆಗೆ ಅದು ಹೊಂದಿರುವ ನಿಲುವನ್ನು ಹೊರಗೆಡವಿ ಜಾನಪದದ ಬಗೆಗೆ ಸೋವಿಯತ್ ಸರಕಾರ ಹೊಂದಿದ್ದ ಧೋರಣೆಯನ್ನು ಪ್ರಕಟಪಡಿಸಿದರು. ಕಮ್ಯುನಿಸಂನ ರೋಚಕ ಚಿಂತನೆಗಳನ್ನು ಜನಪ್ರಿಯಗೊಳಿಸಲು ಜಾನಪದ, ಇಂದು ರಷ್ಯಾದಲ್ಲಿ ಬಹು ಮುಖ್ಯವಾದ ಕಲಾತ್ಮಕ ಸಾಧನವಾಗಿ ಪರಿಣಮಿಸಿದೆ; ಸೋವಿಯತ್ ಸಾಮಾಜಿಕ ಸಂಸ್ಕೃತಿಯಲ್ಲಿ ಮಹತ್ತ್ವದ ಸ್ಥಾನವನ್ನು ಪಡೆದಿದೆ. ರಷ್ಯನ್ ಮೌಖಿಕ ಕಾವ್ಯ ಅತ್ಯಂತ ವ್ಯಾಪಕವಾಗಿ ಮತ್ತು ಪ್ರಭಾವಯುತವಾಗಿ ಸಾಮಾಜಿಕ ಗುರಿಗಳನ್ನು ಸಾಧಿಸಿತೋರಿಸಿರುವುದು ಗಮನಾರ್ಹ. ಅಷ್ಟೇ ಅಲ್ಲ, ಸೋವಿಯತ್ ಜಾನಪದ ಅಧ್ಯಯನ ಜಾನಪದದ ಬಂಡಾಯ ಹಾಗೂ ಜಾಹೀರು ಪ್ರವೃತ್ತಿಯನ್ನು ಹೊರಗೆಡವಿದೆ. ಹೀಗೆ ಸೋವಿಯತ್ ಜಾನಪದದ ಅಧ್ಯಯನ ಸಮಾಜ ಜೀವನದ ವಾಸ್ತವ ಅಥವಾ ರಾಜಕೀಯ ಚಟುವಟಿಕೆಗಳೊಡನೆ ಬೆರೆತಿದೆ ಎನ್ನುವುದರಲ್ಲಿ ಸಂಶಯವಿಲ್ಲ.

೨

ರಾಷ್ಟ್ರೀಯ ಪ್ರಜ್ಞೆ ಮತ್ತು ದೇಶಪ್ರೇಮ ಭಾವನೆಗಳು ಈಗ ಭಾರತೀಯರಲ್ಲೂ ಜಾಗ್ರತಗೊಂಡಿರುವುದರಿಂದ ತಂತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿಕೊಳ್ಳುವ ಮತ್ತು ಬೆಳೆಸುವ ಪ್ರಜ್ಞೆ ಎಲ್ಲ ರಾಜ್ಯಗಳಲ್ಲೂ ರೂಢವಾಗುತ್ತಿದೆ. ಪ್ರಾದೇಶಿಕ ಶಿಕ್ಷಣ ರಾಜಕೀಯ ಭಾವನೆ ಮತ್ತು ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದ ಜನರು ಕಲೆ, ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯ ಅಂಗ ವಿಷಯಗಳಲ್ಲಿ ಅಭಿಮಾನ

5. Sokolov Y. M., *Russian Folklore* 1975. pp. 13–22.

ತಳೆಯಲಾರಂಭಿಸಿದ್ದಾರೆ. ಈ ರೀತಿಯಾಗಿ ರಾಷ್ಟ್ರೀಯ ಮತ್ತು ದೇಶಪ್ರೇಮ ಭಾವನೆಗಳ ಬಲದೊಂದಿಗೆ ಜಾನಪದ ಸಾಮಗ್ರಿಯಲ್ಲಿ ಆಸಕ್ತಿ ಮೊಳೆಯುತ್ತದೆ.

ಸ್ವಾತಂತ್ರ್ಯಾಗಮನದ ಅನಂತರ ಭಾಷಾವಾರು ಪ್ರಾಂತ್ಯಗಳು ನಿರ್ಮಾಣವಾದ ಮೇಲೆ ಪ್ರಾದೇಶಿಕತಾ ಭಾವನೆ ಹರಡಿತು. ಅದರೊಂದಿಗೆ ಪ್ರಾದೇಶಿಕ ಜನಪದ ಸಂಸ್ಕೃತಿಯ ಪ್ರಜ್ಞೆ ಮತ್ತಷ್ಟು ಬಲವಾಗತೊಡಗಿತು. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಜಾನಪದ ಸಂಗ್ರಹಣೆ ಮತ್ತು ಪ್ರಕಟಣೆಯನ್ನು ಪ್ರೋತ್ಸಾಹಿಸಲು ಅಸಂಖ್ಯಾತ ಸಂಘಸಂಸ್ಥೆಗಳು ರಚಿತವಾದವು. ಕರ್ನಾಟಕದಲ್ಲಿ ರಂಗ ಕಲೆಗಳನ್ನೂ ಒಳಗೊಂಡು ಎಲ್ಲ ಪ್ರದರ್ಶನಾತ್ಮಕ ಜನಪದ ಕಲೆಗಳು ವಿದ್ವತ್ಪೂರ್ಣ ಸಂಶೋಧನೆಯಲ್ಲಿ ಪ್ರವೇಶ ಪಡೆದವು. ಕರ್ನಾಟಕದ ಕಲೆಗಳನ್ನು ಹೋಲುವ ಸಮಾನತೆಯನ್ನು ಸಾಧಿಸುವ ಎಲ್ಲ ಬಗೆಯ ಕಲೆಗಳು ಭಾರತದ ಇತರ ರಾಜ್ಯಗಳಲ್ಲೂ ಕಂಡು ಬಂದಿವೆ. ಈ ಜನಪದ ಕಲೆಗಳ ಮಹತ್ವದ ಕಾರ್ಯಗಳಲ್ಲಿ ಒಂದೆಂದರೆ ರಂಜನೆಯನ್ನು ದೊರಕಿಸಿಕೊಡುವುದು ಮತ್ತು ಅವರನ್ನು ಸಾಕ್ಷರನ್ನಾಗಿಸುವುದು. ಯಾವುದೇ ಭಾಷೆ ಅಥವಾ ಸಮಾಜದಲ್ಲಿನ ಬರಹಗಳು ಮೊದಲು ವಸ್ತು, ರೂಪ ಮತ್ತು ನಿರೂಪಣೆಯಲ್ಲಿ ಜಾನಪದೀಯ ಶೈಲಿಯನ್ನು ಅನುಸರಿಸುತ್ತವೆ. ಜನಸಾಮಾನ್ಯರ ಹಾಡುಗಳ ಲಯ, ಗತಿ ಮತ್ತು ಚಲನೆಗಳಲ್ಲದೆ ಜನಪದ ಕಲೆಗಳ ವೈವಿಧ್ಯ ಗುಣವನ್ನು ಮೈಗೂಡಿಸಿಕೊಂಡಿರುವುದನ್ನು ನೋಡಬಹುದು. ಉಚ್ಚಾರಣೆ, ಆಂಗಿಕ ಚಲನೆ ಮತ್ತು ಸನ್ನೆಗಳು ಯುಕ್ತ ಪಕ್ಕವಾದ್ಯಗಳ ಮೇಳದಿಂದ ಸುಸ್ಪಷ್ಟ ಆಕಾರ, ರೂಪವನ್ನು ಪಡೆದವು.

ಕನ್ನಡ ಜಾನಪದ ರೂಪಗಳಿಗೆ ದೀರ್ಘ ಇತಿಹಾಸವೇ ಇದೆ. ಪ್ರಾಚೀನ ಶಾಸನ, ಕಾವ್ಯಗಳಲ್ಲಿ ಜನಪದ ಕಲೆ, ಕ್ರೀಡೆ, ಹಬ್ಬ, ಆಚರಣೆಗಳಾದಿಗಳ ಉಲ್ಲೇಖಗಳಿವೆ.[6] ಬಹು ಹಿಂದಿನಿಂದಲೂ ಜಾನಪದ ರೂಪಗಳು ನಮ್ಮ ಜನಜೀವನದಲ್ಲಿ ಹಾಸು ಹೊಕ್ಕಾಗಿದ್ದು ಶ್ರೇಷ್ಠ ಪರಂಪರೆಯನ್ನೇ ನಿರ್ಮಿಸಿವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಗೊಂಬೆ ಪ್ರದರ್ಶನಗಳು ವಿಶೇಷವಾಗಿ ಜರುಗುತ್ತಿದ್ದವು. ಕೀಲುಗೊಂಬೆಯಾಟ, ಸೂತ್ರದಗೊಂಬೆಯಾಟ ಮತ್ತು ತೊಗಲು ಗೊಂಬೆಯಾಟಗಳನ್ನು ವೀಕ್ಷಿಸಲು ಜನ ಮೈಲಿಗಟ್ಟಲೆ ನಡೆದುಹೋಗುತ್ತಿದ್ದರು. ಕರ್ನಾಟಕದಲ್ಲಿ ಪ್ರಚಲಿತವಿರುವ ಇತರ ಪ್ರಮುಖ ಕಲೆಗಳಾದ ಯಕ್ಷಗಾನ, ಬಯಲಾಟ, ಕೋಲಾಟ, ಚಿಟ್‌ಮೇಳ, ಡೊಳ್ಳುಕುಣಿತ, ದೊಂಬರಕುಣಿತ, ನಂದೀ ಧ್ವಜ ಕುಣಿತ, ಪಂಜಿನ ಕುಣಿತ, ಪಟಾಕುಣಿತ, ಪೂಜಾಕುಣಿತ, ಭೂತಾರಾಧನೆ, ಮರಗಾಲು ಕುಣಿತ, ರಂಗದ ಕುಣಿತ, ವೀರಭದ್ರನ ಕುಣಿತ, ಸುಗ್ಗಿಯ ಕುಣಿತ, ಸೋಲಿಗರ ಕುಣಿತ, ಹೋಳಿ ಕುಣಿತ, ಗಾರುಡಿ ಗೊಂಬೆ, ಕರಪಾಲ ಮೇಳ, ಎರವರ ಕುಣಿತ ಮುಂತಾದುವನ್ನೂ ಇಲ್ಲಿ ಹೆಸರಿಸಬಹುದು.

---

6. **ಕರ್ನಾಟಕ ಜಾನಪದ ಸಮೀಕ್ಷೆ**, ಸಂ. ಜೀಶಂಪ, 1982 ಪು. 1–2

ಕರ್ನಾಟಕದ ಅನೇಕ ಜನಪದ ಕಲಾರೂಪಗಳು ರಂಜನೆಯ ಜೊತೆಗೆ ಶಿಕ್ಷಣ ಮೌಲ್ಯವನ್ನೂ ಹೊಂದಿವೆ: ವೇಷಗಾರ ಕಲೆ, ವೀರಮಕ್ಕಳ ಕುಣಿತ, ವೀರಗಾಸೆ, ರಿವಾಯತ್, ಪಂಡರಿಭಜನೆ, ಪುರವಂತಿಕೆ, ನಾಗಮಂಡಲ, ಗೊಂದಲಿಗರ ಮೇಳ, ಗುಮಟೆ ಕುಣಿತ, ಗೀಗೀಮೇಳ, ಕೋಲೆಬಸವ, ಕೊರವಂಜಿ, ಅಲಾವಿ ಕುಣಿತ ಮುಂತಾದವನ್ನು ಹೆಸರಿಸಬಹುದು.

ಕರ್ನಾಟಕ ಗಡಿಯ ರಾಜ್ಯಗಳ ಕಲೆಗಳಿಗೂ ಕರ್ನಾಟಕದ ಕಲೆಗಳಿಗೂ ಸಾಕಷ್ಟು ಸಾಮ್ಯವಿರುವುದು ಗಮನಾರ್ಹ. ಒಂದೇ ಬಗೆಯ ಜೀವನ ಮತ್ತು ಸಂಪ್ರದಾಯಾಚರಣೆಗಳಲ್ಲಿನ ಸಾಮ್ಯತೆ ಅದಕ್ಕೆ ಕಾರಣವಿರಬಹುದು. ಯಕ್ಷಗಾನ ಬಯಲಾಟಗಳು ಕರ್ನಾಟಕ–ಆಂಧ್ರಗಳ ಒಂದು ಸಾಮಾನ್ಯ ರಂಗ ಕಲೆ. ನಾಗನೃತ್ಯ, ರಂಗದ ಕುಣಿತ, ನಂದಿಕೋಲು ಕುಣಿತ ಮುಂತಾದವುಗಳಿಗೆ ಆಂಧ್ರದಲ್ಲೂ ಸಂವಾದಿ ರೂಪಗಳು ಕಂಡುಬಂದಿರುವುದು ವಿಶೇಷ. ಇಷ್ಟೇ ಅಲ್ಲ, ಹನುಮನಾಯಕ, ಬಹುರೂಪಿ, ಹಗಲುವೇಷ, ಪಗಟಿವೇಷಗಳ ಆಟ–ಎರಡೂ ಕಡೆ ಕಂಡುಬಂದಿವೆ.

ಭಾರತದಲ್ಲಿ ಭಾಷಾವಾರು ಪ್ರಾತಿನಿಧ್ಯದ ಆಧಾರದ ಮೇಲೆ ರಾಜ್ಯಗಳ ವಿಂಗಡಣೆಯಾದ ಮೇಲೆ ಜನರನ್ನು ಭೌಗೋಳಿಕ ಹಾಗೂ ಆಡಳಿತಾತ್ಮಕ ಹಿನ್ನೆಲೆ ಗನುಗುಣವಾಗಿ ಪ್ರತ್ಯೇಕಿಸಲಾಯಿತು. ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗಣನೆಗೆ ತೆಗೆದುಕೊಳ್ಳಲೇಇಲ್ಲ. ಈ ಕಾರಣದಿಂದಾಗಿ ಕರ್ನಾಟಕದ ಕೆಲವು ಜನಪದ ಕಲಾರೂಪಗಳು ತಮಿಳುನಾಡು, ಕೇರಳ ಮತ್ತು ಆಂಧ್ರದಲ್ಲೂ ಕಂಡುಬಂದಿವೆ. ಕನ್ನಡದ ಬಯಲಾಟ, ತಮಿಳರ ತೆರುಕೂತ್ತು, ತೆಲುಗರ ಯಕ್ಷಗಾನ–ಇವು ತಿರುಳು ಮತ್ತು ಪ್ರದರ್ಶನ ವೈಖರಿಗಳಲ್ಲಿ ಒಂದೇ ಆಗಿವೆ. ಅದೇನೇ ಇರಲಿ, ಪ್ರತಿಯೊಂದು ಭಾಷಿಕ ಗುಂಪಿಗೂ ಕೆಲವು ವಿಶಿಷ್ಟ ರೂಪಗಳಿವೆ. ಭೂತಾರಾಧನೆ ಒಂದು ದೈವಿಕ ಆಚರಣಾ ಪ್ರಕಾರ ಮಲಬಾರಿನ ಕಥಕಳಿ ದಕ್ಷಿಣ ಭಾರತದಲ್ಲೇ ಜನಪ್ರಿಯವಾದುದು. ಕೇರಳದ ಓಣಂ ಹಬ್ಬದಲ್ಲಿ ಕೈಕೋಟಕಳಿ ನೃತ್ಯವನ್ನು ಪ್ರದರ್ಶಿಸುವುದು ಸಾಮಾನ್ಯ. ಮಹಾರಾಷ್ಟ್ರದಲ್ಲೂ ಇದೇ ಬಗೆಯ ಕಲಾರೂಪಗಳಿವೆ. ಗೊಂಬೆಯಾಟ, ಯಕ್ಷಗಾನ, ಹರಿಕಥೆ, ಪುಗಡಿ ಕುಣಿತ ಮುಂತಾದವುಗಳನ್ನು ಅಲ್ಲಿ ನೋಡಬಹುದು. ಸಾಂದರ್ಭಿಕ ಬೇಡಿಕೆಗಳಿಗನುಗುಣವಾಗಿ ಅಲ್ಲಿ ದಿಂಡಿ, ಕೂಟ, ತಿಪ್ರಿ, ಗೋಪ, ಗೌಂಗಣಪತಿ, ದಶಾವತಾರ, ಶಿಂಗ ಮುಂತಾದ ಜನಪದ ಕಲೆಗಳು ಅಸ್ತಿತ್ವ ಪಡೆಯುತ್ತವೆ, ಗುಜರಾತಿನ ಗೊಂಬೆಯಾಟಗಳು. ಕರ್ನಾಟಕ–ಆಂಧ್ರಗಳು ಗೊಂಬೆಯಾಟಗಳಿಂದ ಪ್ರಭಾವಿತವಾಗಿವೆ.

ರಾಜಾಸ್ಥಾನದಲ್ಲಿ ಕಟಪುತಲಿ ಎಂಬ ಒಂದು ಬಗೆಯ ಗೊಂಬೆಯಾಟವಿದೆ. ಈ ಕಲೆ ದಕ್ಷಿಣ ಭಾರತದ ಗೊಂಬೆಯಾಟದ ಬಗೆಗಳೊಂದಿಗೆ ಸಾಮ್ಯತೆ ಸಾಧಿಸಿದೆ. ಇದೇ ರೀತಿಯಾಗಿ ಮಧ್ಯಪ್ರದೇಶದಲ್ಲೂ ಋತುಮಾನಗಳಿಗನುಗುಣವಾಗಿ ವ್ಯತ್ಯಯ ಗೊಳ್ಳುವ ಬೇರೆ ಬೇರೆ ರೀತಿಯ ಜನಪದ ರಂಗಕಲೆಗಳಿವೆ. ಹಿಮಾಚಲ ಪ್ರದೇಶದ

ಪುಂಗಿ, ಕಾಶ್ಮೀರದ ಕಾಶ್ಮೀರಿ, ಪಂಜಾಬಿನ ಬಾಂಗ್ಡ ಒಂದೇ ಮಹತ್ವದ ಕಲೆಗಳಾಗಿವೆ. ಬಂಗಾಲದ ಜಾತ್ರಾ, ಕಥಿ, ಕೀರ್ತನ ನೃತ್ಯಗಳು ಪ್ರಸಿದ್ಧವಾದವು. ಮಣಿಪುರದ ಥಂಗ್–ಟಾ ಒಂದು ರೋಮಾಂಚಕ ಸಮರ ಕಲೆ. ಮಣಿಪುರದ ಹೋರಾಟದ ಇತಿಹಾಸದೊಂದಿಗೆ ಬೆಳೆದು ಬಂದಿರುವಂಥದು. ಆತ್ಮರಕ್ಷಣೆಗಾಗಿ ಹುಟ್ಟಿಕೊಂಡ ಸಮರ ತಂತ್ರಗಳು ಇಂದು ಮನಮೋಹಕ ಪ್ರದರ್ಶಕ ಕಲೆಯಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಮಣಿಪುರಿ ಪುರಾಣಗಳಲ್ಲಿ ಥಾಂಗ್ (ಕತ್ತಿ) ಹಾಗೂ ಟಾ (ಭಲ್ಲೆ) ಮಾತೃದೇವತೆ ಮತ್ತು ಪಿತೃದೇವತೆಗಳ ಸಂಕೇತಗಳಾಗಿದ್ದು ಪದಗತಿಯೊಂದಿಗೆ ಕತ್ತಿ ಮತ್ತು ಭಲ್ಲೆಗಳ ಬಳಕೆಯು ಜಗತ್‌ಸೃಷ್ಟಿಯನ್ನು ಬಿಂಬಿಸುತ್ತದೆ. ಇದೇ ಅಲ್ಲದೆ ಅಲ್ಲಿಯ ಮಣಿಪುರಿ ನೃತ್ಯವೂ ವಿಶೇಷ ಉಲ್ಲೇಖಾರ್ಹವಾದುದು. ಒರಿಸ್ಸಾದ ಪ್ರಾಚೀನ ಸಮರನೃತ್ಯ–ಚಾ ಕಲೆ–ರಾಜಾಶ್ರಯಗಳಲ್ಲಿ ಹಾಗೂ ದೇವಾಲಯಗಳಲ್ಲಿ 'ಶೈವಪೂಜೆ'ಯ ಸಂಬಂಧದೊಂದಿಗೆ ಬೆಳೆದು ಬಂದಿರುವ ಪ್ರದರ್ಶಕ ಕಲೆ. ಕತ್ತಿ ಗುರಾಣಿಯಂಥ ಆಯುಧಗಳ ಬೀಸಾಟವನ್ನು ಆಧರಿಸಿದ ಕಲೆ ಇದು. ಶೈಲೀಕೃತ ಚಲನವುಳ್ಳ ಈ ಕುಣಿತದಲ್ಲಿ ಪ್ರಾಣಿಗಳ ಚಲನವಲನಗಳ ಅನುಕರಣೆಯಿರುವುದು ಗಮನಾರ್ಹ. ಶಕ್ತಿ ಹಾಗೂ ಸೌಂದರ್ಯಗಳಂಥ ವೈದೃಶ್ಯ ಲಕ್ಷಣಗಳುಳ್ಳ ಈ ಕಲೆಯನ್ನು ಮುಖವಾಡವಿಲ್ಲದೆ ಪ್ರದರ್ಶಿಸಲಾಗುವುದು. ಮುಕ್ತ ಚಲನೆ, ಸಮೃದ್ಧ ಆಂಗಿಕ ಅಭಿನಯ ಹಾಗೂ ಪೌರುಷ ಪ್ರಾಧಾನ್ಯತೆ–ಇವು ಚಾ ನೃತ್ಯದ ಪ್ರಮುಖ ಲಕ್ಷಣಗಳು. ಅಸ್ಸಾಮಿನ ಬುಡಕಟ್ಟುಗಳಲ್ಲೂ ಅನೇಕ ಬಗೆಯ ಪ್ರದರ್ಶಕ ರಂಗ ಕಲೆಗಳಿವೆ. ಹೀಗೆ ಭಾರತದ ವಿವಿಧ ಭಾಗಗಳಲ್ಲಿ ಪ್ರಚಲಿತವಿರುವ ಈ ಜನಪದ ಕಲಾರೂಪಗಳಲ್ಲಿ ಸಮಾನ ಅಂಶಗಳಿದ್ದು ವಿವಿಧತೆಯಲ್ಲಿ ಏಕತೆಯನ್ನು ಪ್ರತಿಪಾದಿಸುತ್ತವೆ. ಹೆಜ್ಜೆಗಳಲ್ಲಿನ ಸಾದೃಶ್ಯತೆ, ವಸ್ತುಸಾಮ್ಯತೆ ಹಾಗೂ ರೂಪ ಸಮಾನತೆ ಎದ್ದುಕಾಣುವ ಸಮಾನ ಅಂಶಗಳಾಗಿವೆ. ಆದರೆ ವೇಷ ಭೂಷಣ, ಹಾಡು ಮತ್ತು ವಾದ್ಯ ಪರಿಕರಗಳು ಒಂದು ಪ್ರದೇಶದಿಂದ ಮತ್ತೊಂದಕ್ಕೆ ಬೇರೆಯಾಗಿದ್ದು ಪ್ರಾದೇಶಿಕ ಬಣ್ಣವನ್ನು ಉಳಿಸಿಕೊಂಡಿವೆ. ಒಟ್ಟಿನಲ್ಲಿ ಜನತೆಯನ್ನು ಒಟ್ಟುಗೂಡಿಸುವ ಮಹತ್ಕಾರ್ಯದಲ್ಲಿ, ಅವರನ್ನು ಸಾಮಾಜೀಕರಣಗೊಳಿಸುವಲ್ಲಿ ಜನಪದ ಕಲಾ ಮಾಧ್ಯಮ ಒಂದು ಸಶಕ್ತ ಮಾಧ್ಯಮವಾಗಿದ್ದು ರಾಷ್ಟ್ರಾದ್ಯಂತ್ಯ ಮನ್ನಣೆಗಳಿಸುತ್ತಿದೆ.

೩

ಭಾರತೀಯ ಜನಪದ ಪ್ರದರ್ಶಕ ಕಲೆಗಳಲ್ಲಿನ ಈ ಏಕರೂಪತೆಯನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಈ ಸಮಾನತೆಗೆ ಜಾನಪದದ ಕ್ರಿಯಾತ್ಮಕ ಪಾತ್ರವೇ ಕಾರಣ ಎಂದು ಹೇಳಬೇಕಾಗುತ್ತದೆ. ಜಾನಪದದ ಬಹುಮುಖ್ಯ ಅಂಗವಾದ ಜನಪದ ಗೀತೆ ಒಂದು ನಿರ್ದಿಷ್ಟ ಅನುಭವ/ಸನ್ನಿವೇಶದತ್ತ ಜನರ ಗಮನ ಸೆಳೆಯುವ

ಪ್ರಭಾವೀ ಪ್ರಚಾರ ಮಾಧ್ಯಮವಾಗಿ ಮಾರ್ಪಟ್ಟಿದೆ. ಸಮಾಜವನ್ನು ನಿಯಂತ್ರಿಸಲು ಅದು ಒಂದು ಪರಿಣಾಮಕಾರೀ ಸಾಧನವಾಗಿದೆ. ಭಜನೆಪದಗಳು ನೀತಿಪರ ರಚನೆಗಳಾಗಿದ್ದು ಜನರ ಗುಣಶೀಲ ನಡತೆಗಳನ್ನು ತಿದ್ದಲು ಹಾಡುವಂಥವಾಗಿವೆ. ಆದರಿಂದಾಗಿ ಸಮುದಾಯವೊಂದು ಒಪ್ಪಿ ಸ್ವೀಕರಿಸಿದ ನಿಯಮಗಳ ಗೆರೆದಾಟಲು ಸಾಧ್ಯವಾಗುವುದಿಲ್ಲ. ಯುವ ಪೀಳಿಗೆಗೆ ಶಿಕ್ಷಣ ನೀಡುವ ವಿಷಯದಲ್ಲಿ ಅದರ ಪಾತ್ರ ಹಿರಿದಾದುದು. ಇನ್ನು ಹಾಡುಗಳ ರಾಗಗಳು ಅತ್ಯಂತ ಸುಲಭ ರೀತಿಯಲ್ಲಿ ಉಪಯುಕ್ತ ಜ್ಞಾನವನ್ನು ಎಳೆಯ ಮನಸ್ಸುಗಳಿಗೆ ತುಂಬುವ ಕಾರ್ಯವನ್ನು ಸದ್ದಿಲ್ಲದೆ ನಿರ್ವಹಿಸುತ್ತವೆ. ಜನತೆಯ ಸಾಮಾಜಿಕೀಕರಣದಲ್ಲಿ ಮೌಖಿಕ ಪರಂಪರೆ ಮಹತ್ವದ ಪಾತ್ರವಹಿಸುತ್ತದೆ ಎಂದು ಸರಿಯಾಗಿಯೇ ನಂಬಲಾಗಿದೆ. ಅಷ್ಟೇ ಅಲ್ಲ, ಅದು ನಾನಾ ವಿಧದ ವಿಧಿ, ಆಚರಣೆ ಮತ್ತು ಸಾಂಪ್ರದಾಯಿಕ ಕ್ರಿಯೆಗಳ ಅನುಷ್ಠಾನ ದಲ್ಲೂ ಆಸಕ್ತಿವಹಿಸುತ್ತದೆ. ಮೌಖಿಕ ಪರಂಪರೆಯ ಕೆಲವು ಭಾಗವಾದರೂ ಸಾಮಾಜಿಕ ಪ್ರತಿಭಟನೆಯ ಸಾಧನವಾಗಿ ಮಾರ್ಪಟ್ಟಿರುವುದು ಸಮಾಧಾನದ ವಿಷಯ. ಸಾಮಾನ್ಯವಾಗಿ ಜನತೆ ಅನ್ಯಾಯ, ಶೋಷಣೆ ಮತ್ತು ತುಳಿತಗಳ ವಿರುದ್ಧ ನೇರವಾಗಿ ಬಂಡೇಳಲು ಹಿಂಜರಿಯುತ್ತದೆ. ಅಂಥ ಸಂದರ್ಭಗಳಲ್ಲಿ ಮೌಖಿಕ ಪರಂಪರೆ ಅವರ ನೆರವಿಗೆ ಬರುತ್ತದೆ.

ಈ ಎಲ್ಲ ಸಾಮಾಜಿಕ ಪ್ರತಿಭಟನೆಯ ಕ್ರಿಯಾತ್ಮಕ ಪಾತ್ರವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಾದರೆ ಭಾರತದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಚಳವಳಿಗಳಲ್ಲಿ ಜಾನಪದದ ಪಾತ್ರವೇನೆಂಬುದನ್ನು ಶೋಧಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಸಂಗ್ರಹಿತವಾದ ಜನಪದ ಕಾವ್ಯಗಳ ವರ್ಗೀಕರಣ ಅತ್ಯಂತ ಪ್ರಮುಖವಾದ ಕಾರ್ಯ. ವ್ಯಾಪಕ ಸಂಗ್ರಹಕಾರ್ಯ ನಡೆದಾಗ ಮಾತ್ರ ಕ್ರಮಬದ್ಧವಾದ ವರ್ಗೀಕರಣ ಸಾಧ್ಯವಾಗುತ್ತದೆ. ಸರಿಯಾದ ವರ್ಗೀಕರಣವಿಲ್ಲದ ಅಧ್ಯಯನ ಅಸಮಗ್ರ, ಅಪೂರ್ಣ.

—ಡಾ. ಜೀ. ಶಂ. ಪರಮಶಿವಯ್ಯ

(ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು :೧೯೭೪: ಪು viii)

"ಸಾಮಾನ್ಯವಾಗಿ ಕತೆ ಹೇಳುವ ಹಾಗೂ ಕೇಳುವ ಕ್ರಿಯೆ ಮಾನವ ಇರುವ ಕಡೆಯಲ್ಲೆಲ್ಲಾ ನಿರಂತರವಾಗಿ ಸಾಗುತ್ತಾ ಬಂದಿರುವಂಥದು. ಆದ್ದರಿಂದ ಪ್ರಪಂಚದ ಎಲ್ಲ ಕತೆಗಳಲ್ಲಿಯೂ ಕಾಣಬರುವ ಒಂದು ಸರ್ವೇಸಾಮಾನ್ಯ ಲಕ್ಷಣವೆಂದರೆ 'ಸಮರೂಪತೆ'. ಇದಕ್ಕೆ ಕತೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡುವುದು ಕಾರಣವಿರಬಹುದು ಅಥವಾ ಕತೆ ಹೇಳುವ ಮಾನವನ ಮೂಲ ಪ್ರವೃತ್ತಿ ಕಾರಣವಿರಬಹುದು."

—ರಾಮೇಗೌಡ

(ಜಾನಪದ ಸಾಹಿತ್ಯ ರೂಪಗಳು ೧೯೭೮ : ೩೪)

ಜಾನಪದ ಅಧ್ಯಯನ ಸುಲಭ ಸಾಧ್ಯವಾದುದಲ್ಲ. ಯಾವುದೇ ಕ್ಷೇತ್ರದ ವಿದ್ವತ್ತು ಬೆಳೆಯುವುದು ತಾಂತ್ರಿಕ, ಆರ್ಥಿಕ ಹಾಗೂ ಸಾಂಸ್ಥಿಕ ಸಂಪನ್ಮೂಲಗಳನ್ನು ಯೋಜಿತ ರೀತಿಯಲ್ಲಿ ಬಳಸಿಕೊಂಡಾಗ ಮಾತ್ರ. ನಮಗೆ ಎಷ್ಟೇ ಪ್ರಮಾಣದ ಬೌದ್ಧಿಕ ಅಥವಾ ಪಾಂಡಿತ್ಯದ ಸ್ವಾತಂತ್ರ್ಯವಿದ್ದಿರಲಿ, ನಾವು ಈಗಾಗಲೇ ಸ್ವೀಕರಿಸಿರುವ ಅಧ್ಯಯನ ಮಾದರಿಗಳು ಹಾಗೂ ಅವಕ್ಕೂ ಹಿಂದೆ ಪ್ರಚಲಿತವಿದ್ದ ಸೈದ್ಧಾಂತಿಕ ವಿಧಾನಗಳಿಂದ ಸಂಪೂರ್ಣ ಪ್ರಭಾವಿತರಾಗಿದ್ದೇವೆ. ಕರ್ನಾಟಕ ಜಾನಪದ ಅಧ್ಯಯನದ ವೈಜ್ಞಾನಿಕ ಶಕೆ ಆರಂಭಗೊಂಡು ಇಪ್ಪತ್ತು ವರ್ಷಗಳಾದವು. ಇಲ್ಲಿಯ ಜಾನಪದ ಅಧ್ಯಯನದ ಉತ್ತಮ ಭವಿಷ್ಯವನ್ನು ರೂಪಿಸುವ ದೃಷ್ಟಿಯಿಂದ ಈಗ ನಾವು ಎಲ್ಲಿದ್ದೇವೆ? ಏನಾಗಿದ್ದೇವೆ ಮತ್ತು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ? ಎಂಬುದನ್ನು ಅವಲೋಕಿಸಬೇಕಾಗಿದೆ.

—ಡಾ. ಅಂಬಳಿಕೆ ಹಿರಿಯಣ್ಣ

(ಜಾನಪದ ವಿವಕ್ಷೆ : ೧೯೮೬ : ೪೯)

ವೈ. ಸಿ. ಭಾನುಮತಿ

ಹೆತ್ತೂರಿನ ಹಬ್ಬಗಳು

ಹಬ್ಬಗಳು ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ವರ್ಷದ ವಿವಿಧ ಸಮಯಗಳಲ್ಲಿ ಆಚರಿಸುವ ಹಬ್ಬಗಳು ಎಲ್ಲ ಸಂಸ್ಕೃತಿಗಳಲ್ಲಿಯೂ ಕಾಣಬರುವ ಅಂಶ. ಶಿಷ್ಟಸಂಸ್ಕೃತಿಯ ಹಬ್ಬಗಳ ಆಚರಣೆಯಲ್ಲಿ ಬಹುಪಾಲು ಏಕತೆಯಿದೆ. ಆದರೆ ಜನಪದರ ಹಬ್ಬಗಳಲ್ಲಿ ವೈವಿಧ್ಯತೆಯಿದ್ದು ಹಾಸನ ಜಿಲ್ಲೆಯಲ್ಲಿಯೆ ಹಬ್ಬಗಳನ್ನು ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಆಚರಿಸುವುದನ್ನು ಗಮನಿಸಬಹುದು. ಈ ಜಿಲ್ಲೆಯ ಮಲೆನಾಡು ಪ್ರದೇಶವಾದ ಸಕಲೇಶಪುರ ತಾಲ್ಲೂಕಿನ ಹೆತ್ತೂರಿನ ಒಕ್ಕಲಿಗರು ಹಬ್ಬ ಹರಿದಿನಗಳನ್ನು ಆಚರಿಸುವಲ್ಲಿ ತಮ್ಮದೇ ಆದ ಸಂಪ್ರದಾಯ ರೂಢಿಸಿಕೊಂಡಿದ್ದಾರೆ. ಇವರಲ್ಲಿ ಬಳಕೆಯಲ್ಲಿರುವ ಹಬ್ಬಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು.

1. ಸಾಮಾನ್ಯ ಹಬ್ಬಗಳು
2. ವ್ಯವಸಾಯ ಸಂಬಂಧಿ ಹಬ್ಬಗಳು

ಈ ವಿಭಾಗಗಳಲ್ಲಿ ಮುಖ್ಯವೆನಿಸುವ ಹಬ್ಬಗಳನ್ನು ಇಲ್ಲಿ ನೋಡಬಹುದು. ಕರ್ನಾಟಕದ ಇತರ ಪ್ರದೇಶಗಳ ಒಕ್ಕಲಿಗರಂತೆ ಈ ಪ್ರದೇಶದ ಒಕ್ಕಲಿಗರೂ ಕೂಡ ಯುಗಾದಿಯನ್ನು ಹೊಸ ವರ್ಷವೆಂದು ಪರಿಗಣಿಸುವರು. ನೂತನ ವರ್ಷಾರಂಭಕ್ಕೆ ಮನೆ, ಮಂದಿ ಆಳುಕಾಳಿಗೆಲ್ಲ ಹೊಸಬಟ್ಟೆಗಳನ್ನು ಹೊಲಿಸುವರು. ದೈನಂದಿನ ಜೀವನದಲ್ಲಿ ಅಭ್ಯಂಜನದ ಅಭ್ಯಾಸವಿಲ್ಲದ ಈ ಜನ ಯುಗಾದಿ ಮತ್ತು ದೀಪಾವಳಿಗಳಲ್ಲಿ ಮಾತ್ರ ಎಣ್ಣೆಸ್ನಾನ ಮಾಡುವರು. ಕೆಲವರಂತು ಈ ಹಬ್ಬಗಳಲ್ಲಿಯೂ ಎಣ್ಣೆಯಿಂದ ದೂರವಿರುತ್ತಾರೆ. ಅಂತು ಯುಗಾದಿಯಂದು ಬೇಗ ಎದ್ದು ಮಿಂದು ಮಡಿಯುಟ್ಟು, ದೇವಾಲಯಕ್ಕೆ ಹೋಗಿ ದೇವರಿಗೆ 'ಹಣ್ಣು ಕಾಯಿ' ಮಾಡಿಸುವರು. ಹೆಂಗಸರು ಮನೆಯಲ್ಲಿ 'ಬೇವು ಬೆಲ್ಲ' ತಯಾರಿಸುವರು. ಇದು ಬೇವಿನ ಸೊಪ್ಪು ಬೆಲ್ಲದ ಚೂರು ಮಾತ್ರವಲ್ಲ, ಬೇವಿನ ಎಲೆಗೆ ಬೆಲ್ಲ ಹುರಿಗಡಲೆ ಹಾಗೂ ಕೊಬ್ಬರಿ ಹಾಕಿ ಕುಟ್ಟಿ ಸಿದ್ಧಪಡಿಸಿದ್ದು. ದೇವಾಲಯದಿಂದ ಹಿಂದಿರುಗಿದ ಬಳಿಕ ಮನೆಯವರೆಲ್ಲ ಬೇವು ಬೆಲ್ಲ ತಿನ್ನುವರು. ಬೇರೆಯವರ ಮನೆಗೂ ಕಳಿಸಿಕೊಡುವರು. ಇದು ಬಾಳಿನ ಸಿಹಿ

ಕಹಿಗಳನ್ನು ಪ್ರತಿನಿಧಿಸುವ ಬೇವುಬೆಲ್ಲವನ್ನು ಹೀಗೆ ಇತರರಿಗೆ ಹಂಚುವ ಮೂಲಕ ಬದುಕಿನ ಸುಖದುಃಖಗಳನ್ನು ಸಹಮಾನವರೊಂದಿಗೆ ಹಂಚಿಕೊಳ್ಳುವ ಒಂದು ವ್ಯವಸ್ಥೆ.

ಇಲ್ಲಿನ ಮಲೆನಾಡುಗೌಡರ ಬಹುಪಾಲು ಹಬ್ಬಗಳು ಮಾಂಸದೂಟವಿಲ್ಲದೆ ನಡೆಯುವುದಿಲ್ಲ. ಹಬ್ಬಗಳಲ್ಲಿ ಮಾಂಸಹಾರದ ಬಗ್ಗೆ ನಿಷೇಧವಿಲ್ಲ. ಯುಗಾದಿ ಇವರಿಗೆ ಸಾಯಂಕಾಲದ ಹಬ್ಬ. ಆದುದರಿಂದ ಮಧ್ಯಾಹ್ನದ ಊಟದಲ್ಲಿ ವಿಶೇಷವೇನಿಲ್ಲ. ರಾತ್ರಿಯೂಟಕ್ಕೆ ಬಟ್ಟಲು ಹಿಟ್ಟು ಅಥವಾ ಕಡುಬು ತಯಾರಿಸಿ ಮಾಂಸದ ಸಾರು ಮಾಡುವರು. ಅಡಿಗೆ ಮನೆಯಲ್ಲಿ ನೀರಿನ ಹಂಡೆಯ ಬಳಿ ಕೊಡಗಳಿಗೆ ನೀರುತುಂಬಿ ಕಳಶ ಸ್ಥಾಪನೆ ಮಾಡಿ ಕುಟುಂಬದ ಸತ್ತ ಹಿರಿಯರನ್ನು ಆವಾಹನ ಮಾಡುವರು. ಕಳಶಗಳಿಗೆ ವಿಭೂತಿ ಕುಂಕುಮಗಳನ್ನಿಟ್ಟು ಹೂಮುಡಿಸಿ ಪೂಜಿಸಲಾಗುವುದು. ಅನಂತರ ಮೂರು ಅಗ್ರ ಬಾಳೆಎಲೆಗಳನ್ನು ಅವುಗಳ ಮುಂದಿಟ್ಟು, ಮಾಡಿದ ಅಡಿಗೆಯನ್ನು ಬಡಿಸಿ ಎಡೆಯಿಕ್ಕುವರು. ಧೂಪ ದೀಪಗಳನ್ನು ಬೆಳಗಿದ ಬಳಿಕವೆ ಮನೆಯವರ ಊಟ. ಪ್ರತಿಯೊಂದು ಹಬ್ಬಕ್ಕೂ ಹರಿಜನರು 'ಹಿಟ್ಟು ಎತ್ತುವುದು' ಎಂದು ಮನೆ ಮನೆಗೆ ತೆರಳಿ ಗಂಗಳದ ಹಿಟ್ಟು ಅಥವಾ ಕಡುಬನ್ನು ಪಡೆಯುವುದು ವಾಡಿಕೆ. ಆದರೆ ಯುಗಾದಿ ಹೊಸವರ್ಷವಾಗಿದ್ದು ಇಂದು ಬೇರೆಯವರ ಮನೆಯ ಹಿಟ್ಟು ಪಡೆದರೆ ವರ್ಷವಿಡಿ ಅನ್ಯರ ಮನೆಯ ಹಿಟ್ಟನ್ನೇ ಆಶ್ರಯಿಸಬೇಕಾಗುವುದೆಂದು ಭಾವಿಸುತ್ತಾರೆ. ಈ ಒಂದು ನಂಬಿಕೆಯ ಆಧಾರದ ಮೇಲೆ ಯುಗಾದಿಯಂದು ಹರಿಜನರು ಹಿಟ್ಟಿಗಾಗಿ ಬರುವುದಿಲ್ಲ.

ಶೈವಾರಾಧಕರಾದ ಇಲ್ಲಿನ ಒಕ್ಕಲಿಗರಿಗೆ ಶ್ರಾವಣಸೋಮವಾರ ಪ್ರಶಸ್ತವಾದುದು. ಶ್ರಾವಣಮಾಸದಲ್ಲಿ ಮಾಂಸಾಹಾರಸೇವನೆಗೆ ಅಡ್ಡಿಯಿಲ್ಲದಿದ್ದರೂ ಸೋಮವಾರದಂದು ಮಾತ್ರ ಸಸ್ಯಾಹಾರಿಗಳಾಗಿರುತ್ತಾರೆ. ಅಂದು ಊರಿನ ಈಶ್ವರ ದೇವಾಲಯದಲ್ಲಿ ಪ್ರಾತಃಕಾಲಕ್ಕೆ ವಾದ್ಯಗಳು ಮೊಳಗುತ್ತವೆ. ದೇವರಿಗೆ ಪೂಜೆ ನಡೆಯುತ್ತದೆ. ಮನೆಯ ಹೆಂಗಸರು ಮುಂಜಾವಿಗೆ ಎದ್ದು ಮನೆ ಗುಡಿಸಿ, ಸಾರಿಸಿ ಸ್ನಾನ ಮಾಡುವರು. ದೇವಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿಬರುವರು. ಪ್ರತಿ ಸೊಮವಾರವೂ ಒತ್ತುಸೇವಿಗೆ ಅಥವಾ ಕಡುಬು ಹೀಗೆ ಯಾವುದಾದರೂ ಒಂದು ಬಗೆಯ ವಿಶೇಷ ಅಡಿಗೆ ಮಾಡಿ ಹಿರಿಯರಿಗೆ 'ಎಡೆ ಇಕ್ಕುವರು'.

ಮಲೆನಾಡು ಒಕ್ಕಲಿಗರ ಬಹುಮುಖ್ಯ ಹಬ್ಬಗಳಲ್ಲಿ ಗೌರಿ ಮತ್ತು ಗಣೇಶ ಚತುರ್ಥಿಗಳು ಸೇರುತ್ತವೆ. ಹಬ್ಬ ಸಮೀಪಿಸುತ್ತಿರುವಾಗ ಕುಟುಂಬದ ಪ್ರತಿ ಸದಸ್ಯನಿಗೂ ಹೊಸ ಬಟ್ಟೆ ತರಲಾಗುವುದು. ಹೆಂಗಳೆಯರು ಬತ್ತ ಹುರಿದು ಅರಳು ಮಾಡಿ ಇಡುವರು. ಗೌರಿ ಹಬ್ಬಕ್ಕೆ ಮಾಡಿದ ಅರಳು ದೀಪಾವಳಿಯವರೆಗೆ ಇರುತ್ತದೆ. ಆ ಬಳಿಕ ಮದುವೆಯಾಗಿ ಹೋದ ಮನೆಯ ಹೆಣ್ಣು ಮಕ್ಕಳನ್ನೆಲ್ಲ ಹಬ್ಬಕ್ಕೆ ಆಹ್ವಾನಿಸುತ್ತಾರೆ. ಬೇಲೂರು ತಾಲ್ಲೂಕಿನ ಮಲೆನಾಡು ಗೌಡರು ಹೆಣ್ಣುಮಕ್ಕಳ ಮನೆಗಳಿಗೆ ಮೂರರಿಂದ ಹದಿನೈದರವರೆಗೆ ತಮ್ಮ ಶಕ್ತ್ಯಾನುಸಾರ ತೆಂಗಿನಕಾಯಿಗಳನ್ನು

ಕುಳವಾಡಿಯು ಕೈಯಲ್ಲಿ ಅವರವರ ಊರಿಗೆ ಕಳಿಸುತ್ತಾರೆ. ಆ ಹೆಣ್ಣುಮಕ್ಕಳು ತೆಂಗಿನಕಾಯಿ ತಂದ ಕುಳವಾಡಿಗೆ ಬತ್ತ ಹಾಗೂ ಹಣವನ್ನು ಬಕ್ಷೀಸು ಕೊಡುವರು. ಕೆಲವು ಊರುಗಳಲ್ಲಿ ಅಣ್ಣತಮ್ಮಂದಿರು ಗೌರಿಹಬ್ಬವಾದ ಬಳಿಕ ಅಕ್ಕತಂಗಿಯರ ಮನೆಗೆ ಹೋಗಿ ತೆಂಗಿನಕಾಯಿ ಕೊಟ್ಟು ಬರುವುದುಂಟು. ಮಲೆನಾಡು ಒಕ್ಕಲಿಗರಲ್ಲಿ ಮಣ್ಣಿನ ಗೌರಿ ಅಥವಾ ಗಣೇಶನನ್ನು ಕೂರಿಸುವ ಪದ್ಧತಿ ಇಲ್ಲ. ಇವರು ಈ ಹಬ್ಬವನ್ನು ಆಚರಿಸುವ ರೀತಿ ಅಪರೂಪವಾದುದು. ಗೌರಿಹಬ್ಬದಂದು ಹೆಣ್ಣುಮಕ್ಕಳು ನಸುಕಿಗೆ ಸ್ನಾನಮಾಡಿ ಬೆಳಗಿನ ಏಳುಗಂಟೆಯ ಹೊತ್ತಿಗೆಲ್ಲ 'ಗೌರಮ್ಮನನ್ನು ತರಲೆಂದು' ಗುಂಪುಗುಂಪಾಗಿ ಸಮೀಪದ ಬಾವಿಯ ಬಳಿಗೆ ಹೋಗುತ್ತಾರೆ. ಜೊತೆಯಲ್ಲಿ ಪೂಜಾಸಾಮಗ್ರಿಗಳು ಇರುತ್ತವೆ. ಅಲ್ಲಿ ತಂತಮ್ಮ ಕಳಶಗಳಿಗೆ ನೀರು ತುಂಬಿಸಿ ಕೊಂಡು ಗೌರಿಯನ್ನು ಆವಾಹಿಸಿ ಒಂದೆಡೆ ಸ್ಥಾಪಿಸುತ್ತಾರೆ. ಕಾಡಿನಲ್ಲಿ ದೊರೆಯುವ ಗೌರಿಹೂವು, ಗಂಗನ ಕಾಯಿ, ಗಾಚಲ ಕಾಯಿ, ಮದ್ದರಸನ ಕಾಯಿ ಗಳಿಂದ ಗೌರಿಯ ಕಳಸವನ್ನು ಅಲಂಕರಿಸಲಾಗುವುದು. ಅನಂತರ ಕಳಸದ ಮುಂದೆ ಒಂದು ಸಣ್ಣ ಮಣ್ಣಿನ ಉಂಡೆ ಇಟ್ಟು ವೀಳೆಯದೆಲೆ, ಅಡಿಕೆ, ಬಾಳೆಹಣ್ಣು ಹಾಗೂ ತೆಂಗಿನ ಕಾಯಿಗಳನ್ನು ಸಮರ್ಪಿಸುವರು. ನೆನೆ ಅಕ್ಕಿ ನೆನೆಗಡಲೆಯನ್ನು ಗೌರಿಗೆ ನೈವೇದ್ಯ ಮಾಡಿ ಎಲೆ ಅಡಿಕೆ ಮತ್ತು ಒಂದು ನಾಣ್ಯವನ್ನು ಬಾವಿಗೆ ಬಿಡುವರು. ಒಂದು ತಟ್ಟೆಗೆ ಅಕ್ಕಿ ತುಂಬಿಕೊಂಡು ಅದರ ಮೇಲೆ ಪೂಜಿಸಿದ ಕಳಶವನ್ನಿಟ್ಟು ಗೌರಮ್ಮನನ್ನು ತೆಗೆದುಕೊಂಡು ಮನೆಗೆ ಬರುತ್ತಾರೆ. ಈ ಕಳಶವನ್ನು ಅಡಿಗೆ ಮನೆಯಲ್ಲಿ ಮೂರು ದಿನಗಳವರೆಗೆ ಇಡುವರು.

ಗೌರಮ್ಮ ಮನೆಗೆ ಬಂದ ಬಳಿಕ ಮನೆಯಲ್ಲಿ ಕುಟ್ಟುವ, ಬೀಸುವ, ಹುರಿಯುವ ಕೆಲಸಗಳನ್ನು ಮಾಡುವಂತಿಲ್ಲ. ಈ ಹಬ್ಬಕ್ಕೆ ಅರಳುಹಿಟ್ಟು ವಿಶೇಷ. ಇದು ಬತ್ತದ ಅರಳಿನ ಪುಡಿ, ಬೆಲ್ಲ, ತೆಂಗಿನಕಾಯಿ, ಎಳ್ಳುಪುಡಿ ಇವುಗಳ ಮಿಶ್ರಣ. ಧರ್ಮ ಸ್ಥಳದಲ್ಲಿ ಇದೇ ಸಾಮಗ್ರಿಯನ್ನು ಬಳಸಿ ತಯಾರಿಸುವ ಪಂಚಕಜ್ಜಾಯದ ರೀತಿ. ಒತ್ತು ಸೇವಿಗೆ, ಕೆಸುವಿನದಂಟಿನ ಮಜ್ಜಿಗೆ ಹುಳಿ, ಪಾಯಸ, ತಂಬಿಟ್ಟು ಇವುಗಳು ಗೌರಿ ಹಬ್ಬದಂದು ಕಡ್ಡಾಯವಾಗಿ ಮಾಡುವ ಇತರ ಅಡುಗೆಗಳು. ಎಲ್ಲ ಹಬ್ಬಗಳಲ್ಲೂ ಮಾಂಸವನ್ನು ಬಳಸುವ ಈ ಜನ ಅಪವಾದವೆಂಬಂತೆ ಗೌರಿಹಬ್ಬ ಹಾಗೂ ಸುಬ್ರಹ್ಮಣ್ಯ ಷಷ್ಠಿಯಂದು ಅಪ್ಪಟ ಸಸ್ಯಾಹಾರಿಗಳಾಗುತ್ತಾರೆ. ಆದುದರಿಂದ ಗೌರಿಹಬ್ಬದ ದಿನ ಮಾಡುವ ಒತ್ತುಸೇವಿಗೆಗೆ ಮಾಂಸದ ಸಾರಿನ ಬದಲು ಕಾಯಿಹಾಲು ಕೊಡುವರು. ಈ ಜನ ವೈದಿಕ ದೇವತೆಗಳನ್ನು ಪೂಜಿಸುವುದಕ್ಕಿಂತ ಮಿಗಿಲಾಗಿ ತಮ್ಮ ಕುಟುಂಬದ ಪೂರ್ವಿಕರನ್ನೆ ದೇವತೆಗಳೆಂದು ಭಾವಿಸಿ ಪೂಜಿಸುತ್ತಾರೆ. ಇವರಿಗೆ ಪ್ರತಿಹಬ್ಬದಲ್ಲೂ ಕಳಶವಿಟ್ಟು ಮೂರು ಎಡೆ ಇಡುವರು. ಗೌರಿಹಬ್ಬ ಮಧ್ಯಾಹ್ನದ ಹಬ್ಬ.

ಗಣೇಶ ಚತುರ್ಥಿಯಂದು ಬೆಳಿಗ್ಗೆ ಸ್ನಾನ ಮಾಡಿ ಗಣೇಶನ ಪಟವನ್ನಿಟ್ಟು ಅದರೊಂದಿಗೆ ಪುಸ್ತಕಗಳನ್ನಿಟ್ಟು ಪೂಜಿಸುವರು. ವೈದಿಕರಲ್ಲಿ ಶಾರದಾ ಪೂಜೆಯಂದು

ಹೀಗೆ ಪುಸ್ತಕಗಳನ್ನು ಪೂಜಿಸುವುದು ರೂಢಿಯಲ್ಲಿದೆ. ಗಣೇಶನ ಹಬ್ಬದಲ್ಲಿ ತೆಂಗಿನ ಕಾಯಿ ಒಡೆಸುವ ಸಂಭ್ರಮ. ಚೌತಿಕಾಯಿ ಎಂದು ಊರಿನ ಎಲ್ಲ ದೇವಾಲಯಗಳಿಗೆ, ಮನೆದೇವರಿಗೆ, ಕೊಟ್ಟಿಗೆಗೆ, ಬಾಗಿಲಿಗೆ, ತೋಟದ ಸಮೀಪವಿರುವ ಮಾಸ್ತಿಕಲ್ಲುಗಳಿಗೆ ಕಾಯಿ ಒಡೆಸುತ್ತಾರೆ. ಗಣೇಶನ ಹಬ್ಬ ಸಾಯಂಕಾಲದ ಹಬ್ಬ. ನೈವೇದ್ಯಕ್ಕಾಗಿ ಅರಳಿನ ಹೂರಣ ಬಳಸಿ 'ಹೂರಲು ಗಡಬು' (ಹೂರಣ ಕಡಬು) ತಯಾರಿಸುವರು. ಇದು ಗಣೇಶನಿಗೆ ಪ್ರಿಯವಾದುದೆಂದು ನಂಬಿಕೆ. ಒಟ್ಟಲು ಹಿಟ್ಟು ಮತ್ತು ಮಾಂಸದ ಸಾರು ಮಾಡಿ ಹಿರಿಯರಿಗೆ 'ಎಡೆ ಇಕ್ಕು'ವರು.

ವ್ಯವಸಾಯವೇ ಪ್ರಧಾನವೃತ್ತಿಯಾಗುಳ್ಳ ಮಲೆನಾಡ ಗೌಡರ ಬದುಕು ಬಡಗಿಗಳು, ಕುಂಬಾರರು, ಕ್ಷೌರಿಕರು ಮೊದಲಾದವರ ಸಹಕಾರವಿಲ್ಲದೆ ಸಾಗುವುದಿಲ್ಲ. ಆದುದರಿಂದ ವರ್ಷಕ್ಕೊಮ್ಮೆ ಗ್ರಾಮೀಣ ಬದುಕಿನ ಅಂಗವಾಗಿರುವ ಇತರ ವೃತ್ತಿಗಳವರನ್ನು ಕರೆದು ಗೌರವಿಸುವರು. ಈ ಕಾರ್ಯ ಗಣೇಶನ ಹಬ್ಬದ ಮರುದಿನ 'ಹಿತಾರರ ಹಬ್ಬ'ದಂದು ನಡೆಯುತ್ತದೆ. ಒಂದು ದಿನ ಮುಂಚಿತವಾಗಿ ಹಿತಾರರ ಹಬ್ಬದ ಬಗೆಗೆ ಸಾರುಹಾಕಿಸುವರು. ಹಬ್ಬದ ದಿನ ದೋಸೆ ಮತ್ತು ಗಂಗಳದ ಹಿಟ್ಟು ಮಾಡುವರು. ಗಣೇಶನ ಹಬ್ಬಕ್ಕಾಗಿ ಮಾಡಿದ ಮಾಂಸದ ಸಾರು ಈ ದಿನಕ್ಕೂ ಉಳಿದಿರುತ್ತದೆ. ಹರಿಜನರು ಓಲಗ ಮಾಡಿಕೊಂಡು ಮನೆ ಮನೆಗೆ ಹೋಗುವರು. ಹರಿಜನ ಗಂಡಸರಿಗೆ ಅಕ್ಕಿ ಬತ್ತ ಹಣವನ್ನು ಇನಾಮಾಗಿ ನೀಡಲಾಗುವುದು. ಹೆಂಗಸರಿಗೆ ಹಬ್ಬದ ಅಡುಗೆಯನ್ನು ಕೊಡುವರು. ಊರಿನ ಮಡಿವಾಳ, ಕುಂಬಾರ, ಕ್ಷೌರಿಕ, ಬಡಗಿ, ಕುಳವಾಡಿ ಮೊದಲಾದವರೂ ಪ್ರತ್ಯೇಕವಾಗಿ ಎಲ್ಲರ ಮನೆಗಳಿಗೂ ತೆರಳಿ ಅಕ್ಕಿ ಹಾಗೂ ಒಂದೊಂದು ತೆಂಗಿನಕಾಯಿ ಪಡೆಯುವರು. ಹೀಗೆ ಸಮುದಾಯ ಜೀವನವನ್ನು ಬೆಸೆಯುವ ಸಾಧನವಾಗಿದೆ ಹಿತಾರರ ಹಬ್ಬ. ಈ ಅರ್ಥದಲ್ಲಿ ಹಿತವರನ್ನು ಕರೆದು ಗೌರವಿಸುವ ಹಬ್ಬವೆ 'ಹಿತಾರರ ಹಬ್ಬ' ಆಗಿರಬಹುದು. ಗೌರಿಹಬ್ಬದಂದು ಪ್ರತಿಷ್ಠಾಪಿಸಿದ ಗೌರಮ್ಮನನ್ನು ಹಿತಾರರ ಹಬ್ಬದಂದು ತೆಗೆದು ನೀರನ್ನು ಹೂಗಿಡಗಳಿಗೆ ಚೆಲ್ಲಿ ಹಬ್ಬಕ್ಕೆ ಮುಕ್ತಾಯ ಕಲ್ಪಿಸುವರು. ಅನಂತರ ಆ ವರ್ಷ ಮದುವೆ ಮಾಡಿಕೊಟ್ಟ ಹೆಣ್ಣುಮಗಳನ್ನೂ ಅಳಿಯನನ್ನೂ ತವರಿಗೆ ಆಮಂತ್ರಿಸಲು ಮನೆಯ ಯಜಮಾನನಾಗಲಿ ಅಥವಾ ಹುಡುಗಿಯ ಸೋದರನಾಗಲಿ ಬೀಗರ ಮನೆಗೆ ಹೋಗುತ್ತಾನೆ. ಈ ಜನಾಂಗದಲ್ಲಿ ಮಗಳು ಅಳಿಯನನ್ನು ಕರೆಸುವುದು ಗೌರಿಹಬ್ಬದ ಸಮಯದಲ್ಲೆ. ಇದನ್ನು 'ಅಳಿಗುಣಿ ಕರೆಸುವುದು' ಎಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಅವರನ್ನು ಎರಡು ದಿನ ಮನೆಯಲ್ಲಿಟ್ಟುಕೊಂಡು ಉಪಚರಿಸಿ ಮಗಳಿಗೆ ಹೊಸ ಸೀರೆ ರವಿಕೆ ಹಾಗೂ ತಾಂಬೂಲವನ್ನು ಕೊಡುವರು. ಅಳಿಯನಿಗೆ ಚಿನ್ನದ ಉಂಗುರವನ್ನು ಉಡುಗೊರೆಯಾಗಿ ನೀಡುವರು.

ಬಯಲು ಸೀಮೆಯ ಒಕ್ಕಲಿಗರು ಪಕ್ಷ ಮಾಡುವಂತೆ ಇಲ್ಲಿನ ಒಕ್ಕಲಿಗರು ಮಾಳದ ಹಬ್ಬವನ್ನು ಮಾಡುವರು. ಇದಕ್ಕೆ 'ಮಾಳಪಕ್ಷ' ಎಂಬ ಪರ್ಯಾಯ

ನಾಮವುಂಟು. ಮಹಳ ಅಥವಾ ಮಾಳ ಎಂಬ ಶಬ್ದದ ಉಲ್ಲೇಖ ಬೇಲೂರಿನ ಪರಿಚಯವಿದ್ದ ಜನ್ನನ ಯಶೋಧರ ಚರಿತೆಯಲ್ಲಿ ದೊರೆಯುತ್ತದೆ.

ಒರ್ವೆ ಯಶೋಮತಿ ಮೃಗಯಾ
ನರ್ವೆ ಮನಂ ಪರಿಸೆ ನಡೆದು ಮೃಗಮಂ ಪಡೆದಾ
ಎರ್ವೆಯ ಪೋೞಿಯನಿಕ್ಕಿದ
ನೂರ್ವರ್ಗಿಂಗೆ ಮತ್ತಮದನೆ ಮಹಳಕ್ಕಿತ್ತಂ ೩–೫೭

ಇದರಿಂದ ಎಂಟುನೂರು ವರ್ಷಗಳಷ್ಟು ಹಿಂದೆ ಮಹಳ ಪಕ್ಷದಲ್ಲಿ ಕೋಣನನ್ನು ಬಲಿ ಕೊಡುತ್ತಿದ್ದ ಸಂಪ್ರದಾಯವಿದ್ದುದನ್ನು ತಿಳಿಯಬಹುದು. ಸುಮಾರು 1400ರಲ್ಲಿದ್ದ ಆಯತವರ್ಮನ ರತ್ನಕರಂಡಕ ಶ್ರಾವಕಾಚಾರದಲ್ಲಿ ' ' ಯಜ್ಞವಿಧಿ ಮಹಳ ಪಕ್ಷ ಪಿತೃಕಾರ್ಯ ವಿವಾಹೋತ್ಸವದೊಳಂ ಮಾಂಸ ಭಕ್ಷಣೆ ' ಎಂಬ ಮಾತು ಸಿಕ್ಕುತ್ತದೆ. ಅಂತು ಮಹಳ ಪಕ್ಷದಲ್ಲಿ ಮಾಂಸಸೇವನೆ ತುಂಬ ಪ್ರಾಚೀನವಾದುದು. ವರ್ಷದಲ್ಲಿ ಏನೇನು ಅಡಿಗೆ ಮಾಡುತ್ತಾರೊ ಅವೆಲ್ಲವನ್ನೂ ಅಂದು ಮಾಡಬೇಕೆಂಬುದು ನಿಯಮ. ವಿವಿಧ ಬಗೆಯ ಪಾಕವನ್ನು ಬೆಳಗಿನಿಂದ ಸಂಜೆಯವರೆಗೆ ಉಪವಾಸವಿದ್ದು ಸಿದ್ಧ ಪಡಿಸುವರು. ಸಾಯಂಕಾಲ ಕಳಶವಿಟ್ಟು ಹಿರಿಯರನ್ನು ಆಹ್ವಾನಿಸಿ ಮಾಡಿದ ಅಡುಗೆಯನ್ನೆಲ್ಲ ಬಡಿಸಿ ಎಡೆಯಿಕ್ಕುವರು. ಸೇಂದಿ, ಕಳ್ಳು ಮೊದಲಾದ ಮದ್ಯವನ್ನು ಕೂಡ ಎಡೆಯ ಪಕ್ಕದಲ್ಲಿಟ್ಟು ಸತ್ತ ಹಿರಿಯರ ಆತ್ಮಗಳನ್ನು ಸಂತುಷ್ಟಗೊಳಿಸ ಲಾಗುವುದು. ದುರಂತಕ್ಕೆ ಒಳಗಾಗಿಯೊ, ಆಕಸ್ಮಿಕವಾಗಿಯೊ, ರೋಗರುಜಿನಗಳಿಗೆ ತುತ್ತಾಗಿಯೊ ಅಕಾಲದಲ್ಲಿ ಸಾವನ್ನಪ್ಪಿದ ಕುಟುಂಬದ ವ್ಯಕ್ತಿಗಳಿದ್ದರೆ ಅಂಥವರಿಗೆ ' ತಾಯಿಮನೆ ' (ನಡುಮನೆ)ಯಲ್ಲಿ ಪ್ರತ್ಯೇಕ ಕಳಸವಿಟ್ಟು ಹೊಸಬಟ್ಟೆಯಿಟ್ಟು ಎಡೆಯಿಕ್ಕುವರು. ಇದನ್ನು ಕೊಲೆಗೆ ಇಕ್ಕುವುದು ಎನ್ನುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ' ಕೋಲ ' ಶಬ್ದಕ್ಕೆ ಇಲ್ಲಿನ ಕೊಲೆ ಸಂವಾದಿಯಾಗಿದೆ. ' ಕೊಲೆ 'ಯ ಎಡೆಯನ್ನು ಉಪವಾಸವಿದ್ದವರು ಮಾತ್ರ ಸ್ವೀಕರಿಸುವರು.

ದಸರಾ ಹಬ್ಬಗಳಾದ ಮಹಾನವಮಿ ಮತ್ತು ವಿಜಯದಶಮಿ ಹಬ್ಬಗಳನ್ನು ಈ ಜನಾಂಗದವರು ಆಚರಿಸುವುದಿಲ್ಲ. ಇತರ ಜನಾಂಗಗಳ ಸಂಪರ್ಕದಿಂದಾಗಿ ಇತ್ತೀಚೆಗೆ ಆಯುಧಪೂಜೆಯಂದು ವಾಹನಪೂಜೆ ಮಾಡುವುದು ಅಲ್ಲಲ್ಲಿ ಕಂಡುಬರುತ್ತಿದೆ.

ಮಲೆನಾಡು ಒಕ್ಕಲಿಗರಿಗೆ ದೀಪಾವಳಿ ಮುಖ್ಯವಾದ ಹಬ್ಬ. ವಯೋವೃದ್ಧರು ಈ ಹಬ್ಬವನ್ನು ದೀವಳಿಗೆ ಹಬ್ಬ ಎಂದೇ ಕರೆಯುವರು. ಹೆತ್ತೂರಿನ ಸುತ್ತಮುತ್ತಲ ಗೌಡ ಜನಾಂಗದವರಿಗೆ ಇದು ಒಂದುದಿನದ ಹಬ್ಬ. ಆದುದರಿಂದ ಬಲಿಪಾಡ್ಯಮಿಯಂದೇ ಸಾಮಾನ್ಯವಾಗಿ ಎಣ್ಣೆ ಮಜ್ಜನ ಮಾಡುತ್ತಾರೆ. ಇಲ್ಲಿನ ದೀಪಾವಳಿ ಆಚರಣೆ ಪ್ರಕೃತಿಯೊಡನೆ ಸಂಬಂಧ ಹೊಂದಿದೆ. ಅಂದು ಬೆಳಿಗ್ಗೆ ವಿವಿಧ ಬಗೆಯ ಕಾಡು ಸೊಪ್ಪನ್ನು ತರಲು ಒಟ್ಟಾಗಿ ಹೊರಡುವರು. ' ಹೆಚ್ಚು ತರುವುದು ' ಎಂದು ಇದು

ರೂಢಿಯಲ್ಲಿದೆ. ಇದು ಕಾಡಿನ ಸಿರಿಯನ್ನು ನಾಡಿಗೆ ತರುವ ಸಂಕೇತವಾಗಬಹುದೇನೊ? ಹೆಚ್ಚು ತರಲು ಹೊರಡುವ ಮುನ್ನ ಊರುಬಾಗಿಲು ಹತ್ತಿರ ಊರ ಮುಖ್ಯರ ನೇತೃತ್ವದಲ್ಲಿ 'ಗುಂಡು ಹಾರಿಸಿ', ಓಲಗ ಮಾಡಿ ಸೂಚನೆ ನೀಡಲಾಗುವುದು. ಅದಕ್ಕೆ ಅನುಗುಣವಾಗಿ ಗಂಡಸರೆಲ್ಲ ಅಲ್ಲಿ ನೆರೆಯುವರು. ಓಲಗ ಸಹಿತ ಕಾಡಿಗೆ ಹೋಗಿ ನೂರಾರು ಬಗೆಯ ಮರಗಿಡಗಳ ಸೊಪ್ಪನ್ನು ಮುರಿದು ಉತ್ಸಾಹದಿಂದ 'ಕೂ ಊ ಊ ಕೂ ಊ ಊ' ಎಂದು ಕೂಗುತ್ತ ಕಾಡು ಸೊಪ್ಪಿನ ಹೊರೆಯನ್ನು ಹೊತ್ತು ತರುವರು. ಅಂತೆಯೆ ದಾರಿಯಲ್ಲಿ ತಂತಮ್ಮ ಗದ್ದೆಗಳಲ್ಲಿ ಬೆಳೆದು ನಿಂತ ಪೈರಿನ ತೆನೆಯನ್ನು ಕಿತ್ತು 'ಹೆಚ್ಚಿಗೆ' ಸೇರಿಸುವರು. ಮೊದಲು ದೇವಸ್ಥಾನಕ್ಕೆ ತೆರಳಿ ಕಟ್ಟೆಯ ಮೇಲೆ ಒಂದೊಂದು ಕೊನೆಯನ್ನು ಇಟ್ಟು ತಂತಮ್ಮ ಮನೆಗಳಿಗೆ ಹಿಂತಿರುಗುವರು. ಮನೆಯಲ್ಲಿ ಪ್ರತಿಯೊಂದು ಸೂರಿಗೆ, ಕೊಟ್ಟಿಗೆಗೆ ಆ ಸೊಪ್ಪನ್ನು ಸಿಕ್ಕಿಸಬೇಕು. ಉಪ್ಪರಿಗೆಯ ಮೇಲಿನ ಹೆಗ್ಗಂಬಕ್ಕೂ ಕಟ್ಟಬೇಕು. ಒಲೆಗೂ ಆ ಸೊಪ್ಪನ್ನು ಹಾಕಲಾಗುವುದು. ಬೇಲೂರು ಸುತ್ತಮುತ್ತ 'ಲಕ್ಕೇವು ತರುವುದು' ಎಂದು ಲಕ್ಕಿಸೊಪ್ಪು, ಉತ್ತರಾಣಿ ಕಡ್ಡಿ ಹಾಗೂ ಭತ್ತದ ತೆನೆಗಳನ್ನು ಮಾತ್ರ ಹೀಗೆ ತರುವುದು ರೂಢಿಯಲ್ಲಿದೆ. ಈ ಕಡ್ಡಿಗಳನ್ನು ಸಗಣಿಯಲ್ಲಿ ಮಾಡಿದ ಕೆರಕಸಿಗೆ ಇಡುತ್ತಾರೆ.

ಸಗಣಿಯ ಜನಕನನ್ನು ಮಾಡುವಂತೆಯೆ ಕೆರಕನನ್ನು ಮಾಡುವರು. ಹೆತ್ತೂರಿನ ಭಾಗದಲ್ಲಿ ಕೆರಕನನ್ನು ಹೊಸ್ತಿಲ ಮೇಲೆ ಇಡದೆ ಕಿಟಕಿ ಬಾಗಿಲುಗಳ ಅಕ್ಕಪಕ್ಕದಲ್ಲಿ ಬೆರಣಿ ತಟ್ಟುವಂತೆ ತಟ್ಟುತ್ತಾರೆ. ಕೆರಕನನ್ನು ಮಾಡುವವರು ಹೆಂಗಸರು. ದೀಪಾವಳಿಯ ಹಬ್ಬಕ್ಕೆಂದು ಕಾವಲಿ ದೋಸೆ, ಗಂಗಳದ ದೋಸೆ, ಎಲೆಗೋರದ ಹಿಟ್ಟು, ಪಾಯಸ ಹಾಗೂ ಮಾಂಸದ ಸಾರಿನ ಅಡಿಗೆ ತಯಾರಿಸಿ ಇವೆಲ್ಲವನ್ನೂ ಒಂದು ಬಾಳೆ ಎಲೆಗೆ ಬಡಿಸಿ ಪ್ರತಿಯೊಂದು ಕೆರಕನ ಮುಂದೆಯೂ ಇಟ್ಟು ನೈವೇದ್ಯ ಮಾಡುವರು. ಆ ಬಳಿಕ ಗಂಡಸರು ತಮಗೆ ಸೇರಿದ ಗದ್ದೆಗಳಲ್ಲಿ ಒಂದೊಂದು ಕೋಲು ನೆಟ್ಟು ಅದಕ್ಕೆ ಗಿಡದ ಬಳ್ಳಿ ಬಿಟ್ಟು ಬರುತ್ತಾರೆ. ಹೀಗೆ ಗದ್ದೆಗಳಿಗೆ ಕೋಲು ನೆಟ್ಟು ಬಳ್ಳಿ ಬಿಡುವ ಸಂಪ್ರದಾಯ ಕೊಡವ ಗೌಡರಲ್ಲಿಯೂ ರೂಢಿಯಲ್ಲಿದೆ. ಹಾಸನ ಜಿಲ್ಲೆಯ ಬೇಲೂರು ಸುತ್ತಮುತ್ತ ದೀಪಾವಳಿಯಂದು ಮಾಡಿದ ಅಡುಗೆಯನ್ನೆಲ್ಲ ಒಂದು ಕೊಡಕ್ಕೆ ಹಾಕಿ ಅದನ್ನು ತಂತಮ್ಮ ಜಮೀನುಗಳಲ್ಲಿ ಚೆಲ್ಲಿ ಗದ್ದೆಯ ನಡುವೆ ದೊಡ್ಡದೊಂದು ಪಂಜು ಹೊತ್ತಿಸಿ ಬರುವ ವಾಡಿಕೆಯಿದೆ. ದೀಪಾವಳಿಯ ಕೆರಕ ಹಾಗೂ 'ಹೆಚ್ಚು' ತಂದ ಸೊಪ್ಪುಗಳಿಗೆ ಒಣಗಿದ ಬಳಿಕವೂ ಮಹತ್ವವಿದೆ. ಅವನ್ನು ಒಲೆಗೆ ಹಾಕಿ ಸುಟ್ಟು ಬೂದಿಯನ್ನು ಸಂಗ್ರಹಿಸಿಟ್ಟುಕೊಳ್ಳುವರು. ಮುಂದೆ ಬೆಳೆ ಕೊಯ್ದು ಮೆದೆ ಒಟ್ಟುವಾಗ ಆ ಬೂದಿಯಿಂದ ಏಣಿ ಗೆರಸಿ ಮೊರ ಮೊದಲಾದ ಆಕಾರಗಳಲ್ಲಿ ರಂಗೋಲಿ ಇಡುತ್ತಾರೆ. ಬೂದಿಯನ್ನು ಮೆದೆಯ ಸುತ್ತಲೂ ಹಾಕಲಾಗುವುದು. ನೂರಾರು ಬಗೆಯ ಕಾಡುಸೊಪ್ಪಿನ ಬೂದಿಯಲ್ಲಿ ಕೀಟನಾಶಕ ಗುಣವಿರಬಹುದೇ ಎಂಬುದು ಪರಿಶೀಲನಾರ್ಹ.

ದೀಪಾವಳಿ ನಂತರದ ಮೊದಲ ಹುಣ್ಣಿಮೆಯಂದು 'ಮಕ್ಕಳ ಹುಣ್ಣಿಮೆ'ಯನ್ನು ಆಚರಿಸುವರು. ತೀರ್ಥಹಳ್ಳಿ ತಾಲ್ಲೂಕಿನ ಒಕ್ಕಲಿಗರು ಭೂಮಿಹುಣ್ಣಿಮೆಯನ್ನು ಮಾಡುವಂತೆ. ಆದರೆ ಎರಡೂ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೀತಿಯಲ್ಲಿ ನಡೆಯುವಂಥವು. ಮಕ್ಕಳ ಹುಣ್ಣಿಮೆ ಮಕ್ಕಳಿಗೆ ಒಳ್ಳೆಯದಾಗಲೆಂಬ ಆಶಯದ ಮೇಲೆ ನಿಂತಿದ್ದರೂ ಇದರಲ್ಲಿ ಆಯುಧ ಪೂಜೆ ಹಾಗೂ ತಿಪ್ಪಮ್ಮನ ಪೂಜೆಗಳು ಸೇರಿಕೊಂಡಿವೆ. ಆ ದಿನ ಗಂಡಸರು ಸೂರ್ಯೋದಯದ ವೇಳೆಗಾಗಲೇ ತಿಪ್ಪೆಯ ಬಳಿಗೆ ಹೋಗಿ ಒಂದು ಪುಟ್ಟ ಚಪ್ಪರವನ್ನು ಹಾಕಿ ಬರುತ್ತಾರೆ. ಅನಂತರ ದೈನಂದಿನ ಜೀವನದಲ್ಲಿ ಬಳಸುವ ಸೇರು ಪಾವು ತಕ್ಕಡಿ ಮೊದಲಾದ ಅಳತೆ ಮಾಪನಗಳನ್ನು ವ್ಯವಸಾಯದಲ್ಲಿ ಉಪಯೋಗಿಸುವ ನೇಗಿಲು, ನೊಗ, ಗೆರಸಿ, ಚಿಬ್ಬಲು, ಮೊರ, ಕೊಂಗ, ಹೆಡಗೆ ಮೊದಲಾದ ಉಪಕರಣಗಳನ್ನು ತೊಳೆದು ನಡುಮನೆಯಲ್ಲಿ ಸಾಲಾಗಿ ಇಡಲಾಗುವುದು. ಅಕ್ಕಿಹಿಟ್ಟನ್ನು ನೀರಿನಲ್ಲಿ ಕಲೆಸಿ ಅಳತೆಯ ಮಾನವನ್ನು ಹಿಟ್ಟಿಗೆ ಅದ್ದಿ ಹಸುಗಳ ಮೇಲೆ ಮುದ್ರೆ ಒತ್ತಲಾಗುವುದು. ಇದಕ್ಕೆ ಉಂಡಲಿಕೆ ಹಾಕುವುದು ಎಂದು ಹೇಳುವರು. 'ಉಂಡಲಿಗೆಯ ಪಶುವಾನಯ್ಯ' ಎಂಬ ಮಾತು ಬಸವಣ್ಣನವರ ವಚನದಲ್ಲಿ ದೊರೆಯುವುದರಿಂದ ಈ ಸಂಪ್ರದಾಯದ ಪ್ರಾಚೀನತೆಯನ್ನು ಮನಗಾಣ ಬಹುದು. ಆಯುಧಗಳ ಮುಂದಿನ ಎಡೆಗಾಗಿ ಗಂಗಳದ ಹಿಟ್ಟು, ಕಾವಲಿದೋಸೆ, ಎಲೆಗೋರದಹಿಟ್ಟು, ಪಾಯಸ ಹಾಗೂ ಮಾಂಸದ ಸಾರನ್ನು ತಯಾರಿಸುವರು. ಮಧ್ಯಾಹ್ನ ಆಯುಧಗಳಿಗೆ ಎಡೆ ಹಾಕಲಾಗುವುದು. ಹೆಂಗಳೆಯರು ತಿಪ್ಪಮ್ಮನ ಪೂಜೆಗೆ ಅಣಿಗೊಳಿಸುವರು. ಮಣ್ಣಿನಿಂದ ತ್ರಿಕೋನಾಕಾರವನ್ನು ರಚಿಸಿ ಅದರ ಮೇಲೊಂದು ಮಣ್ಣಿನ ಉಂಡೆಯನ್ನು ಜೋಡಿಸಿ ತಿಪ್ಪಮ್ಮನ ಪ್ರತಿಮೆಯನ್ನು ಮಾಡಲಾಗುವುದು. ಇದರ ಮೇಲ್ಭಾಗಕ್ಕೆ ಕಡ್ಡಿಯಿಂದ ಗೆರೆ ಎಳೆದು ಕಣ್ಣು ಮೂಗು ಗಳನ್ನು ತಿದ್ದಲಾಗುವುದು. ಕಣ್ಣಿನ ಭಾಗಕ್ಕೆ ಸೀಗೆಕಾಯಿಯ ಕಪ್ಪು ಬೀಜಗಳನ್ನು ಅಂಟಿಸಿ ತಲೆಗೆ ಸುಮಾರು ಒಂದು ಅಡಿ ಉದ್ದದ ತೆಳುವಾದ ಓಟೆಕಡ್ಡಿಗಳನ್ನು ಸಿಕ್ಕಿಸಿ ಚೆಂಡು ಹೂವು ಇಟ್ಟು ಅಲಂಕರಿಸುವರು. ಕೊರಳಿಗೆ ಹರಳುಎಲೆಯ ತೊಟ್ಟಿನ ಟೊಳ್ಳಾದ ಭಾಗವನ್ನು ಚಿಕ್ಕ ಚಿಕ್ಕದಾಗಿ ಕತ್ತರಿಸಿ ಪೋಣಿಸಿ ಮಾಲೆ ಹಾಕುವರು. ಹೀಗೆ ತಿಪ್ಪಮ್ಮನನ್ನು ಸಿಂಗರಿಸಿ ಒಂದು ಮೊರದ ಮೇಲೆ ಅಗ್ರ ಬಾಳೆಲೆ ಇಟ್ಟು ಆಯುಧಗಳ ಪಕ್ಕದಲ್ಲಿ ಕೂರಿಸಲಾಗುವುದು. ವಿಭೂತಿ ಹೂವು ಕುಂಕುಮಗಳನ್ನಿಟ್ಟು ತಿಪ್ಪಮ್ಮನನ್ನು ಪೂಜಿಸಲಾಗುವುದು. ಈ ಜನ ತಿಪ್ಪಮ್ಮನನ್ನು ಶಿಷ್ಟದೇವತೆಯಂತೆ ಪರಿಗಣಿಸುವರೆಂದು ತೋರುತ್ತದೆ. ಏಕೆಂದರೆ ಆಯುಧಗಳಿಗೆ ಮಾಂಸಾಹಾರದ ಎಡೆಯನ್ನು ಇಡುವ ಇವರು ತಿಪ್ಪಮ್ಮನಿಗೆ ಹಾಲುಪಾಯಸವನ್ನಷ್ಟೇ ಅರ್ಪಿಸುವರು.

ಸಂಜೆ ದೀಪ ಹೊತ್ತಿಸುವ ಕಾರ್ಯಕ್ರಮ ಅದಕ್ಕಾಗಿ ಕಾಟೀಕಾಯಿಗಳನ್ನು ಕೊಯ್ದು ತಿರುಳು ತೆಗೆದು ಬಿಸಿಲಿನಲ್ಲಿ ಒಣಗಿಸಿ ಇಟ್ಟುಕೊಂಡಿರುತ್ತಾರೆ. ಗೋಧೂಳಿ ಸಮಯದಲ್ಲಿ ಮೊದಲು ತಿಪ್ಪಮ್ಮನ ಮುಂದೆ ಎರಡು ಕಾಟೀಕಾಯಿ ದೀಪಗಳನ್ನು

ಇಡಲಾಗುವುದು. ಅನಂತರ ಪ್ರತಿಯೊಂದು ಬಾಗಿಲು ಕಿಟಕಿಗಳಿಗೂ ಜೋಡಿ ದೀಪಗಳನ್ನಿಡುವರು. ಸನಿಹದಲ್ಲಿರುವ ಮನೆಗಳಿಗೆ ಹೋಗಿ 'ನಿಮ್ಮ ಸೊಸೆ ನೀವು ಕರಕೊಳಿ' ಎಂದು ಹೇಳುತ್ತ ಅವರ ಬಾಗಿಲಿಗೂ ಜೋಡಿ ದೀಪವಿಟ್ಟು ಬರಬೇಕು. ಮನೆಯಲ್ಲಿ ಸಣ್ಣ ಮಕ್ಕಳಿದ್ದರೆ ಅವರನ್ನು ತಿಪ್ಪವ್ಮನ ಪಕ್ಕದಲ್ಲಿರಿಸಿ ಆರತಿ ಎತ್ತುವರು. ತಿಪ್ಪವ್ಮನ ಪೂಜೆಯನ್ನು ಮಕ್ಕಳ ಹಬ್ಬ ಎನ್ನುವುದು ಈ ಅರ್ಥದಲ್ಲಿಯೆ ಇರಬೇಕು.

ಕತ್ತಲು ಸಮೀಪಿಸುತ್ತಿದ್ದಂತೆ ತಿಪ್ಪವ್ಮನ ವಿಸರ್ಜನೆಗೆ ಸಿದ್ಧತೆಗಳು ನಡೆಯುತ್ತವೆ. ಹಸಿ ಅಕ್ಕಿಗೆ ಕಾಯಿ ಬೆಲ್ಲ ಬೆರಸಿ ಒಂದೆಡೆ ಇಟ್ಟುಕೊಳ್ಳುತ್ತಾರೆ. ಮನೆಯ ಹೆಣ್ಣು ಮಗಳು ಮೊರ ಸಹಿತ ತಿಪ್ಪವ್ಮನನ್ನು ತಲೆಯ ಮೇಲೆ ಹೊತ್ತುಕೊಂಡು ತಿಪ್ಪೆಯೆಡೆಗೆ ಸಾಗುತ್ತಾಳೆ. ಗಂಡಸರು ಬಂದೂಕು ಹಿಡಿದು, ಜಾಗಟೆ ಬಾರಿಸುತ್ತ, ಅಕ್ಕಿ ಬೆಲ್ಲವನ್ನು ತೆಗೆದುಕೊಂಡು ಆಕೆಯೊಡನೆ ನಡೆಯುವರು. ಮನೆಯ ಇತರರೂ ಅವರನ್ನು ಹಿಂಬಾಲಿಸುವರು. ತಿಪ್ಪೆಯ ಮೇಲೆ ಮೊದಲೇ ಸಜ್ಜುಗೊಳಿಸಿದ್ದ ಚಪ್ಪರದ ಕೆಳಗೆ ತಿಪ್ಪವ್ಮನನ್ನಿಟ್ಟು ಮತ್ತೊಮ್ಮೆ ಪೂಜಿಸಿ, ನೆರೆದಿದ್ದ ಮಕ್ಕಳಿಗೆ ನೆನೆಅಕ್ಕಿ ಬೆಲ್ಲವನ್ನು ಹಂಚಲಾಗುವುದು. ಅನಂತರ ಗಂಡಸರು "ಬೆನಕ ಬೆನಕ ಏಕಬೆನಕ ಪಚ್ಚೆಕಲ್ಲು ಪಾನಿಬಟ್ಲು ಮುತ್ತಿನುಂಡೆ ಮುರಿಯಗೆಜ್ಜೆ ಉಫೋ ಉಫೋ" ಎಂದು ಕೂಗುತ್ತ ಗುಂಡು ಹಾರಿಸಿ ಒಂದಿಷ್ಟು ಅಕ್ಕಿಯನ್ನು ತಿಪ್ಪವ್ಮನ ಮೇಲೆ ಸುರಿದು ಹಬ್ಬವನ್ನು ಮುಕ್ತಾಯಗೊಳಿಸುತ್ತಾರೆ. ಹೀಗೆ ತಿಪ್ಪವ್ಮನ ವಿಸರ್ಜನೆಯಲ್ಲಿ ಗಣಪತಿಯ ಸ್ಮರಣೆ ಮಾಡುವುದಕ್ಕೆ ಕಾರಣ ತಿಳಿಯುವುದಿಲ್ಲ.

ನಾಗಾರಾಧನೆ ಅತ್ಯಂತ ಪ್ರಾಚೀನವಾದುದು ಹಾಗೂ ಭಾರತದಾದ್ಯಂತ ವ್ಯಾಪಕವಾಗಿ ಇರುವಂಥದು. ಕೆಲವು ಜನಾಂಗಗಳು ನಾಗರಪಂಚಮಿಯನ್ನು ಆಚರಿಸುತ್ತವೆ. ಮತ್ತೆ ಕೆಲವರಿಗೆ ಷಷ್ಠಿ ಪ್ರಶಸ್ತವಾದುದು. ಇವೆರಡನ್ನೂ ಆಚರಿಸುವ ಜನರಿದ್ದಾರೆ. ಹೆತ್ತೂರಿನ ಒಕ್ಕಲಿಗರಿಗೆ ಪರಂಪರೆಯಾಗಿ ಬಂದ ನಾಗಾರಾಧನೆಯ ಸಂಪ್ರದಾಯದ ಜೊತೆಗೆ ಘಾಟಿಸುಬ್ರಹ್ಮಣ್ಯ ಕ್ಷೇತ್ರ ಈ ಪ್ರದೇಶಕ್ಕೆ ಸಮೀಪವಿರುವುದರಿಂದ 'ಸುಬ್ಬರಾಯನ ಷಷ್ಠಿ'ಯನ್ನು ಶ್ರದ್ಧೆ ನಿಷ್ಠೆಗಳಿಂದ ಮಾಡುತ್ತಾರೆ. ಇಲ್ಲಿನ ಪ್ರತಿ ಕುಟುಂಬದಲ್ಲೂ ಸುಬ್ರಹ್ಮಣ್ಯನ ಹೆಸರು ಹೊತ್ತ ಒಬ್ಬರಾದರೂ ವ್ಯಕ್ತಿಗಳಿರುವುದನ್ನು ಗಮನಿಸಬಹುದು. ಹಳೆಯ ತಲೆಮಾರಿನವರಂತು ಗಂಡಿಗೆ ಸುಬ್ಬೇಗೌಡ, ಸುಬ್ಬಪ್ಪ, ಸುಬ್ಬಯ್ಯ, ಸುಬ್ರಹ್ಮಣ್ಯ ಎಂದೂ, ಹೆಣ್ಣಿಗೆ ಸುಬ್ಬಮ್ಮ ಎಂದು ಹೆಸರಿಟ್ಟು ಈ ದೈವದ ಬಗೆಗ ತಮ್ಮ ನಿಷ್ಠೆ ಪ್ರದರ್ಶಿಸಿರುವುದನ್ನು ಕಾಣಬಹುದು. ಷಷ್ಠಿ ಈ ಜನರ ಬಾಯಲ್ಲಿ 'ಶ್ರಷ್ಟಿ' ಎಂದು ಅಪಪ್ರಯೋಗವಾಗಿ ಬಳಕೆಯಲ್ಲಿದೆ. ಅಂದು ಬೆಳಿಗ್ಗೆಯೆ ಗುಡಿಸಿ, ಸಾರಿಸಿ ಮಿಂದು ಮಡಿಯುಟ್ಟು ನಿರಾಹಾರಿಗಳಾಗಿರುತ್ತಾರೆ. ತಾವು ಬೆಳೆದ ಕಾಯಿಪಲ್ಲೆಗಳನ್ನು ನೆರೆಹೊರೆಯ ಮನೆಗೆ ಕಳಿಸುವರು. ಪರಸ್ಪರ ಕೊಳುಕೊಡುಗೆಯಾದ ಬಳಿಕ ಎಲ್ಲ ತರಕಾರಿಯನ್ನೂ ಬಳಸಿ ಒಂದೆರಡು ಸಿಹಿ ಕುಂಬಳಕಾಯಿಯ ಎಲೆಯನ್ನು ಹಾಕಿ ಸಾರು ಮಾಡುವರು. ಈ ಸಾರಿಗೆ ವಿಶೇಷ ಸ್ವಾದ ಒದಗಿರುತ್ತದೆಂದು

ನಂಬಿಕೆ. ಜೊತೆಗೆ ಅಕ್ಕಿಯ ಪಾಯಸವು ಇರುತ್ತದೆ. ಬೇರೆಲ್ಲ ಹಬ್ಬಗಳನ್ನು ಮಾಂಸವಿಲ್ಲದೆ ನಡೆಸದ ಇವರಿಗೆ ಇಂದು ಅದು ನಿಷಿದ್ಧ. ನಡುಮನೆಯಲ್ಲಿ ಎಲೆಯ ಮೇಲೆ ಅಕ್ಕಿ ಇಟ್ಟು ಸುಬ್ಬಪ್ಪನ ಹೆಸರು ಹೇಳಿ ಕಳಶ ಸ್ಥಾಪಿಸುವರು. ತನಿ ಎರೆಯುವ ಪದ್ಧತಿ ಇಲ್ಲದಿರುವುದರಿಂದ ಈ ಕಳಶಪೂಜೆ ಮಾಡಿ ಮನೆಯಲ್ಲಿ ಎಷ್ಟು ಮಂದಿ ಇದ್ದಾರೋ ಅಷ್ಟು ಎಡೆಯನ್ನು ಸುಬ್ಬಪ್ಪನಿಗೆ ಹಾಕುವರು. ಷಷ್ಠಿ ಹಬ್ಬದಲ್ಲಿ ಅಪವಾದವೆಂಬಂತೆ ಹಿರಿಯರಿಗೆ ಎಡೆ ಇಡುವುದಿಲ್ಲ. ಮಧ್ಯಾಹ್ನ ಸುಬ್ಬಪ್ಪನ ಪ್ರಸಾದ ವೆಂದು ಎಡೆ ಸ್ವೀಕರಿಸುವರು. ಷಷ್ಠಿಯ ದಿವಸ ಕಡ್ಡಾಯವಾಗಿ ಒಪ್ಪತ್ತು ಮಾಡುವರು. ರಾತ್ರಿಗೆ ಹಸಿ ಅಕ್ಕಿ ತಮ್ಮಟ (=ತಂಬಿಟ್ಟು) ಮತ್ತು ತುಪ್ಪ ಬಾಳೆಹಣ್ಣು ಫಲಾಹಾರ ಸೇವಿಸುವರು. ಹೀಗೆ ವರ್ಷಕ್ಕೊಮ್ಮೆ ಉಪವಾಸವಿದ್ದು ಸಸ್ಯಾಹಾರ ಹಬ್ಬವನ್ನು ಮಾಡಿದ ಬಳಿಕ ಮಾಂಸದೂಟಕ್ಕಾಗಿ ಆಸೆಪಡುತ್ತಾರೆ. ಅದಕ್ಕಾಗಿ ಸಪ್ತಮಿಯ ದಿನ ಸೂರ್ಯೋದಯದ ಹೊತ್ತಿಗೆ 'ಕಾಗೆ ಕರೆಯುವ ಹಬ್ಬ'ವನ್ನು ಮಾಡುವರು. ಹೆಂಗಸರು ಬೇಗ ಎದ್ದು ಹಕ್ಕಿಗಳು ಚಿಲಿಪಿಲಿಗುಡುವ ಮುನ್ನವೇ ಕೋಳಿಸಾರು ಕಡುಬು ತಯಾರಿಸುವರು. ಹಿರಿಯರಿಗೆ ಎಡೆಯಿಟ್ಟು ಕಾಗೆ ಕಾ ಎನ್ನುವ ಮೊದಲೇ ಎಲ್ಲರೂ ಊಟ ಮಾಡುವರು. ಹೆಚ್ಚಿನ ವಿಶೇಷ ಇಲ್ಲದಿರುವ ಈ ಹಬ್ಬವನ್ನು ಮಾಂಸದೂಟಕ್ಕಾಗಿಯೆ ಆಚರಣೆಯಲ್ಲಿ ತಂದಂತೆ ತೋರುತ್ತದೆ. ಇದು ಬ್ರಾಹ್ಮಣರ ಧನುರ್ಮಾಸದ ಪೂಜೆಯಂತೆ.

ಸಂಕ್ರಾಂತಿ ಹಬ್ಬದಲ್ಲಿ ಶಿಷ್ಟಸಂಸ್ಕೃತಿಯಂತೆ 'ಎಳ್ಳು ಬೀರುವ ಪದ್ಧತಿ' ಈ ಜನಾಂಗದಲ್ಲಿಲ್ಲ. ಆದರೆ ಈ ಹಬ್ಬದಲ್ಲಿ ಅವಲಕ್ಕಿ ಕುಟ್ಟಿಟ್ಟುಕೊಳ್ಳುವ ರೂಢಿ ಇದೆ. ಹಬ್ಬ ಹತ್ತಿರ ಬಂದಂತೆಲ್ಲ ಪ್ರತಿ ಮನೆಯಲ್ಲೂ ಹೆಂಗಳೆಯರು ಅವಲಕ್ಕಿ ಸಿದ್ಧಪಡಿಸು ತ್ತಾರೆ. ಸಂಕ್ರಾಂತಿಯ ವೇಳೆಗೆ ಬೆಳೆ ಕೊಯ್ದು ಮೆದೆ ಒಟ್ಟಿರುತ್ತಾರೆ. ಆದುದರಿಂದ ಅಂದು ಮೆದೆಪೂಜೆ ಮಾಡಲಾಗುವುದು. ಈ ಒಂದು ಸಂಪ್ರದಾಯ ಬೇಲೂರು ತಾಲ್ಲೂಕಿನ ಇತರ ವೈದಿಕೇತರ ಜನಾಂಗಗಳಲ್ಲಿಯೂ ರೂಢಿಯಲ್ಲಿದೆ. ಸಂಕ್ರಾಂತಿ ಹೆತ್ತೂರಿನ ಒಕ್ಕಲಿಗರಿಗೆ ಸಂಜೆಯ ಹಬ್ಬ. ಕೋಳಿಸಾರು ಕಡುಬು ತಯಾರಿಸಿ ಆಲ, ಹಲಸು ಹಾಗೂ ಅತ್ತಿಮರಗಳ ಎಲೆಗಳಿಗೆ ಕಡುಬು ತುಂಬಿಸಿ ಮೆದೆಯ ಮೇಲೆ ಎಡೆ ಹಾಕುತ್ತಾರೆ. ಅಲ್ಲಿಯವರೆಗೂ ಮನೆಯವರು ಉಪವಾಸ ಇರುತ್ತಾರೆ.

ಶಿವರಾತ್ರಿ ಸಾಯಂಕಾಲದ ಹಬ್ಬ. ದೊಡ್ಡ ದೊಡ್ಡ ಊರುಗಳಲ್ಲಿ ಮಹಾಶಿವ ರಾತ್ರಿಯಂದು ಮಾಂಸದ ಮಾರಾಟವಿರುವುದಿಲ್ಲ. ಅಹಿಂಸಾತ್ಮಕವಾಗಿ ಆಚರಿಸ ಬೇಕೆನ್ನುವುದೇ ಇದರ ಉದ್ದೇಶ. ಆದರೆ ಹೆತ್ತೂರು ಭಾಗದ ಒಕ್ಕಲಿಗರು ಶೈವಾರಾಧಕ ರಾದರೂ ಬೇಡರ ಕಣ್ಣಪ್ಪನಂತೆ ಮಾಂಸವಿಲ್ಲದೆ ಶಿವರಾತ್ರಿ ಮಾಡುವುದಿಲ್ಲ. ಈ ಹಬ್ಬಕ್ಕಾಗಿಯೆ ಕಡುಬು, ಬಟ್ಟಲು ಹಿಟ್ಟು ಹಾಗೂ ಕೋಳಿ ಸಾರು ತಯಾರಿಸುವರು. ಯಥಾಪ್ರಕಾರ ದೇವಸ್ಥಾನಕ್ಕೆ ಹೋಗಿ ಬಂದು ಹಿರಿಯರಿಗೆ ಎಡೆಯಿಡುವ ಪದ್ಧತಿ ಇದೆ. ಜಾಗರಣೆ ಕಡ್ಡಾಯವಿಲ್ಲ. ಇಚ್ಛೆಯುಳ್ಳವರು ದೇವಸ್ಥಾನದಲ್ಲಿ ಜಾಗರಣೆ ಇರಬಹುದು.

ಬೇಲೂರು ತಾಲ್ಲೂಕಿನ ಮಲೆನಾಡು ಒಕ್ಕಲಿಗರು ಶಿವರಾತ್ರಿಯಂದು ತಂಬಿಟ್ಟು ಮಾಡುವರು. ಹೀಗೆ ಯುಗಾದಿಯಿಂದ ಆರಂಭವಾಗಿ ಶಿವರಾತ್ರಿಯವರೆಗಿನ ವಿವಿಧ ಹಬ್ಬಗಳು ಶಿಷ್ಟಸಂಸ್ಕೃತಿಯಲ್ಲಿ ಕಂಡುಬಂದರೂ ಇಲ್ಲಿನ ಒಕ್ಕಲಿಗರು ಆಚರಿಸುವ ರೀತಿ ಭಿನ್ನವಾಗಿದೆ, ವಿಶಿಷ್ಟವಾಗಿದೆ.

ಮಲೆನಾಡು ಗೌಡರ ವ್ಯವಸಾಯ ಸಂಬಂಧಿ ಹಬ್ಬಗಳಲ್ಲಿ 'ಹೊಸಕ್ಕಿ ಹಬ್ಬ' ಮತ್ತು 'ಹೆಚ್ಚುತರೊ ಹಬ್ಬ'ಗಳು ಪ್ರಮುಖ. ಇವು ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ದಿನ ನಡೆಯುವಂಥವು ಏಕೆಂದರೆ ರೈತ ತನ್ನ ಗದ್ದೆಯಲ್ಲಿ ಯಾವ ತಳಿ ಬತ್ತವನ್ನು ಹಾಕಿರುತ್ತಾನೊ ಅದರ ಮೇಲೆ ಅವನ ಬೆಳೆ ಅವಲಂಬಿತವಾಗುತ್ತದೆ. ಸಾಮಾನ್ಯವಾಗಿ ದೀಪಾವಳಿ ವೇಳೆಗೆ ಗದ್ದೆಗಳಲ್ಲಿ ಪೈರು ತುಂಬಿ ತುಳುಕುತ್ತಿರುತ್ತದೆ. ಕೆಲವು ದಿನಗಳಲ್ಲಿಯೆ ಕಾಳು ಬಲಿತು ಕೊಯ್ಲಿಗೆ ಸಿದ್ಧವಾಗುತ್ತದೆ. ಗದ್ದೆ ಕೊಯ್ಲಿಗೆ ಮುನ್ನ ರೈತ ತನಗೆ ಅನುಕೂಲವಾದ ದಿನದಂದು ಶಾಸ್ತ್ರೋಕ್ತವಾಗಿ ಕೆಲವು ತೆನೆಗಳನ್ನು ಕೊಯ್ಯುತ್ತಾನೆ. ಇದೆ ಹೆಚ್ಚು ತರುವುದು. ಹೆಚ್ಚು ಎನ್ನುವ ಮಾತು ಸಮೃದ್ಧತೆಯನ್ನು ಸೂಚಿಸುತ್ತದೆ. ಅಂತೆಯೆ ಬೆಳೆ ಎಂಬ ಅರ್ಥವೂ ಇದೆ. ಬೆಳೆ ಹೆಚ್ಚಿ ಮನೆ ತುಂಬಲಿ ಎಂಬ ಆಶಯದಿಂದ ಹೆಚ್ಚು ತರುವ ಕಾರ್ಯವನ್ನು ಬಹಳ ನಿಷ್ಠೆಯಿಂದ ಮಾಡಲಾಗುವುದು. ಅಂದು ಮನೆಯ ಯಜಮಾನ ಮುಂಜಾವಿಗೆ ಎದ್ದು ಸ್ನಾನ ಮಾಡಿ, ಯಾರನ್ನೂ ನೋಡದೆ, ಕತ್ತಲಿನಲ್ಲಿ ಗದ್ದೆಗೆ ಹೋಗಿ ತೆನೆಗಳನ್ನು ಕೊಯ್ದು ಗದ್ದೆ ಕೊಯ್ಲನ್ನು ವಿಧಿವತ್ತಾಗಿಸುತ್ತಾನೆ. ಹಿಂತಿರುಗಿ ಬರುವಾಗ ಅದರಲ್ಲಿ ಸ್ವಲ್ಪ ಭಾಗ ದೇವಸ್ಥಾನದಲ್ಲಿಟ್ಟು ಮಾಸಲಳಿಯದಂತೆ ದೇವರಿಗೆ ಅರ್ಪಿಸಲಾಗುವುದು. ಅನಂತರ ಮನೆಗೆ ತಂದ ತೆನೆಗಳಲ್ಲಿ ಕಾಳು ಬಿಡಿಸಿ, ಕುಟ್ಟಿ, ಅಕ್ಕಿ ತೆಗೆದು ಅದರಿಂದ ಪಾಯಸ ಮಾಡುವರು. ಹಿರಿಯರಿಗೆ ಪಾಯಸದ ಎಡೆ ಇಡುವರು. ಹೆಚ್ಚು ತಂದ ದಿನ ಮನೆಯಲ್ಲಿ ಮಾಂಸದ ಅಡಿಗೆಯನ್ನು ಮಾಡುವಂತಿಲ್ಲ.

ಒಕ್ಕಲಾಟ ಮುಗಿದು ಮನೆಯ ಕಣಜಗಳು ಭತ್ತದಿಂದ ತುಂಬಿರುತ್ತವೆ. ಹೊಸಬತ್ತವನ್ನು ಮೊದಲ ಬಾರಿಗೆ ಉಪಯೋಗಿಸುವಾಗ ಹೊಸಕ್ಕಿ ಹಬ್ಬ ಮಾಡಲಾಗುವುದು. ತಾನು ಶ್ರಮವಹಿಸಿ ಅನೇಕ ಎಡರು ತೊಡರುಗಳ ನಡುವೆಯೂ ಬೆಳೆದ ಬೆಳೆಯನ್ನು ಭುಂಜಿಸುವ ಆ ಕ್ಷಣ ಒಕ್ಕಲಿಗನಿಗೆ ಸಂತಸದಾಯಕವಾಗಿರುತ್ತದೆ. ನೆರೆಹೊರೆಯವರನ್ನು ಆಮಂತ್ರಿಸಿ ತಮ್ಮ ಸಂತಸವನ್ನು ಹಂಚಿಕೊಳ್ಳುತ್ತಾರೆ. ಹೊಸ ಅಕ್ಕಿ ಕಡುಬು ಮತ್ತು ಕೋಳಿಸಾರು ಮಾಡಿ ಹಿರಿಯರಿಗೆ ಎಡೆಯಿಟ್ಟು ನೆಂಟರಿಗೆ ಊಟಹಾಕಿ ಕಳಿಸುತ್ತಾರೆ.

ರೋಗರುಜಿನಗಳನ್ನು ನಿಯಂತ್ರಿಸಲು ಕೆಲವು ಹಬ್ಬಗಳನ್ನು ಮಾಡುವುದುಂಟು. ಅಂಥದೊಂದು ಹಬ್ಬವೆ ಮಾರಿಹಬ್ಬ. ವ್ಯವಸಾಯ ಪ್ರಧಾನ ಜನಾಂಗವಾದ ಇಲ್ಲಿನ ಒಕ್ಕಲಿಗರು ದನಕರುಗಳಿಗೆ ಒಳ್ಳೆಯದಾಗಲಿ, ರೋಗಗಳು ಬಾರದಿರಲಿ, ಅವು ಬಹುಕಾಲ ಬಾಳಲಿ ಎಂಬ ಆಶಯದ ಹಿನ್ನೆಲೆಯಲ್ಲಿ ಪ್ರತಿವರ್ಷ ಆಶ್ಲೇಷ ಮಳೆಯಲ್ಲಿ ಮಾರಿಹಬ್ಬ

ವನ್ನು ಮಾಡುವರು. ಜನಾಂಗದ ಮುಖಂಡರು ಈ ಹಬ್ಬದ ದಿನವನ್ನು ಗೊತ್ತು ಪಡಿಸಿ ಸಾರುಹಾಕಿಸುವರು. ಒಂದೊಂದು ಊರಿನಲ್ಲಿ ಒಂದೊಂದು ದಿನ ಹಬ್ಬ ಮಾಡುವರು. ಕೆಲವು ಕಡೆಗಳಲ್ಲಿ ಮಾರಿಹಬ್ಬವನ್ನು ಆರು ಅಥವಾ ಹನ್ನೆರಡು ವರ್ಷಗಳಿಗೊಮ್ಮೆ ಆಚರಿಸುವುದುಂಟು. ಅದು ಆದ್ದೂರಿಯ ಮಾರಿಹಬ್ಬ. ನೆಂಟರಿಷ್ಟರನ್ನೆಲ್ಲ ಕರೆದು ಮನೆಗೊಂದು ಕುರಿ ಹೊಡೆದು ಮಾಡುವಂಥದು. ಹೆತ್ತೂರು ಸುತ್ತಮುತ್ತಲಿನಲ್ಲಿ ಮಾರಿಹಬ್ಬ ವರ್ಷಕ್ಕೊಮ್ಮೆ ಬರುವುದರಿಂದ ನೆಂಟರಿಷ್ಟರಿಗೆ ಆಮಂತ್ರಣವಿರುವುದಿಲ್ಲ. ದನಕರುಗಳ ಹಿತಾಸಕ್ತಿಯಿಂದ ನಡೆಯುವ ಹಬ್ಬ ವಾಗಿರುವುದರಿಂದ ಅಂದು ಕೋಳಿಯನ್ನು ಕೊಟ್ಟಿಗೆಯಲ್ಲಿಯೇ ಕೊಯ್ಯಬೇಕು. ಸಂಜೆಯ ನಾಲ್ಕು ಗಂಟೆಯ ವೇಳೆಗೆ ಕಡಬು, ಬಿದಿರುಕಳಿಲೆಸಾರು ಹಾಗೂ ಕೋಳಿ ಸಾರು ಸಿದ್ಧವಾಗುತ್ತವೆ. ಅಡಿಗೆ ಮನೆಯಲ್ಲಿ ('ಕೋಣೆ ಮನೆ') ಕಳಶ ಸ್ಥಾಪಿಸಿ ಹಿರಿಯರಿಗೆ ಮೂರು ಎಡೆ ಕೊಟ್ಟಿಗೆಯಲ್ಲಿ ಒಂದು ಎಡೆ ಇಕ್ಕುವರು. ಈ ಹಬ್ಬದಲ್ಲಿ ಕುಳವಾಡಿಗೆ ಎಲ್ಲಿಲ್ಲದ ಬೇಡಿಕೆ. ಆತನಿಗೆ ಎಡೆಹಾಕಿದರೆ ಒಳ್ಳೆಯದಾಗುವುದೆನ್ನುವ ನಂಬಿಕೆ ಇದೆ. ಹಾಗಾಗಿ ಕುಳವಾಡಿಯನ್ನು ಪ್ರತಿ ಮನೆಯವರೂ ಆಮಂತ್ರಿಸಿರುತ್ತಾರೆ. ಅವನು ವಾಟೆ ಕಡ್ಡಿಯ ಹೊಸ ಚಿಬ್ಬಲನ್ನು ತೆಗೆದುಕೊಂಡು ಹೋಗಿ ತನ್ನ ಭಾಗದ ಎಡೆಯನ್ನು ಅದರಲ್ಲಿ ಹಾಕಿಸಿಕೊಳ್ಳುವನು. ಎಡೆಕೊಟ್ಟ ಮನೆಗೆ 'ಇವರ ಮನೆ ದನಕರುಗಳಿಗೆಲ್ಲ ಒಳ್ಳೆಯದಾಗಲಿ' ಎಂದು ಹಾರೈಸಿ ಹೋಗುವನು. ಅವನು ಬಂದು ಹೋಗುವವರೆಗೆ ಮನೆಯವರ್ಯಾರೂ ಊಟ ಮಾಡಿರುವುದಿಲ್ಲ.

ಪ್ರಕೃತಿಯ ಮಡಿಲಲ್ಲಿ ಹುಟ್ಟಿ ಬೆಳೆದ ಮಲೆನಾಡ ಒಕ್ಕಲಿಗರಿಗೆ ಇಲ್ಲಿನ ಕಾಡು ಮೇಡು ಬೆಟ್ಟ ಮರಗಿಡಗಳೆಲ್ಲ ವಿಚಿತ್ರ ಅನುಭವ ನೀಡುವ ಸಂಗತಿಗಳು. ಸೃಷ್ಟಿ ವೈಚಿತ್ರ್ಯದ ಹಿಂದೆ ಅಗೋಚರ ಶಕ್ತಿಯ ಅಸ್ತಿತ್ವವನ್ನು ಒಪ್ಪುತ್ತಾರೆ. ತಮಗೆ ಸೇರಿದ ತೋಟದ ಹಿಂದೆ ಕೂಡ ಅದೃಶ್ಯ ಶಕ್ತಿಯ ಕೈವಾಡವಿದೆಯೆಂದು ಭಾವಿಸುತ್ತಾರೆ. ಈ ಹಿನ್ನೆಲೆಯಲ್ಲಿ ವರ್ಷಕ್ಕೊಮ್ಮೆ ತೋಟದಲ್ಲಿ ಜರುಗುವ ವಿಶಿಷ್ಟ ಆಚರಣೆಗೆ 'ದಯ್ಯ ಕೊಡುವುದು' ಎಂದು ಕರೆಯುವರು. ಇದು ಅದೃಶ್ಯ ಶಕ್ತಿಗಳನ್ನು ತೃಪ್ತಿ ಪಡಿಸುವ ವಿಧಾನ. 'ದಯ್ಯ ಕೊಡುವುದು' ಎಲ್ಲರ ಮನೆಯಲ್ಲೂ ಒಂದೇ ದಿನ ನಡೆಯುವುದಿಲ್ಲ. ಅವರವರ ಅನುಕೂಲವಾದ ದಿನಗಳಲ್ಲಿ ಈ ಕಾರ್ಯವನ್ನು ಇಟ್ಟು ಕೊಳ್ಳುತ್ತಾರೆ. ಹಂದಿ, ಕುರಿ ಅಥವಾ ಕೋಳಿಗಳಲ್ಲಿ ಯಾವುದನ್ನಾದರೂ ಬಲಿ ಕೊಡಬಹುದು. ಹಂದಿ ಅಥವಾ ಕುರಿ ಬಲಿ ಕೊಟ್ಟರೆ ಹೆಚ್ಚಿನ ಜನ ಸೇರುತ್ತಾರೆ. ಎಲ್ಲರೂ ಒಟ್ಟಾಗಿ ಬಲಿ ಕೊಡುವ ಪ್ರಾಣಿಯನ್ನೂ ಅಡಿಗೆಗೆ ಬೇಕಾದ ಸಾಮಗ್ರಿಯನ್ನೂ ತೆಗೆದುಕೊಂಡು ತೋಟಕ್ಕೆ ಹೋಗುತ್ತಾರೆ. ನೀರಿಗೆ ಹತ್ತಿರವಾದ ಜಾಗದಲ್ಲಿ ಕಲ್ಲಿಟ್ಟು ಒಲೆ ಹಾಕುತ್ತಾರೆ. ಸಕಲ ಶಕ್ತಿಗಳನ್ನೂ ನೆನೆದು ಪ್ರಾಣಿಬಲಿ ನೀಡಿದ ಬಳಿಕ ಎಲ್ಲರೂ ಸೇರಿ ಮಾಂಸದ ಸಾರು, ಅನ್ನ, ಕಡುಬು ತಯಾರಿಸುವರು. ಮೊದಲು ಒಂದು ದೊಡ್ಡ ಮರದಡಿಯಲ್ಲಿ ಕಲ್ಲುಗಳನ್ನಿಟ್ಟು ಅವುಗಳಿಗೆ ಪೂಜಿಸಿ ಎಡೆಯಿಕ್ಕುವರು. ಇದು

ವಿಗ್ರಹಾರಾಧನೆಯು ಮೊದಲ ಹಂತದಲ್ಲಿ ದೈವವನ್ನು ಪೂಜಿಸುತ್ತಿದ್ದುದರ ಕುರುಹು. ಪೂಜೆಯಾದ ಬಳಿಕ ಪಂಕ್ತಿಭೋಜನ ಮಾಡುವರು. ಮಾಡಿದ ಅಡಿಗೆ ಉಳಿದರೆ ತೋಟದಿಂದ ಮನೆಗೆ ತರುವಂತಿಲ್ಲ. ಮನೆಯಿಂದಲೂ ಅಡಿಗೆ ಮಾಡಿಕೊಂಡು 'ದಯ್ಯ ಕೊಡುವ' ಸ್ಥಳಕ್ಕೆ ತೆಗೆದುಕೊಂಡು ಹೋಗುವಂತಿಲ್ಲ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂಥ ಆಚರಣೆಗೆ 'ತೋಟದ ಶಾಂತಿ' ಎಂದು ಕರೆಯುತ್ತಾರೆ.

ಹಾಸನ ಜಿಲ್ಲೆಯ ಮಲೆನಾಡು ಒಕ್ಕಲಿಗರ ಅದರಲ್ಲೂ ಹೆತ್ತೂರಿನ ಒಕ್ಕಲಿಗರ ಹಬ್ಬಗಳನ್ನು ಅವಲೋಕಿಸಿದಾಗ ಮೂಲದ ಹಲವು ಸಂಪ್ರದಾಯಗಳು ಮುಕ್ಕಾಗದಂತೆ ಉಳಿದುಬಂದಿರುವುದನ್ನು ಗುರುತಿಸಬಹುದು. ಬುಡಕಟ್ಟು ಜನಾಂಗದವರಾಗಿದ್ದಾಗ ಇವರು ಪ್ರಕೃತಿಯನ್ನೂ ತಮ್ಮ ಕುಲದ ಹಿರಿಯರನ್ನೂ ಆರಾಧಿಸಿದಂತೆ ತೋರುತ್ತದೆ. ಇಂದಿಗೂ ಇವರ ಹಬ್ಬಗಳಲ್ಲಿ ಹಿರಿಯರ ಪೂಜೆಗೆ ಮಹತ್ವವಿದೆ. ಹಬ್ಬಗಳಲ್ಲಿನ ಮಾಂಸಹಾರ ಕೂಡ ಆದಿವಾಸಿ ಸಂಪ್ರದಾಯದ ಪಳೆಯುಳಿಕೆಯಾಗಿ ಕಂಡುಬರುತ್ತದೆ. ನಾಗರಿಕತೆಗೆ ಒಳಗಾದಂತೆಲ್ಲ ಈಚಿನ ದಶಕಗಳಲ್ಲಿ ಹಬ್ಬ ಹುಣ್ಣಿಮೆಗಳಲ್ಲಿ ಮಾಂಸಾಹಾರ ಮಾಡಬಾರದೆಂದು ಕೆಲವು ಊರುಗಳಲ್ಲಿ ಸಾಮೂಹಿಕ ತೀರ್ಮಾನ ತೆಗೆದುಕೊಂಡಿದ್ದಾರೆ. ಆದರೆ ಹೆತ್ತೂರಿನ ಸುತ್ತ ಮುತ್ತ ಇಂದಿಗೂ ಪರಂಪರಾನುಗತ ಪದ್ಧತಿಗಳು ಅಸ್ತಿತ್ವದಲ್ಲಿವೆ. ಇತರ ಮಲೆನಾಡುಗೌಡರಿಗಿಂತ ಬೇರೆಯಾಗಿ, ವೈಶಿಷ್ಟ್ಯಪೂರ್ಣವಾಗಿ ಆಚರಿಸುವ ಇಲ್ಲಿನ ಹಬ್ಬಗಳು ಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕ ಸಾಮಗ್ರಿಯನ್ನು ಒದಗಿಸುತ್ತವೆ.

ಡಿ. ಆರ್. ಸರ್ವಮಂಗಳ

ಶೈಕ್ಷಣಿಕ ಮೇಲ್ವಿಚಾರಕನ ಪಾತ್ರಗಳು

ಶಾಲೆಯಲ್ಲಿ ಬೋಧನೆಯ ಮಟ್ಟವನ್ನು ಉತ್ತಮ ಪಡಿಸಲು ಅಲ್ಲಿನ ಅಧ್ಯಾಪಕರಿಗೂ ಇತರ ಕಾರ್ಯಕರ್ತರಿಗೂ ಸೂಕ್ತ ಮಾರ್ಗದರ್ಶನ ನೀಡುವಾಗ ಶಾಲಾ ತನಿಖಾಧಿಕಾರಿ ಅಥವಾ ಶಾಲಾ ಮೇಲ್ವಿಚಾರಕನು ನಡೆಸುವ ಎಲ್ಲ ರೀತಿಯ ಯತ್ನಗಳು: ಅಂದರೆ ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಜ್ಞಾನ ಮತ್ತು ಅನುಷ್ಠಾನ ಗಳಲ್ಲಿ ಪ್ರಗತಿ ಸಾಧಿಸಲು ಪ್ರಚೋದಿಸುವುದು, ಶಿಕ್ಷಣದ ಉದ್ದೇಶಗಳನ್ನು ಪರೀಕ್ಷಿಸಿ ಪುನರ್ವ್ಯವಸ್ಥೆಗೊಳಿಸುವುದು, ಪಠ್ಯವಿಷಯಗಳು, ಬೋಧನ ವಿಷಯ ಮುಂತಾದವು ಗಳ ಪುನರ್ವ್ಯವಸ್ಥೆ, ಬೋಧನೆಯ ಮೌಲ್ಯ ನಿಷ್ಕರ್ಷೆ ಮುಂತಾದ ಕಾರ್ಯ ಗಳೆಲ್ಲವನ್ನು ಶೈಕ್ಷಣಿಕ ಮೇಲ್ವಿಚಾರಣೆ ಎಂದು ಕರೆಯಬಹುದು.

ಪಠ್ಯಕ್ರಮ ಮತ್ತು ಶೈಕ್ಷಣಿಕ ಪ್ರಗತಿಯಲ್ಲಿ ಅಧ್ಯಾಪಕರಿಗೆ ನೆರವಾಗುವ ಅಧಿಕಾರಿಗಳನ್ನು ಮೇಲ್ವಿಚಾರಕರು ಎಂದು ಹೇಳಬಹುದು. ಆದರೆ ಕೇವಲ ಪಠ್ಯ ಕ್ರಮ ವಿಕಾಸ ಮತ್ತು ಶೈಕ್ಷಣಿಕ ಅಭಿವೃದ್ಧಿಗಳೇ ಪ್ರಧಾನ ಕರ್ತವ್ಯವಾಗಿರುತ್ತದೆ. ಅಂತಹವರನ್ನು ಮೇಲ್ವಿಚಾರಕರು ಎಂದು ಕರೆಯಬಹುದು.


ಈ ನಿರೂಪಣೆಯ ಪ್ರಕಾರ ಶಾಲೆಯ ಪ್ರಾಂಶುಪಾಲರನ್ನು ಮೇಲ್ವಿಚಾರಕರು ಎನ್ನಲಾಗದು. ಆ ಶಾಲೆಯ ಪಠ್ಯಕ್ರಮ ಮತ್ತು ಶೈಕ್ಷಣಿಕ ಅಭಿವೃದ್ಧಿಗಳು ಅವರ ಕರ್ತವ್ಯವಾಗಿದ್ದರೂ, ಅವರ ವಿವಿಧ ಕರ್ತವ್ಯಗಳಲ್ಲಿ ಇದೂ ಒಂದಾಗಿರುತ್ತದೆ; ಅನೇಕ ಪ್ರಾಂಶುಪಾಲರುಗಳಿಗೆ ಇದು ದ್ವಿತೀಯ ಕರ್ತವ್ಯವಾಗಿರುವುದೂ ಉಂಟು. ಅನೇಕ ಪ್ರಾಂಶುಪಾಲರುಗಳು ದೈನಂದಿನ ಶಾಲಾ ನಿರ್ವಹಣೆಯಲ್ಲಿ ನಿರತರಾಗಿದ್ದು, ಪಠ್ಯಕ್ರಮ ಮತ್ತು ಶೈಕ್ಷಣಿಕ ವಿಕಾಸದ ನಾಯಕತ್ವವನ್ನು ವಹಿಸಲಾಗದಿರುವುದಕ್ಕೆ ವ್ಯಥೆ ಪಡು ತ್ತಾರೆ. ಆದುದರಿಂದ ಪಠ್ಯಕ್ರಮ ವಿಕಾಸ ಮತ್ತು ಶೈಕ್ಷಣಿಕ ವಿಷಯಗಳಲ್ಲಿ ವಿಶೇಷ ಪರಿಣತಿ ಹೊಂದಿರುವವರನ್ನು ರಾಜ್ಯಮಟ್ಟ ಮತ್ತು ಸ್ಥಳೀಯ ಮಟ್ಟಗಳಲ್ಲಿ ಪಠ್ಯ ಕ್ರಮ ಮತ್ತು ಶೈಕ್ಷಣಿಕ ವಿಕಾಸಗಳಲ್ಲಿ ನಾಯಕತ್ವವನ್ನು ವಹಿಸಿಕೊಳ್ಳಲು ನೇಮಿಸ ಲಾಗುತ್ತದೆ.


ರಾಜ್ಯ, ಜಿಲ್ಲಾ ಮತ್ತು ಶಾಲೆಗಳ ಮಟ್ಟದಲ್ಲಿ ಕಾರ್ಯ ನಿರ್ವಾಹಕರ ವಿಶಿಷ್ಟ ಸೇವಾ ಸಿಬ್ಬಂದಿಯಾಗಿ ಮೇಲ್ವಿಚಾರಕರು ನೇಮಕಗೊಳ್ಳುತ್ತಾರೆ. ಇವರನ್ನು ಸಹಾಯಕ ಸೇವಾ ಸಿಬ್ಬಂದಿ ಅಥವಾ ಕೇವಲ ಸಿಬ್ಬಂದಿಯೆಂದು ಕರೆಯುವುದುಂಟು. ಈ ಸಿಬ್ಬಂದಿಗಳ ಅಧಿಕಾರ, ಪದನಾಮಗಳು ಮತ್ತು ಕರ್ತವ್ಯಗಳು ರಾಜ್ಯ ರಾಜ್ಯಕ್ಕೆ ವ್ಯತ್ಯಾಸವಾಗುತ್ತದೆಯಾದರೂ ಪ್ರಮುಖ ಮೇಲ್ವಿಚಾರಕ ಹುದ್ದೆಗಳನ್ನು ಚಿತ್ರ-1.1 ರಲ್ಲಿ ತೋರಿಸಿರುವಂತೆ ಗುರುತಿಸಬಹುದು.

ಪಠ್ಯಕ್ರಮ ಮತ್ತು ಶೈಕ್ಷಣಿಕ ಕಾರ್ಯನಿರ್ವಾಹಕರು ರಾಜ್ಯಮಟ್ಟದ ಮುಖ್ಯ ಮೇಲ್ವಿಚಾರಕರಾಗಿರುತ್ತಾರೆ. ಈ ಅಧಿಕಾರಿಯ ಹುದ್ದೆಗಳ ಹೆಸರುಗಳು ರಾಜ್ಯ-ರಾಜ್ಯಕ್ಕೆ ವ್ಯತ್ಯಾಸವಿರಬಹುದು. ಇಡೀ ರಾಜ್ಯದ ಸಾರ್ವಜನಿಕ ಶಾಲೆಗಳ ಪಠ್ಯಕ್ರಮ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆಯ ಜವಾಬ್ದಾರಿ ಈ ಅಧಿಕಾರಿಯದು. ಇವನು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗೆ ನೇರವಾಗಿ ಹೊಣೆಯಾಗಿರುತ್ತಾನೆ. ಇವನು ರಾಜ್ಯದ ಶಾಸನ ಸಭೆಯ ಮತ್ತು ವಿದ್ಯಾ ಇಲಾಖೆಯ ಆಜ್ಞೆಗಳನ್ನು ನೆರವೇರಿಸುತ್ತಾನೆ. ಈ ಅಧಿಕಾರಿಯು ಅಧ್ಯಾಪಕರಿಗೆ ಕೆಲವು ಪಠ್ಯಕ್ರಮ ಸಾಮಗ್ರಿಗಳ ತಯಾರಿಕೆಯಲ್ಲಿ ಆಗಾಗ್ಗೆ ನಿರ್ದೇಶನವೀಯುತ್ತಾನೆ ಹಾಗೂ ಪಠ್ಯ ಪುಸ್ತಕಗಳ ಆಯ್ಕೆಯಲ್ಲಿ ಮೇಲ್ವಿಚಾರಣೆಯನ್ನು ಮಾಡುತ್ತಾನೆ. ಇವರ ಕಛೇರಿಯು ಶಾಲೆಗಳಿಗೆ ಸಲಹಾ ಸೇವೆಯನ್ನು ಒದಗಿಸುತ್ತದೆ; ಪಠ್ಯಕ್ರಮ ಮತ್ತು ಶೈಕ್ಷಣಿಕ ಸಮ್ಮೇಳನಗಳನ್ನು ನಡೆಸುತ್ತದೆ. ರಾಷ್ಟ್ರಯೋಜನೆಗಳಿಗೆ ಸಹಾಯಧನವನ್ನು ಪಡೆಯಲು ರಾಷ್ಟ್ರ (ಕೇಂದ್ರ) ಸರ್ಕಾರದೊಡನೆ ಮಧ್ಯಸ್ಥಿಕೆ ವಹಿಸುತ್ತದೆ. ಅಲ್ಲದೆ ಪಠ್ಯಕ್ರಮ ಮತ್ತು ಶಿಕ್ಷಣ ತಂತ್ರಗಳ ಸಂಶೋಧನೆಗೆ ಉತ್ತೇಜನವನ್ನು ಕೊಡುತ್ತದೆ.

ಪಠ್ಯಕ್ರಮ ಮತ್ತು ಶೈಕ್ಷಣಿಕ ಸಹಾಯಕ ಕಾರ್ಯನಿರ್ವಾಹಕರಿಗೆ ವಿಶೇಷ ಪರಿಣಿತ ಸಿಬ್ಬಂದಿ ಇರುತ್ತದೆ. ಇವರನ್ನು ಮೇಲ್ವಿಚಾರಕರು, ನಿರ್ದೇಶಕರು, ಸಲಹೆಗಾರರು ಅಥವಾ ಸಂಘಟನಾಧಿಕಾರಿಗಳು ಎಂದು ಕರೆಯಬಹುದು. ಅನೇಕ ವೇಳೆ ಇವರು ಪ್ರಾಥಮಿಕ ಶಿಕ್ಷಣದ ನಿರ್ದೇಶಕ ಮತ್ತು ಪ್ರೌಢ ಶಿಕ್ಷಣದ ನಿರ್ದೇಶಕರಾಗಿ ನೇಮಕಗೊಂಡು, ಸಹಾಯಕ ಕಾರ್ಯನಿರ್ವಾಹಕರಿಗೆ ನೆರವಾಗುತ್ತಾರೆ. ಇವರು ಆಯಾ ಮಟ್ಟದಲ್ಲಿ ಮಾತ್ರ ಸೀಮಿತ ನಾಯಕತ್ವವಹಿಸುತ್ತಾರೆ.

ಹೆಚ್ಚು ವಿಸ್ತೃತಗೊಂಡಿರುವ ರಾಜ್ಯ ಶಿಕ್ಷಣ ಇಲಾಖೆಯಲ್ಲಿ, ಇಂಗ್ಲೀಷ್, ವಿಜ್ಞಾನ, ಸಮಾಜವಿಜ್ಞಾನ, ಓದುಗಾರಿಕೆ ಮುಂತಾದ ಕ್ಷೇತ್ರಗಳಿಗೇ ಪರಿಣಿತರನ್ನು ನೇಮಕ ಮಾಡಿರುತ್ತಾರೆ. ಈ ಮೇಲ್ವಿಚಾರಕರು ಆಯಾ ಕ್ಷೇತ್ರಗಳಲ್ಲಿ ಅಧ್ಯಾಪಕರಿಗೆ ಪಠ್ಯಸಾಮಗ್ರಿಗಳ ಪರಿಚಯ ಮಾಡಿಕೊಟ್ಟು, ಸೂಕ್ತ ಸಲಹೆ ಕೊಟ್ಟು, ಪರಿಣಾಮಕಾರಿಯಾಗಿ ಬೋಧನಾ ವಿಧಾನವನ್ನು ಪ್ರದರ್ಶಿಸಿ ಸಹಾಯಮಾಡುತ್ತಾರೆ. ಇವರ ಕಾರ್ಯವ್ಯಾಪ್ತಿ ರಾಜ್ಯಾದ್ಯಂತ ವಿಸ್ತರಿಸಿರುತ್ತದೆ. ಇವರು ಸಾಮಾನ್ಯವಾಗಿ ಪ್ರಾಥಮಿಕ ಶಿಕ್ಷಣ ನಿರ್ದೇಶಕ, ಮಾಧ್ಯಮಿಕ ಶಿಕ್ಷಣ ನಿರ್ದೇಶಕ, ಕಿರಿಯ ಪ್ರೌಢ


ಮೇಲ್ವಿಚಾರಣಾ ಕ್ಷೇತ್ರಗಳು
ಶೈಕ್ಷಣಿಕ ಪ್ರಗತಿ
ಮೇಲ್ವಿಚಾರಕನ ಪಾತ್ರಗಳು
ಪಠ್ಯಕ್ರಮ ಪ್ರಗತಿ



1. ಪಠ್ಯಕ್ರಮ ಮತ್ತು ಶೈಕ್ಷಣಿಕ ಸಹಾಯಕ ಕಾರ್ಯನಿರ್ವಾಹಕ
   ಪ್ರಾಥಮಿಕ ಶಾಲೆಗಳ ನಿರ್ದೇಶಕ, ಮಾಧ್ಯಮಿಕ ಶಾಲೆಗಳ ನಿರ್ದೇಶಕ, ಕಿರಿಯ ಪ್ರೌಢಶಾಲೆಗಳ ನಿರ್ದೇಶಕ, ಹಿರಿಯ ಪ್ರೌಢಶಾಲೆಗಳ ನಿರ್ದೇಶಕ, ಸಮಾಜ ಕಾಲೇಜುಗಳ ನಿರ್ದೇಶಕ
2. ಪಠ್ಯಕ್ರಮ ಮತ್ತು ಶೈಕ್ಷಣಿಕ ಸಹಾಯಕ ಕಾರ್ಯನಿರ್ವಾಹಕ
   ಸಾಮಾನ್ಯ ಮೇಲ್ವಿಚಾರಕರು, ಶಿಕ್ಷಣ ನಿರ್ದೇಶಕ, ಪ್ರಾಥಮಿಕ ಶಾಲೆಗಳ ನಿರ್ದೇಶಕ ಮಾಧ್ಯಮಿಕ ಶಾಲೆಗಳ ನಿರ್ದೇಶಕ, ಕಿರಿಯ ಪ್ರೌಢಶಾಲೆಗಳ ನಿರ್ದೇಶಕ, ಹಿರಿಯ ಪ್ರೌಢಶಾಲೆಗಳ ನಿರ್ದೇಶಕ, ವಿದ್ಯಾರ್ಥಿ ಸಿಬ್ಬಂದಿ ಸೇವೆಯ ಮೇಲ್ವಿಚಾರಕ
3. ಪಠ್ಯಕ್ರಮ ಮತ್ತು ಶೈಕ್ಷಣಿಕ ಸಹಾಯಕ ಪ್ರಾಂಶುಪಾಲರು
   ಪಠ್ಯಕ್ರಮ ಸಂಘಟನಾಧಿಕಾರಿ. ಪಠ್ಯಕ್ರಮ ಸಹಾಯಕ
4. ತಂಡ ನಾಯಕರು, ವಿಭಾಗೀಯ ಮುಖ್ಯಸ್ಥರು
5. ಪಠ್ಯಕ್ರಮ ಸಲಹೆಗಾರರು. ಪಠ್ಯಕ್ರಮ ಸಂಘಟಕರು, ವಿಶಿಷ್ಟ ಕಾರ್ಯಕ್ರಮಗಳ ಮೇಲ್ವಿಚಾರಕರು, ವಿಷಯ ಕ್ಷೇತ್ರಗಳ ಮೇಲ್ವಿಚಾರಕರು
6. ಪಠ್ಯಕ್ರಮ ಸಲಹೆಗಾರರು, ಪಠ್ಯಕ್ರಮ ಸಂಘಟಕರು, ವಿಶಿಷ್ಟ ಕಾರ್ಯಕ್ರಮಗಳ ಮೇಲ್ವಿಚಾರಕರು, ವಿಷಯ ಕ್ಷೇತ್ರಗಳ ಮೇಲ್ವಿಚಾರಕರು.

ಶಿಕ್ಷಣ ನಿರ್ದೇಶಕ ಅಥವಾ ಹಿರಿಯ ಪ್ರೌಢ ಶಿಕ್ಷಣ ನಿರ್ದೇಶಕ (ಅವರು ನೇಮಕ ಗೊಂಡ ಮಟ್ಟಕ್ಕನುಸಾರವಾಗಿ) ರಿಗೆ ಹೊಣೆಗಾರರಾಗಿರುತ್ತಾರೆ. ಸಹಾಯಕ ಕಾರ್ಯ ನಿರ್ವಾಹಕರ ಸಿಬ್ಬಂದಿಯಲ್ಲಿ ಪ್ರಾಥಮಿಕ ಶಿಕ್ಷಣದ ಭಾಷಾ ಕಲಾ ಮೇಲ್ವಿಚಾರಕ ಮತ್ತು ಪ್ರೌಢ ಶಿಕ್ಷಣದ ಭಾಷಾ ಕಲಾ ಮೇಲ್ವಿಚಾರಕರು ಇರುವುದು ಅಪರೂಪ ವೇನಲ್ಲ.

ಮಾದರಿ ಮೇಲ್ವಿಚಾರಣೆ

ಮೇಲ್ವಿಚಾರಣೆಯು ಕೆಲವು ಕ್ಷೇತ್ರಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತದೆ; ನಿರ್ದಿಷ್ಟ ಕ್ಷೇತ್ರಗಳಲ್ಲಿ ಪ್ರದರ್ಶಿಸಿದ ಪ್ರಾವೀಣ್ಯತೆಯು ಅನೇಕ ಆಧಾರ ಅಥವಾ ತಳಹದಿಗಳಿಂದ ಪಡೆದುದಾಗಿರುತ್ತದೆ. ಮೇಲ್ವಿಚಾರಣೆಯ ಆಯಾಮಗಳನ್ನು 1–2 ಚಿತ್ರದ ಮೂಲಕ ನಿರೂಪಿಸಬಹುದು. ಈ ಮೇಲ್ವಿಚಾರಣಾ ಕಾಲ್ಪನಿಕ ಮಾದರಿಯು ಪ್ರಾವೀಣ್ಯತೆಗಳಕೆಯ ಪಾತ್ರ, ಕ್ಷೇತ್ರ ಮತ್ತು ಆಧಾರಗಳನ್ನು ಸೂಚಿಸುತ್ತದೆ.

ಕಾಲ್ಪನಿಕ ಮಾದರಿಯ ಮೇಲ್ವಿಚಾರಣೆಯು ಚೇತನಾತ್ಮಕವೂ ಹೌದು, ಸೇವಾ ಪರಿಚಯಾತ್ಮಕವೂ ಹೌದು. ಈ ಮಾದರಿಯಲ್ಲಿ ಏಕ ಕೇಂದ್ರಕ ಚಕ್ರಗಳು ಒಂದು ಪೀಠದಮೇಲೆ ನೆಲೆಗೊಂಡಿರುವುವು. ನಾಲ್ಕು ಒಳಚಕ್ರಗಳು ಮೇಲ್ವಿಚಾರಕನ ನಾಲ್ಕು ಪ್ರಾಥಮಿಕ ಪಾತ್ರಗಳನ್ನು ಸೂಚಿಸುತ್ತವೆ. ಹೊರಚಕ್ರವು ಮೇಲ್ವಿಚಾರಕನ ಕಾರ್ಯಕ್ಷೇತ್ರಗಳನ್ನು ತೋರಿಸುತ್ತದೆ. ತಳದಲ್ಲಿರುವ ಪೀಠವು ಚಕ್ರಗಳನ್ನು ಹೊತ್ತು ಮೇಲ್ವಿಚಾರಕನ ಜ್ಞಾನ ಮತ್ತು ನೈಪುಣ್ಯಗಳ ಆಕಾರ ಅಥವಾ ಮೂಲ ಗಳನ್ನು ಸೂಚಿಸುತ್ತದೆ.

ಈ ಮಾದರಿಯ ಚೈತನ್ಯ ಸ್ವರೂಪವು ಚೌಪಗಳಲ್ಲಿ ವ್ಯಕ್ತವಾಗಿದೆ. ಈ ಚೌಪ ಗಳು, ಚಕ್ರಗಳು ಎರಡು ಕಡೆಗೂ ತಿರುಗಬಲ್ಲವೆಂದು ಸೂಚಿಸುತ್ತವೆ. ಮೇಲ್ವಿ ಚಾರಕನು ಯಾವುದೇ ಕಾಲದಲ್ಲಿ ಒಂದು ಅಥವಾ ಬಹು ಪಾತ್ರಗಳನ್ನು ನಿರ್ವಹಿಸ ಬಹುದು. ಈ ಪಾತ್ರಗಳು ಒಂದು ಅಥವಾ ಬಹು ಕ್ಷೇತ್ರಗಳಿಗೆ ಸೇರಿದವುಗಳಿರ ಬಹುದು. ಈ ಕಾಲ್ಪನಿಕ ಮಾದರಿಯು ಮೇಲ್ವಿಚಾರಕನು (ಅಧ್ಯಾಪಕ ಪ್ರಗತಿ, ಶೈಕ್ಷಣಿಕ ಪ್ರಗತಿ ಮತ್ತು ಪಠ್ಯಕ್ರಮ ಪ್ರಗತಿ) ಸಂಘಟನಾಧಿಕಾರಿ, ಸಲಹೆಗಾರ, ಸಮೂಹ ನಾಯಕತ್ವ ಮೌಲ್ಯಮಾಪಕನಾಗಿ ನಿರ್ವಹಿಸುವ ನಾಲ್ಕು ಪ್ರಮುಖ ಪಾತ್ರ ದೃಶ್ಯವನ್ನು ಚಿತ್ರಿಸುತ್ತದೆ.

ಮೇಲ್ವಿಚಾರಕನ ಪಾತ್ರಗಳು

ಮೇಲ್ವಿಚಾರಕರ ಪಾತ್ರದಲ್ಲಿ ರಾಜ್ಯದಿಂದ ರಾಜ್ಯಕ್ಕೆ ಹಾಗೂ ಸ್ಥಳೀಯವಾಗಿ ವ್ಯತ್ಯಾಸವಿರುವುದು ನಾಸ್ತಿಪಾಂಶ. ಮೇಲ್ವಿಚಾರಕ ಪಾತ್ರವನ್ನು ಕಾರ್ಯನಿರ್ವಾ ಹಕರು ಅಥವಾ ಪ್ರಾಂಶುಪಾಲರುಗಳು ನಿರೂಪಿಸುವರು. ಮೇಲ್ವಿಚಾರಕರು ಇವರುಗಳಿಗೆ

ಹೊಣೆಯಾಗಿರುತ್ತಾರೆ. ಕೆಲವು ವೇಳೆ ಮೇಲ್ವಿಚಾರಕರೇ ತಮ್ಮ ಪಾತ್ರವನ್ನು ಸ್ವಯಂ ನಿರೂಪಿಸಿಕೊಳ್ಳುವುದೂ ಉಂಟು. ಮೇಲ್ವಿಚಾರಕರ ಪಾತ್ರದಲ್ಲಿ ವ್ಯತ್ಯಾಸವಿರುವುದಾದರೂ ಸೇವಾನೆಲೆಯುಳ್ಳವರು ಮಾದರಿ ಚಿತ್ರದಲ್ಲಿ ಕಾಣಿಸಿರುವಂತೆ ನಾಲ್ಕು ಪಾತ್ರಗಳನ್ನೂ ಬೇರೆ ಬೇರೆ ವೇಳೆಯಲ್ಲಿ ನಿರ್ವಹಿಸುವರು.

ಮೇಲ್ವಿಚಾರಕನು ಕಾರ್ಯಕ್ರಮಗಳು, ತಂಡಗಳು, ಸಾಮಗ್ರಿಗಳು ಮತ್ತು ವರದಿಗಳನ್ನು ಸಮನ್ವಯಗೊಳಿಸಿ ಸಂಘಟಿಸುತ್ತಾನೆ. ಕಾರ್ಯಕ್ರಮಗಳು ಮತ್ತು ಜನರ ನಡುವೆ ಮೇಲ್ವಿಚಾರಕನು ಕೊಂಡಿಯಂತಿರುವನು. ಪಠ್ಯಕ್ರಮ, ಶಿಕ್ಷಣ ಮತ್ತು ಅಧ್ಯಾಪಕರ ಪ್ರಗತಿ ಇವುಗಳಲ್ಲಿ ತನ್ನ ಪ್ರಾವೀಣ್ಯತೆಯಿಂದ ಸಲಹೆಗಾರನ ಪಾತ್ರವಹಿಸುತ್ತಾನೆ. ಕೆಲವು ವೇಳೆ ಮೇಲ್ವಿಚಾರಕನು ಅಧ್ಯಾಪಕರಿಗೆ ಬೋಧನಾ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ಒದಗಿಸಬಹುದು. ಮತ್ತೆ ಕೆಲವು ವೇಳೆ ತರಗತಿ ಕೊಠಡಿಗಳ ಒಳಗೆ ಅಥವಾ ಹೊರಗಡೆ ನಿರ್ದಿಷ್ಟ ಕೌಶಲ್ಯವನ್ನು ಮಾಡಿ ತೋರಿಸಬಹುದು.

ಈಗಾಗಲೇ ತಿಳಿಸಿರುವ ಮೂರು ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಲು ಮೇಲ್ವಿಚಾರಕನು ಅಧ್ಯಾಪಕರ ತಂಡಗಳೊಡನೆ ಕಾರ್ಯ ನಿರ್ವಹಿಸಬಹುದು. ಆಗ ಅವನು ತಂಡ ನಾಯಕತ್ವದ ಪಾತ್ರ ನಿರ್ವಹಿಸುವನು. ಅಧ್ಯಾಪಕರುಗಳಿಗೆ ಪಠ್ಯಕ್ರಮ ಮತ್ತು ಶಿಕ್ಷಣದ ಮೌಲ್ಯ ನಿರ್ಧಾರ ಮಾಡಲು ಸಹಾಯಕನಾಗಿ ಮೌಲ್ಯ ಮಾಪನದಲ್ಲೂ ಪಾತ್ರಧಾರಿಯಾಗುತ್ತಾನೆ. ಅಧ್ಯಾಪಕರು ಪಠ್ಯ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಆತ ನೆರವಾಗುತ್ತಾನೆ. ಸೀಮಿತ ಮಟ್ಟದಲ್ಲಿ ಸಂಶೋಧನೆ ಮಾಡಲು ಅವರಿಗೆ ಸಹಾಯಕನಾಗುತ್ತಾನೆ. ಜೊತೆಗೆ ಅಧ್ಯಾಪಕರು ತಮ್ಮ ಬಲ ಮತ್ತು ದೌರ್ಬಲ್ಯಗಳನ್ನು ಕಂಡುಕೊಳ್ಳಲು ಸಹಾಯಕನಾಗುತ್ತಾನೆ.

ಮೇಲ್ವಿಚಾರಣಾ ಕ್ಷೇತ್ರಗಳು

ಪಠ್ಯಕ್ರಮ ಶೈಕ್ಷಣಿಕ ಮತ್ತು ಅಧ್ಯಾಪಕ ಪ್ರಗತಿಗಳು—ಈ ಮೂರು ಕ್ಷೇತ್ರಗಳಲ್ಲಿ ಮೇಲ್ವಿಚಾರಕ ವಿವಿಧ ಪಾತ್ರಗಳನ್ನು ವಹಿಸುತ್ತಾನೆ. ಒಂದು ಅಥವಾ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾ ಮೇಲ್ವಿಚಾರಕನು ಶಿಕ್ಷಣ ಮತ್ತು ಪಠ್ಯಕ್ರಮ ಯೋಜನೆ ಮತ್ತು ಉತ್ತಮಗೊಳಿಸುವಿಕೆ ಹಾಗೂ ಶಿಕ್ಷಕರ ವೃತ್ತಿ ಸುಧಾರಣೆಗೊಳ್ಳುವುದರಲ್ಲಿ ನೆರವಾಗುತ್ತಾನೆ. ವಿವಿಧ ಪಾತ್ರ ನಿರ್ವಹಣೆಯ ಮೂಲಕ ಜ್ಞಾನ ಕೌಶಲ್ಯಗಳ ಅಗಾಧ ಸರಕನ್ನೇ ಸಂಗ್ರಹಿಸಬಹುದು. ಚಿತ್ರ 1–2ರಲ್ಲಿರುವ ವಿಚ್ಛಿನ್ನ ರೇಖೆಗಳು, ಮೂರು ಕ್ಷೇತ್ರಗಳನ್ನು ಬೇರ್ಪಡಿಸುವುವು. ಮೇಲ್ವಿಚಾರಣೆಯ ಕಾರ್ಯವು ಒಂದರ ಮೇಲೊಂದು ವ್ಯಾಪಿಸಿರುವುದೇ ಅಲ್ಲದೆ ಪರಸ್ಪರ ಸಂಬಂಧಿಸಿದವುಗಳಾಗಿರುವುವು. ಉದಾಹರಣೆಗೆ, ಪಠ್ಯಕ್ರಮ ಪ್ರಗತಿ ಕ್ಷೇತ್ರದಲ್ಲಿ ತಂಡದ ನಾಯಕ

ನಾಗಿ ಕೆಲಸವಮಾಡುತ್ತ ಮೇಲ್ವಿಚಾರಕನು ಶಿಕ್ಷಣ ಪ್ರಗತಿ ಮತ್ತು ಅಧ್ಯಾಪಕರ ಪ್ರಗತಿ ಕ್ಷೇತ್ರಗಳಲ್ಲೂ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬಹುದು.

ಮೇಲ್ವಿಚಾರಣೆಯ ತಳಹದಿ

ಕಾಲ್ಪನಿಕ ಮಾದರಿಯ ಚಿತ್ರವನ್ನು ನೋಡಿದಾಗ ಮೇಲ್ವಿಚಾರಕರು (1) ಕೆಲವು ರೀತಿಯ ಜ್ಞಾನ ಮತ್ತು ಕೌಶಲ್ಯ, ಮತ್ತು (2) ಕೆಲವು ವ್ಯಕ್ತಿತ್ವ ಲಕ್ಷಣಗಳನ್ನು ಹೊಂದಿರಲೇಬೇಕು.

ಜ್ಞಾನ ವಿಧಗಳು: ಮೇಲ್ವಿಚಾರಕನಿಗೆ ಶಾಲೆಯ ಬೋಧಕ ವಿಷಯಗಳ ವಿಶಾಲ ಜ್ಞಾನವಿರಬೇಕು. ಅವನು ನೇಮಕಗೊಂಡಿರುವ ಶಾಲಾವಟ್ಟದ ವಿವಿಧ ಸ್ತರಗಳ ಬೋಧನಾ ವಿಷಯಗಳ ಹೊಸ ಮಜಲು ಮತ್ತು ಕಾರ್ಯಕ್ರಮಗಳನ್ನು ತಿಳಿಸಲು ಶಕ್ತನಾಗಿರಬೇಕು. ಬಯಲು ತರಗತಿಗಳು, ಮಾಧ್ಯಮಿಕ ಶಾಲೆಗಳು ಮತ್ತು ಅವರ್ಗೀಕೃತ ಕಾರ್ಯಕ್ರಮಗಳ ಶ್ರೇಷ್ಠತೆ ಮತ್ತು ದೌರ್ಬಲ್ಯಗಳನ್ನು ವಿಶ್ಲೇಷಿಸಬಲ್ಲವನಾಗಿರಬೇಕು. ಪಠ್ಯಕ್ರಮ ಪ್ರಗತಿ ಮತ್ತು ಶೈಕ್ಷಣಿಕ ಪ್ರಗತಿಗಳನ್ನು ಕುರಿತು ಪ್ರಾವೀಣ್ಯತೆಯನ್ನು ಪ್ರದರ್ಶಿಸಬೇಕು.

ಶೈಕ್ಷಣಿಕ ಬುನಾದಿಗಳ ಪರಿಚಯವಿರಬೇಕು. ಅಲ್ಲದೆ ನಮ್ಮ ಶಾಲೆಗಳ ಐತಿಹಾಸಿಕ ಬೆಳವಣಿಗೆಯನ್ನು ಹಾಗೂ ನಮ್ಮ ಸಂಸ್ಕೃತಿಯಲ್ಲಿ ಅವುಗಳ ಸ್ಥಾನಮಾನ ಗುರುತಿಸಬೇಕು. ಶೈಕ್ಷಣಿಕ ತತ್ವದೃಷ್ಟಿಯು ಶಾಲೆಯ ಪಠ್ಯಕ್ರಮ ಮತ್ತು ಶಿಕ್ಷಣಗಳಲ್ಲಿ ಹೇಗೆ ಅನ್ವಯಿಸುತ್ತದೆಂಬುದನ್ನು ತಿಳಿದಿರಬೇಕು.

ಮೇಲ್ವಿಚಾರಕನಿಗೆ ರಾಜ್ಯ ಜಿಲ್ಲೆ ಮತ್ತು ಸ್ಥಳೀಯ ಪ್ರದೇಶಗಳ ವ್ಯವಸ್ಥೆ, ಶಾಲೆಗಳಿಗೆ ಒದಗುವ ಹಣಕಾಸಿನ ಸ್ವರೂಪ, ಶಾಲೆಗಳ ನಿಯಮ, ವಿದ್ಯಾರ್ಥಿಸಿಬ್ಬಂದಿ ಸೇವೆ ಮತ್ತು ಸಮುದಾಯ ಸಂಬಂಧಗಳ ರೂಪ, ಇವುಗಳ ಪೂರ್ಣ ಪರಿಚಯ ಇರಬೇಕು.

ಮೇಲ್ವಿಚಾರಕನಿಗೆ ಬೋಧನಾ ವಿಷಯವನ್ನು ಪರಿಣಾಮಕಾರಿಯಾಗಿ ಮಂಡಿಸಿ ಪ್ರದರ್ಶಿಸುವ ಶಕ್ತಿಯಿರಬೇಕು. ಪ್ರಾಥಮಿಕ ಅಥವಾ ಪ್ರೌಢಶಾಲೆಯ ಎಲ್ಲಾ ಬೋಧನ ವಿಷಯಗಳಲ್ಲಿಯೂ ಪ್ರತಿಯೊಬ್ಬ ವ್ಯಕ್ತಿಯೂ ಪರಿಗಣಿತನಾಗಿರಬೇಕೆಂದು ನಿರೀಕ್ಷಿಸುವುದು ಯುಕ್ತವಲ್ಲದಿದ್ದರೂ, ಮೇಲ್ವಿಚಾರಕನು ಶಾಲೆಗಳಲ್ಲಿ ಸಾಮಾನ್ಯವಾಗಿ ಬೋಧಿಸುವ ಒಂದೆರಡು ವಿಷಯಗಳಲ್ಲಿ ಪ್ರಾವಿಣ್ಯತೆಗಳಿಸಿರಬೇಕು. ಅವನಿಗೆ ಬೋಧನಾ ವಿಷಯಗಳ ಬೋಧನಾಕ್ರಮದ ಸಾಮಾನ್ಯ ತತ್ವಜ್ಞಾನ, ಅಧ್ಯಾಪಕರ ದಕ್ಷತೆಗಳ ವಿಶ್ಲೇಷಣೆ ಮಾಡುವ ಭದ್ರನೆಲೆ ಇರಬೇಕು. ಅಧ್ಯಾಪಕರು ವೈಯಕ್ತಿಕ ಶಿಕ್ಷಣ ವಿಧಾನಗಳನ್ನು ರೂಪಿಸಿಕೊಳ್ಳಲು ಮತ್ತು ವಿದ್ಯಾರ್ಥಿಗಳ ಕಲಿಕೆಯನ್ನು (ದೃಶ್ಯ ಸಾಧ್ಯ) ಹಾಗೂ ಮಾಪನ ವಿಧಾನವನ್ನು ಕಂಡುಕೊಳ್ಳಲು ಸಹಾಯಕನಾಗಬೇಕು.

ಮೇಲ್ವಿಚಾರಕನು ತನ್ನ ವ್ಯಾಪ್ತಿಯಲ್ಲಿರುವ ಅಧ್ಯಾಪಕರಿಗೆ ಉಪಯುಕ್ತವೆನಿಸುವ ಸಾಧನ ಸಾಮಗ್ರಿಗಳ ಮೂಲಗಳನ್ನು ಗುರುತಿಸಬೇಕು. ಶಿಕ್ಷಣ ವಿಚಾರವಾಗಿ ನಿಯತಕಾಲಿಕ ಪತ್ರಿಕೆಗಳು ಮತ್ತಿತರ ಸಾಹಿತ್ಯಗಳನ್ನು ತಪ್ಪದೆ ಓದಿ ಹೊಸ ಸಾಮಗ್ರಿಗಳು ಅದರಲ್ಲೂ ಉಚಿತವಾಗಿ ದೊರೆಯುವ ಅಥವಾ ಸುಲಭ ಬೆಲೆಗೆ ದೊರೆಯುವ ಸಾಮಗ್ರಿಗಳನ್ನು ಗಮನಿಸಬೇಕು ಶಾಲೆಗಳಲ್ಲಿ ಅಥವಾ ಶಾಲೆಯ ಹೊರಗೆ ದೊರೆಯುವ ಶಿಕ್ಷಣ ಸಮೂಹ ಮಾಧ್ಯಮಗಳನ್ನು ಅಧ್ಯಾಪಕರಿಗೆ ಪರಿಚಯಿಸಬೇಕು. ಅಧ್ಯಾಪಕರು ಪಠ್ಯಪುಸ್ತಕಗಳ ಮೌಲ್ಯಮಾಪನ ಸಹಾಯಕರಾಗಬೇಕು. ಅಧ್ಯಾಪಕರಿಗೆ ಉಪಯುಕ್ತವೆನಿಸುವ ಸಮೂಹ ಸಾಧನ ಸಾಮಗ್ರಿಗಳ ಪಟ್ಟಿ ತಯಾರಿಸಬೇಕು. ಪಠ್ಯಕ್ರಮ ಕೈಪಿಡಿ, ಕಲಿಕಾ ಸಂಚಯ (Learning module), ಸಂಪನ್ಮೂಲ ಘಟಕ (Resource unit) ಮತ್ತು ಪಾಠಯೋಜನೆ (Lesson plan) ಮುಂತಾದುವುಗಳ ತಯಾರಿ ಮತ್ತು ನಿರ್ದೇಶನ ಮಾಡುವುದನ್ನು ತಿಳಿದಿರಬೇಕು.

ಮೇಲ್ವಿಚಾರಕನು ತಂತ್ರ ವಿಜ್ಞಾನ ಸಾಧನಗಳನ್ನು ಉಪಯೋಗಿಸಲು ಸಮರ್ಥನಾಗಿದ್ದು ಮತ್ತು ಅವುಗಳ ಉಪಯುಕ್ತತೆಯನ್ನು ಪ್ರಯೋಗಿಸಿ ತೋರಿಸಬೇಕು. ಶಿರೋಪರಿ ಪ್ರಕ್ಷೇಪಕ (Over head projector), ಚಿತ್ರಪಟಲ ಮತ್ತು ಚಿತ್ರಪಟ್ಟಿ ಪ್ರಕ್ಷೇಪಕ (film & film strip projector,) ದ್ವನಿ ಮುದ್ರಕ (tape recorder) ಗಳನ್ನು ಉಪಯೋಗಿಸಲು ಪಳಗಿರಬೇಕು ಗಣಕಯಂತ್ರ ಶಿಕ್ಷಣದ ಅರಿವಿರಬೇಕು ಮತ್ತು ಅವನ ಶಾಲಾ ವ್ಯವಸ್ಥೆಗೆ ಅನ್ವಯವಾಗುವ ಅಂಶಗಳನ್ನು ಸೂಚಿಸಬೇಕು. ಈ ಹೊಸ ಸಾಧನಗಳ ಪರಿಚಯ ವನ್ನು ಅಧ್ಯಾಪಕರಿಗೆ ಪರಿಚಯಿಸುವುದಲ್ಲದೆ ಹಣ ದೊರೆಯುವುದಾದರೆ ಈ ಸಾಧನಗಳ ಪ್ರಯೋಜನ ಪಡೆಯಲು ಉತ್ತೇಜನ ಕೊಡಬೇಕು.

ಮೇಲ್ವಿಚಾರಕನು ಅಳತೆಯ ವಿಧಾನಗಳನ್ನು ಮತ್ತು ಮೌಲ್ಯಮಾಪನ ಮಾಡುವುದರಲ್ಲಿ ಪರಿಣಿತನಾಗಿದ್ದು ಗುಣಾಂಕಗಳನ್ನು ಅಳತೆಮಾಡುವ ವಿಧಾನಗಳು ಮತ್ತು ವರದಿ ಮಾಡುವ ವಿಧಾನಗಳನ್ನು ಸೂತ್ರೀಕರಿಸಬೇಕು. ಪರೀಕ್ಷಣಗಳನ್ನು ಆರಿಸಲು, ಅರ್ಥೈಸಲು ಪ್ರಮಾಣೀಕರಿಸಲು ಮತ್ತು ಪರೀಕ್ಷಣಗಳನ್ನು ರಚಿಸಲು ಅಧ್ಯಾಪಕರಿಗೆ ಸಹಾಯಮಾಡಬೇಕು. ಶಿಕ್ಷಣ ಸಂಶೋಧನೆಗಳನ್ನು ವಿಶ್ಲೇಷಿಸಿ, ಅರ್ಥೈಸಿ, ಅವನ್ನು ಅನ್ವಯಿಸಲು ಸಮರ್ಥನಿರಬೇಕು. ಕ್ರಿಯಾ ಸಂಶೋಧನೆಯ ಉಪಯುಕ್ತತೆಯ ಅರಿವಿದ್ದು, ಅಧ್ಯಾಪಕರು ಹೊಸ ಪರೀಕ್ಷಣಾ ವಿಧಾನಗಳನ್ನು ಪ್ರಯತ್ನಿಸಲು ಪ್ರಚೋದಿಸಬೇಕು.

ಮೇಲ್ವಿಚಾರಕನು ಅಧ್ಯಾಪಕರಿಗೆ ಸೇವಾವಧಿ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬೇಕು. ಅಧ್ಯಾಪಕರುಗಳ ಅವಶ್ಯಕತೆಗಳನ್ನು ಗಮನಿಸಿ ಅವುಗಳ ಪೂರೈಕೆಗೆ ಕಾರ್ಯಾಚರಣೆ ನಡೆಸತಕ್ಕದ್ದು. ಸಾಕಷ್ಟು ಜ್ಞಾನ ಹೆಚ್ಚು ಕೌಶಲ ಸಂಗ್ರಹ ಮೇಲ್ವಿಚಾರಕನಿಗೆ ಇರಬೇಕಾದ ಗುಣಗಳು. ಇವುಗಳಲ್ಲಿ ಕೆಲವನ್ನು ತರಬೇತಿಯಿಂದಲೂ

ಕೆಲವನ್ನು ಅನುಭವದಿಂದಲೂ ಇನ್ನೂ ಹಲವನ್ನು ಒಳ್ಳೆಯ ತೀರ್ಮಾನ ತೆಗೆದುಕೊಳ್ಳು ವುದರಿಂದ ಪಡೆಯಬಹುದು.

ವೈಯಕ್ತಿಕ ಲಕ್ಷಣಗಳು: ಜನರ ಸಂಪರ್ಕವನ್ನು ಹೆಚ್ಚಾಗಿ ಇಟ್ಟು ಕೊಂಡಿರುವವನು ಉತ್ತಮ ಮೇಲ್ವಿಚಾರಕನೆನಿಸುವನು ಆದರಣೆ, ಆತ್ಮೀಯತೆ, ಶಾಂತ ಸ್ವಭಾವ ಮತ್ತು ಹಾಸ್ಯ ಪ್ರವೃತ್ತಿ–ಇವು ಮೇಲ್ವಿಚಾರಕನಿಗೆ ಇರಲೇಬೇಕಾದ ವೈಯಕ್ತಿಕ ಲಕ್ಷಣಗಳು. ಸೇವಾಗುರಿಯುಳ್ಳ ಶಿಕ್ಷಣ ಪ್ರಗತಿಯ ಪ್ರತಿನಿಧಿಯಾಗಿರು ವುದರಿಂದ ಮೇಲ್ವಿಚಾರಕನಿಗೆ ಸಹಾಯಮಾಡುವ ಪ್ರವೃತ್ತಿಯಿರಬೇಕು. ಉತ್ಕೃಷ್ಟ ಬದಲಾವಣೆಯನ್ನು ತರುವ ಮತ್ತು ಅಧ್ಯಾಪಕರನ್ನು ಪ್ರೇರೇಪಿಸುವ ಉತ್ಸಾಹ ಅಮಿತವಾಗಿರಬೇಕು.

ಮೇಲ್ವಿಚಾರಕನು ಹೊಸ ಮತ್ತು ಪ್ರಗತಿ ಶೀಲ ಕಾರ್ಯ ವಿಧಾನಗಳನ್ನು ಚಿಂತಿಸುತ್ತಿರಬೇಕು. ಬೇರೆಯವರ ಭಾವನೆ ಮತ್ತು ಕಲ್ಪನೆಗಳನ್ನು ಪರಿಗಣಿಸಬೇಕು. ತಾನು ಎಲ್ಲವನ್ನೂ ಬಲ್ಲವನೆಂಬ ಕಲ್ಪನೆ ಅಧ್ಯಾಪಕರಿಗೆ ಬರದಂತೆ ವರ್ತಿಸಬೇಕು.

ಮೇಲ್ವಿಚಾರಕನು ಎಲ್ಲಾ ಅಧ್ಯಾಪಕರ ಅಭಿಪ್ರಾಯ ಮತ್ತು ಸಲಹೆಗಳನ್ನು ಸ್ವಾಗತಿಸಿ, ಒಂದು ಮಾದರಿ ಪ್ರಜಾಪ್ರಭುತ್ವದ ವಾತಾವರಣವನ್ನು ಕಲ್ಪಿಸಬೇಕು. ಮೇಲಾಗಿ ಮೇಲ್ವಿಚಾರಕನು ಸೇವಾ ಬದಲಾವಣೆ ಬಯಸುವ ಮತ್ತು ಪ್ರಗತಿ ಪರವಾದ ಮನೋಭಾವದವನಾಗಿರಬೇಕು ಅವನು ಯಥಾಸ್ಥಿತಿಯನ್ನು ಒಪ್ಪಿ ಕೊಂಡುದಾದರೆ, ಅಧ್ಯಾಪಕರು ಸಹ ಜಡ ಸ್ವಭಾವವನ್ನು ಬೆಳೆಸಿಕೊಳ್ಳುವರು.

ಮೇಲ್ವಿಚಾರಕನು ಪರಿವರ್ತನಾಶೀಲನಾಗಿ ಮಕ್ಕಳು ಮತ್ತು ಯುವಕರ ಆಶೋತ್ತರಗಳಿಗೆ ಮಿಡಿಯಬೇಕು. ಇದನ್ನು ಸಾಧಿಸಬೇಕಾದರೆ ಅವನು ವ್ಯಕ್ತಿ ವ್ಯಕ್ತಿಯ ಸಂಪರ್ಕ ಮತ್ತು ತಂಡಗಳ ಸಂಪರ್ಕಗಳನ್ನು ನಿಕಟವಾಗಿ ಹೊಂದಿರಬೇಕು.

ಸಾರಾಂಶ : ಮೇಲ್ವಿಚಾರಕನು, ಅಧ್ಯಾಪಕರಿಗೆ ಸಹಾಯ ಮಾಡಲು ವಿಶೇಷ ತರಪೇತಿ ಪಡೆದಿರುವ ಸಿಬಂದಿಯಾಗಿರುತ್ತಾನೆ. ಕಾಲ್ಪನಿಕ ಮಾದರಿಯು ಸೂಚಿಸು ವಂತೆ, ಮೇಲ್ವಿಚಾರಕನ ಪ್ರಥಮ ಕರ್ತವ್ಯವು ಅಧ್ಯಾಪಕರಿಗೆ ಪಠ್ಯಕ್ರಮ, ಶೈಕ್ಷಣಿಕ ಮತ್ತು ಅಧ್ಯಾಪಕ ಪ್ರಗತಿ–ಈ ಮೂರು ಕ್ಷೇತ್ರಗಳಲ್ಲಿ ಸಹಾಯ ಮಾಡುವುದೇ ಆಗಿದೆ. ಮೇಲ್ವಿಚಾರಕನು ಜ್ಞಾನ ಭಂಡಾರವಾಗಿರುವುದೇ ಅಲ್ಲದೆ ಜನರೊಡನೆ ಸಾಮರಸ್ಯ ಹೊಂದಿರಬೇಕು.

ಮೇಲ್ವಿಚಾರಣೆಯು ಸೇವಾ ಮನೋಭಾವ ಪ್ರಧಾನವಾಗಿರಬೇಕೇ ಹೊರತು ಅಧಿಕಾರ ಚಲಾಯಿಸುವ ಪ್ರವೃತ್ತಿಯದಾಗಿರಬಾರದು. ಆದರೆ ಅದು ನಿರ್ಬಂಧ ರಹಿತವೂ, ಸ್ವಚ್ಛಂದ ರೂಪದ್ದೂ ಆಗಿರಕೂಡದು. ಈ ರೀತಿಯ ಕರ್ತವ್ಯ ನಿರ್ವಹಣೆ ಯಲ್ಲಿ ಮೇಲ್ವಿಚಾರಕನು ವ್ಯಕ್ತಿಗಳೊಡನೆಯೂ, ತಂಡಗಳ ಜೊತೆಯಲ್ಲಿಯೂ ಕೆಲಸ ಮಾಡಬೇಕಾಗುತ್ತದೆ.

ನನ್ನ ಆತ್ಮದ ಅರಿವು ನನಗೆ ದೇವರಾಗಿದೆ. ಅದನ್ನೇ ನಾನು ತೃಪ್ತಿಪಡಿಸಲು ಇಚ್ಛಿಸುತ್ತೇನೆ. ಆತ್ಮದ ಅರಿವಿನ ವಿಷಯದಲ್ಲಿ ಬಹುಜನಾಭಿಪ್ರಾಯಕ್ಕೆ ಸ್ಥಾನವಿಲ್ಲ. ತಾಂಕಿಕ ನ್ಯಾಯಾಲಯಗಳಿಗಿಂತಲೂ ಶ್ರೇಷ್ಠವಾದ ನ್ಯಾಯಮಂಡಲವೊಂದಿದೆ. ಅದೇ ಆತ್ಮಸಾಕ್ಷಿಯ ನ್ಯಾಯಾಲಯ ಉಳಿದೆಲ್ಲ ನ್ಯಾಯಾಲಯಗಳನ್ನೂ ಅದು ಮೀರುತ್ತದೆ.

—ಮಹಾತ್ಮ ಗಾಂಧಿ

ಸುಂದರ ಕಟ್ಟಡಗಳು, ಅಂದಚಂದವಾದ ಚಿತ್ರಗಳು ಮತ್ತು ಪುಸ್ತಕಗಳು, ಇನ್ನುಳಿದ ಬೇರಾವ ಚೆಲುವಿನ ವಸ್ತುಗಳೇ ಇರಲಿ ಅವೆಲ್ಲ ನಿಸ್ಸಂದೇಹವಾಗಿ ನಾಗರಿಕತೆಯ ಕುರುಹುಗಳೇ ಆಗಿವೆ. ಆದರೆ ಸರ್ವರ ಕಲ್ಯಾಣಕ್ಕಾಗಿ ನಿಸ್ವಾರ್ಥ ಬುದ್ಧಿಯಿಂದ ಇತರರೊಂದಿಗೆ ಸಹಕರಿಸಿ ಕಾರ್ಯ ಮಾಡುವ ಮನುಷ್ಯನು ಇವೆಲ್ಲವುಗಳಿಗಿಂತ ಹೆಚ್ಚು ನಾಗರಿಕತೆಯ ಸಂಕೇತವಾಗಿದ್ದಾನೆ.

—ನೆಹರೂ

ಡಾ|| ಆರ್. ಆರ್. ಕುಲಕರ್ಣಿ

ಜಿಲ್ಲಾಡಳಿತದಲ್ಲಿ ಜಿಲ್ಲಾಧಿಕಾರಿಯ ಪಾತ್ರ ಹಾಗೂ ಸ್ಥಾನಮಾನ—ಹಿನ್ನೋಟ ಹಾಗೂ ಮುನ್ನೋಟ

ಭಾರತದ ಭೂಪ್ರದೇಶದ ಮಣ್ಣಿನ ಪ್ರತಿಯೊಂದು ಅಂಗುಲವೂ ಜಿಲ್ಲಾಡಳಿತದಿಂದ ಪ್ರಭಾವಿತವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿಯೊಂದು ಜಿಲ್ಲೆಗೆ ಒಬ್ಬ ಅಧಿಕಾರಿಯು ಮುಖ್ಯಸ್ಥನಾಗಿರುತ್ತಾನೆ. ಕೆಲವೊಂದು ರಾಜ್ಯಗಳಲ್ಲಿ ಕಲೆಕ್ಟರ್ ಎಂದು ಕರೆದರೆ ಮತ್ತೆ ಕೆಲವು ರಾಜ್ಯಗಳಲ್ಲಿ ಡೆಪ್ಯೂಟಿ ಕಮೀಶನರ್ ಎಂದು ಕರೆಯುತ್ತಾರೆ. ಜಿಲ್ಲೆಯ ನಿವಾಸಿಗಳಿಗೆ ಅವನು ಮೂರ್ತಿವೆತ್ತ ಸರಕಾರವಿದ್ದಂತೆ. ಈ ಪದ್ಧತಿಯು ಬೇರೂರಿದ್ದನ್ನು ಅರಿತುಕೊಳ್ಳಬೇಕಾದರೆ ಬ್ರಿಟಿಷ್‌ಯುಗದ ಆಡಳಿತ ಇತಿಹಾಸವನ್ನು ತಿಳಿದುಕೊಳ್ಳುವುದು ಅಗತ್ಯ. ಅವನ ಕಾರ್ಯಾಧಿಕಾರಗಳ ವ್ಯಾಪ್ತಿಯು ಕಾಲಕಾಲಕ್ಕೆ ಬದಲಾಗುತ್ತಿದೆ. 1872ರಲ್ಲಿ ಬಂಗಾಳದ ಲೆಫ್ಟಿನೆಂಟ್ ಗವರ್ನರರಾದ ಸರ್ ಜಾರ್ಜ್ ಕ್ಯಾಂಪ್‌ಬೆಲ್ ಮಾತುಗಳಲ್ಲಿ ಹೇಳುವುದಾದರೆ "ಈ ಜಿಲ್ಲಾಧಿಕಾರಿಗಳಿಗೆ ಅನೇಕ ಇಲಾಖೆಗಳ ಹೊಣೆಗಾರಿಕೆಗಳನ್ನು ಹೊರಿಸಬೇಕೆಂಬ ಇಚ್ಛೆ ಇಲ್ಲ. ಏಕೆಂದರೆ ಅವರು ಯಾವುದರಲ್ಲಿಯು ತಜ್ಞರಾಗಲು ಶಕ್ಯವಿಲ್ಲ. ಎಲ್ಲ ಇಲಾಖೆಗಳ ಮೇಲೆ ತಮ್ಮ ಸಾಮಾನ್ಯ ನಿಯಂತ್ರಣ ಚಲಾಯಿಸಬೇಕೆಂಬುದೇ ನಮ್ಮ ಉದ್ದೇಶವಾಗಿದೆ." ಜಿಲ್ಲಾಡಳಿತವು ರಾಷ್ಟ್ರದ ಸಾಮಾನ್ಯ ಆಡಳಿತ ಸೌಧದಲ್ಲಿ ಪ್ರಮುಖ ಮಹಾದ್ವಾರದ ಕಮಾನಿನಂತೆ ಎಂದು ಬಣ್ಣಿಸುತ್ತಾರೆ. ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗುವದಾಗಲಿ ಅಭಿವೃದ್ಧಿ ಯೋಜನೆಗಳ ಕಾರ್ಯಾಚರಣೆಯಾಗಲಿ ಜಿಲ್ಲೆಯೇ ಆಡಳಿತಕ್ಕೆ ಯೋಗ್ಯ ಘಟಕವಾಗಿರುತ್ತದೆ. ಸಚಿವ ಸಂಪುಟದ ಮೂಲಕ ಅಧಿಕಾರವನ್ನು ಚಲಾಯಿಸುತ್ತಿರುವ ರಾಜ್ಯಸರಕಾರವು ಕಾರ್ಯಾಂಗದ ಅಧಿಪತಿಯಾಗಿದ್ದರೂ, ನೇರವಾಗಿ ಆಳಲ್ಪಡುವ ಜನರು ಜಿಲ್ಲೆಯಲ್ಲಿಯೇ ವಾಸಿಸುತ್ತಾರೆ. ರಾಜ್ಯದ ರಾಜಧಾನಿಯ ಅಧಿಕಾರ ಪೀಠದಿಂದ ಧೋರಣೆಗಳು ಹೊರಹೊಮ್ಮಿದರೂ ಅವೆಲ್ಲವುಗಳ ಪರಿಣಾಮವನ್ನು ಜಿಲ್ಲೆಗಳ ಜನರೆಲ್ಲರು ಅನುಭವಿಸುತ್ತಾರೆ. ಸಾರ್ವಜನಿಕರ ಕಷ್ಟಕಾರ್ಪಣ್ಯಗಳು ಜಿಲ್ಲೆಗಳ ಜನತೆಯ ಮೂಲಕವಾಗಿಯೇ ಹರಿದು ಬರುತ್ತವೆ. ಅವರೇ ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡಿ ಶಾಸನಾಂಗವನ್ನು

ರಚಿಸುತ್ತಾರೆ. ಆದುದರಿಂದ ಜಿಲ್ಲೆಗಳು ಕೇವಲ ಸರಕಾರಿ ಧೋರಣೆಗಳ ಅನುಷ್ಠಾನದ ಪ್ರಯೋಗಶಾಲೆಗಳಲ್ಲ. ಆ ಧೋರಣೆಗಳನ್ನು ನಿರೂಪಿಸುವವರೂ ನಿರ್ಮಾಪಕರೂ ಹೌದು. ಸ್ವಾತಂತ್ರ್ಯಾನಂತರ ಜಿಲ್ಲಾಮಟ್ಟದಲ್ಲಿ ರಾಜ್ಯಸರ್ಕಾರವು ಪ್ರತಿಯೊಂದು ಇಲಾಖೆಗೆ ಜಿಲ್ಲಾಧಿಕಾರಿಗಳನ್ನು ನಿಯಮಿಸಿದ್ದರೂ ಸಮಗ್ರ ಜಿಲ್ಲಾಡಳಿತದ ಹೊಣೆಯು ಡೆಪ್ಯೂಟಿ ಕಮೀಶನರ ಮೇಲಿರುತ್ತದೆ. ಜನರು ಸರಕಾರದೊಂದಿಗೆ ವ್ಯವಹರಿಸುತ್ತಿದ್ದರೂ ಸಹಿತ ನೇರವಾಗಿ ಡೆಪ್ಯೂಟಿ ಕಮೀಶನರ್ ಅವರನ್ನೇ ಸಂಪರ್ಕಿಸಬೇಕಾಗುತ್ತದೆ. ಅವನು ಸರಕಾರದ ಪ್ರತಿರೂಪವಿದ್ದಂತೆ. ಅನೇಕ ಶಾಸನಗಳು ಅವನಿಗೆ ವಿವಿಧ ಅಧಿಕಾರಗಳನ್ನು ನೀಡಿರುತ್ತವೆ. ಕೆಲವೊಂದು ವಿಷಯಗಳಲ್ಲಿ ಅವನಿಗೆ ವಿಶೇಷಾಧಿಕಾರವಿರುತ್ತದೆ. ಬ್ರಿಟಿಷ್ ರಾಜಸತ್ತೆಯಲ್ಲಿ ಜಿಲ್ಲಾ ಕಲೆಕ್ಟರ್‌ನ ಪಾತ್ರವು ಅತ್ಯಂತ ಘನತೆ ಗಾಂಭೀರ್ಯಗಳಿಂದ ಕೂಡಿತ್ತು. ಜಿಲ್ಲಾಮಟ್ಟದಲ್ಲಿ ಸರಕಾರದ ಎಲ್ಲ ಅಧಿಕಾರಗಳನ್ನು ಅವನೇ ಚಲಾಯಿಸುತ್ತಿದ್ದನು. ಆಗಿನ ಪರಿಸ್ಥಿತಿಗನುಸಾರವಾಗಿ ಕಲೆಕ್ಟರನನ್ನು 'ಮಾಬಾಪ' ಎಂದು ಜನತೆ ಗೌರವಿಸುತ್ತಿತ್ತು. ಅವನೇ ಹಳ್ಳಿಗಳಿಗೆ ಪಟೇಲರನ್ನು ಹಾಗೂ ಶಾನುಭೋಗರನ್ನು ನೇಮಕ ಮಾಡುತ್ತಿದ್ದನು. ಗೌರವ ಮ್ಯಾಜಿಸ್ಟ್ರೇಟರನ್ನು ಹಾಗೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸದಸ್ಯರನ್ನು ನೇಮಿಸುತ್ತಿದ್ದನು. ಪ್ರಮುಖ ಸಮಾರಂಭಗಳಲ್ಲಿ ಸ್ಥಾನಗಳನ್ನು ಪ್ರಮುಖ ನಾಗರೀಕರಿಗೆ ಕಲ್ಪಿಸಿಕೊಡುತ್ತಿದ್ದನು. ಪದವಿಗಳು ಹಾಗೂ ಗೌರವಗಳಿಗೆ ಅವನೇ ಶಿಫಾರಸ್ಸುಗಳನ್ನು ಸಲ್ಲಿಸುತ್ತಿದ್ದನು ಕೆಲವೊಂದು ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸುವಲ್ಲಿ ಅವನ ಚಾಣಾಕ್ಷತನವು ವ್ಯಕ್ತವಾಗುತ್ತಿತ್ತು. ಮ್ಯಾಜಿಸ್ಟ್ರೇಟ್ ಹುದ್ದೆಯು ನೀಡಿದ ಅಧಿಕಾರದ ಬೆಂಬಲದ ಮೂಲಕವಾಗಿ ನಿಯಂತ್ರಿಸುವದು ಅಸಾಧ್ಯವೆನಿಸಿದಾಗ ವೈಯಕ್ತಿಕ ಚಾಕಚಕ್ಯತೆಯನ್ನು ತೋರಿಸುವದರ ಮೂಲಕ ನಿಯಂತ್ರಿಸಲು ಶಕ್ಯವಾಗುತ್ತಿತ್ತು. ವಿಶೇಷತಃ ಜಾತೀಯ ಗಲಭೆಗಳನ್ನು ನಿಯಂತ್ರಿಸುವಲ್ಲಿ ಅವನ ವೈಯಕ್ತಿಕ ಪ್ರಭಾವ ಎದ್ದು ಕಾಣುತ್ತಿತ್ತು. ಸಾಂಪ್ರದಾಯಿಕವಾಗಿ ಡೆಪ್ಯೂಟಿ ಕಮೀಶನರನ್ನು ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದುಕೊಂಡು ಹೋಗುವ, ಕಂದಾಯವನ್ನು ವಸೂಲಿಮಾಡುವ ಹಾಗೂ ಜಿಲ್ಲಾಮಟ್ಟದಲ್ಲಿ ಇತರ ಇಲಾಖೆಗಳಲ್ಲಿ ಕಾರ್ಯಗಳ ಉಸ್ತುವಾರಿಯನ್ನು ಮಾಡುವ ಅಧಿಕಾರಿಯನ್ನಾಗಿ ಕಾಣುತ್ತೇವೆ. ನ್ಯಾಯಾಂಗ ಹಾಗೂ ಕಾರ್ಯಾಂಗ ಪ್ರತ್ಯೇಕಗೊಳ್ಳುವವರೆಗೆ ಅವನು ನ್ಯಾಯಿಕ ಅಧಿಕಾರವನ್ನು ಸಹ ಚಲಾಯಿಸುತ್ತಿದ್ದನು. ಸರಕಾರವು ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸಲು ತೊಡಗಿದಾಗಿನಿಂದ ಅವನ ಪಾತ್ರದಲ್ಲಿ ಮಹತ್ತರ ಬದಲಾವಣೆಯಾಗಿದೆ. ಈಗಿನ ಸ್ಥಿತಿಯಲ್ಲಿ ಸಾಂಪ್ರದಾಯಿಕವಾಗಿ ವರ್ಣಿಸುತ್ತಿರುವ ಶಾಂತಿ ಸುವ್ಯವಸ್ಥೆ ಎಂಬ ವಿಷಯವು ವಿಶಾಲ ಅರ್ಥವನ್ನು ಹೊಂದಿದೆ. ಹೆಚ್ಚುತ್ತಿರುವ ನಾಗರೀಕರಣ ಬೆಳೆಯುತ್ತಿರುವ ಶಿಕ್ಷಣ ವ್ಯವಸ್ಥೆ ಹಾಗೂ ಸಾಮಾಜಿಕ ಪ್ರಜ್ಞೆ, ಶಾಂತಿ ಸುವ್ಯವಸ್ಥೆ ಎಂಬ ಶಬ್ದಕ್ಕೆ

ಹೊಸರೂಪವನ್ನು ನೀಡಿದೆ. ಸಂಭವಿಸಬಹುದಾದ ಸಾಮಾಜಿಕ ದ್ವೇಷಗಳನ್ನು ಮುಂದಾಲೋಚಿಸಿ ಅವುಗಳಿಗೆ ಪರಿಹಾರೋಪಾಯವನ್ನು ಕಂಡುಹಿಡಿಯಬೇಕಾಗಿದೆ. ಸಾಮಾಜಿಕ ಆರ್ಥಿಕ ಯೋಜನಾ ವ್ಯವಸ್ಥೆ ಸ್ವತಂತ್ರ ಭಾರತದ ಚಿತ್ರವನ್ನು ಬದಲಾಯಿಸಿದೆ. ಹೊಸ ಹೊಣೆಗಾರಿಕೆಗಳನ್ನು ಅವನು ನಿರ್ವಹಿಸುವ ಕಾಲ ಸನ್ನಿಹಿತವಾಗಿದೆ. ಗ್ರಾಮಮಟ್ಟದಲ್ಲಿ ಜನತೆಯ ಸಕ್ರಿಯ ಸಹಕಾರದ ಮೇಲೆ ರಾಷ್ಟ್ರವು ಕೈಗೊಂಡಿರುವ ಈ ರಚನಾತ್ಮಕ ಕಾರ್ಯದ ಯಶಸ್ಸು ಅವಲಂಬಿಸಿದೆ. ಇತ್ತೀಚಿಗೆ ಈ ಹೊಣೆಗಾರಿಕೆಯನ್ನು ಜನತೆಯು ನಿರ್ವಹಿಸುತ್ತಿರುವ ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸುವದು ಯೋಗ್ಯ ಎಂಬ ಸಿದ್ಧಾಂತವು ಬಲವತ್ತರವಾಗಿ ಬೆಳೆಯುತ್ತದೆ. ಆದರೆ ಜಿಲ್ಲಾಧಿಕಾರಿಯ ಮೇಲೆ ಸಂಪೂರ್ಣ ಹೊಣೆಗಾರಿಕೆಯನ್ನು ಹೊರಿಸುವದು ಉಚಿತವೆನಿಸುವದಿಲ್ಲ. ಕೇವಲ ಓರ್ವ ವ್ಯಕ್ತಿಯ ಮೇಲೆ ವಿವಿಧ ಸ್ವರೂಪದ ಚಟುವಟಿಕೆಗಳ ಕಾರ್ಯಭಾರವನ್ನು ಹೊರಿಸುವದು ಅಷ್ಟೊಂದು ಸಮಂಜಸವೆನಿಸುವದಿಲ್ಲ.

ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಏಕ ವ್ಯಕ್ತಿ ಅಧಿಕಾರ ಕೇಂದ್ರೀಕರಣ ಪ್ರಾಚೀನ ಹಾಗೂ ಮಧ್ಯಯುಗೀನ ಕಾಲಕ್ಕೆ ಒಪ್ಪಿತವಾದ ವಿಷಯ ಎಂಬ ಸಂಗತಿಯು ಕಂಡುಬರುತ್ತದೆ. ಪ್ರಾತಿನಿಧಿಕ ಸಂಸ್ಥೆಗಳ ಉಗಮ, ಕಾರ್ಯಗಳ ವಿಭಜನೆ ಹಾಗೂ ಪಾತ್ರ ವ್ಯತ್ಯಾಸ ಇವುಗಳು ಆಧುನಿಕ ವ್ಯವಸ್ಥೆಗೆ ಅನುಗುಣವಾದ ಸಂಗತಿಗಳಾಗಿವೆ. ಸ್ವಾತಂತ್ರ್ಯನಂತರ ಬಹುಮಟ್ಟಿಗೆ ಹಾಗೂ ರಾಜ್ಯಗಳ ಪುನರ್ವಿಂಗಡಣೆಯಾದನಂತರ ಡೆಪ್ಯೂಟಿ ಕಮೀಶನರ್ ನಿರ್ವಹಿಸುತ್ತಿದ್ದ ನ್ಯಾಯಿಕ ಅಧಿಕಾರದಲ್ಲಿ ಮಹತ್ತರ ಬದಲಾವಣೆ ಕಂಡುಬಂದಿದೆ. ಇನ್ನಿತರ ಕಾರ್ಯಗಳ ವಿಭಜನೆಯೂ ಸಹಿತ ಅತ್ಯಾವಶ್ಯಕವಾಗಿ ಪರಿಣಮಿಸಿದೆ. ಸಾಮಾನ್ಯ ಆಡಳಿತ ಹಾಗೂ ನಿಯಂತ್ರಣ ಕಾರ್ಯಗಳನ್ನು ಡೆಪ್ಯೂಟಿ ಕಮೀಶನರಿಗೆ ಒಪ್ಪಿಸಿ ಅಭಿವೃದ್ಧಿ ಕಾರ್ಯಗಳನ್ನು ಸ್ಥಳೀಯ ಮಟ್ಟದ ಪಂಚಾಯತ್ ಸಂಸ್ಥೆಗಳಿಗೆ ಒಪ್ಪಿಸುವದು ಹಿತವೆಂದು ತೋರುತ್ತದೆ. ಏಕೆಂದರೆ ಇನ್ನು ಮೇಲೆ ಅಭಿವೃದ್ಧಿ ಕಾರ್ಯಗಳ ಹೊಣೆಗಾರಿಕೆಯು ಸಂಪೂರ್ಣವಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ವರ್ಗಾಯಿಸಲ್ಪಡುವ ಸಂಭವ ಕಂಡುಬರುತ್ತದೆ. ನಿಯಂತ್ರಣ ಕಾರ್ಯಗಳಿಗಾಗಿ ಡೆಪ್ಯೂಟಿ ಕಮೀಶನರ್ ಯಾವ ರೀತಿಯಾಗಿರುವನೋ ಅದೇ ರೀತಿಯಾಗಿ ಪಂಚಾಯತ್ ರಾಜ್ಯಸಂಸ್ಥೆಗಳು ಅಭಿವೃದ್ಧಿ ಕಾರ್ಯಗಳಿಗಾಗಿ ಇರುವದು ಎಂಬ ವ್ಯವಸ್ಥೆಯು ರೂಪುಗೊಳ್ಳಬೇಕಾಗಿದೆ. ಅಭಿವೃದ್ಧಿ ಕಾರ್ಯಗಳ ಹೊಣೆಗಾರಿಕೆಯಿಂದ ಅವನನ್ನು ಬೇರ್ಪಡಿಸಿದರೆ ಇನ್ನುಳಿದ ಕಾರ್ಯಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಲು ಅನುಕೂಲವಾಗುತ್ತದೆ. ನಿಯಂತ್ರಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಸಂಪೂರ್ಣವಾಗಿ ಬೇರ್ಪಡಿಸಿದರೆ ಅವೆರಡರಲ್ಲಿ ಹೊಂದಾಣಿಕೆ ಹಾಗೂ ಸಂಯೋಜನೆ ಯನ್ನು ಏರ್ಪಡಿಸುವವರಾರೆಂಬ ಪ್ರಶ್ನೆ ಉದ್ಭವಿಸುತ್ತದೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷ

ಹಾಗೂ ಡೆಪ್ಯೂಟಿ ಕಮೀಶನರ್ ಕಾಲಕಾಲಕ್ಕೆ ಪರಸ್ಪರ ಸಮಾವೇಶಗಳ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂಬುದೇ ಒಂದು ಪರಿಹಾರೋಪಾಯ.

ಸಾಂಪ್ರದಾಯಿಕವಾಗಿ ಡೆಪ್ಯೂಟಿಕಮೀಶನರ್‌ನ ಮೇಲೆ ಕಾನೂನು ಹಾಗೂ ಸುವ್ಯವಸ್ಥೆ ಪಾಲನೆಯ ಗುರುತರ ಹೊಣೆಗಾರಿಕೆ ಇದೆ. ಅನೇಕ ಸಲ ಆರಕ್ಷಕ ಇಲಾಖೆಗೆ ಜಿಲ್ಲಾ ಅಧೀಕ್ಷಕರು (Superintendent of Police) ಹಾಗೂ ಡೆಪ್ಯೂಟಿ ಕಮೀಶನರ್ ಇವರೀರ್ವರ ನಡುವೆ ಅವರವರ ಹೊಣೆಗಾರಿಕೆಯ ವಿಷಯದಲ್ಲಿ ಸಂಶಯಕ್ಕೆಡೆಮಾಡಿಕೊಡುವ ಪ್ರಸಂಗಗಳು ಉದ್ಭವಿಸುತ್ತವೆ. ಪೋಲೀಸ್ ಕಾನೂನು, ಪೋಲೀಸ್ ಕೈಪಿಡಿ ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ಸರಕಾರಿ ಆಜ್ಞೆಗಳು ಡೆಪ್ಯೂಟಿ ಕಮೀಶನರನ್ನು ಜಿಲ್ಲಾದಂಡಾಧಿಕಾರಿ (District Magistrate) ಎಂದು ಪರಿಗಣಿಸಿವೆ. 1961 ರಲ್ಲಿ ಅಂಗೀಕೃತವಾದ ಪೋಲೀಸ್ ಕಾನೂನು ಆರಕ್ಷಕ ಆಡಳಿತದ ಹೊಣೆಗಾರಿಕೆಯು ಅಧೀಕ್ಷಕನ ಹೊಣೆಗಾರಿಕೆಯಾಗಿದ್ದರೂ ಅದರ ಮೇಲಿನ ಉಸ್ತುವಾರಿಯು ಮಾತ್ರ ಡೆಪ್ಯೂಟಿ ಕಮೀಶನರಿಗೆ ಸಂಬಂಧಿಸಿದ ವಿಷಯ ಎಂದು ಸ್ಪಷ್ಟಪಡಿಸುತ್ತದೆ. ಕಾಲಕಾಲಕ್ಕೆ ರಚಿತವಾದ ಆಯೋಗಗಳು ಅದೇ ವಾದವನ್ನೇ ಪುಷ್ಟೀಕರಿಸಿವೆ. ಪಶ್ಚಿಮ ಬಂಗಾಳದ ಪೋಲೀಸ್ ಆಯೋಗವು 1961ರಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ಈ ಕೆಳಗೆ ಕಂಡಂತೆ ವಿಚಾರ ವ್ಯಕ್ತಮಾಡಿದೆ. ("The District Magistrate's position as the officer ultimately responsible for the police administration in his district should not be whittled away or allowed to be whittled away in any manner although he may have other duties to attend to".) ಆರಕ್ಷಕ ಅಧೀಕ್ಷಕನೇ ಸಂಪೂರ್ಣ ಜವಾಬ್ದಾರಿಯನ್ನು ಕಾನೂನು ಹಾಗೂ ಸುವ್ಯವಸ್ಥೆಗಳ ವಿಷಯವಾಗಿ ಹೊಂದಿರಬೇಕೆಂಬ ವಾದವನ್ನು ಕೆಲವು ಆಸಕ್ತ ವರ್ಗಗಳು ಮಂಡಿಸುತ್ತವೆ. ಯಾವ ಅಧಿಕಾರಿಯೂ ನೇರವಾಗಿ ಆರಕ್ಷಕ ಕಾರ್ಯಾಚರಣೆಯನ್ನು ನೆರವೇರಿಸುತ್ತಿರುವನೋ ಅವನು ಸ್ವತಂತ್ರನಾಗಿರಬೇಕೆಂದು ಈ ವರ್ಗಗಳ ವಾದ. ಈಗಿದ್ದ ವ್ಯವಸ್ಥೆಯ ಮೇರೆಗೆ ಡೆಪ್ಯೂಟಿ ಕಮೀಶನರನೊಂದಿಗೆ ಸಮಾಲೋಚಿಸಿ ಅವನ ಸಲಹೆ ಸೂಚನೆಗಳ ಮೇರೆಗೆ ಕೊನೆಯದಾಗಿ ಒಪ್ಪಿಗೆಯನ್ನು ಪಡೆದೇ ಆರಕ್ಷಕ ಅಧೀಕ್ಷಕನು ಕಾರ್ಯ ಕೈಕೊಳ್ಳುತ್ತಾನೆ. ಇದೊಂದು ಅಸಮರ್ಪಕ ವ್ಯವಸ್ಥೆ ಎಂದು ಆಸಕ್ತ ವರ್ಗದ ಬತ್ತಳಿಕೆಯಲ್ಲಿಯ ಬಾಣ. ಜಿಲ್ಲಾದಂಡಾಧಿಕಾರಿಗಳು ಅನೇಕ ಕಾರ್ಯಗಳ ಒತ್ತಡದ ಮೂಲಕವಾಗಿ ತೊಳಲಾಡುತ್ತಿದ್ದಾರೆ. ಅವಶ್ಯಕ ಕಾರ್ಯಗಳ ವಿಷಯವಾಗಿ ಕೊನೆಯ ಅಧಿಕಾರಿಗಳ ವೇಲೆಯೇ ಅವರು ಅವಲಂಬಿಸಬೇಕಾಗುತ್ತದೆ. ಅನೇಕ ಜಿಲ್ಲಾಧಿಕಾರಿ ಗಳು ತರುಣ ಹಾಗೂ ಅನನುಭವಿತರಾಗಿದ್ದು ಸಾಮಾನ್ಯವಾಗಿ ಜಿಲ್ಲೆಯಲ್ಲಿ ಅವರು ಕಳೆಯಬೇಕಾದ ಅಧಿಕಾರಾವಧಿಯು ಕಡಿಮೆಯಾಗಿರುತ್ತದೆ ಪೋಲೀಸ್ ಅಧಿಕಾರಿಗಳಿಗೆ ಮಾತ್ರ ಈ ಗರಡಿಯಲ್ಲಿ ತರಬೇತಿ ಹಾಗೂ ಅನುಭವ ಸಾಕಷ್ಟಾಗಿರುತ್ತದೆ.

ಆದ್ದರಿಂದ ಅವರೇ ಕಾನೂನು ಹಾಗೂ ಸುವ್ಯವಸ್ಥೆಗಳ ಸಮಸ್ಯೆಗಳನ್ನು ಪರಿಹರಿಸ ಬಲ್ಲರು ಎಂದು ಮತ್ತೊಂದು ವಾದವು ತನ್ನ ಸಿದ್ಧಾಂತವನ್ನು ಮಂಡಿಸುತ್ತದೆ. ಮುಂಬಯಿ, ಮದ್ರಾಸ, ಕಲ್ಕತ್ತಾಗಳಂತಹ ಮಹಾನಗರಗಳಲ್ಲಿ ಜಿಲ್ಲಾದಂಡಾಧಿ ಕಾರಿಯ ಮಾರ್ಗದರ್ಶನವಿಲ್ಲದೆಯೇ ಕ್ಲಿಷ್ಟ ಪ್ರಸಂಗಗಳನ್ನು ಎದುರಿಸಿದ ದೃಷ್ಟಾಂತ ಗಳಿವೆ. ಜಿಲ್ಲಾ ದಂಡಾಧಿಕಾರಿಯನ್ನು ಈ ಹೊಣೆಗಾರಿಕೆಯಿಂದ ಮುಕ್ತಗೊಳಿಸಬೇಕು. ಆದರೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಶಾಸ್ತ್ರಗಳನ್ನು ಹೊಂದಿದ ಹಾಗೂ ನಾಗರಿಕರ ಸ್ವಾತಂತ್ರ್ಯವನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಸಂಪೂರ್ಣವಾಗಿ ಸ್ವತಂತ್ರರಾಗಿ ವರ್ತಿಸುವದು ಸಮರ್ಪಕವೆನಿಸಲಾರದು. ಅಧಿಕಾರದ ದುರುಪಯೋಗವನ್ನು ತಡೆಗಟ್ಟಬೇಕಾದರೆ ಇಂತಹ ಅಧಿಕಾರಿಗಳು ಯಾವುದಾದರೊಬ್ಬ ನಿರ್ದಿಷ್ಟ ಉಚ್ಚಾಧಿಕಾರಿಗೆ ಹೊಣೆಗಾರರಾಗಿರಲೇಬೇಕು. ರಕ್ಷಕ ಸಿಬ್ಬಂದಿಯ ಮೇಲೆ ಜಿಲ್ಲಾ ದಂಡಾಧಿಕಾರಿಯ ಉಸ್ತುವಾರಿಯು ಅತ್ಯಂತ ಅವಶ್ಯಕವಾಗಿ ತೋರುತ್ತದೆ. ಆದರೆ ಅವನ ಪಾತ್ರವು ಕೆಲವೊಂದು ನಿರ್ದಿಷ್ಟ ಸಂದಿಗ್ಧ ಪರಿಸ್ಥಿತಿಗಳಿಗೆ ಮಾತ್ರ ಸೀಮಿತ ವಾಗಿರಬೇಕು. ಆರಕ್ಷಕ ಇಲಾಖೆಯ ದೈನಂದಿನ ಕಾರ್ಯಗಳಲ್ಲಿ ಅವನು ಹಸ್ತಕ್ಷೇಪ ಮಾಡಬಾರದು ಎಂಬ ಸಂಗತಿಯು ಮಾತ್ರ ಒಪ್ಪತಕ್ಕ ಮಾತಾಗಿದೆ. ಬ್ರಿಟಿಷರ ಕಾಲದಲ್ಲಿ ಜಿಲ್ಲಾಡಳಿತವು ಅಧಿಕಾರ ಪ್ರೇರಿತವಾಗಿದ್ದಿತು. ಅಂದಿನ ಜಿಲ್ಲಾಡಳಿತ ಮೂರು ಉದ್ದೇಶಗಳನ್ನು ಹೊಂದಿತ್ತು. ಭೂಕಂದಾಯ, ಕಾನೂನು ಹಾಗೂ ಸುವ್ಯವಸ್ಥೆ ಮತ್ತು ಸಾಮಾನ್ಯ ಆಡಳಿತ ಈ ವಿಷಯಗಳು ಜಿಲ್ಲಾಡಳಿತಕ್ಕೆ ಒಳ ಪಟ್ಟಿದ್ದವು. ಸಾಂಪ್ರದಾಯಿಕ ಜಿಲ್ಲಾಡಳಿತದ ಆಗಿನ ಕಲ್ಪನೆ ಈ ಮೂರು ಉದ್ದೇಶ ಗಳಿಗೆ ಮಾತ್ರ ಸೀಮಿತವಾಗಿದ್ದಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಸಾಹತುಶಾಹಿ ಆಡಳಿತವು ಕೊನೆಗೊಂಡು ಕ್ರಿಯಾಶೀಲ ಆಡಳಿತಕ್ಕೆ ಪ್ರಸ್ಥಾಪಿತವಾಯಿತು. ಡೆಪ್ಯೂಟಿ ಕಮೀಶನರನ ಅಧಿಕಾರಗಳು ಹಾಗೂ ಹೊಣೆಗಾರಿಕೆಗಳಲ್ಲಿ ಮಹತ್ತರ ಬದಲಾವಣೆ ಕಂಡುಬರುತ್ತದೆ. ಜಿಲ್ಲಾಡಳಿತವು ಅನೇಕ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಜನರನ್ನು ಉದ್ದೀಪನಗೊಳಿಸಿ ಅವರ ಉತ್ಸಾಹ ಹಾಗೂ ಶಕ್ತಿ ಗಳನ್ನು ಸಂಘಟಿಸುವುದು ಜಿಲ್ಲಾಡಳಿತದ ಪ್ರಮುಖ ಹೊಣೆಗಾರಿಕೆಯಾಗಿದೆ. ಜನತೆಯ ಸಹಾಯ ಸಹಕಾರಗಳಿಲ್ಲದೆ ಯಾವ ಯೋಜನೆಗಳೂ ಯಶಸ್ವಿಯಾಗಲಾರವು. ಜಿಲ್ಲಾಡಳಿತ ಹಾಗೂ ಜನತೆಯ ನಡುವಿನ ಸಂಬಂಧ ಅಡಿಗೆಮಾಡುವವನು ಹಾಗೂ ಊಟಮಾಡುವವರ ನಡುವಣ ಸಂಬಂಧವಿದ್ದಂತೆ. ಪ್ರಜಾಸತ್ತಾತ್ಮಕ ಸಂವಿಧಾನ ಹಾಗೂ ಕಲ್ಯಾಣ ರಾಜ್ಯಕಲ್ಪನೆ ಇವೆರಡೂ ಹೊಸ ಸವಾಲುಗಳನ್ನು ಜಿಲ್ಲಾಡಳಿತವು ಎದುರಿಸಬೇಕಾಗಿದೆ. ಈ ಸವಾಲುಗಳು ಡೆಪ್ಯೂಟಿ ಕಮೀಶನರ್‌ರಿಗೆ ಮಾತ್ರ ಸೀಮಿತ ವಾಗಿರುವದಿಲ್ಲ, ಎಲ್ಲ ಇಲಾಖೆಗಳ ಅಧಿಕಾರಿಗಳಿಗೂ ಈ ಮಾತು ಅನ್ವಯಿಸುತ್ತದೆ. ಡೆಪ್ಯೂಟಿ ಕಮೀಶನರ್ ಪಾತ್ರವು ಕಾರುಭಾರಿ ಪ್ರಭುತ್ವದಿಂದ ಸಾರ್ವಜನಿಕ ಸೇವಾ ಪ್ರಭುತ್ವಕ್ಕೆ ಬದಲಾವಣೆ ಹೊಂದಿದೆ. ಜಿಲ್ಲಾಭಿವೃದ್ಧಿಯು ಅವನ ಮೇಲಿರುವ

ಬಹುಮುಖ್ಯ ಹೊಣೆಗಾರಿಕೆ. ಇನ್ನಿತರ ಇಲಾಖೆಗಳ ಜಿಲ್ಲಾಧಿಕಾರಿಗಳು ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ತಾಂತ್ರಿಕ ವಿಷಯಗಳನ್ನು ನಿರ್ವಹಿಸುತ್ತಿದ್ದರೂ ತಾಂತ್ರಿಕೇತರ ವಿಷಯಗಳಲ್ಲಿ ಡೆಪ್ಯೂಟಿ ಕಮೀಶನರ್‌ನ ಹಸ್ತಕ್ಷೇಪ ಕಂಡುಬರುತ್ತದೆ. ಎಲ್ಲ ಜಿಲ್ಲಾಧಿಕಾರಿಗಳೂ ಡೆಪ್ಯೂಟಿ ಕಮೀಶನರನೊಂದಿಗೆ ಸಂಪರ್ಕವಿರಿಸಿಕೊಳ್ಳಲೇ ಬೇಕಾಗುತ್ತದೆ.

ಡೆಪ್ಯೂಟಿ ಕಮೀಶನರನು ಜಿಲ್ಲೆಯಲ್ಲಿ ಸರಕಾರವನ್ನು ಪ್ರತಿನಿಧಿಸುತ್ತಾನೆ. ಸರಕಾರದ ಪ್ರತಿಯೊಂದು ಇಲಾಖೆಯು ಅವನ ಮಾರ್ಗದರ್ಶನ ಹಾಗೂ ಸಹಾಯವನ್ನು ಯಾಚಿಸುತ್ತದೆ. ಒಬ್ಬ ಡೆಪ್ಯೂಟಿ ಕಮೀಶನರ್‌ನ ಕಾರ್ಯಪ್ರಮಾಣವೆಷ್ಟೆಂಬುದನ್ನು ಹೇಳುವದು ಅತ್ಯಂತ ಕಠಿಣ ಅವನ ಕೆಲಸವು ಕೆಲವೊಂದು ಸಂಗತಿಗಳ ಮೇಲೆ ಅವಲಂಬಿಸಿರುತ್ತದೆ. ಜಿಲ್ಲೆಯಲ್ಲಿಯ ಕಾನೂನಿನ ವಾತಾವರಣ, ಅಭಿವೃದ್ಧಿ ಕಾರ್ಯಗಳು ಹಾಗೂ ಜನತೆಯ ಸ್ವಭಾವ (ಕಲಹ ಪ್ರಿಯರಾಗಿರಬಹುದು, ಹಟವಾದಿಗಳಾಗಿರಬಹುದು, ಮತಾಂಧರಾಗಿರಬಹುದು). ಸಾಮಾನ್ಯವಾಗಿ ಕುರ್ಚಿ ಮೇಜುಗಳಿಗೆ ಅಂಟಿಕೊಂಡು ಕೆಲಸ ಮಾಡಿದರೆ ಜಿಲ್ಲಾಧಿಕಾರಿಯು ಅಷ್ಟೊಂದು ದಕ್ಷನಾಗಲಾರನು. ಜನತೆಯೊಂದಿಗೆ ಸಂಪರ್ಕವಿರಿಸಿಕೊಂಡು ಅವರ ಸಂಕಷ್ಟಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ. ಅವನ ಕಾರ್ಯಭಾರವನ್ನು ಕಡಮೆ ಮಾಡಲು ಮೂರು ಮಹತ್ವದ ಸೂಚನೆಗಳನ್ನು ಮಂಡಿಸಲಾಗುತ್ತದೆ. (ಅ) ಜಿಲ್ಲೆಯ ಗಾತ್ರವನ್ನು ಕುಗ್ಗಿಸುವದು, (ಬ) ಅವನಿಗೆ ಹೆಚ್ಚಿನ ಸಹಾಯಕ ಸಿಬ್ಬಂದಿಯನ್ನು ಒದಗಿಸುವದು, (ಕ) ಅವನ ಕಾರ್ಯಪ್ರಮಾಣವನ್ನು ಮೊಟಕುಗೊಳಿಸುವುದು. ಮೊದಲನೆಯ ಮಾರ್ಗವನ್ನನುಸರಿಸುವುದೆಂದರೆ ಅದೊಂದು ವ್ಯಕ್ತಿನಿಷ್ಠ ತೀರ್ಮಾನದಂತೆ. ಅದಕ್ಕೊಂದು ನಿರ್ದಿಷ್ಟ ಸೂತ್ರವಿಲ್ಲ. ಪ್ರದೇಶ ಇಲ್ಲವೇ ಭೂಕಂದಾಯದ ಪ್ರಮಾಣ ಅಥವಾ ಹಳ್ಳಿಗಳ ಸಂಖ್ಯೆ ಇವುಗಳಲ್ಲಿ ಯಾವುದೂ ಪರಿಹಾರವನ್ನು ಒದಗಿಸಲಾರದು. ಎರಡನೆಯ ವಿಷಯದಲ್ಲಿ ಹೇಳುವುದೆಂದರೆ ಅವನ ಕಾರ್ಯದಲ್ಲಿ ಸಹಾಯಕವಾಗಲು ಅತಿರಿಕ್ತ ಡೆಪ್ಯೂಟಿ ಕಮೀಶನರ್‌ರನ್ನು ಇಲ್ಲವೆ ವಿಶೇಷ ಡೆಪ್ಯೂಟಿ ಕಮೀಶನರರನ್ನು ನಿಯಮಿಸುವುದೆಂದು ಅರ್ಥ. ಈ ಸೂಚನೆಯಲ್ಲಿಯೂ ಕೆಲವೊಂದು ತೊಡಕುಗಳು ಕಂಡುಬರುತ್ತವೆ. ಇಬ್ಬರೂ ಸಮಾನಸ್ಥಾನ ಹೊಂದಿದ ಅಧಿಕಾರಿಗಳೂ ಅನ್ಯೋನ್ಯವಾಗಿರುವುದು ಅಶಕ್ಯ. ಯಾರೊಬ್ಬರ ಮೇಲೆ ನಿರ್ದಿಷ್ಟ ಹೊಣೆಗಾರಿಕೆಯನ್ನು ಹೊರಿಸುವುದು ಕಠಿಣವಾಗುತ್ತದೆ. ಏಕೆಂದರೆ ಆಂಗ್ಲಗಾದೆಯೊಂದು ಹೇಳುವಂತೆ— ಸಂಯುಕ್ತ ಹೊಣೆಗಾರಿಕೆಯು ಯಾರೊಬ್ಬರ ಹೊಣೆಗಾರಿಕೆಯಲ್ಲ (Joint responsibility is nobody's responsibility).

ಡೆಪ್ಯೂಟಿಕಮೀಶನರ್‌ನು ಎಷ್ಟೇ ಸಮರ್ಥನು ಹಾಗೂ ವೃತ್ತಿನಿಷ್ಠೆಯನ್ನು ಹೊಂದಿದ್ದರೂ ಎಲ್ಲ ಚಟುವಟಿಕೆಗಳನ್ನು ಸಂಪೂರ್ಣ ಜಾಗರೂಕತೆಯಿಂದ ನಿರ್ವಹಿಸುವದು ಕಷ್ಟಸಾಧ್ಯ. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ

ಸ್ಥಿತ್ಯಂತರಗಳು ಅವನ ಪಾತ್ರವನ್ನು ಬದಲಾಯಿಸಿವೆ. ಆ ಹುದ್ದೆಯ ಸುತ್ತ ಇದ್ದ ಪ್ರಭಾವಲಯವು ಕಳೆಗುಂದುತ್ತಿರುವದು. ಗತವೈಭವವನ್ನು ಕಳೆದುಕೊಂಡಿದ್ದರೂ ಸರಕಾರಿ ವ್ಯವಸ್ಥೆಯಲ್ಲಿ ಡೆಪ್ಯೂಟಿಕಮೀಶನರ್ ಹುದ್ದೆಯು ಪ್ರಾಮುಖ್ಯತೆಯನ್ನು ಕಳೆದು ಕೊಂಡಿಲ್ಲ. 1765ರಲ್ಲಿ ಈಸ್ಟ ಇಂಡಿಯಾ ಕಂಪನಿಗೆ ದೊರೆತ ದಿವಾಣಿಹಕ್ಕು ಕಂದಾಯ ಆಡಳಿತಕ್ಕೆಡೆಮಾಡಿಕೊಟ್ಟಿತು. 1772 ರಲ್ಲಿ ವಾರನ್‌ಹೇಸ್ಟಿಂಗ್‌ನು ಮಾಡಿದ ನಿಯಮಾವಳಿಯು ಜಿಲ್ಲೆಯನ್ನು ಒಂದು ಆಡಳಿತ ಘಟಕವಾಗಿ ನಿರ್ಮಿಸಿತು. ಹಾಗೂ ಕಲೆಕ್ಟರ ನೇಮಕಕ್ಕೆ ಅವಕಾಶ ಕಲ್ಪಿಸಿತು. ಆದರೆ 1786ರಲ್ಲಿ ಕಲೆಕ್ಟರರ ವರ್ಚಸ್ಸನ್ನು ಹೆಚ್ಚಿಸುವದಕ್ಕಾಗಿ ಅವರಿಗೆ ದಂಡಾಧಿಕಾರಗಳನ್ನು ನೀಡಲಾಯಿತು. ಈ ಎಲ್ಲ ಚಾರಿತ್ರಿಕ ಘಟನೆಗಳು ಕಲೆಕ್ಟರ್‌ರನ್ನು ವರ್ಚಸ್ವಿ ಅಧಿಕಾರಿಗಳನ್ನಾಗಿ ಮಾಡಿದವು. ಈ ಎಲ್ಲ ವ್ಯವಸ್ಥೆಯು ಆಗಿನ ಕಾಲಮಾನ ಪರಿಸ್ಥಿತಿಗೆ ಅನುಗುಣವಾಗಿತ್ತು. ಇಂದಿನ ದಿನಗಳಲ್ಲಿ ಹಳೆಯ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವದ ಅಸಮರ್ಪಕ. ವಿಶೇಷಜ್ಞಾನಕ್ಕೆ ಅಗ್ರಸ್ಥಾನ್ಯ ಬೆಲೆ ಇರುವ ಕಾಲವಿದು. ಭೂಸುಧಾರಣೆಗಳು ಡೆಪ್ಯೂಟಿ ಕಮೀಶನರನ ಪಾತ್ರವನ್ನು ಸಂಪೂರ್ಣ ಬದಲಾಯಿಸಿದೆ ಡೆಪ್ಯೂಟಿ ಕಮಿಶನರ್‌ನ ಪಾತ್ರಕ್ಕೆ ಮರು ವ್ಯಾಖ್ಯೆಯನ್ನು ಕಲ್ಪಿಸಬೇಕಾಗಿದೆ. ಅವನೊಬ್ಬ ವೈಯಕ್ತಿಕ ಅಧಿಕಾರಿಯಾಗಿರುವದಿಲ್ಲ. ಆದರೆ ಅವನೊಬ್ಬ ಸಂಸ್ಥೆ, ಸಮಗ್ರ ಜಿಲ್ಲಾಡಳಿತದ ಚಟುವಟಿಕೆಗಳ ನಿಯಂತ್ರಕನಾಗಿದ್ದಾನೆ. ವಿಜ್ಞಾನ ಹಾಗೂ ತಂತ್ರ ಜ್ಞಾನಗಳ ಬೆಳವಣಿಗೆಯು ಆಡಳಿತ ಕ್ಷೇತ್ರಕ್ಕೆ ನಿಷ್ಣಾತರನ್ನು ಒದಗಿಸಿದೆ. ಡೆಪ್ಯೂಟಿ ಕಮಿಶನರ್‌ನು ಈ ನಿಷ್ಣಾತ ಅಧಿಕಾರಿಗಳ ಸ್ಥಾನಮಾನಗಳನ್ನು ಗಮನದಲ್ಲಿರಿಸಿಕೊಂಡು ಸಂಯೋಜಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಸಂಬಂಧ ಒದಗಿ ಬಂದಿರುತ್ತದೆ. ಪಂಚಾಯತಿ ರಾಜ್ಯ ಸಂಸ್ಥೆಗಳು ಅವನ ಪಾತ್ರವನ್ನು ಬದಲಾಯಿಸಿವೆ. ಈ ಹೆಚ್ಚಿನ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾದರೆ ಅವನು ಪರಿಪಕ್ವ ಮನಸ್ಸು, ವಿಶಾಲ ಅನುಭವ ಹಾಗೂ ಮಾನವ ಸಂಬಂಧಗಳ ಬಗ್ಗೆ ಮನೋವೈಜ್ಞಾನಿಕ ತಿಳುವಳಿಕೆ ಹೊಂದಿರಬೇಕು. ಜಿಲ್ಲಾಮಟ್ಟದ ಅಧಿಕಾರಿಗಳೆಲ್ಲರೂ ಅವನಿಂದ ವಸ್ತುನಿಷ್ಠ ದೃಷ್ಟಿ ಕೋನವನ್ನು ಅಪೇಕ್ಷಿಸುತ್ತಾರೆ. ಒಟ್ಟಿನ ಮೇಲೆ ಅವನ ಅಧಿಕಾರವು ಕೆಲವೊಂದು ವೈಯಕ್ತಿಕ ಗುಣಧರ್ಮಗಳಾದ ನಿಷ್ಪಕ್ಷಪಾತ ಮನೋಭಾವನೆ, ಆತ್ಮ ವಿಶ್ವಾಸ, ಮುನ್ನುಗ್ಗುವ ಮನೋವೃತ್ತಿ, ಪ್ರತಿಭೆ, ಮೌಲಿಕತೆ ಹಾಗೂ ಮನೋವೈಶಾಲ್ಯ ಇವುಗಳ ಮೇಲೆ ಅವಲಂಬಿತವಾಗಿದೆ. ಅದಕ್ಕೆ ತಕ್ಕ ಚಾರಿತ್ರ್ಯ, ವ್ಯಕ್ತಿತ್ವ, ಸೂಕ್ಷ್ಮ ಸಂಗ್ರಹಣ, ಚಿತ್ತೈಕಾಗ್ರತೆ ಇವೆಲ್ಲವುಗಳನ್ನು ಮೈಗೂಡಿಸಿಕೊಂಡಿರಬೇಕು.

ಶೀಲವಂತನು ತನಗೆ ವಹಿಸಿಕೊಟ್ಟ ಯಾವುದೇ ಸ್ಥಾನಮಾನಕ್ಕೆ ಅರ್ಹನೆಂಬು ದನ್ನು ತೋರಿಸಿಕೊಡುತ್ತಾನೆ.

—ಮಹಾತ್ಮ ಗಾಂಧಿ

ಬಲವಾದ ರಾಗದ ಒತ್ತಡವು ಯಾರನ್ನು ಹುಡಿಗೂಡಿಸುವುದೋ ಅವರು ತಮ್ಮೊಳಗಿರುವ ಪ್ರಬಲವಾದ ಪ್ರಚೋದನೆಯಿಂದ ಮತ್ತೆ ಎದ್ದು ನಿಲ್ಲಬಹುದು. ಆದರೆ ಯಾರಲ್ಲಿ ದಿನದಿನಕ್ಕೆ ನೈತಿಕ ಜೀವನದ ಝರಿಗಳೇ ಬತ್ತಿಹೋಗುತ್ತಿರುವವೋ, ಯಾರಲ್ಲಿ ಅದಾವುದೋ ಒಂದು ಮಂದಳಿಕೆಯು ತನ್ನ ಬೆಳವಣಿಗೆಯಿಂದ ಕ್ರಮೇಣ ಒಳಜೀವನದ ಉಸಿರನ್ನೇ ಕಟ್ಟುವುದೋ ಅಂತಹ ಒಂದು ದಿನ ಎಂದೂ ವಾಸಿಯಾಗದ ಜೀವನ್ಮೃತಾವಸ್ಥೆಗೆ ತಲುಪುವುದು.

—ರವೀಂದ್ರನಾಥ ಟಾಗೂರ್

ಪುಸ್ತಕ ವಿಮರ್ಶೆ

ಮಹಾತ್ಮಾಗಾಂಧಿ [ಜೀವನ ಚರಿತ್ರೆ] ಬಿ. ಆರ್. ಪ್ರಾಣೇಶರಾವ್, ಎಂ. ಎ. ಭಾರತೀ ಪ್ರಕಾಶನ, ಮೈಸೂರು–೫೭೦ ೦೦೯

ಮಹಾತ್ಮ ಗಾಂಧಿಯವರ ಪುಣ್ಯನಾಮವನ್ನು ವರ್ಷದಲ್ಲಿ ಎರಡು ಬಾರಿ ನೆನಸಿಕೊಳ್ಳುವ ಆಡಂಬರದ ಪರಿಪಾಠ ಅವರ ತುಂಬುಜೀವನದ ಚರಿತ್ರೆ ಮತ್ತು ಭವ್ಯ ವಿಚಾರಗಳಿಗೆ ಕೇವಲ ನೀರಸ ಬಾಯಿಮಾತಿನ ಔಪಚಾರಿಕ ಮರ್ಯಾದೆ ತೋರುವ ನಟನೆ ಮತ್ತು ಸ್ವಾರ್ಥಪರ ಹಾಗೂ ರಾಜಕೀಯ ಸ್ವರೂಪದ ಟೊಳ್ಳಾದ, ಗದ್ದಲದ ಪ್ರಚಾರ ಕಾರ್ಯಕ್ರಮಗಳೇ ದೇಶದಾದ್ಯಂತ ಪ್ರಮುಖವಾಗಿರುವ ಈ ಕಾಲದಲ್ಲಿ ಶ್ರೀ ಬಿ. ಆರ್. ಪ್ರಾಣೇಶರಾವ್ ಅವರ ೨೦೬ ಪುಟಗಳ ಈ ಕೃತಿ ಐತಿಹಾಸಿಕವಾಗಿ ಮಹತ್ತ್ವದ ಮತ್ತು ಸಾಮಾಜಿಕವಾಗಿ ಸಂಗತವಾದ ಕೊಡುಗೆಯು ಆಗಿದೆ ಎಂದೆನಿಸುತ್ತದೆ. ಶ್ರೀಯುತರು ಬೃಹತ್ ಆನೆಯು ಪುಟ್ಟ ಕನ್ನಡಿಯೊಳು ಅಡಕವಾಗಿರುವಂತೆ, ಬದುಕಿನ ಉದ್ದ, ಅಗಲ, ಎತ್ತರ, ಆಳಗಳಲ್ಲಿ ಇಡೀ ವಿಶ್ವವೋ ಎಂಬಂತೆ ತೋರುವ ಮಹಾತ್ಮಾ ಗಾಂಧಿಯವರ ಸಮಗ್ರ ಚರಿತ್ರೆಯನ್ನು ಇಷ್ಟು ಚಿಕ್ಕ ಗಾತ್ರದ ಗ್ರಂಥದಲ್ಲಿ ಚೊಕ್ಕವಾಗಿ ಅಳವಡಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ವಿದ್ಯಾರ್ಥಿದೆಸೆಯಿಂದಲೇ ಮಹಾತ್ಮಾ ಗಾಂಧಿಯವರಿಂದ ಆಕರ್ಷಿತರಾಗಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ಯಾಗ್ರಹಿಯಾಗಿ ಸೆಣಸಿ, ಸೆರೆಮನೆವಾಸದ ಕಹಿಸಿಹಿಯನ್ನುಂಡು ಬೆಳೆದ ಮತ್ತು ಇಂದು ಮನುಕುಲಕ್ಕೆ ಅತ್ಯಾವಶ್ಯಕವಾಗಿರುವ ಸತ್ಯ, ಅಹಿಂಸೆ, ಶಾಂತಿ, ಪ್ರೇಮಪೂರಿತ ಸೇವೆಯ ಬೆಳಕನ್ನು ಹರಡಲು ಸತತವಾಗಿ ಪ್ರಯತ್ನಿಸುತ್ತಿರುವ ಶ್ರೀಯುತರು ನಿಜವಾದ ಗಾಂಧೀವಾದಿಗಳಷ್ಟೇ ಅಲ್ಲ, ಗಾಂಧೀ ಪ್ರಣೀತ ರಚನಾತ್ಮಕ ಕಾರ್ಯಗಳಲ್ಲೂ ಪೂರ್ಣ ಮುಳುಗಿರುವವರು. ಲಭ್ಯವಿರುವ ಎಲ್ಲಾ ಮೂಲಾಧಾರಗಳಿಂದ ಮಹಾತ್ಮ ಗಾಂಧಿಯವರ ಬದುಕು ಹಾಗೂ ವಿಚಾರವಾಹಿನಿಯ ಸಾರವನ್ನು ಸಂಗ್ರಹಿಸಿ, ಸಂಯೋಜಿಸಿ ಸಮರ್ಪಕವಾದ ಹಾಗೂ ಸಮರ್ಥವಾದ ಪೂರ್ಣ ಜೀವನ ಚರಿತ್ರೆಯನ್ನು ಕನ್ನಡಿಗರಿಗೆ ಕೊಡುಗೆಯಾಗಿ ನೀಡಿರುವ ಶ್ರೀಯುತರು ನಿಜಕ್ಕೂ ಧನ್ಯರು, ಸರ್ವವಿಧದಲ್ಲೂ ಅಭಿನಂದನಾರ್ಹರು

"ಮಹಾತ್ಮಾಗಾಂಧಿ [ಜೀವನ ಚರಿತ್ರೆ]" ಎಂಬ ಈ ಸರಳ ಕೃತಿಯಲ್ಲಿ ೩೫ ಪುಟ್ಟ ಅಧ್ಯಾಯಗಳಿವೆ. ಬಾಲ್ಯದ ದಿನಗಳು, ವರ್ಣದ್ವೇಷದ ಸಾಮ್ರಾಜ್ಯ ನಾಡಿನಲ್ಲಿ, ಸತ್ಯಾಗ್ರಹದ ಉದಯ, ಭಾರತಕ್ಕೆ ಮರಳಿದ ಮಹಾತ್ಮ, ಅಸಹಕಾರ ಚಳವಳಿ, ದಂಡಿಯಾತ್ರೆ,

ಸೇವಾಗ್ರಾಮ, ಚಲೇಜಾವ್ ಚಳವಳಿ ಮತ್ತು ಸ್ವಾತಂತ್ರ್ಯೋದಯ ಎಂಬ ೯ ಮುಖ್ಯ ಪ್ರಕರಣಗಳಿವೆ.

ಬಾಲ್ಯದ ದಿನಗಳು : ಎಂಬ ಪ್ರಕರಣದಲ್ಲಿ ಪ್ರಾಮಾಣಿಕ ತಂದೆ ಕರಮಚಂದ ಗಾಂಧಿ ಮತ್ತು ಪರಮ ಸಾಧ್ವೀಮಣಿ ಪುತಲೀಬಾಯಿ ಅವರ ಮಗನಾಗಿ ಜನಿಸಿದ ಈ ಮೋಹನದಾಸ ಕರಮಚಂದ ಗಾಂಧಿ ಹೇಗೆ ಎಳೆಯ ವಯಸ್ಸಿನಿಂದಲೇ ಸತ್ಯ ಹಾಗೂ ನೀತಿಯ ಮೌಲ್ಯಗಳನ್ನು ಮೈದುಂಬಿಸಿಕೊಂಡು ಬಂದರು, ಹೆದರಿಕೆಗೆ ಮದ್ದಾಗಿ ರಾಮ ನಾಮವನ್ನು ಜೀವನದ ರಕ್ಷಾಮಂತ್ರವನ್ನಾಗಿ ಕೊಂಡರು, ಇಂಗ್ಲೆಂಡಿಗೆ ಹೋಗುವ ಮೊದಲು ತನ್ನ ತಾಯಿಗೆ ಪರಸ್ತ್ರೀ, ಮದ್ಯ ಹಾಗೂ ಮಾಂಸವನ್ನು ಮುಟ್ಟುವುದಿಲ್ಲ ಎಂಬುದಾಗಿ ಕೊಟ್ಟ ಭಾಷೆಯನ್ನು ಲಂಡನ್ನಿನಲ್ಲಿ ಎಂತಹ ಪರಿಸ್ಥಿತಿಯಲ್ಲೂ ಜಾರದೆ ಉಳಿಸಿಕೊಂಡು ಬಂದರು, ಸಸ್ಯಾಹಾರವನ್ನು ಕುರಿತ ಕೃತಿಗಳು, ಬೈಬಲ್ ಇತ್ಯಾದಿ ಗಳನ್ನು ಚೆನ್ನಾಗಿ ಓದಿ ಜೀವನದ ತತ್ತ್ವಗಳನ್ನು ಕಂಡುಕೊಂಡರು, ಬ್ಯಾರಿಸ್ಟರ್ ಪದವಿ ಯನ್ನು ಪಡೆದು ತಾಯ್ನಾಡಿಗೆ ಬಂದ ನಂತರ ವರಮಾನವಿಲ್ಲದ ವಕೀಲನಾಗಿ ದಿನ ಕಳೆದು ಯಾವ ಜಾತಿ ಮತ ನಿರ್ಬಂಧಕ್ಕೂ ಒಳಗಾಗದೆ ತಮ್ಮ ವ್ಯಕ್ತಿತ್ವವನ್ನು ಬೆಳಸಿಕೊಂಡರು, ಅಹಂಕಾರಿ ಆಂಗ್ಲ ಅಧಿಕಾರಿಯೊಬ್ಬನ ದುರ್ವರ್ತನೆಯಿಂದ ಅವರ ಜೀವನದ ದಿಕ್ಕು ಬದಲಾಗಿ ಅವರು ಭಾರತೀಯ ವಕೀಲರಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು ಇತ್ಯಾದಿ ಪ್ರಮುಖ ವಿಷಯಗಳ ಚಿತ್ರಣವಿದೆ.

ವರ್ಣದ್ವೇಷದ ಕರಾಳ ನಾಡಿನಲ್ಲಿ: ಎಂಬ ಪ್ರಕರಣದಲ್ಲಿ ಒಬ್ಬ ವಕೀಲನಾಗಿ ದಕ್ಷಿಣ ಆಫ್ರಿಕಾದಲ್ಲಿ ಬಂದಿಳಿದ ಗಾಂಧಿಯವರು ವರ್ಣದ್ವೇಷಕ್ಕೆ ಸಾಕಾರರೂಪವೇ ಆಗಿದ್ದ ಬಿಳಿಯರ ದೌರ್ಜನ್ಯ, ಅನ್ಯಾಯಕರ ವರ್ತನೆ ಹಾಗೂ ಹೊಡೆತಗಳ ಸುರಿಮಳೆಯಲ್ಲಿ ಪುಟವಿಕ್ಕಿದ ಚಿನ್ನದಂತಾಗಿ ತ್ರಿವಿಕ್ರಮನಂತೆ ಬೆಳೆದು ಸತ್ಯಾಗ್ರಹದ ಪ್ರಯೋಗ ನಡೆಸಿದರು. ಸರಳಜೀವನ, ಸ್ವಾವಲಂಬನೆ ಹಾಗೂ ಸೇವಾನಿಷ್ಠೆಗಳಿಗೆ ಜೀವಂತ ನಿದರ್ಶನ ಎಂದರು, ಭಗವದ್ಗೀತೆ, ಹಾಗೂ ಟಾಲ್‌ಸ್ಟಾಯ್, ರಸ್ಕಿನ್ ಮುಂತಾದ ಮಹಾಶಯರ ಕೃತಿಗಳನ್ನು ಅಧ್ಯಯನ ಮಾಡಿದರು. ಬ್ರಹ್ಮಚರ್ಯೆಯ ನಿಷ್ಠೆ, ಅನುಷ್ಠಾನ ಅಗತ್ಯವೆಂದು ನಿರ್ಧರಿಸಿ ಜೀವನಕ್ರಮದಲ್ಲಿ ಮಹತ್ತರ ಬದಲಾವಣೆ ಮಾಡಿಕೊಂಡರು ಮುಂತಾದ ಮುಖ್ಯ ಘಟನೆಗಳ ಸ್ಪಷ್ಟ ವಿವರಣೆಯನ್ನು ಕಾಣಬಹುದು.

ಸತ್ಯಾಗ್ರಹದ ಉದಯ : ಎಂಬ ಪ್ರಕರಣದಲ್ಲಿ ಎಲ್ಲಾ ಅನ್ಯಾಯಗಳ ವಿರುದ್ಧ ಶಾಂತಿ, ಪ್ರೇಮ ಎಂಬ ಆಯುಧಗಳನ್ನು ಬಳಸಿ ಸತ್ಯಾಗ್ರಹ ನಡೆಸಿದರು, ಅರ್ಹತಾ ಪತ್ರಗಳನ್ನು ಅಗ್ನಿಕುಂಡಕ್ಕೆ ಎಸೆದು ಪ್ರತಿಭಟನೆ ತೋರಿದರು, ದ್ವೇಷಕ್ಕೆ ಬದಲಾಗಿ ಪ್ರೇಮ, ಹಿಂಸಾಮಾರ್ಗ ತ್ಯಜಿಸಿ ಅಹಿಂಸಾಮಾರ್ಗವನ್ನು ಅವಲಂಬಿಸಬೇಕೆಂಬ ಆಗ್ರಹ, ಪಾಶವಿಕಶಕ್ತಿಯ ವಿರುದ್ಧವಾಗಿ ಆತ್ಮಶಕ್ತಿಯನ್ನು ವಿಜೃಂಭಿಸಿ ಪ್ರದರ್ಶಿಸುವ ಪ್ರಕ್ರಿಯೆ ಎಂಬ ಸಂದೇಶವನ್ನು ಸಾರಲು 'ಹಿಂದ್‌ಸ್ವರಾಜ್' ಕೃತಿಯನ್ನು ರಚಿಸಿದರು.

ಸತ್ಯ–ಅಹಿಂಸೆ–ಪ್ರೇಮದ ಜ್ಯೋತಿ ಹಿಡಿದ ಮಹಾಯಾತ್ರಿಕನಾಗಿ ಮಹಾಯಾತ್ರೆ ನಡೆಸಿದರು, ಸತ್ಯಾಗ್ರಹವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿದರು, ಮತ್ತು ಬಿಳಿಯರ ಅಧಿಕಾರಿ ಜನೆರಲ್ ಸ್ಮಟ್ಸ್ ಅವರಿಗೆ ತಾನೇ ಖುದ್ದಾಗಿ ತಯಾರಿಸಿದ್ದ ಎರಡು ಪಾದರಕ್ಷೆಗಳನ್ನು ಪ್ರೀತಿಯ ಕಾಣಿಕೆಯಾಗಿ ಕಳುಹಿಸಿ ಭಾರತಕ್ಕೆ ಮರಳಿದರು ಮುಂತಾದ ಮುಖ್ಯ ಘಟನೆಗಳನ್ನು ಸವಿಕಟ್ಟಾಗಿ ಪರಿಚಯಿಸಲಾಗಿದೆ.

ಮುಂದಿನ ೫ ಪ್ರಕರಣಗಳಲ್ಲಿ ಭಾರತಕ್ಕೆ ಹಿಂತಿರುಗಿದ ಮೇಲೆ ಗಾಂಧಿಯವರು ತಾಯ್ನಾಡಿನ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಾಗಿ ಕೈಗೊಂಡ ಅದ್ವಿತೀಯ ಸತ್ಯಾಗ್ರಹ ಚಳವಳಿಯ ಎಲ್ಲಾ ಘಟ್ಟಗಳನ್ನು ಅತ್ಯಂತ ಸಮರ್ಪಕವಾದ ರೀತಿಯಲ್ಲಿ ವಿವೇಚಿಸಲಾಗಿದೆ, ಸತ್ಯಾಗ್ರಹದ ಸಂಪೂರ್ಣ ಸ್ವರೂಪದ ನೈಜಚಿತ್ರಣವಿದೆ, ಆದರ್ಶ ಗ್ರಾಮದ ಕನಸನ್ನು ನನಸನ್ನಾಗಿಸಲು ಸೇವಾಗ್ರಾಮವನ್ನು ಪ್ರಯೋಗಕೇಂದ್ರ ವನ್ನಾಗಿಸಿ ಕೈಗೊಂಡ ಕಾರ್ಯಕ್ರಮಗಳನ್ನು ತಿಳಿಸಲಾಗಿದೆ, ರಚನಾತ್ಮಕ ಕಾರ್ಯ ಗಳಿಗೆ ಕೊಟ್ಟ ಪ್ರಾಮುಖ್ಯತೆಯನ್ನು ಎತ್ತಿತೋರಲಾಗಿದೆ.

ಕೊನೆಯ ಪ್ರಕರಣದಲ್ಲಿ ಭಾರತ ಸ್ವಾತಂತ್ರ್ಯ ಸೂರ್ಯನ ಉದಯ, ಸ್ವಾತಂತ್ರಕ್ಕಾಗಿಯೇ ಸತತವಾಗಿ ಶ್ರಮಿಸಿದ್ದ ಈ ಶಾಂತಿವೀರ ಆ ಸಮಯದಲ್ಲಿ ಶಾಂತಿಸ್ಥಾಪನೆಗಾಗಿ ಕಲ್ಕತ್ತಾ ಹಾಗೂ ದೆಹಲಿಯಲ್ಲಿ ಕೈಗೊಂಡ ಕ್ರಮಗಳು, ಕಾಂಗ್ರೆಸ್ ಸಂಸ್ಥೆ ವಿಸರ್ಜನೆಯಾಗಿ ಲೋಕಸೇವಾ ಸಂಘದ ರಚನೆಯಾಗಬೇಕು ಎಂಬುದಾಗಿ ನೀಡಿದ ಕರೆ, ಸಾಯಂಕಾಲ ಪ್ರಾರ್ಥನಾ ಸಭೆಯಲ್ಲಿ ಗುಂಡಿಗೆ ಬಲಿಯಾಗಿ ಮಹಾತ್ಮನ ಅಸ್ತಮ ಮುಂತಾದ ಮನೋವೇಧಕ ವಿವರಗಳಿವೆ.

ವಿಶ್ವವಂದ್ಯ ಮಹಾತ್ಮಗಾಂಧಿ : ಎಂಬ ಕೊನೆಯ ಅಧ್ಯಾಯ ಮಹಾತ್ಮಗಾಂಧಿ ಯವರ ಭವ್ಯ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವ ದರ್ಪಣದಂತಿದೆ, ಅದರಲ್ಲಿ ಗಾಂಧೀವಾಣಿ ಇಂದು ಮೊಳಗುತ್ತಿದೆ. ಅವರ ವಿಚಾರಗಳು ಇಂದಿಗೂ ಸಂಗತವಾದುದಾಗಿವೆ, ಇಂದಿನ ಜಗತ್ತಿನ ಸಮಸ್ಯೆಗಳಿಗೆ ಗಾಂಧಿವಾದ ತಕ್ಕ ಮದ್ದು ಮತ್ತು ಶಾಂತಿ ಹಾಗೂ ಪ್ರಗತಿಯ ನೆಲೆಯ ಮೇಲೆ ಹೊಸ ಮಾನವೀಯ ನಾಗರಿಕ ಸಮಾಜದ ಸೃಷ್ಟಿಗೆ ಪ್ರಯತ್ನ ನಡೆಯುತ್ತಿರುವವರೆಗೆ ಗಾಂಧೀಮಾರ್ಗ ಪ್ರಸ್ತುತ ವಾಗಿರುತ್ತದೆ ಎಂಬ ಅಭಿಪ್ರಾಯಗಳನ್ನು ತಿಳಿಸಲಾಗಿದೆ.

ಈ ಕೃತಿ ಮೊದಲಿನಿಂದಲೂ ಕೊನೆಯವರೆಗೆ ಸುಲಭವಾಗಿ ಸರಾಗವಾಗಿ ಓದಿಸಿಕೊಳ್ಳುತ್ತದೆ. ಮಹಾತ್ಮಗಾಂಧಿಯವರ ವ್ಯಕ್ತಿತ್ವ ದರ್ಶನಕ್ಕೆ ಇದೊಂದು ಉಪಯುಕ್ತ ಗ್ರಂಥ. ಶೈಲಿಯಲ್ಲಿ ಸರಳತೆಯ ಗಾಂಭೀರ್ಯ, ವಸ್ತುನಿಷ್ಠತೆಯ ಖಚಿತತೆ ಎದ್ದು ಕಾಣುತ್ತವೆ. ಚಿಕ್ಕ ಚಿಕ್ಕ ವಾಕ್ಯಗಳು, ಅವುಗಳಲ್ಲಿ ಇರುವ ಬನಿ, ಅವುಗಳಿಂದ ಮೂಡಿಬಂದಿರುವ ಸ್ಪಷ್ಟ ಚಿತ್ರ ಮತ್ತು ಅವುಗಳ ಆತ್ಮೀಯ ಆಕರ್ಷತೆ ಕೃತಿಯನ್ನು ಮತ್ತೆ ಮತ್ತೆ ಓದುವಂತೆ ಮಾಡುತ್ತವೆ, ನೇರವಾಗಿ ಹೃದಯ ಹಾಗೂ

ಮನಸ್ಸನ್ನು ಮುಟ್ಟಿ ಗಾಢವಾದ ಪರಿಣಾಮವನ್ನುಂಟುಮಾಡುತ್ತವೆ. ಓದುಗರಲ್ಲಿ ಇಂತಹ ಕೃತಿಯನ್ನು ಕನ್ನಡ ಭಾಷೆಯಲ್ಲಿ ಹೊರತಂದು ಮರೆತು ಹೋಗುತ್ತಿರುವ ಚಿಂತನಗಳು ಮನನವಾಗುವಂತೆ ಆಗಿಸಿರುವುದು ಸ್ವಾಗತಾರ್ಹ. ಎಲ್ಲಾ ವರ್ಗದ ವಾಚಕರನ್ನು ಸೆಳೆಯುವ ಶಕ್ತಿ ಈ ಕೃತಿಗಿದೆ. ಮಹಾತ್ಮಾ ಗಾಂಧಿಯವರ ಬದುಕಿನ ಪ್ರಮುಖ ಮಜಲುಗಳ ಛಾಯಾಚಿತ್ರಗಳು ಇದ್ದಿದ್ದರೆ ಪುಸ್ತಕದ ಉಪಯುಕ್ತತೆ ಹೆಚ್ಚುತ್ತಿತ್ತು.

ಡಾ. ಎಂ. ಬಿ. ರಾಜಾಮಣಿ

ಕೆ.ಸಂ. ೩೦೯೬೭ — ೮ಯುಪಿಎಂ — ೪೨೫ ಪ್ರತಿಗಳು — ೨-೫-೯೦

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬